Bennett & Coleman
THE TIMES OF INDIA
www.vijaykarnataka.com
ಬುಧವಾರ,17 ಜೂನ್ 2026 | ಪುಟಗಳು: 14 | ಬೆಲೆ: ₹ 5.00
ಸಂಪುಟ: 27 | ಸಂಚಿಕೆ: 167
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

ತ.ನಾಡಿನಲ್ಲಿ ಹುಟ್ಟುವ ಪ್ರತಿ ಮಗುವಿನ ಮೇಲೆ ₹1.28 ಲಕ್ಷ ಸಾಲ: ಸಿಎಂ ವಿಜಯ್ ಶ್ವೇತಪತ್ರ

ಬೆಂಗಳೂರು ದರ: ₹13,875 1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ) | ₹15,137 1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ) | ₹2,65,000 1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಜಿ-7 ಶೃಂಗಸಭೆ ನೇಪಥ್ಯದಲ್ಲಿ ಕೈ ಕುಲುಕಿದ ಪ್ರಧಾನಿ ಮೋದಿ-ಅಮೆರಿಕ ಅಧ್ಯಕ್ಷ ಟ್ರಂಪ್

ವಿಕ ಹೊಂಗಿರಣ

ಹೃದಯವಂತಿಕೆ ಇದ್ದರಷ್ಟೇ ಬುದ್ಧಿವಂತಿಕೆಗೆ ಗೌರವ.

- ಅನಾಮಿಕ

SBI
The banker to every Indian
ಎಸ್‌ಬಿಐ ಚಿನ್ನದ ಸಾಲಗಳೊಂದಿಗೆ ಸಂತೋಷಕ್ಕೆ ಹತ್ತಿರವಾಗಿ
- ಕಡಿಮೆ ಬಡ್ಡಿದರಗಳು
- ಹೊಂದಿಕೊಳ್ಳುವ ಮರುಪಾವತಿ ಆಯ್ಕೆಗಳು
- ಬುಲೆಟ್ ಮರುಪಾವತಿ:
- 3/6/12 ತಿಂಗಳುಗಳು, 36 ತಿಂಗಳವರೆಗೆ ಕಂತುಗಳು

ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ ₹120/- ಕೋಲಾರ 119/- ತುಮಕೂರು 118/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹160/- ಕೋಲಾರ 159/- ತುಮಕೂರು 158/-
ವಿಥ್ ಸ್ಕಿನ್ ₹226/- ಕೋಲಾರ 224/- ತುಮಕೂರು 223/-
ವಿಥೌಟ್ ಸ್ಕಿನ್ ₹258/- ಕೋಲಾರ 256/- ತುಮಕೂರು 254/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಲವಲVK ಯೋಗ ಟೀಚರ್

ಯಾವ ಆರೋಗ್ಯ ಸಮಸ್ಯೆಗೆ ಯಾವ ಆಸನ? ಯೋಗ ಟೀಚರ್ ಪಾಠ ಹೇಳಲಿದ್ದಾರೆ.

ವಿಕ ಲವಲವಿಕೆಯಲ್ಲಿ ಯೋಗರತ್ನ ಗೋಪಾಲಕೃಷ್ಣ ದೇಲಂಪಾಡಿ ಅವರ ಹೊಸ ಅಂಕಣ ನಾಳೆಯಿಂದ

ಎಲ್‌ನಿನೋ ಆತಂಕ: ಬಿದ್ದಿರುವುದು ಅರ್ಧದಷ್ಟು ವಾಡಿಕೆ ಮಳೆ ಮಾತ್ರ

ಒಣಗಿದ ಜಲಾಶಯಗಳು, ರಾಜ್ಯದಲ್ಲಿ ತಲೆಕೆಳಗಾದ ಬಿತ್ತನೆ ಗುರಿ

46 ಲಕ್ಷ ಹೆಕ್ಟೇರ್ ಟಾರ್ಗೆಟ್, ಬಿತ್ತನೆಯಾಗಿದ್ದು ಕೇವಲ 7 ಲಕ್ಷ ಹೆಕ್ಟೇರ್

ಮುಂಗಾರು ಬಿತ್ತನೆ ಹಿನ್ನಡೆ

■ **ವಿಕ ಸುದ್ದಿಲೋಕ** ಬೆಂಗಳೂರು

ನೈಋತ್ಯ ಮುಂಗಾರು ರಾಜ್ಯದ ಮೇಲೆ ಕಣ್ಣೀರು ಹಾಕಿದೆ. ಜೂನ್ ಅರ್ಧ ತಿಂಗಳು ಕಳೆದರೂ ಮಳೆರಾಯನ ಆಗಮನ ಮಾತ್ರ ನಿರೀಕ್ಷಿತ ಮಟ್ಟದಲ್ಲಿಲ್ಲ. ಮುಂಗಾರಿನ ಮೇಲೆ ಅವಲಂಬಿತವಾಗಿರುವ ರಾಜ್ಯದ ಕೃಷಿ ಚಟುವಟಿಕೆ ಕುಂಠಿತಗೊಂಡಿದ್ದು, ರೈತರ ಪಾಲಿಗೆ ಈ ವರ್ಷದ ಮುಂಗಾರು ಆರಂಭದಲ್ಲೇ ಆತಂಕ ತಂದೊಡ್ಡಿದೆ.

ರಾಜ್ಯದಲ್ಲಿ ಜೂನ್ 4ರಿಂದ ಮುಂಗಾರು ಮಳೆ ಆರಂಭವಾಗಿದ್ದರೂ, ಜೂನ್ 15ರವರೆಗೆ ಕೇವಲ 19 ಮಿ.ಮೀ. ಮಾತ್ರ ಮಳೆ ಪ್ರಮಾಣ ದಾಖಲಾಗಿದೆ. ಸಾಮಾನ್ಯವಾಗಿ ಈ ಅವಧಿಯಲ್ಲಿ 53 ಮಿ.ಮೀ. ಮಳೆಯಾಗಬೇಕಿತ್ತು. ಅಂದರೆ, ನಿರೀಕ್ಷಿತ ಮಳೆಯ ಅರ್ಧಕ್ಕಿಂತಲೂ ಕಡಿಮೆ ಮಳೆಯಾಗಿದೆ. ಇದರ ಪರಿಣಾಮ ರಾಜ್ಯದಲ್ಲಿ ಈವರೆಗೆ 7.87 ಲಕ್ಷ ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆಯಾಗಿದೆ. ಈ ವೇಳೆಗೆ 46.29 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿತ್ತು.

ಕಳೆದ ವರ್ಷ ಈ ವೇಳೆಗಾಗಲೇ ಜಲಾಶಯಗಳು ಶೇ.70ರಷ್ಟು ಭರ್ತಿಯಾಗಿದ್ದವು. ಆದರೆ, ಈ ಬಾರಿ ಶೇ.20-21ರಷ್ಟು ಮಾತ್ರ ತುಂಬಿವೆ. ಇನ್ನು ಜುಲೈನಲ್ಲಿ ಕೂಡ ಮಳೆ ಕೊರತೆಯಾಗುವ ಸಾಧ್ಯತೆಯಿದೆ. ಈ ವರ್ಷ ಮಲೆನಾಡು, ಕರಾವಳಿಗಳಲ್ಲಿ ಕೂಡ ಮಳೆ ಕೊರತೆ ಉಂಟಾಗಿದೆ. ಈ ಭಾಗಗಳಲ್ಲಿ ಮುಂಗಾರು ಆರಂಭದಲ್ಲಿಯೇ ದೊಡ್ಡ ಪ್ರಮಾಣದಲ್ಲಿ ಕೊರತೆ ಎದುರಾಗಿರುವುದು ಆತಂಕ ಸೃಷ್ಟಿಸಿದೆ. ಜೂನ್ ಕೊನೆಯ ವಾರ ಹಾಗೂ ಜುಲೈನಲ್ಲಿ ಮಳೆ ಸುರಿದರೂ ಚದುರಿದಂತೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಹವಾಮಾನ ತಜ್ಞ ಶ್ರೀನಿವಾಸ ರೆಡ್ಡಿ ಕಳವಳ ವ್ಯಕ್ತಪಡಿಸಿದ್ದಾರೆ.

ಎಲ್‌ನಿನೋ ಆತಂಕ: ಎಲ್‌ನಿನೋ ಎಂಬುದು ಪೆಸಿಫಿಕ್ ಮಹಾಸಾಗರದಲ್ಲಿ ಉಂಟಾಗುವ ಅಸ್ವಾಭಾವಿಕ ಹವಾಮಾನ ವಿದ್ಯಮಾನ. ಹವಾಮಾನ ತಜ್ಞ ಶ್ರೀನಿವಾಸ ರೆಡ್ಡಿ ಪ್ರಕಾರ, ಜುಲೈನಲ್ಲಿ 'ಎಲ್‌ನಿನೋ' ಪ್ರಭಾವ ಕಾಣಿಸಿಕೊಳ್ಳಲಿದೆ. ಇದು ಜಾಗತಿಕ ತಾಪಮಾನವನ್ನು ಹೆಚ್ಚಿಸಲಿದೆ. ಜುಲೈನಲ್ಲಿ ಕೂಡ ಮಳೆ ಕೊರತೆಯಾಗುವ ಸಾಧ್ಯತೆಯಿದ್ದು, ಮುಂದಿನ ದಿನಗಳಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗುವ ಭೀತಿ ಇದೆ.

ಯಾವ ಬೆಳೆ ಎಷ್ಟು ಬಿತ್ತನೆ ?

- **ರಾಗಿ:** ಗುರಿ 7.88 ಲಕ್ಷ ಹೆಕ್ಟೇರ್, ಸಾಧನೆ ಕೇವಲ 0.01 ಲಕ್ಷ ಹೆಕ್ಟೇರ್
- **ಜೋಳ:** ಗುರಿ 2.38 ಲಕ್ಷ ಹೆಕ್ಟೇರ್, ಸಾಧನೆ 0.58 ಲಕ್ಷ ಹೆಕ್ಟೇರ್
- **ಮೆಕ್ಕೆಜೋಳ:** ಗುರಿ 13.09 ಲಕ್ಷ ಹೆಕ್ಟೇರ್, ಸಾಧನೆ 2.77 ಲಕ್ಷ ಹೆಕ್ಟೇರ್

ಕರಾವಳಿ, ಮಲೆನಾಡಲ್ಲಿ ಮುಂಗಾರು ಮುನಿಸು »03

ವಿಕ ಕಳಕಳಿ

ರೈತರಿಗೆ ಬೇಕಿದೆ ಸಲಹೆ

ಮುಂಗಾರಿನ ವಿಳಂಬ ಮತ್ತು ಮಳೆ ಕೊರತೆಯು ಕೇವಲ ರೈತರ ಆರ್ಥಿಕತೆಯ ಮೇಲೆ ಮಾತ್ರವಲ್ಲದೆ, ರಾಜ್ಯದ ಕುಡಿಯುವ ನೀರಿನ ಪೂರೈಕೆಯ ಮೇಲೂ ನೇರ ಪರಿಣಾಮ ಬೀರಲಿದೆ. ಸರಕಾರವು ಜಲಾಶಯಗಳ ನೀರಿನ ಸಂಗ್ರಹವನ್ನು ಮಿತವಾಗಿ ಬಳಸುವ ನಿಟ್ಟಿನಲ್ಲಿ ತುರ್ತು ಕ್ರಮ ಕೈಗೊಳ್ಳಬೇಕಿದೆ. ನೀರಿನ ನಿರ್ವಹಣೆ ಹೇಗಿರಬೇಕು? ಯಾವ ಬೆಳೆ ಬೆಳೆದರೆ ಉತ್ತಮ ಎಂಬುದರ ಬಗ್ಗೆ ಕೃಷಿ ಇಲಾಖೆ ರೈತರಿಗೆ ಸಕಾಲದಲ್ಲಿ ಮಾಹಿತಿ ನೀಡಬೇಕಿದೆ.

ಜಲಾಶಯಗಳ ಸ್ಥಿತಿ ಹೇಗಿದೆ ? ಕಳೆದ ವರ್ಷ ಶೇ.70ರಷ್ಟು ತುಂಬಿದ್ದ ಜಲಾಶಯಗಳು, ಈ ಬಾರಿ ಕೇವಲ ಶೇ.20-21ರಷ್ಟು ಮಾತ್ರ ತುಂಬಿವೆ.

ಹರ್ಮುಜ್‌ಗೆ ಸುಂಕವಿಲ್ಲ, ಸೇವಾ ಶುಲ್ಕ

ಸಮುದ್ರಯಾನ ಸೇವೆಗಳಿಗಾಗಿ ಶುಲ್ಕ: ಇರಾನ್

ಟೆಹ್ರಾನ್: ಕೊಲ್ಲಿ ದೇಶಗಳಿಂದ ಕಚ್ಚಾತೈಲ ಸಾಗಣೆಗೆ ಪ್ರಮುಖ ರಹದಾರಿಯಾಗಿರುವ ಹರ್ಮುಜ್ ಜಲಸಂಧಿಯಲ್ಲಿ ಸಾಗುವ ಹಡಗುಗಳ ಮೇಲೆ ಶುಲ್ಕ ವಿಧಿಸುವುದಾಗಿ ಇರಾನ್ ಹೇಳಿದೆ. ಈ ಮುನ್ನ ಹರ್ಮುಜ್ ದಾಟುವ ಪ್ರತಿ ಹಡಗಿನಿಂದ ಕಡ್ಡಾಯವಾಗಿ ಸುಂಕ ವಸೂಲಿ ಮಾಡುವುದಾಗಿ ಹೇಳಿದ್ದ ಇರಾನ್ ನಾಯಕರು, ಈಗ ''ಹರ್ಮುಜ್ ಜಲಸಂಧಿಯಲ್ಲಿ ಒದಗಿಸುವ ಸಮುದ್ರಯಾನ ಸೇವೆಗಳಿಗಾಗಿ ಶುಲ್ಕ ವಿಧಿಸಲಾಗುವುದು,'' ಎಂದು ಹೇಳಿದ್ದಾರೆ.

ಅಮೆರಿಕ-ಇರಾನ್ ಶಾಂತಿ ಒಪ್ಪಂದಕ್ಕೆ ಶುಕ್ರವಾರ ಸಹಿ ಬೀಳಲಿದ್ದು, ಅಂದಿನಿಂದಲೇ ಹಡಗುಗಳ ಸುಂಕ ರಹಿತ ಸಂಚಾರಕ್ಕೆ ಹರ್ಮುಜ್ ಸಂಪೂರ್ಣ ಮುಕ್ತವಾಗಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಪ್ರಕಟಿಸಿದ್ದರು. ಆದರೆ, ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘಾಯಿ ಅವರು ಮಂಗಳವಾರ 'ಶುಲ್ಕ'ದ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಇರಾನ್‌ನಿಂದ ಸುಂಕ ವಸೂಲಿಯು ಜಾಗತಿಕವಾಗಿ ಸಮುದ್ರಯಾನ ಮುಕ್ತವಾಗಿರಬೇಕೆಂಬ ಅಂತಾರಾಷ್ಟ್ರೀಯ ನಿಯಮಗಳಿಗೆ ವಿರುದ್ಧ ಎಂಬ ಟೀಕೆಗಳು ಕೇಳಿಬಂದಿದ್ದವು. ಹೀಗಾಗಿ ವರಸೆ ಬದಲಿಸಿರುವ ಇರಾನ್, ''ಕೊಲ್ಲಿಯಲ್ಲಿ ನೌಕೆಗಳ ಸುಗಮ ಯಾನಕ್ಕೆ ಇರಾನ್ ಕಲ್ಪಿಸಲಿರುವ ಸೌಲಭ್ಯಗಳಿಗಾಗಿ ಈ ಶುಲ್ಕ ವಿಧಿಸಲಾಗುವುದು. ಪೈಲಟಿಂಗ್ ನೆರವು, ಟಗ್‌ಬೋಟ್ ಕಾರ್ಯಾಚರಣೆ, ಪಥನಿರ್ದೇಶನ, ಲೈಟ್ ಹೌಸ್ ನಿರ್ವಹಣೆ, ಡ್ರೆಡ್ಜಿಂಗ್ ಹಾಗೂ ತುರ್ತು ಪ್ರತಿಕ್ರಿಯೆ ಸೇರಿದಂತೆ ನೌಕಾ ಯಾನ ನಿರ್ವಹಣೆ ವ್ಯವಸ್ಥೆಗಾಗಿ ಈ ಶುಲ್ಕ ವಿಧಿಸಲಾಗುವುದು,'' ಎಂದು ಇರಾನ್ ಹೇಳಿದೆ.

ಜೂನ್ 22ರವರೆಗೆ ಟೆಲಿಗ್ರಾಂ ಬಂದ್!

ನೀಟ್ ಮರುಪರೀಕ್ಷೆಯಲ್ಲಿ ಅಕ್ರಮ ತಡೆಯಲು ಕ್ರಮ

ಹೊಸದಿಲ್ಲಿ: ಜೂನ್ 21ರಂದು ನಿಗದಿಯಾಗಿರುವ 'ನೀಟ್ ಯುಜಿ-2026' ಮರುಪರೀಕ್ಷೆಗೆ ಕಟ್ಟುನಿಟ್ಟಿನ ಸಿದ್ಧತೆಯ ಭಾಗವಾಗಿ ಕೇಂದ್ರ ಸರಕಾರ ಜೂನ್ 22ರವರೆಗೆ ಟೆಲಿಗ್ರಾಂ ಮೆಸೆಂಜರ್ ಆ್ಯಪ್‌ಗೆ ನಿಷೇಧ ಹೇರಿದೆ.

ಕಳೆದ ಮೇ 3ರಂದು ನಡೆದ ಪರೀಕ್ಷೆ ವೇಳೆ ಟೆಲಿಗ್ರಾಂ ಮೂಲಕ ಪ್ರಶ್ನೆ ಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ನೀಟ್ ಮರು ಪರೀಕ್ಷೆಯಲ್ಲೂ ಅಂತಹ ವಂಚನೆಯನ್ನು ತಡೆಯಲು ಈ ಕ್ರಮ ಕೈಗೊಳ್ಳಲಾಗಿದೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಶಿಫಾರಸಿನ ಮೇರೆಗೆ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಈ ಆದೇಶ ಹೊರಡಿಸಿದೆ. ಅಲ್ಲದೆ, ಜೂನ್ 30ರ ವರೆಗೆ ಟೆಲಿಗ್ರಾಂನಲ್ಲಿ ಹಳೆಯ ಸಂದೇಶಗಳನ್ನು ಎಡಿಟ್ ಮಾಡುವ ವೈಶಿಷ್ಟ್ಯವನ್ನು ನಿಷ್ಕ್ರಿಯಗೊಳಿಸಲಾಗಿದೆ.

ವಾಟ್ಸ್ ಆ್ಯಪ್‌ನಂತಹ ಮೆಸೇಜಿಂಗ್ ಆ್ಯಪ್‌ಗಳಿಗೆ ಹೋಲಿಸಿದರೆ ಟೆಲಿಗ್ರಾಂ ತಾಂತ್ರಿಕ ವಿನ್ಯಾಸ ವಂಚಕರಿಗೆ ಹೆಚ್ಚು ಸಹಕಾರಿಯಾಗಿದೆ. ಟೆಲಿಗ್ರಾಂನಲ್ಲಿ ಬಳಕೆದಾರರು ತಮ್ಮ ಫೋನ್ ನಂಬರ್ ಮರೆಮಾಚಿ ಕೇವಲ ಯೂಸರ್‌ನೇಮ್ ಮೂಲಕ ಕಾರ್ಯನಿರ್ವಹಿಸಬಹುದು. ಇದರಿಂದ ವಂಚಕರ ಗುರುತು ಸಿಗುವುದಿಲ್ಲ. ಅಲ್ಲದೆ, ಇದರ ಪಬ್ಲಿಕ್ ಚಾನೆಲ್‌ಗಳು ಮತ್ತು ಬಾಟ್‌ಗಳ ಮೂಲಕ ಲಕ್ಷಾಂತರ ಜನರಿಗೆ ಒಂದೇ ಬಾರಿಗೆ ಮೆಸೇಜ್ ಮಾಡಬಹುದಾಗಿದೆ. ಆದರೆ, ವಾಟ್ಸ್‌ಆ್ಯಪ್‌ನಲ್ಲಿ ಪ್ರತಿಯೊಂದು ಮೆಸೇಜ್ ಸಂಪೂರ್ಣವಾಗಿ ಸುರಕ್ಷಿತವಾಗಿರುತ್ತದೆ. ಎಲ್ಲದಕ್ಕೂ ಎಂಡ್-ಟು-ಎಂಡ್ ಎನ್‌ಕ್ರಿಪ್ಶನ್ ಆಯ್ಕೆಯಿದೆ. ಆದರೆ, ಟೆಲಿಗ್ರಾಮ್‌ನ ಸಾಮಾನ್ಯ ಚಾನೆಲ್ ಮತ್ತು ಗ್ರೂಪ್‌ಗಳಲ್ಲಿ ಈ ಆಯ್ಕೆಯಿಲ್ಲ. ಹಾಗಾಗಿ, ವಂಚಕರಿಗೆ ಸುಲಭದ ದಾರಿಯಾಗುವುದನ್ನು ತಪ್ಪಿಸಲು ಸರಕಾರ ಈ ಕ್ರಮ ಕೈಗೊಂಡಿದೆ.

ಈ ಮಧ್ಯೆ, ಸರಕಾರದ ನಿಷೇಧದ ಹೊರತಾಗಿಯೂ ಟೆಲಿಗ್ರಾಂ ಕಾರ್ಯನಿರ್ವಹಿಸುತ್ತಿದೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ. ಸರಕಾರದ ಆದೇಶದ ಬೆನ್ನಲ್ಲೇ 'ಪ್ಲೇಸ್ಟೋರ್' ನಿಂದ ಟೆಲಿಗ್ರಾಂ ತಂತ್ರಾಂಶವನ್ನು ಗೂಗಲ್ ತೆಗೆದುಹಾಕಿದೆ. ವಿವರ»06

ಬೆಲೆ ಇಳಿಕೆ ಸಾಧ್ಯತೆ ಸದ್ಯಕ್ಕಿಲ್ಲ

ನ್ಯೂಯಾರ್ಕ್/ಹೊಸದಿಲ್ಲಿ: ಮಧ್ಯಪ್ರಾಚ್ಯ ಸಂಘರ್ಷದಿಂದ ಗಗನಕ್ಕೇರಿರುವ ಇಂಧನ ಹಾಗೂ ಅಗತ್ಯ ವಸ್ತುಗಳ ಬೆಲೆಗಳು ತಹಬದಿಗೆ ಬರಲು ಇನ್ನೂ ಹಲವು ತಿಂಗಳು ಹಿಡಿಯಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ.

ಹರ್ಮುಜ್ ಮೇಲಿನ ನಿರ್ಬಂಧದಿಂದ ಕಚ್ಚಾತೈಲ, ಸಂಸ್ಕರಿಸಿದ ಇಂಧನ, ರಾಸಾಯನಿಕ ಪೂರೈಕೆ ಸರಪಳಿ ತುಂಡಾಗಿತ್ತು. ಹೀಗಾಗಿ ಇರಾನ್-ಅಮೆರಿಕ ಸಂಘರ್ಷದ ಸಮಯದಲ್ಲಿ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಸಿಎನ್‌ಜಿ, ದಿನಸಿ, ಅಗತ್ಯ ವಸ್ತುಗಳ ದರಗಳು ಏರುಗತಿಯಲ್ಲಿದ್ದವು. ಹಣದುಬ್ಬರ ಗಣನೀಯ ಏರಿಕೆ ದಾಖಲಿತ್ತು. ಶಾಂತಿ ಒಪ್ಪಂದದ ಹಿನ್ನೆಲೆಯಲ್ಲಿ ಜಾಗತಿಕ ಪೇಟೆಯಲ್ಲಿ ಕಚ್ಚಾತೈಲ ದರ 5% ಕುಸಿತವಾಗಿದ್ದು, ಭಾರತದಲ್ಲೂ ಜನರು ಬೆಲೆ ಇಳಿಕೆ ನಿರೀಕ್ಷೆಯಲ್ಲಿದ್ದಾರೆ. ವಿವರ»12

ಡಿಜಿಟಲ್ ವಿಕೃತಿಗೆ ಬ್ರೇಕ್

- ಖಾಸಗಿ ವಿಡಿಯೊ, ಫೋಟೊ ಫಾರ್ವರ್ಡ್ ಮಾಡಿದರೆ FIR
- ಅನುಮತಿ ಇಲ್ಲದೆ ಫೋಟೊ ಪ್ರಕಟಿಸುವುದೂ ಅಪರಾಧ
- ರಾಜ್ಯ ಪೊಲೀಸ್ ಮಹಾನಿರ್ದೇಶಕರಿಂದ ಆದೇಶ

ವಿವರ»07

ಸಿರಪ್ ಮಾರಾಟ ನಿರ್ಬಂಧ ಜಾರಿ

ಹೊಸದಿಲ್ಲಿ: ಔಷಧಗಳ ಗುಣಮಟ್ಟ ಮತ್ತು ರೋಗಿಗಳ ಸುರಕ್ಷತೆ ಬಗ್ಗೆ ಹೆಚ್ಚಿದ ಕಳವಳಗಳ ನಡುವೆಯೇ, ಸಿರಪ್‌ಗಳ ಮಾರಾಟಕ್ಕೆ ಅದರಲ್ಲೂ ಕೆಮ್ಮಿನ ಸಿರಪ್‌ಗಳಿಗೆ ಸಂಬಂಧಿಸಿದಂತೆ ಕೇಂದ್ರ ಆರೋಗ್ಯ ಇಲಾಖೆ ನಿಯಮಗಳನ್ನು ಬಿಗಿಗೊಳಿಸಿದೆ.

ಮೆಡಿಕಲ್ ಶಾಪ್‌ಗಳಲ್ಲಿ ವೈದ್ಯರ ಶಿಫಾರಸು ಚೀಟಿ ಇಲ್ಲದೆ ನೇರವಾಗಿ ಸಿರಪ್ ಮಾರಾಟ ಮಾಡುವುದನ್ನು (ಓವರ್ ದಿ ಕೌಂಟರ್ ಸೇಲ್) ಸರಕಾರ ನಿಷೇಧಿಸಿದೆ. ಕಲುಷಿತ ಕೆಮ್ಮಿನ ಸಿರಪ್ ಸೇವಿಸಿ ಹಲವು ಮಕ್ಕಳು ಮೃತಪಟ್ಟಿದ್ದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಇದಕ್ಕಾಗಿ ಕೇಂದ್ರವು 1945ರ ಔಷಧ ನಿಯಮಗಳನ್ನು ತಿದ್ದುಪಡಿ ಮಾಡಿದೆ. ಶೆಡ್ಯೂಲ್ 'ಕೆ' ಅಡಿಯಲ್ಲಿ ಪಟ್ಟಿ ಮಾಡಲಾದ ವಿನಾಯಿತಿ ಪಡೆದ ಔಷಧಗಳ ವರ್ಗದಿಂದ 'ಸಿರಪ್‌ಗಳು' ಎಂಬ ಪದವನ್ನು ಕೈಬಿಡಲಾಗಿದೆ. ಇದರೊಂದಿಗೆ ವೈದ್ಯರ ಪ್ರಿಸ್ಕ್ರಿಪ್ಷನ್ ಇಲ್ಲದೆ ಕೆಮ್ಮು ಸಿರಪ್‌ಗಳು ಸೇರಿದಂತೆ ಯಾವುದೇ ಸಿರಪ್‌ಗಳ ಮಾರಾಟವು ಕಾನೂನುಬಾಹಿರವಾಗಲಿದೆ.

ಐಎಸ್‌ಐ ನಂಟು 7 ಮಂದಿ ಬಂಧನ

ಹೊಸದಿಲ್ಲಿ: ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐನೊಂದಿಗೆ ನೇರ ಸಂಪರ್ಕ ಹೊಂದಿದ್ದ ಅಂತಾರಾಷ್ಟ್ರೀಯ ಭಯೋತ್ಪಾದಕ ಜಾಲವನ್ನು ಪತ್ತೆ ಹಚ್ಚಿರುವ ದಿಲ್ಲಿ ಪೊಲೀಸರು ಏಳು ಆರೋಪಿಗಳನ್ನು ಬಂಧಿಸಿದ್ದಾರೆ.

ಪಾಕಿಸ್ತಾನ ಮೂಲದ ಭಯೋತ್ಪಾದಕ ಶಹಜಾದ್ ಭಟ್ಟಿ ಮತ್ತು ಆತನ ಸಹಚರ ಆಜ್ಮಲ್ ಗುಜ್ಜರ್ ಜತೆ ಬಂಧಿತರು ಸಂಬಂಧ ಹೊಂದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಗುಂಪು ಪಾಕಿಸ್ತಾನದಿಂದ ಪಂಜಾಬ್ ಮೂಲಕ ಭಾರತಕ್ಕೆ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು ಮತ್ತು ಹೆರಾಯಿನ್‌ನಂತಹ ಮಾದಕ ದ್ರವ್ಯಗಳನ್ನು ಕಳ್ಳಸಾಗಣೆ ಮಾಡುತ್ತಿತ್ತು. ಬಳಿಕ ದಿಲ್ಲಿ ಎನ್‌ಸಿಆರ್‌ನ ವಿವಿಧ ಸ್ಥಳಗಳಿಗೆ ವಿತರಿಸುತ್ತಿತ್ತು.

Advertorial

ಮಂಡಿನೋವಿಗೆ ಆಪರೇಷನ್ ಇಲ್ಲದೆಯೇ ಶೀಘ್ರ ಚೇತರಿಕೆ!

ಒಂದೇ ಗಂಟೆಯ ಚಿಕಿತ್ಸೆ | ನೋವಿನ ದಿನಗಳಿಗೆ ಪೂರ್ಣವಿರಾಮ ಹಾಕಿ

■ ವಿಶೇಷ ವರದಿ ಬೆಂಗಳೂರು

ಬೆಂಗಳೂರು: "ವಯಸ್ಸಾಯಿತು, ಇನ್ನು ಮೊಣಕಾಲು ನೋವು ತಪ್ಪಿದ್ದಲ್ಲ, ನಡೆಯಲು ಆಗುತ್ತಿಲ್ಲ, ಮೆಟ್ಟಿಲು ಹತ್ತುವುದು ಕಷ್ಟ, ಆಪರೇಷನ್ ಮಾಡಿಸಲೇ ಬೇಕು" ಎಂದುಕೊಂಡು ನಿರಾಶರಾಗಿದ್ದೀರಾ? ಶಸ್ತ್ರಚಿಕಿತ್ಸೆಯ ಭಯದಿಂದ ನೋವನ್ನು ದಿನಾಲೂ ಸಹಿಸಿಕೊಳ್ಳುತ್ತಿದ್ದೀರಾ?

ಹಾಗಿದ್ದರೆ ನಿಮಗೊಂದು ಅತ್ಯಂತ ಆಶಾದಾಯಕ ಸುದ್ದಿ ಇಲ್ಲಿದೆ. ಇತ್ತೀಚಿನ ಜಾಗತಿಕ ವೈದ್ಯಕೀಯ ಸಂಶೋಧನೆಗಳ ಪ್ರಕಾರ, ಕೀಲು ನೋವಿನ ಸಮಸ್ಯೆ ಇರುವ ಶೇ. 80 ರಷ್ಟು ಜನರಿಗೆ ಶಸ್ತ್ರಚಿಕಿತ್ಸೆಯ (Surgery) ಅಗತ್ಯವೇ ಇರುವುದಿಲ್ಲ!

ಹಾನಿಯ ಹಂತ ಪರೀಕ್ಷಿಸಿ, ಸೂಕ್ತ ಚಿಕಿತ್ಸೆಯ ಸಲಹೆ

ಹೌದು, ನಿಮ್ಮ ಕೀಲು ನೋವು ಅಥವಾ ಅಸ್ಥಿಸಂಧಿವಾತ 1, 2 ಅಥವಾ 3ನೇ ಹಂತದ ಒಳಗಿದ್ದರೆ, ಆಪರೇಷನ್ ಇಲ್ಲದೆಯೇ ಸಂಪೂರ್ಣ ಉಪಶಮನ ಕಂಡುಕೊಳ್ಳಲು ಇಂದು ಆಧುನಿಕ ವೈದ್ಯವಿಜ್ಞಾನದಲ್ಲಿ ಅಡ್ಡ ಪರಿಣಾಮಗಳಿಲ್ಲದ ಹಾಗೂ ಸುರಕ್ಷಿತ ಮಾರ್ಗಗಳು ಲಭ್ಯವಿವೆ.

ಇಂದು ಲಭ್ಯವಿರುವ ಇಂತಹ ಅತ್ಯಾಧುನಿಕ ಚಿಕಿತ್ಸೆಗಳಲ್ಲಿ ಅತ್ಯಂತ ಸುರಕ್ಷಿತ ಹಾಗೂ ಪ್ರಮುಖವಾದದ್ದು ಅಲೆವಿಯೇಟ್ ನೋವು ನಿವಾರಣಾ ಕೇಂದ್ರದಲ್ಲಿ ನುರಿತ ತಜ್ಞ ವೈದ್ಯರು ನೀಡುವ ಅತ್ಯಂತ ಪರಿಣಾಮಕಾರಿಯಾದ ಪುನರುಜ್ಜೀವನ ಪ್ರಕ್ರಿಯೆ.

"ಅಲಿವಿಯೇಟ್ ಚಿಕಿತ್ಸೆಯ ಶಕ್ತಿಗೆ ನಾನೇ ನೇರ ಸಾಕ್ಷಿ!"

"ಆಪರೇಷನ್ ನಿರ್ಧಾರಕ್ಕೂ ಮುನ್ನ ಒಮ್ಮೆ ಇಲ್ಲಿಗೆ ಬನ್ನಿ. ನೋವಿನಿಂದ ಇಷ್ಟೊಂದು ಆರಾಮ ಸಿಗುತ್ತದೆ ಎಂದು ನಾನಂತೂ ಊಹಿಸಿರಲಿಲ್ಲ!"*

ಗೌಪ್ಯತೆಗಾಗಿ ಚಿತ್ರ ಮಸುಕುಗೊಳಿಸಲಾಗಿದೆ.

ಶಾಂತಮ್ಮ ಎಸ್
ಗೃಹಿಣಿ - 55 ವರ್ಷ
ಬೆಂಗಳೂರು ನಿವಾಸಿ
ಪಿಆರ್‌ಪಿ (PRP) ಚಿಕಿತ್ಸೆಯ ಫಲಾನುಭವಿ

ಈ ಪ್ರಕ್ರಿಯೆ ಯಾವುದೇ ಹೊರಗಿನ ರಾಸಾಯನಿಕ ವಿಲ್ಲದೆ, ನಿಮ್ಮದೇ ರಕ್ತದ ಸ್ವಯಂ ಗುಣಪಡಿಸುವ ಬೆಳವಣಿಗೆ ಅಂಶಗಳು / ಕಿಣ್ವಗಳನ್ನು ಬೇರ್ಪಡಿಸಿ, ಉನ್ನತ 'ಇಮೇಜ್ ಗೈಡೆನ್ಸ್' ತಂತ್ರಜ್ಞಾನದ ಮೂಲಕ, ಸವೆತವಿರುವ ನಿಖರ ಬಿಂದು ಗುರುತಿಸಿ, ನೇರವಾಗಿ ತಲುಪಿಸಿ, ಹಾನಿಗೊಳಗಾದ ಅಂಗಾಂಶಗಳನ್ನು ಈ ಪ್ರಕ್ರಿಯೆ ಮರು ಉತ್ತೇಜನಗೊಳಿಸುತ್ತದೆ.

*ಫಲಿತಾಂಶ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗಬಹುದು ಎಂಬುದನ್ನು ಗಮನಿಸಬೇಕು.

ಚಿಕಿತ್ಸೆಯ ವಿಶೇಷತೆ ಮತ್ತು ಅನುಕೂಲ

- ಅಡ್ಮಿಟ್ ಆಗುವ ಕಿರಿಕಿರಿ ಇಲ್ಲ
- ಸ್ವಂತ ರಕ್ತದ ಶಕ್ತಿಯ ಬಳಕೆ
- ಸ್ಟೀರಾಯ್ಡ್‌ಗಳ ಬಳಕೆಯೇ ಇಲ್ಲ
- ಮರುದಿನವೇ ಕೆಲಸಕ್ಕೆ ಮರಳಿ
- ಮೂಲ ಪತ್ತೆಹಚ್ಚಿ ನಿಖರ ಚಿಕಿತ್ಸೆ
- 50,000+ ಜನರಿಗೆ ಉಪಶಮನ

ಇತರ ಚಿಕಿತ್ಸೆ

ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆಗಳು ಲಭ್ಯವಿದೆ.

ತಜ್ಞ ವೈದ್ಯರ ಸಮಾಲೋಚನೆಗೆ ಕರೆ ಮಾಡಿ:
ಅಲಿವಿಯೇಟ್ ನೋವು ನಿವಾರಣಾ ಕೇಂದ್ರ,
ಬೆಂಗಳೂರು ಶಾಖೆಗಳು:
ಪೀಣ್ಯ ದಾಸರಹಳ್ಳಿ, ವೈಟ್‌ಫೀಲ್ಡ್ ಸದಾಶಿವನಗರ, ಜಯನಗರ, ಇಂದಿರಾನಗರ
080 28396888
080 23614888

ಖರ್ಗೆ ಅವರೇ, ನೀವು ಆಕಾಶಕ್ಕೆ ಉಗುಳುತ್ತಿದ್ದೀರಿ: ಬಿಜೆಪಿ

ಆರ್‌ಎಸ್‌ಎಸ್ ನೋಂದಣಿ ಪ್ರಶ್ನಿಸಿದ ಖರ್ಗೆ ವಿರುದ್ಧ ವಿಜಯೇಂದ್ರ ಕಿಡಿ

■ ವಿಕ ಸುದ್ದಿಲೋಕ ಬೆಂಗಳೂರು



ನೋಂದಣಿ ವಿಚಾರವಾಗಿ ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರಿಗೆ ಪತ್ರ ಬರೆದಿರುವ ಗೃಹ ಸಚಿವ ಪ್ರಿಯಾಂಕ್ ಖರ್ಗೆ ನಡೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಬಿಜೆಪಿ ನಾಯಕರು, ಖರ್ಗೆ ಹಾಗೂ ಕಾಂಗ್ರೆಸ್ ನೈತಿಕತೆ ಬಗ್ಗೆ ಪ್ರಶ್ನೆ ಮಾಡಿದ್ದಾರೆ.

ಖರ್ಗೆಯವರ ನಡೆಯನ್ನು ಎಕ್ಸ್‌ನಲ್ಲಿ ಖಂಡಿಸಿರುವ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ''ಸ್ವಾತಂತ್ರ್ಯ ಯೋಧರು ತ್ಯಾಗದ ಹಣ ಹೂಡಿಕೆ ಮಾಡಿ ಕಟ್ಟಿದ 5000 ಕೋಟಿ ರೂ. ಮೌಲ್ಯದ ಆಸ್ತಿ ಹೊಂದಿದ್ದ ಹೆರಾಲ್ಡ್ ಸಂಸ್ಥೆಯನ್ನು 'ಯಂಗ್ ಇಂಡಿಯನ್' ಹೆಸರಲ್ಲಿ ನುಂಗಿದ ನೆಹರು ಕುಟುಂಬದ ಮಹಾನ್ ಫಲಾನುಭವಿಯಾಗಿರುವ ಖರ್ಗೆ ಕುಟುಂಬದ ಪ್ರಿಯಾಂಕ್ ಖರ್ಗೆಯವರೇ, ಆರ್‌ಎಸ್‌ಎಸ್ ಪಾರದರ್ಶಕತೆಯ ಬದ್ಧತೆಯನ್ನು ಪ್ರಶ್ನಿಸುವುದು ತೋರಿದ ಸಮರ್ಪಣೆ, ತ್ಯಾಗದ ಪ್ರತೀಕವಾಗಿ ಇಂದು ವಿಶ್ವದ ಅತಿ ದೊಡ್ಡ ಸಂಸ್ಥೆಯಾಗಿ ಬೆಳೆದಿದೆ,'' ಎಂದು ಟೀಕಿಸಿದ್ದಾರೆ.

''ರಾಜ್ಯ ವಿಧಾನಸಭೆ ಚುನಾವಣೆಯ ಅನೇಕ ಅಲ್ಪಸಂಖ್ಯಾತ ಹೆಸರಿನ ಮತೀಯವಾದಿ ಸಂಘಟನೆಗಳು ದೇಶದಲ್ಲಿ ತಲೆಯೆತ್ತಿರುವುದು, ಅತ್ಯಂತ ವಿದೇಶಿ ದೇಣಿಗೆ ಪಡೆದು ರಾಷ್ಟ್ರದ್ರೋಹಿ ಚಟುವಟಿಕೆಗಳಲ್ಲಿ ತೊಡಗಿಸುತ್ತಿರುವ ಮಾಹಿತಿ ಗೃಹ ಇಲಾಖೆಯಲ್ಲಿ ಇದೆ. ಈ ಬಗ್ಗೆ ಪತ್ರ ಬರೆದು ಆ ಸಂಸ್ಥೆಗಳಿಂದ ವಿವರ ಏಕೆ ಕೇಳುವುದಿಲ್ಲ? ಆರ್‌ಎಸ್‌ಎಸ್ ಮದರಸಾಗಳಂತೆ ಗುಟ್ಟಾಗಿ ಕಾರ್ಯ ನಿರ್ವಹಿಸುವುದಿಲ್ಲ, ಕೇವಲ ಮತಾಂಧತೆಯನ್ನು ಬಿತ್ತಿ ರಾಷ್ಟ್ರವಿರೋಧಿತೆಯನ್ನು ಪೋಷಿಸುವ ಪ್ರಚೋದನೆಯ ಮದರಸಾಗಳು ಸಂಸ್ಥೆಗಳ ಚಟುವಟಿಕೆಗಳ ನಿಮ್ಮ ಕಣ್ಣಿಗೆ ಬೀಳುವುದಿಲ್ಲ, ಕೆಲವು ಕೇಳಿಸುವುದಿಲ್ಲ. ಏಕೆಂದರೆ ಅದರ ಮೂಲಕ ನಿಮ್ಮ ಉತ್ತೇಜನಕ್ಕೂ ಸದಾ ಅಧಿಕಾರ ಅನುಭವಿಸುವ ರಾಜಕೀಯ ಅಧಿಕಾರ ಅನುಭವಿಸುತ್ತಿರುವ ನಿಮಗೆ ರಾಷ್ಟ್ರ ವಿದ್ರೋಹ ಚಟುವಟಿಕೆಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಬದ್ಧತೆ–ನೈತಿಕತೆ ಇರಲು ಹೇಗೆ ಸಾಧ್ಯ,'' ಎಂದು ಕುಟುಕಿದ್ದಾರೆ.

''ಆರ್‌ಎಸ್‌ಎಸ್ ನೋಂದಣಿ ಕುರಿತು ವಿಪರೀತ ತಲೆಕೆಡಿಸಿಕೊಂಡಿರುವ ನಿಮ್ಮಂಥವರಿಗೆ ಮೋಹನ್ ಭಾಗವತ್ ಅವರು ಸರಿಯಾಗಿ ಉತ್ತರ ನೀಡಿದ್ದಾರೆ. ನೆಹರು ಕುಟುಂಬದ ಕುಡಿಗಳನ್ನು ಸಂತೃಪ್ತಿಪಡಿಸುವುದು. ಇದರಲ್ಲಿ ನಿಮಗೆ ವಿಕೃತ ಖುಷಿ ಸಿಗುವುದಾದರೆ ಬೈದುಕೊಳ್ಳಿ. ನೀವು ಆಕಾಶಕ್ಕೆ ಉಗುಳುತ್ತಿದ್ದೀರಿ ಎಂಬ ಸತ್ಯ ನಿಮಗರಿವಿದೆಯೋ? ಇಲ್ಲವೋ? ಗೊತ್ತಿಲ್ಲ,'' ಎಂದು ಹೇಳಿದ್ದಾರೆ.

ದೇಶ ವಿಭಜಕರ ಜತೆ ನಿಮ್ಮ ಸರಕಾರ

ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್, ''ದೇಶ ವಿಭಜನೆಗೆ ಕಾರಣವಾದ ಮುಸ್ಲಿಂ ಲೀಗ್‌ನಂತಹ ವಿಭಜನಕಾರಿ, ದೇಶ ವಿದ್ರೋಹಿ ಸಂಘಟನೆಯೊಂದಿಗೆ ಕೇವಲ ಅಧಿಕಾರದ ಲಾಲಸೆಗಾಗಿ ರಾಜಕೀಯ ಮೈತ್ರಿ ಮಾಡಿಕೊಂಡು ಎರಡು ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್‌ಗೆ ಆರ್‌ಎಸ್‌ಎಸ್ ಬಗ್ಗೆ ಮಾತನಾಡುವ ನೈತಿಕತೆ ಎಲ್ಲಿದೆ,'' ಎಂದು ಪ್ರಶ್ನಿಸಿದ್ದಾರೆ.

''ವಿಧಾನಸೌಧದ ಮುಂದೆಯೇ ದೇಶ ವಿರೋಧಿಗಳು 'ಪಾಕಿಸ್ತಾನ್ ಜಿಂದಾಬಾದ್' ಎಂದು ಕೂಗಿದರೂ, ಕಣ್ಣು–ಕಿವಿ ಮುಚ್ಚಿ ಕುಳಿತು, ಅವರ ಮೇಲೆ ಕ್ರಮ ಕೈಗೊಳ್ಳದೆ ಉದ್ಧಟತನದಿಂದ ಸಮರ್ಥನೆ ಮಾಡಿಕೊಂಡವರು ಪ್ರಿಯಾಂಕ್ ಖರ್ಗೆ. ಆರ್‌ಎಸ್‌ಎಸ್ ದೇಶನಿಷ್ಠೆಯನ್ನು ಪ್ರಶ್ನಿಸುತ್ತಿರುವುದು ಹಾಸ್ಯಾಸ್ಪದ ಮಾತ್ರವಲ್ಲ, ನಾಚಿಕೆಗೇಡಿತನದ ಪರಮಾವಧಿ,'' ಎಂದು ಹೇಳಿದ್ದಾರೆ.

ಸಿಎಂ ಆಗುವ ದುರಾಸೆ: ''2028ರ ಚುನಾವಣೆಯಲ್ಲೂ ತಾವೇ ಸಿಎಂ ಅಭ್ಯರ್ಥಿ ಎಂದು ಹಗಲುಗನಸು ಕಾಣುತ್ತಿರುವ ಡಿ.ಕೆ.ಶಿವಕುಮಾರ್ ಅವರಿಗೆ ಸದ್ದಿಲ್ಲದಂತೆ ಸಡ್ಡು ಹೊಡೆಯಲು ಪ್ರಿಯಾಂಕ್ ಖರ್ಗೆ ನಡೆಸುತ್ತಿರುವ ಈ ರಾಜಕೀಯ ತಂತ್ರಗಾರಿಕೆ ಚೆನ್ನಾಗಿದೆ. ಸದಾ ಸಮಾಜದಲ್ಲಿ ಸೈದ್ಧಾಂತಿಕ ವಿವಾದ ಸೃಷ್ಟಿಸಿ ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಇವರು ನಡೆಸುತ್ತಿರುವ ಕುತಂತ್ರ, ಒಳಸಂಚು ಪ್ರಜ್ಞಾವಂತ ಕನ್ನಡಿಗರಿಗೆ ಅರ್ಥವಾಗದಷ್ಟು ರಹಸ್ಯವಾಗಿ ಉಳಿದಿಲ್ಲ ಎಂದು ತಿಳಿಸಿದ್ದಾರೆ.

ರಾಜ್ಯದಲ್ಲಿ ಡ್ರಗ್ಸ್ ಹಾವಳಿ, ಅಕ್ರಮ ಬೆಟ್ಟಿಂಗ್, ಇಸ್ಪೀಟ್– ಜೂಜು ಅವ್ಯಾಹತವಾಗಿದೆ. ಬಡ್ಡಿ ವ್ಯವಹಾರ ನಡೆದಿದೆ. ಈ ಬಗ್ಗೆ ತಲೆಕೆಡಿಸಿಕೊಳ್ಳಿ. ಕರ್ನಾಟಕವನ್ನು ಸುರಕ್ಷಿತ ರಾಜ್ಯ ಮಾಡಿ. ಆರ್‌ಎಸ್‌ಎಸ್ ಮಾನ್ಯತೆ ಬಗ್ಗೆ ಮಾತನಾಡುವುದು, ಪ್ರಶ್ನಿಸುವುದು, ಪತ್ರ ಬರೆಯುವುದು ರಾಜಕೀಯ ಸ್ಟಂಟ್ ಅಷ್ಟೇ.

–ಅರವಿಂದ ಬೆಲ್ಲದ ವಿಧಾನಸಭಾ ಪ್ರತಿಪಕ್ಷದ ಉಪನಾಯಕ

ಆರ್‌ಎಸ್‌ಎಸ್ ಬಗ್ಗೆ ತಿಳಿದುಕೊಳ್ಳುವ ಸುಲಭ ಮತ್ತು ಸರಳ ಮಾರ್ಗವೆಂದರೆ ಸಂಘದ ಶಾಖೆಗೆ ಬರುವುದು. ಅದು ಅನುಭವವೇದ್ಯ ಸಂಗತಿ. ಹೊರಗಿನಿಂದ ಕೇಳಿ ತಿಳಿಯುವುದಕ್ಕಿಂತ ಮುಕ್ತವಾಗಿ ಶಾಖೆಗೆ ಬಂದರೆ ಸಚಿವ ಪ್ರಿಯಾಂಕ್ ಖರ್ಗೆ ಅವರ ಮನಸ್ಸಿನ ಕ್ಲೇಶ, ಕಲ್ಮಷ ದೂರಾಗಬಹುದು.

–ಸಿ.ಟಿ.ರವಿ ಮಾಜಿ ಸಚಿವ

ನೋಂದಣಿ–ಆದಾಯದ ದಾಖಲೆ ತೋರಿಸಿದರೆ ಸುಮ್ಮನಾಗುವೆ

■ ವಿಕ ಸುದ್ದಿಲೋಕ ಬೆಂಗಳೂರು

ಆರ್‌ಎಸ್‌ಎಸ್ ನೋಂದಣಿ ಮಾಡಿಸುವ ಅಗತ್ಯವಿಲ್ಲ ಎಂಬ ಉಡಾಫೆ ಮಾತುಗಳನ್ನು ಬಿಟ್ಟು ನಿಮ್ಮ ನೋಂದಣಿ, ಆದಾಯದ ಮೂಲ, ತೆರಿಗೆ ಪಾವತಿಯ ದಾಖಲೆಗಳನ್ನು ತೋರಿಸಿ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಹೊಸದಿಲ್ಲಿಯಲ್ಲಿನ ಕರ್ನಾಟಕ ಭವನದಲ್ಲಿ ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ''ರಾಜ್ಯದಲ್ಲಿ 20 ಲಕ್ಷ ಜನರನ್ನು ಸೇರಿಸಿ ಕಾರ್ಯಕ್ರಮಗಳನ್ನು ಮಾಡಿರುವುದಾಗಿ ಅಖಿಲ ಭಾರತೀಯ ಪ್ರತಿನಿಧಿ ಸಭಾದ ವಾರ್ಷಿಕ ವರದಿಯಲ್ಲಿದೆ. ಅಷ್ಟು ದೊಡ್ಡ ಮಟ್ಟದಲ್ಲಿ ಜನರನ್ನು ಸೇರಿಸುವವರ ವಿವರ ಕೇಳಬಾರದೇ? ಎಸ್‌ಐಆರ್ ವೇಳೆ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು ದೇಶದ ಜನರನ್ನು 'ಕಾಗದ ತೋರಿಸಿ' ಎಂದು ಕೇಳುತ್ತಿದ್ದರು. ಈಗ ಆರ್‌ಎಸ್‌ಎಸ್‌ನ ಕಾಗದ ತೋರಿಸಿ ಎಂದು ಕೇಳಿದಾಕ್ಷಣ, ಪಲಾಯನ ಮಾಡುತ್ತಿದ್ದಾರೆ,'' ಎಂದು ತಿಳಿಸಿದರು.

''ನೋಂದಣಿ ಮತ್ತಿತರ ದಾಖಲೆ ಪತ್ರ ಕೇಳುತ್ತಿದ್ದಂತೆ ನನ್ನ ಮೇಲೆ ದಾಳಿ ನಡೆಸಲು ಆರ್‌ಎಸ್‌ಎಸ್ ತನ್ನ ಆಳು ಮಕ್ಕಳಾದ ಬಿಜೆಪಿ ನಾಯಕರನ್ನು ನಿಯೋಜಿಸಿದೆ. ದಾಖಲೆ ಪತ್ರಗಳನ್ನು ತೋರಿಸಿದರೆ ನಾನು ಸುಮ್ಮನಾಗುತ್ತೇನೆ. ದೇಶದ ಗೃಹ, ವಿದೇಶಾಂಗ ಮತ್ತು ರಕ್ಷಣಾ ಸಚಿವರಿಗೆ ನೀಡಬಹುದಾದ ಭದ್ರತೆಯನ್ನು ಮೋಹನ್ ಭಾಗವತ್ ಅವರಿಗೆ ನೀಡಲಾಗುತ್ತಿದೆ. ಅಂತಹ ಭದ್ರತೆ ಪಡೆಯುವಂತಹ ಆ ವ್ಯಕ್ತಿ ಯಾರು? ಅವರಿಗೆ ಅಂತಹ ಭದ್ರತೆ ಏಕೆ? ಜನರ ತೆರಿಗೆ ಹಣದಿಂದ ಅಂತಹ ಭದ್ರತೆ ಒದಗಿಸುತ್ತಿರುವಾಗ ಆ ಸಂಘಟನೆಯ ನೋಂದಣಿ, ಆದಾಯದ ಮೂಲ, ಆಸ್ತಿ ವಿವರ ಮತ್ತು ಆದಾಯ ತೆರಿಗೆ ವಿವರಗಳನ್ನು ಜನ ಕೇಳಬಾರದೇ,'' ಎಂದು ಪ್ರಶ್ನಿಸಿದರು.

''100 ವರ್ಷಗಳಿಂದ ಹೀಗೆಯೇ ನಡೆದುಕೊಂಡು ಬರಲಾಗಿದೆ ಎಂಬ ಉತ್ತರವನ್ನು ಒಪ್ಪಲಾಗದು. ಕಾಂಗ್ರೆಸ್‌ಗೂ 140 ವರ್ಷಗಳಾಗಿವೆ. ಹಾಗಿದ್ದರೆ ಕಾಂಗ್ರೆಸ್ ಸಹ ತನ್ನ ಆದಾಯ, ಸ್ವತ್ತಿನ ವಿವರ ನೀಡುವ ಅಗತ್ಯವಿಲ್ಲ ಎಂದು ಹೇಳಿದರೆ ಒಪ್ಪಿಕೊಳ್ಳುತ್ತಾರೆಯೇ? ನಾನು ಕೇಳಿರುವ ಪ್ರಶ್ನೆಗಳಿಗೆ ಉತ್ತರ ನೀಡಲಿ. ಆನಂತರ ಅವರು ಕರೆದಲ್ಲಿಗೆ ಹೋಗಿ ಚರ್ಚಿಸೋಣ,'' ಎಂದು ಉತ್ತರಿಸಿದರು.

''ಹಿಂದೂ ಧರ್ಮವನ್ನು ನೋಂದಣಿ ಮಾಡಿಸಿ ಎಂದು ನಾನು ಕೇಳಿದ್ದೇನೆಯೇ? ಆ ಬಗ್ಗೆ ಪತ್ರದಲ್ಲಿ ಉಲ್ಲೇಖವಿದ್ದರೆ ತೋರಿಸಿ. ಆರ್‌ಎಸ್‌ಎಸ್ ಹಿಂದೂ ಧರ್ಮವಲ್ಲ, ಅದೊಂದು ಸಂಘಟನೆ. ಶಾಖೆ, ಪಥಸಂಚಲನ, ಕಾರ್ಯಕ್ರಮ ನಡೆಸಲು ಅವರಿಗೂ ಹಕ್ಕಿದೆ. ಆದರೆ, ದೇಶದ ಕಾನೂನಿನ ಅನ್ವಯ ನೋಂದಣಿ ಮಾಡಿಕೊಂಡು ಅವನ್ನೆಲ್ಲಾ ನಡೆಸಲಿ,'' ಎಂದು ಹೇಳಿದರು.

ಇನ್ನೂ ಉತ್ತರ ನೀಡಿಲ್ಲ

''ಮೋಹನ್ ಭಾಗವತ್ ಅವರು ತ್ರಿಶ್ಯೂರ್‌ನಲ್ಲಿ ಜೂ.13ರಂದು ನಡೆದ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್‌ಗೆ ನೋಂದಣಿ ಅಗತ್ಯವಿಲ್ಲ ಎಂದಿದ್ದಾರೆ. ಆದರೆ ನೋಂದಣಿ ವಿವರ ಕೋರಿದ ಪತ್ರ ಬರೆದ ಬಹಿರಂಗಪಡಿಸಿದ್ದು ಜೂನ್ 15ರಂದು. ಹಾಗಾಗಿ ನನ್ನ ಪತ್ರಕ್ಕೆ ಅವರು ಇನ್ನೂ ಪ್ರತಿಕ್ರಿಯಿಸಿಲ್ಲ'' ಎಂದರು. ''ರಾಹುಲ್ ವಿದೇಶ ಪ್ರವಾಸಕ್ಕೆ ತೆರಳಿದಾಗ ಅದಕ್ಕೆ ಹಣ ಹೊಂದಿಸಿದವರು ಯಾರು? ವಿದೇಶಿ ಪ್ರಯಾಣ ಕೈಗೊಂಡಿದ್ದು ಏಕೆ ಎಂದು ಆರ್‌ಎಸ್‌ಎಸ್, ಬಿಜೆಪಿಯವರು ಕೇಳುತ್ತಾರೆ. ಮೋಹನ್ ಭಾಗವತ್ ಮತ್ತು ದತ್ತಾತ್ರೇಯ ಹೊಸಬಾಳೆ ಅವರು ಸಹ ವಿದೇಶ ಪ್ರಯಾಣ ಕೈಗೊಂಡು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಅವರ ಪ್ರಯಾಣದ ಖರ್ಚುವೆಚ್ಚದ ಲೆಕ್ಕಾಚಾರವನ್ನು ನಾವು ಕೇಳಬಾರದೆ? ಆರ್‌ಎಸ್‌ಎಸ್‌ಗೆ ನೋಂದಣಿ ಅಗತ್ಯವಿಲ್ಲವೆಂಬ ಉಡಾಫೆ ಮಾತುಗಳೆಲ್ಲಾ ಅವರ ಸ್ವಯಂಸೇವಕರ ಮುಂದೆ ನಡೆಯುತ್ತದೆ. ಸರಕಾರದ ಮುಂದೆ ಅಲ್ಲ. ಸರಕಾರದ ಪತ್ರಕ್ಕೆ ಸರಿಯಾದ ಉತ್ತರ ನೀಡಬೇಕು,'' ಎಂದು ಪುನರುಚ್ಚರಿಸಿದರು.

ನಷ್ಟ ತಡೆಯದ ಗ್ಯಾರಂಟಿ ಸಮಿತಿ ಏಕೆ ಬೇಕು?

■ ವಿಕ ಸುದ್ದಿಲೋಕ ಬೆಂಗಳೂರು

ಗ್ಯಾರಂಟಿ ಅನುಷ್ಠಾನ ಸಮಿತಿ ರಚಿಸಿದ ಸರಕಾರ 3 ವರ್ಷಗಳಲ್ಲಿ ಆ ಸಮಿತಿಗಳಿಗೆ 100 ಕೋಟಿ ರೂ.ಗಿಂತಲೂ ಹೆಚ್ಚು ಹಣ ವೆಚ್ಚ ಮಾಡಿರುವುದು ಅನಗತ್ಯವಾಗಿದೆ. ಎಂದರೆ ಈ ಸಮಿತಿಗಳ ಅಗತ್ಯವೇನು ಎಂದು ಬಿಜೆಪಿ ರಾಜ್ಯ ವಕ್ತಾರ ಎಸ್.ಪ್ರಕಾಶ್ ಪ್ರಶ್ನಿಸಿದ್ದಾರೆ.



ರಾಜ್ಯ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಮಾತನಾಡಿದ ಅವರು, ''ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷರಿಗೆ ಸಂಪುಟ ದರ್ಜೆ ಸ್ಥಾನಮಾನ ನೀಡಲಾಗಿದ್ದು, ಒಟ್ಟಾರೆ ಈ ಸಮಿತಿಗಳಿಗೆ ವಾರ್ಷಿಕವಾಗಿ 35 ಕೋಟಿ ರೂ. ವೆಚ್ಚವಾಗುತ್ತಿದ್ದರೂ ಪ್ರಯೋಜನವಿಲ್ಲದಂತಾಗಿದೆ. ಪ್ರತಿಪಕ್ಷಗಳ ನಾಯಕರಿಗೆ ಸರಕಾರಿ ನಿವಾಸ ಹಂಚಿಕೆ ಮಾಡದ ಸರಕಾರ ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಮೆಹಬೂಬ್ ಪಾಷಾ ಅವರಿಗೆ ಜಯಮಹಲ್‌ನಲ್ಲಿ ಸರಕಾರಿ ನಿವಾಸ ಹಂಚಿಕೆ ಮಾಡಿರುವುದು ದುರಂತ,'' ಎಂದು ಹೇಳಿದರು.

''ಬ್ಯಾಂಕ್‌ಗಳಿಂದ ಪಡೆದ ಸಾಲ, ಬಡ್ಡಿಯ ಮೊತ್ತ 1,454 ಕೋಟಿ ರೂ. ಮರುಪಾವತಿಸದ ಪ್ರಕರಣ ಸಂಬಂಧ ಕಾಂಗ್ರೆಸ್ ಎಂಎಲ್ಸಿ ನಸೀರ್ ಅಹ್ಮದ್ ಅವರನ್ನು ಎಸ್‌ಐಟಿ ವಿಚಾರಣೆ ಮಾಡಿಸಬೇಕಿದೆ. ಇವರು 21 ಟೆಕ್ಸ್‌ಟೈಲ್ಸ್ ಕಂಪನಿ ಹೊಂದಿದ್ದು, ಸಿಬ್ಬಂದಿಗೆ ಸಂಬಳ, ಇಎಸ್‌ಐ, ಪಿಎಫ್ ಕಂತನ್ನೂ ಪಾವತಿಸಿಲ್ಲ. ಇಂತಹ ವ್ಯಕ್ತಿಯನ್ನು ಹಿಂದಿನ ಸಿಎಂ ರಾಜಕೀಯ ಕಾರ್ಯದರ್ಶಿಯನ್ನಾಗಿ ಮಾಡಿಕೊಂಡಿದ್ದು ವಿಪರ್ಯಾಸ. ಅವರ ಕಂಪನಿಗಳ ನೌಕರರಿಗೆ ಬಾಕಿಯಿರುವ ವೇತನ ಹಾಗೂ ಪಿಎಫ್ ಹಣವನ್ನು ಕೂಡಲೇ ವಸೂಲಿ ಮಾಡಿ ಕೊಡಿಸಬೇಕು. ಇಲ್ಲವೇ ವಂಚನೆ ಆರೋಪದ ಮೇಲೆ ನಸೀರ್ ಅಹ್ಮದ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕು,'' ಎಂದು ಆಗ್ರಹಿಸಿದ್ದಾರೆ.

ಪಂಚಾಂಗ 17-06-2026

ಪರಾಭವನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಜ್ಯೇಷ್ಠ. **ಪಕ್ಷ:** ಶುಕ್ಲ. **ಮಳೆ**
ನಕ್ಷತ್ರ: ಮೃಗಶಿರಾ. **ನಿತ್ಯನಕ್ಷತ್ರ:** ಪುನರ್ವಸು. **ತಿಥಿ:** ತದಿಗೆ.
ಯೋಗ: ಧ್ರುವ. **ಕರಣ:** ತೈತಿಲ.
ವಾರ: ಬುಧವಾರ.

ರಾಹು ಕಾಲ: ಮ. 12.00 - 1.30
ಗುಳಿಕ ಕಾಲ: ಬೆ. 10.30-12.00
ಯಮಗಂಡ ಕಾಲ: ಬೆ. 7.30-9.00
ಸೂರ್ಯ ಉದಯ: ಬೆ. 5.55
ಸೂರ್ಯ ಅಸ್ತ: ಸಂ. 6.46

HDFC BANK
HDFC BANK

ನೋಂದಾಯಿತ ಕಚೇರಿ : ಹೆಚ್.ಡಿ.ಎಫ್.ಸಿ. ಬ್ಯಾಂಕ್ ಲಿಮಿಟೆಡ್, ಹೆಚ್.ಡಿ.ಎಫ್.ಸಿ. ಬ್ಯಾಂಕ್ ಹೌಸ್, ಸೇನಾಪತಿ ಬಾಪಟ್ ಮಾರ್ಗ್, ಲೋಯರ್ ಪರೇಲ್ (ಪಶ್ಚಿಮ), ಮುಂಬೈ – 400 013.

ಹರಾಜು ಮಾರಾಟ ಸೂಚನೆ

ಈ ಕೆಳಗೆ ಪಟ್ಟಿ ಮಾಡಲಾದ ಸಾಲ ಖಾತೆಗಳಲ್ಲಿ ಭದ್ರತೆಯಾಗಿ ಅಡಮಾನ ಇಟ್ಟಿರುವ ಚಿನ್ನಾಭರಣ / ಆಭರಣಗಳ ಸಾರ್ವಜನಿಕ ಹರಾಜನ್ನು ನಡೆಸಲು ಉದ್ದೇಶಿಸಲಾಗಿದೆ ಎಂದು ಸಂಬಂಧಪಟ್ಟ ಸಾಲಗಾರರು ಮತ್ತು ಸಾರ್ವಜನಿಕರಿಗೆ ಇಲ್ಲಿ ತಿಳಿಸಲಾಗಿದೆ. **ಹೆಚ್.ಡಿ.ಎಫ್.ಸಿ. ಬ್ಯಾಂಕ್ ಲಿಮಿಟೆಡ್ ("ಬ್ಯಾಂಕ್")** ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ನಿರ್ದೇಶಿಸಿದ ಜ್ಞಾಪನೆಗಳನ್ನು ಹೊರತುಪಡಿಸಿ, ಕಾರ್ಯಗತಗೊಳಿಸಿದ ಸಾಲ ಒಪ್ಪಂದಗಳ ನಿಯಮಗಳ ಪ್ರಕಾರ ತಮ್ಮ ಬಾಕಿಗಳನ್ನು ಮರುಪಾವತಿಸುವಲ್ಲಿ ವಿಫಲರಾದ ಸಾಲಗಾರರಿಂದ ಈ ವಸ್ತುಗಳನ್ನು ಅಡಮಾನ ಇಡಲಾಗಿದೆ.

ಬ್ಯಾಂಕ್ ಈ ಹಿಂದೆ ಸಾಲಗಾರರಿಗೆ ತಮ್ಮ ಸಾಲ ಖಾತೆಗಳಲ್ಲಿ ಪೂರ್ಣ ಬಾಕಿ ಬಾಕಿಗಳನ್ನು ಮರುಪಾವತಿಸಲು ಏಳು (7) ದಿನಗಳ ಕಾಲಾವಕಾಶವನ್ನು ನೀಡುವ ಸೂಚನೆಗಳನ್ನು ನೀಡಿತ್ತು. ಸಾಲಗಾರರು ತಮ್ಮ ಖಾತೆಗಳನ್ನು ಕ್ರಮಬದ್ಧಗೊಳಿಸಲು ವಿಫಲರಾಗಿರುವುದರಿಂದ, ಸಾಲ ಒಪ್ಪಂದ ಮತ್ತು ಅನ್ವಯವಾಗುವ ಕಾನೂನಿನ ಅಡಿಯಲ್ಲಿ ಪ್ರತಿಜ್ಞೆ ಮಾಡುವವರಾಗಿ ತನ್ನ ಹಕ್ಕುಗಳನ್ನು ಚಲಾಯಿಸಿ, ಪ್ರತಿಜ್ಞೆಯನ್ನು ಜಾರಿಗೊಳಿಸಲು ಮತ್ತು ಬಾಕಿಗಳನ್ನು ವಸೂಲಿ ಮಾಡಲು ಸಾರ್ವಜನಿಕ ಹರಾಜಿನ ಮೂಲಕ ಅಡಮಾನ ಇಟ್ಟಿರುವ ಚಿನ್ನಾಭರಣ / ಆಭರಣಗಳ ಮಾರಾಟವನ್ನು ಮುಂದುವರಿಸಲು ಬ್ಯಾಂಕ್ ನಿರ್ಧರಿಸಲಾಗಿದೆ.

ಹರಾಜನ್ನು ಈ ಕೆಳಗೆ ತಿಳಿಸಲಾದ ಶಾಖೆ(ಗಳಲ್ಲಿ) **ಮಧ್ಯಾಹ್ನ 3:30 ರಿಂದ** ನಡೆಸಲಾಗುವುದು. ಯಾವುದೇ ಕಾರಣಕ್ಕಾಗಿ, ಯಾವುದೇ ವಾಗ್ದಾನ ಮಾಡಿದ ಭದ್ರತೆಯ ಹರಾಜನ್ನು ನಿಗದಿತ ದಿನಾಂಕದಂದು ನಡೆಸಲು ಅಥವಾ ಪೂರ್ಣಗೊಳಿಸಲು ಸಾಧ್ಯವಾಗದಿದ್ದರೆ, ಮುಂದಿನ ಸೂಚನೆ ಇಲ್ಲದೆ ಯಾವುದೇ ನಂತರದ ದಿನಾಂಕ ಮತ್ತು ಸಮಯದಲ್ಲಿ ಹರಾಜನ್ನು ಮುಂದುವರಿಸುವ ಅಥವಾ ಮರು ನಿಗದಿಪಡಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

ಕ್ರ.ಸಂ.	ಸಾಲದ ನಂ.	ಸಾಲಗಾರರ ಹೆಸರು	ಸಾಲದ ಮೊತ್ತ (₹)	ಹರಾಜಿನ ಸ್ಥಳ (ಶಾಖೆಯ ವಿಳಾಸ)	ಹರಾಜಿನ ದಿನಾಂಕ
01.	75883562	ಪ್ರಿಯಮಾ ದಾಸ್	20,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ಸೈಟ್ ನಂ. 6/ಬಿ, 20ನೇ ಮೇನ್ ರೋಡ್, 7ನೇ ಬ್ಲಾಕ್, ಕೋರಮಂಗಲ, ಬೆಂಗಳೂರು, ಕರ್ನಾಟಕ, 560095	17-07-2026
02.	75315004	ಶ್ರೀನಾಥ್ ರಾವ್ ಎಂಜಿ	3,89,200	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ನೆಲ ಮಹಡಿ, ನಂ. 178–ಎ, ಮಾತದಹಳ್ಳಿ (ಕೆಎಫ್‌ಸಿ ಪಕ್ಕದಲ್ಲಿ), ಆರ್‌ಟಿ ನಗರ ಮುಖ್ಯರಸ್ತೆ, ಬೆಂಗಳೂರು, ಕರ್ನಾಟಕ, 560032	24-06-2026
03.	75783024	ಶ್ರೀನಾಥ್ ರಾವ್ ಎಂಜಿ	1,98,700		24-06-2026
04.	75535222	ಶ್ರೀನಾಥ್ ರಾವ್ ಎಂಜಿ	1,55,400		24-06-2026
05.	74060164	ಎ.ಬಿ. ಚಂದ್ರಶೇಖರ್	1,06,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, 548/ಡಿ ಮಾರುತಿ ಮ್ಯಾನ್ಷನ್, ಸಿಎಂಎಚ್ ರಸ್ತೆ, ಇಂದಿರಾ ನಗರ, ಬೆಂಗಳೂರು, ಕರ್ನಾಟಕ, 560038	24-06-2026
06.	74060164	ಸುಧಾ ಸಿ (ನಾಮಿನೀ)	1,06,000		24-06-2026
07.	75563384	ಜೈವಂತ್ ನಾಯ್ಕ್	2,08,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ಎಫ್ 1, ಮೊದಲ ಮಹಡಿ, ನಂ. 2934 ಇ & 2935 ಇ, ಮಾಗಡಿ ಕಾರ್ಡ್ ಎಕ್ಸ್‌ಟೆನ್ಶನ್, ವಿಜಯನಗರ ಕ್ಲಬ್ ರಸ್ತೆ, ಬೆಂಗಳೂರು, ಕರ್ನಾಟಕ, 560040	17-07-2026
08.	75568062	ಜೈವಂತ್ ನಾಯ್ಕ್	1,99,500		17-07-2026
09.	4001153519	ವಿಜಯ್ ಪಚ್ಚನ್	1,99,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, 119 ಗಾಂಧಿ ಬಜಾರ್, ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು, ಕರ್ನಾಟಕ, 560004	24-06-2026
10.	4001015038	ಫಯಾಜ್ ಪಾಶಾ	1,67,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ಉಮಾ ಅಡ್ಮಿರಾಲ್ಟಿ, ನಂ 1, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಕರ್ನಾಟಕ, 560029	17-07-2026
11.	74108323	ಕೆ ಚಂದ್ರಶೇಖರ ರೆಡ್ಡಿ	1,14,500	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ಸೈಟ್ ನಂ.188, 4ನೇ ಹಂತ, ಹಲಗೆವಡೇರಹಳ್ಳಿ ಲೇಔಟ್, ರಾಜರಾಜೇಶ್ವರಿ ನಗರ, ಬೆಂಗಳೂರು, ಕರ್ನಾಟಕ, 560098	24-06-2026
12.	75258311	ರಂಗನಾಥ ಬಿ ಟಿ	57,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ನೆಲ ಮಹಡಿ, ಸುವರ್ಣ ಆರ್ಕೇಡ್, ಬಿಎಂ ರಸ್ತೆ ಹಾಸನ, ಹಾಸನ, ಕರ್ನಾಟಕ, 573201	24-06-2026
13.	74667897	ಅಮೃತಾ ಉಪಾಧ್ಯಾಯ	3,37,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, 103/31, 26ನೇ ಮುಖ್ಯ ರಸ್ತೆ, 4ನೇ ಟಿ ಬ್ಲಾಕ್, ಜಯನಗರ, ಆರ್ ವಿ ಕಾಲೇಜು ಹತ್ತಿರ, ಬೆಂಗಳೂರು, ಕರ್ನಾಟಕ, 560041	17-07-2026
14.	74047737	ಯಡ್ಲ ಮಾನಸ	29,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ನಂ.89, ಕಾರ್ತಿಕ್ ನಗರ, ಮಾರತಹಳ್ಳಿ, ಕೆ.ಆರ್. ಪುರಂ ಹೊರ ವರ್ತುಲ ರಸ್ತೆ, ಬೆಂಗಳೂರು, ಕರ್ನಾಟಕ, 560037	24-06-2026
15.	74401052	ಸಂಜಯ ಕುಮಾರ್ ಜಿ	31,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ನಂ. 1563, 8ನೇ ಕ್ರಾಸ್, ಚಂದ್ರಾ ಲೇಔಟ್ ಎದುರು, ವಿಜಯನಗರ, ಬೆಂಗಳೂರು, ಕರ್ನಾಟಕ, 560040	17-07-2026
16.	75554773	ವಿಠ್ಠಲ್ ಎಂ ಪೂಜಾರಿ	47,500	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ಓಂಕಾರ್ ಪ್ಲಾಜಾ, ಪ್ಲಾಟ್ ನಂ.74, ಚಾಲುಕ್ಯ ನಗರ, ಶೋಲಾಪುರ ರಸ್ತೆ, ಬಿಜಾಪುರ, ಕರ್ನಾಟಕ, 586104	24-06-2026
17.	4000491501	ವಿನೋದ್ ಎಸ್ ಭೋಯಿ	2,63,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ಬುಲ್ಲಾ ಕಾಂಪ್ಲೆಕ್ಸ್, ಹಳೇ ಎನ್.ಹೆಚ್. 9, ಗಡಾ ಪೆಟ್ರೋಲ್ ಬಂಕ್ ಪಕ್ಕದಲ್ಲಿ, ಹುಮ್ನಾಬಾದ್, ಕರ್ನಾಟಕ, 585330	17-07-2026
18.	4001300497	ಶಿವರಾಜ್ ಕುಮಾರ್ ಆರ್	71,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್ ಖಾತಾ/ಎಫ್‌ಎಸ್‌ಎನ್ ನಂ. 418–277–277–276/1, 23–523–413/ಎ, ವಾರ್ಡ್ ನಂ. 11/6, ಬ್ಲಾಕ್ ನಂ. 23, ನೀರ್ಕೋಡು ವಿಸ್ತರಣೆ, ನೆಹರು ನಗರ, ಸಾಗರ – 577401, ಶಿವಮೊಗ್ಗ ಜಿಲ್ಲೆ, ಕರ್ನಾಟಕ, 577401	24-06-2026
19.	74062516	ಏರಿ ಲೀನ ಹಾರತಿ	22,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ನಂ. 0–62, ಎಸ್‌ಎಸ್‌ಬಿ ಟವರ್ಸ್, 1ನೇ ಕ್ರಾಸ್, ವಿಜ್ಞಾನ ನಗರ ಮುಖ್ಯ ರಸ್ತೆ, ಕಗ್ಗದಾಸಪುರ, ಬೆಂಗಳೂರು, ಕರ್ನಾಟಕ, 560075	17-07-2026
20.	75968605	ಪ್ರಿಯಮಾ ದಾಸ್	59,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ನಂ. 424, 80 ಅಡಿ ರಸ್ತೆ, 6ನೇ ಬ್ಲಾಕ್, ನ್ಯಾಷನಲ್ ಗೇಮ್ಸ್ ವಿಲೇಜ್, ಎದುರು, ಕೋರಮಂಗಲ ಗ್ರಾಮ, ಬೆಂಗಳೂರು, ಕರ್ನಾಟಕ, 560034	17-07-2026
21.	75968605	ಪ್ರಿಯಮಾ ದಾಸ್	15,100		17-07-2026
22.	74019046	ಪ್ರಸಾದ್ ಚೋಳಕ್ಕೊಟ್ಟಿಲ್	61,000	ಎಚ್‌ಡಿಎಫ್‌ಸಿ ಬ್ಯಾಂಕ್, 'ರಾಜ್ ಡ್ರಿವಾ' # 119, 1ನೇ ಮೇನ್ ರೋಡ್, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು, ಕರ್ನಾಟಕ, 560010	17-07-2026
23.	75137756	ರಾಜಶೇಖರ ರೆಡ್ಡಿ	59,300		17-07-2026
24.	4000734627	ಸಣ್ಣವೊಳ್ಳ ಮಾಧವ ನಾಯ್ಡು	1,67,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ಸೈಟ್–97, ಖಾತೆ ನಂ. 211, ವಿನಾಯಕ ನಗರ, ಡಿಫೆನ್ಸ್ ಕಾಲೋನಿ, ಬಾಗಲೂರು ರಸ್ತೆ, ವಾರ್ಡ್ ಸಂಖ್ಯೆ. 05, ಬೆಂಗಳೂರು, ಕರ್ನಾಟಕ, 560064	17-07-2026
25.	75133470	ಅನಿಲ್ ಕುಮಾರ್ ಸೌಜ	3,68,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ನಂ. 363, ಹುಳಿಮಾವು, ಬನ್ನೇರುಘಟ್ಟ ಮೇನ್ ರೋಡ್, ರಸ್ತೆ, ಮೀನಾಕ್ಷಿ ಮಾಲ್ ಹತ್ತಿರ, ಬೆಂಗಳೂರು, ಕರ್ನಾಟಕ, 560076	17-07-2026
26.	75128408	ಅನಿಲ್ ಕುಮಾರ್ ಸೌಜ	1,35,000		17-07-2026
27.	75159002	ಸ್ಟೈಲೆನ್ ಕುಮಾರ್ ಬೈಶ್ಯಾ	61,800	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, #320, ಬೊಮಸಂದ್ರ ಕೈಗಾರಿಕಾ ಪ್ರದೇಶ, ಜಿಗಣಿ ಬೆಂಗಳೂರು., ಜಿಗಣಿ, ಕರ್ನಾಟಕ, 560105	17-07-2026
28.	4001077829	ಮದ್ದಿಸೆಟ್ಟಿ ಎಸ್.ವಿ.ಎಸ್.ಎಸ್.ಎಸ್. ಸುರೇಶ ಬಾಬು	4,83,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, 42/4 ಎ, ಶಾಂತಿಪುರ ಮುಖ್ಯ ರಸ್ತೆ ಟಿಸಿಎಸ್ ಪಕ್ಕ, ಎಲೆಕ್ಟ್ರಾನಿಕ್ ಸಿಟಿ, ಫೇಸ್-II, ಬೆಂಗಳೂರು, ಕರ್ನಾಟಕ, 560100	17-07-2026
29.	75227381	ಸಿದ್ಧಾರ್ಥ ಬಿ	2,48,812	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ನೆಲ ಮಹಡಿ, ಸರ್ವೆ ನಂ. 183/3, ದೊಮ್ಮಸಂದ್ರ, ಆನೇಕಲ್ ತಾಲ್ಲೂಕು, ಸರ್ಜಾಪುರ ರಸ್ತೆ, ಬೆಂಗಳೂರು, ಕರ್ನಾಟಕ, 562125	17-07-2026
30.	75731112	ಪಪ್ಪಲ ಸ್ವಾಮಿದೇವೇಂದ್ರ ಕುಮಾರವಿಜಯ	65,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ನೆಲ ಮಹಡಿ, #731, ಏರ್ ಸ್ಟಾಫ್ ಕ್ವಾರ್ಟರ್ಸ್ ಎದುರು, ಆರ್‌ಡಬ್ಲ್ಯೂಎಫ್ ವೆಸ್ಟ್ ಕಾಲೋನಿ, ಯಲಹಂಕ ನ್ಯೂ ಟೌನ್, ಬೆಂಗಳೂರು, ಕರ್ನಾಟಕ – 560064,	17-07-2026
31.	75747348	ರಾಹುಲ್ ಪವಾರ್	1,85,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ಕೌಟಲ್ ಬಿಲ್ಡಿಂಗ್ ಎದುರು ಚೋಟುಲಾಲ್, ಸ್ವೀಟ್ಸ್ ರಾಮ್ ಮಂದಿರ ರಸ್ತೆ ವಿಜಯಪುರ, ವಿಜಯಪುರ, ಕರ್ನಾಟಕ, 586101	24-06-2026
32.	73898245	ಸುಚಿತ್ರಾ ಎಸ್ ಕೆ	1,78,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ನೆಲ ಮಹಡಿ, ಸೈಟ್ ನಂ. 2, ಶಿವನಾರದಮುನಿ ಆರ್ಕೇಡ್, ಕೋಗಿಲು ಮೇನ್ ರೋಡ್, ಬೆಂಗಳೂರು, ಕರ್ನಾಟಕ – 560064.	17-07-2026
33.	73898245	ಮಂಜುನಾಥ್ ರೆಡ್ಡಿ (ನಾಮಿನೀ)	1,78,000		17-07-2026
34.	4000661132	ಅಂಬುಜಾಕ್ಷಿ ಕೆ ಎ	1,99,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ನೆಲ ಮಹಡಿ, ಸರ್ವೆ ನಂ. 62, 1ನೇ ಮೇನ್ ರೋಡ್, ಆರ್‌ಎಂಎಸ್ ಕಾಲೋನಿ, ಭಟ್ರಹಳ್ಳಿ, ಕೆ.ಆರ್. ಪುರಂ, ಬೆಂಗಳೂರು, ಕರ್ನಾಟಕ – 560049.	17-07-2026
35.	4000596482	ದೀಪಕ್ ಶಾ	90,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ನೆಲ ಮಹಡಿ, ನಂ.60, ಡಿ, ಬೊಮ್ಮಸಂದ್ರ ಕೈಗಾರಿಕಾ ಸಂಘದ ಪಕ್ಕದಲ್ಲಿ, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಬೆಂಗಳೂರು, ಕರ್ನಾಟಕ – 560099	24-06-2026
36.	4001114648	ಶಿವರಾಮಮೂರ್ತಿ ಆರ್ ಎಂ	11,92,000	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ಗ್ರಾಮ. ಮಹಡಿ ಶ್ರೀವರಿ ಟವರ್, 78–2 ನಾಯಕ್ ಲೇಔಟ್, ಜೆ ಪಿ ನಗರ 8ನೇ ಹಂತ, ಬಿಕೆ ವೃತ್ತ, ಕೊತ್ತನೂರು, ಬೆಂಗಳೂರು, 560076	17-07-2026
37.	75895723	ನಾಗವೇಣಿ ನಾಗರಾಜು	6,17,000		17-07-2026
38.	75529678	ಎಚ್ ವಿಶ್ವನಾಥ ರೆಡ್ಡಿ	66,500	ಎಚ್‌ಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್, ನೆಲ ಮಹಡಿ, ಜಯಶ್ರೀ ಥಿಯೇಟರ್ ಪಕ್ಕ, ಪಿ.ಬಿ. ರಸ್ತೆ, ಹರಿಹರ, ದಾವಣಗೆರೆ ಜಿಲ್ಲೆ, ಹರಿಹರ, ಕರ್ನಾಟಕ, 577601	17-07-2026

ಹರಾಜನ್ನು "ಎಲ್ಲಿ ಇದೆಯೋ ಹಾಗೆಯೇ, "ಎಲ್ಲಿ ಇದೆಯೋ ಹಾಗೆಯೇ", ಮತ್ತು "ಎಲ್ಲಿ ಹೇಗಿದೆಯೋ ಹಾಗೆಯೇ" ಆಧಾರದ ಮೇಲೆ ಕಟ್ಟುನಿಟ್ಟಾಗಿ ನಡೆಸಬೇಕು. ಅಡವಿಟ್ಟ ಚಿನ್ನದ ಆಭರಣಗಳು / ಆಭರಣಗಳ ಗುಣಮಟ್ಟ, ಶುದ್ಧತೆ, ಕ್ಯಾರೆಟ್, ತೂಕ ಅಥವಾ ಮೌಲ್ಯಮಾಪನದ ಬಗ್ಗೆ ಬ್ಯಾಂಕ್ ಯಾವುದೇ ಸ್ಪಷ್ಟ ಅಥವಾ ಸೂಚ್ಯ ಖಾತರಿ ಅಥವಾ ಪ್ರಾತಿನಿಧ್ಯವನ್ನು ನೀಡುವುದಿಲ್ಲ. ಬಿಡ್‌ಗಳನ್ನು ಮಾಡುವ ಮೊದಲು ಅಡವಿಟ್ಟ ವಸ್ತುಗಳ ಸ್ಥಿತಿ, ಶುದ್ಧತೆ, ಕ್ಯಾರೆಟ್, ತೂಕ ಮತ್ತು ಮೌಲ್ಯಮಾಪನದ ಬಗ್ಗೆ ತಮ್ಮನ್ನು ತಾವು ಪರಿಶೀಲಿಸಿಕೊಳ್ಳುವ ಮತ್ತು ತೃಪ್ತಿಪಡಿಸಿಕೊಳ್ಳುವ ಸಂಪೂರ್ಣ ಜವಾಬ್ದಾರಿಯನ್ನು ಬಿಡ್‌ದಾರರು ಹೊಂದಿರುತ್ತಾರೆ. ಹರಾಜಿನ 45 ನಿಮಿಷಗಳ ಮೊದಲು ತಪಾಸಣೆಗೆ ಅವಕಾಶ ನೀಡಲಾಗುತ್ತದೆ, ಸಂಪೂರ್ಣವಾಗಿ ಬಿಡ್‌ದಾರರ ವೆಚ್ಚ, ಅಪಾಯ ಮತ್ತು ವಿವೇಚನೆಯ ಮೇರೆಗೆ. ಹರಾಜಿನಲ್ಲಿ ಭಾಗವಹಿಸುವ ಮೂಲಕ, ಬಿಡ್ಡುದಾರರು ಅಡವಿಟ್ಟ ವಸ್ತುಗಳನ್ನು ಸ್ವತಂತ್ರವಾಗಿ ಪರಿಶೀಲಿಸುವುದು ಮತ್ತು ಬ್ಯಾಂಕಿನ ಯಾವುದೇ ಪ್ರಾತಿನಿಧ್ಯಗಳನ್ನು ಅವಲಂಬಿಸದೆ ಎಲ್ಲಾ ಸಂಬಂಧಿತ ಅಪಾಯಗಳನ್ನು ಸ್ವೀಕರಿಸುತ್ತಾರೆ ಎಂದು ಪರಿಗಣಿಸಲಾಗುತ್ತದೆ. ಮಾರಾಟ ಮುಗಿದ ನಂತರ ಹಿಂತಿರುಗಿಸುವಿಕೆ, ವಿನಿಮಯ, ಮರುಪಾವತಿ, ಪರಿಹಾರ ಅಥವಾ ರದ್ದತಿಗಾಗಿ ಯಾವುದೇ ವಿನಂತಿಗಳನ್ನು ಪರಿಗಣಿಸಲಾಗುವುದಿಲ್ಲ.

ಎಲ್ಲಾ ಬಿಡ್‌ಗಳು ಅನ್ವಯವಾಗುವ ನಿಯಂತ್ರಕ ಮಾನದಂಡಗಳಿಗೆ ಅನುಗುಣವಾಗಿ ಬ್ಯಾಂಕ್ ನಿರ್ಧರಿಸುವ ಕನಿಷ್ಠ ಮೀಸಲು ಬೆಲೆಗೆ ಒಳಪಟ್ಟಿರುತ್ತವೆ. ಹರಾಜು ಮೌಲ್ಯವು ಇವುಗಳಲ್ಲಿ ಕಡಿಮೆಯಿರುವುದನ್ನು ಆಧರಿಸಿರುತ್ತದೆ : (ಎ) ಹಿಂದಿನ ಮೂವತ್ತು (30) ದಿನಗಳ ಚಿನ್ನದ ಸರಾಸರಿ ಮುಕ್ತಾಯ ಬೆಲೆ, ಅಥವಾ (ಬಿ) ಇಂಡಿಯಾ ಬುಲಿಯನ್ ಮತ್ತು ಜ್ಯುವೆಲ್ಲರ್ಸ್ ಅಸೋಸಿಯೇಷನ್ ಲಿಮಿಟೆಡ್ (ಐಬಿಜೆಎ) ಹಿಂದಿನ ದಿನದಂದು ಪ್ರಕಟಿಸಿದ ಚಿನ್ನದ ಮುಕ್ತಾಯ ಬೆಲೆ. ಮೀಸಲು ಬೆಲೆಯನ್ನು ಅಂತಿಮಗೊಳಿಸಲು ಮತ್ತು ಅಗತ್ಯವೆಂದು ಪರಿಗಣಿಸಲಾದ ಯಾವುದೇ ಹೆಚ್ಚುವರಿ ಷರತ್ತುಗಳನ್ನು ವಿಧಿಸಲು ಬ್ಯಾಂಕ್ ಸಂಪೂರ್ಣ ವಿವೇಚನೆಯನ್ನು ಉಳಿಸಿಕೊಂಡಿದೆ.

ಹರಾಜು ಪ್ರಾರಂಭವಾಗುವ ಮೊದಲು ಸಾಲ ಒಪ್ಪಂದದ ಪ್ರಕಾರ ಯಾವುದೇ ಸಾಲಗಾರನು ಸಂಪೂರ್ಣ ಬಾಕಿ ಹಣವನ್ನು ಮರುಪಾವತಿಸಿದರೆ, ಆ ಖಾತೆಗೆ ಅಡವಿಟ್ಟ ಚಿನ್ನಾಭರಣಗಳು / ಆಭರಣಗಳನ್ನು, ಬ್ಯಾಂಕಿನ ವಿವೇಚನೆಯಿಂದ, ಮುಂದಿನ ಸೂಚನೆ ಇಲ್ಲದೆ ಹರಾಜಿನಿಂದ ಹಿಂಪಡೆಯಬಹುದು.

ಹರಾಜು ಮತ್ತು ಯಾವುದೇ ಪರಿಣಾಮವಾಗಿ ಮಾರಾಟವು ಬ್ಯಾಂಕ್ ತನ್ನ ಸ್ವಂತ ಮತ್ತು ಸಂಪೂರ್ಣ ವಿವೇಚನೆಯಿಂದ ಕಾಲಕಾಲಕ್ಕೆ ವಿಧಿಸಬಹುದಾದ, ತಿದ್ದುಪಡಿ ಮಾಡಬಹುದಾದ ಅಥವಾ ಸೂಚಿಸಬಹುದಾದ ಯಾವುದೇ ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.

ದಯವಿಟ್ಟು ಗಮನಿಸಿ, ಈ ಕೆಳಗೆ ಸಹಿ ಮಾಡಿದ ಬ್ಯಾಂಕಿನ ಅಧಿಕೃತ ಅಧಿಕಾರಿಯು ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆ ಹರಾಜು ಪ್ರಕ್ರಿಯೆಗಳನ್ನು ಮುಂದೂಡುವ, ಮುಂದೂಡುವ, ಮಾರ್ಪಡಿಸುವ, ಅಮಾನತುಗೊಳಿಸುವ ಅಥವಾ ರದ್ದುಗೊಳಿಸುವ ಹಕ್ಕನ್ನು ಕಾಯ್ದಿರಿಸಿದ್ದಾರೆ. ಅಧಿಕೃತ ಅಧಿಕಾರಿಯು ಯಾವುದೇ ಬಿಡ್(ಗಳನ್ನು) ಪೂರ್ಣವಾಗಿ ಅಥವಾ ಭಾಗಶಃ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿದ್ದಾರೆ ಮತ್ತು ಅಂತಹ ಯಾವುದೇ ನಿರ್ಧಾರವು ಅಂತಿಮವಾಗಿರುತ್ತದೆ ಮತ್ತು ಎಲ್ಲಾ ಭಾಗವಹಿಸುವವರ ಮೇಲೆ ಬದ್ಧವಾಗಿರುತ್ತದೆ.

ದಿನಾಂಕ : 17.06.2026
ಸ್ಥಳ : ಬೆಂಗಳೂರು.

ಸಹಿ/- ಅಧಿಕೃತ ಅಧಿಕಾರಿಗಳು
ಹೆಚ್.ಡಿ.ಎಫ್.ಸಿ. ಬ್ಯಾಂಕ್ ಲಿಮಿಟೆಡ್.

ಕಾಂಗ್ರೆಸ್ ವಿಸರ್ಜನೆ ಬಗ್ಗೆ ಪತ್ರ ಏಕೆ ಬರೆದಿಲ್ಲ

''1948ರಲ್ಲಿ ಮಹಾತ್ಮ ಗಾಂಧಿಯವರು ಕಾಂಗ್ರೆಸ್ ಪಕ್ಷ ವಿಸರ್ಜಿಸುವಂತೆ ಹೇಳಿದ್ದರು. ಈಗ ಎಐಸಿಸಿಗೆ ನಿಮ್ಮ ತಂದೆಯವರೇ ಅಧ್ಯಕ್ಷರಾಗಿದ್ದು ವಿಸರ್ಜಿಸುವುದು ಯಾವಾಗ ಎಂದು ಕೇಳಿ ಪತ್ರ ಬರೆದಿಲ್ಲ,''ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಪ್ರಶ್ನಿಸಿದ್ದಾರೆ.

''ಆರ್‌ಎಸ್‌ಎಸ್‌ನಿಂದ ಯಾವ ದಲಿತರಿಗೆ ಅನ್ಯಾಯವಾಗಿದೆ? ಕಾಂಗ್ರೆಸ್ ಸರಕಾರದಿಂದಾಗುತ್ತಿರುವ ಎಸ್‌ಸಿಪಿ–ಟಿಎಸ್‌ಪಿ ಅನುದಾನದ ದುರ್ಬಳಕೆ ತಡೆದು ಅಭಿವೃದ್ಧಿಗೆ ಹಣ ಬಳಸಿ ಎಂದು ಕೇಳುವ ತಾಕತ್ತು ಇಲ್ಲವೇ? ಅನೇಕರನ್ನು ತುಳಿದ ನಿಮ್ಮನ್ನು ಸಚಿವರನ್ನಾಗಿ ನಿಮ್ಮ ತಂದೆಯವರು ಕೂರಿಸಿದ್ದಾರೆ. ನಿಮ್ಮಿಂದಾಗಿ ದಲಿತರು ಸರ್ವನಾಶ ಆಗುತ್ತಿದ್ದಾರೆ. ಎಂತೆಂಥ ನಾಯಕರನ್ನು ನೀವು ತುಳಿದಿದ್ದೀರೆಂದು ಕರ್ನಾಟಕಕ್ಕೆ ಗೊತ್ತಿದೆ. ಬಸವಲಿಂಗಪ್ಪ, ವಿ.ಶ್ರೀನಿವಾಸ ಪ್ರಸಾದ್ ಅವರ ಗತಿ ಏನಾಯಿತು? ದಲಿತರ ಸಮಸ್ಯೆ ತೆಗೆದುಕೊಂಡು ಹೋರಾಟ ಮಾಡಿದರೆ ಮೆಚ್ಚುಗೆ ಸೂಚಿಸಬಹುದು,'' ಎಂದು ಹೇಳಿದರು.

ಹಿಂದೂ ಧರ್ಮ ಆರ್‌ಎಸ್‌ಎಸ್ ಸ್ವತ್ತಲ್ಲ

ಬೆಂಗಳೂರು: ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಸಂಘವನ್ನು ಹಿಂದೂ ಧರ್ಮಕ್ಕೆ ಹೋಲಿಕೆ ಮಾಡಿರುವುದಕ್ಕೆ ಕೆಪಿಸಿಸಿ ನಿಯೋಜಿತ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಹಿಂದೂ ಧರ್ಮ ಯಾವುದೇ ಒಂದು ಸಂಘಟನೆಯ ಸ್ವತ್ತಲ್ಲ ಎಂದು ಹೇಳಿದ್ದಾರೆ.



ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ,'' ಸಾವಿರಾರು ವರ್ಷಗಳ ಇತಿಹಾಸ, ಸಂಸ್ಕೃತಿ ಹಾಗೂ ವೈವಿಧ್ಯತೆ ಹೊಂದಿರುವ ಹಿಂದೂ ಧರ್ಮವನ್ನು ಒಂದು ನಿರ್ದಿಷ್ಟ ಸಂಘಟನೆಯ ಮಟ್ಟಕ್ಕೆ ಇಳಿಸಿ ನೋಡುವುದು ಕೋಟ್ಯಂತರ ಹಿಂದೂಗಳ ಭಾವನೆಗಳಿಗೆ ಅವಮಾನ,'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

''ಹಿಂದೂ ಧರ್ಮವು ಆರ್‌ಎಸ್‌ಎಸ್‌ಗಿಂತಲೂ ದೊಡ್ಡದು. ವಿಶಾಲವಾದುದು ಮತ್ತು ಎಲ್ಲರನ್ನೂ ಒಳಗೊಳ್ಳುವ ನಾಗರಿಕ ಪರಂಪರೆ. ಈ ಧರ್ಮವು ಯಾವುದೇ ಒಂದು ಸಂಘಟನೆಯ ಸ್ವತ್ತಲ್ಲ, ಹಿಂದೂ ಧರ್ಮ ಮತ್ತು ಆರ್‌ಎಸ್‌ಎಸ್ ಒಂದೇ ಎಂದು ಹೇಳುವುದನ್ನು ಒಪ್ಪಲಾಗದು'' ಎಂದು ಹೇಳಿದರು.

ತಿರುಪತಿಯಲ್ಲಿನ ಕರ್ನಾಟಕ ಭವನ ಕೆಎಸ್‌ಡಿಸಿಗೆ ವರ್ಗ

■ ವಿಕ ಸುದ್ದಿಲೋಕ ಬೆಂಗಳೂರು

ತಿರುಪತಿಯಲ್ಲಿ ಕರ್ನಾಟಕದ ಭಕ್ತರಿಗಾಗಿ ನಿರ್ಮಿಸಿರುವ ಸುಸಜ್ಜಿತ ಕರ್ನಾಟಕ ಭವನದ ವಸತಿ ಕೊಠಡಿಗಳನ್ನು ಕೆಎಸ್‌ಡಿಸಿಗೆ ಹಸ್ತಾಂತರಿಸಲು ಮುಜರಾಯಿ ಇಲಾಖೆ ನಿರ್ಧರಿಸಿದೆ.

ತಿರುಮಲದ ರಿಂಗ್ ರೋಡ್‌ನಲ್ಲಿ ಟಿಟಿಡಿ ಮ್ಯೂಸಿಯಂ ಎದುರು ಮುಖ್ಯ ದೇವಾಲಯದ ಹಿಂಭಾಗದಲ್ಲಿ ಕೇವಲ 700 ಮೀಟರ್ ದೂರದಲ್ಲಿರುವ ಕರ್ನಾಟಕ ಸರಕಾರದ ಅಧಿಕೃತ ಕರ್ನಾಟಕ ಪ್ರವಾಸಿ ಸೌಧದಲ್ಲಿ 350 ಕೊಠಡಿಗಳಿವೆ. ಇಲ್ಲಿ ಹವಾ ನಿಯಂತ್ರಿತ ಮತ್ತು ಹವಾನಿಯಂತ್ರಿತವಲ್ಲದ (ಎಸಿ ಮತ್ತು ನಾನ್ ಎಸಿ) ಕೊಠಡಿಗಳಿವೆ. ಸುಸಜ್ಜಿತವಾಗಿ ನಿರ್ಮಿಸಿರುವ ವಸತಿ ಕೊಠಡಿಗಳಿಗೆ ಹೆಚ್ಚು ಬೇಡಿಕೆಯಿದ್ದು, ನಾನ್ ಎಸಿ ರೂಂಗಳ ದರ 1,500 ರೂ.ಗಳಿದ್ದು, ಎಸಿ ರೂಂ ಸೂಟ್‌ಗಳಿಗೆ 2800– 3800 ರೂ. ದರ ನಿಗದಿಪಡಿಸಲಾಗಿದೆ. ರೂಂ ಗಳನ್ನು ಆನ್‌ಲೈನ್‌ನಲ್ಲೇ ಬುಕಿಂಗ್‌ಗೆ ಅವಕಾಶ ಕಲ್ಪಿಸಲಾಗಿದೆ. ಎಂದು ಮುಜರಾಯಿ ಇಲಾಖೆ ಅಧಿಕಾರಿಗಳು ತಿಳಿಸಿದರು.

ಬೆಂಗಳೂರಿನಲ್ಲಿ ಹೂಡಿಕೆ ಹಾಗೂ ಅಭಿವೃದ್ಧಿಗೆ ಪೂರಕ ಅವಕಾಶ ಸೃಷ್ಟಿ ಸಂಬಂಧ ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ ನೇತೃತ್ವದ ಉದ್ಯಮಿಗಳ ನಿಯೋಗ ಮಂಗಳವಾರ ಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ, ಸಮಾಲೋಚನೆ ನಡೆಸಿತು. ವಿಕ್ರಂ ವಿಶ್ವನಾಥ್, ಮೋಹನ್ ಸುರೇಶ್, ಶಬೀನಾ ಸುಲ್ತಾನ, ಕಾರ್ತಿಕ್ ತಲ್ಲಮ್, ಸಂಜೀವ್ ಷಣ್ಮುಗಂ, ಸುರೇಶ್ ವಾಸ್ವಾನಿ ಇದ್ದರು.

ವಿದ್ಯುತ್ ಸಮಸ್ಯೆ ಗ್ರಾಹಕ ಸಭೆ 20ಕ್ಕೆ

ಬೆಂಗಳೂರು: ಬೆಸ್ಕಾಂನ ಎಲ್ಲಾ ಕಾರ್ಯ ಮತ್ತು ಪಾಲನಾ ಉಪ ವಿಭಾಗಗಳಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರ (ಜೂ.20) ಮಧ್ಯಾಹ್ನ 3 ಗಂಟೆಯಿಂದ ಸಂಜೆ 5.30ರವರೆಗೆ ಗ್ರಾಹಕ ಸಂವಾದ ಸಭೆ ನಡೆಯಲಿದೆ. ಸಭೆಯಲ್ಲಿ ಗ್ರಾಹಕರು ಪಾಲ್ಗೊಂಡು ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬೆಸ್ಕಾಂನ ಅಧಿಕಾರಿಗಳೊಂದಿಗೆ ಮುಖಾಮುಖಿ ಚರ್ಚಿಸಿ ಪರಿಹರಿಸಿಕೊಳ್ಳಬಹುದು ಎಂದು ಬೆಸ್ಕಾಂನ ಪ್ರಧಾನ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪವನ ವಿದ್ಯುತ್: ರಾಜ್ಯಕ್ಕೆ ರಾಷ್ಟ್ರೀಯ ಪ್ರಶಸ್ತಿ

■ ವಿಕ ಸುದ್ದಿಲೋಕ ಬೆಂಗಳೂರು

ಅನುಷ್ಠಾನದ ಹಂತದಲ್ಲಿರುವ ಅತ್ಯಧಿಕ ಪವನ ವಿದ್ಯುತ್ ಸಾಮರ್ಥ್ಯಕ್ಕಾಗಿ ರಾಜ್ಯವು ರಾಷ್ಟ್ರೀಯ ಮಟ್ಟದ ಪ್ರಶಸ್ತಿ ಗೌರವಕ್ಕೆ ಪಾತ್ರವಾಗಿದೆ. ರಾಜ್ಯದಲ್ಲಿ 9 ಗಿಗಾ ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗಳು ಅನುಷ್ಠಾನದ ಹಂತದಲ್ಲಿದ್ದು, ಗೋವಾದಲ್ಲಿ ನಡೆದ 2026ನೇ ಸಾಲಿನ ವಿಶ್ವ ಪವನ ದಿನಾಚರಣೆಯಲ್ಲಿ ಕರ್ನಾಟಕಕ್ಕೆ ಪ್ರತಿಷ್ಠಿತ 'ಹೈಯೆಸ್ಟ್ ವಿಂಡ್ ಕೆಪಾಸಿಟಿ ಪೈಪ್‌ಲೈನ್' ಪ್ರಶಸ್ತಿ ಸಂದಿದೆ.

ಕೇಂದ್ರದ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಅವರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಮತಾಂತರಗೊಂಡವರನ್ನು ಎಸ್‌ಟಿ ಪಟ್ಟಿಯಿಂದ ಕೈಬಿಡಿ: ಸಿದ್ದಿ

ಬೆಂಗಳೂರು: ದೇಶದಲ್ಲಿ ಮತಾಂತರಗೊಂಡ ಬುಡಕಟ್ಟು ಸಮುದಾಯದವರಿಂದ ನಿಜವಾದ ಮೂಲ ಬುಡಕಟ್ಟಿನವರಿಗೆ ಅನ್ಯಾಯವಾಗುತ್ತಿದ್ದು, ಮತಾಂತರ ಹೊಂದಿದವರನ್ನು ಪರಿಶಿಷ್ಟ ಪಂಗಡದ ಪಟ್ಟಿಯಿಂದ ಕೈಬಿಡಬೇಕು ಎಂದು ಬಿಜೆಪಿ ಎಂಎಲ್ಸಿ ಶಾಂತಾರಾಮ ಸಿದ್ದಿ ಆಗ್ರಹಿಸಿದ್ದಾರೆ.

ನಗರದಲ್ಲಿ ಮಂಗಳವಾರ ಮಾತನಾಡಿ, ''ದೇಶಾದ್ಯಂತ 12 ಕೋಟಿ ಬುಡಕಟ್ಟು ಸಮುದಾಯದ ಜನರಿದ್ದು ಅವರಲ್ಲಿ ಸುಮಾರು 2 ಕೋಟಿ ಜನ ಮತಾಂತರಗೊಂಡಿದ್ದಾರೆ. ಬುಡಕಟ್ಟು ಜನರಿಗೆ ಸಿಗಬೇಕಾದ ಸೌಲಭ್ಯಗಳನ್ನು ಮತಾಂತರಗೊಂಡ ಬುಡಕಟ್ಟಿನವರೇ ಹೆಚ್ಚಾಗಿ ಪಡೆದುಕೊಳ್ಳುತ್ತಿದ್ದಾರೆ. ಕೆಲವೆಡೆ ಇವರು ಬುಡಕಟ್ಟು ಹಾಗೂ ಮತಾಂತರಗೊಂಡ ಧರ್ಮದ ಹೆಸರಿನಲ್ಲಿ ಎರಡೂ ಕಡೆ ಸೌಲಭ್ಯಗಳನ್ನು ಪಡೆದು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ,'' ಎಂದು ಆಕ್ಷೇಪಿಸಿದರು. ''ಅನ್ಯ ಧರ್ಮಕ್ಕೆ ಮತಾಂತರಗೊಂಡವರು ಇಲ್ಲಿನ ಮೂಲ ಬುಡಕಟ್ಟು ಜನರಿಗೆ ಸಿಗುವ ಸರಕಾರಿ ಸೌಲಭ್ಯ ಪಡೆಯಬಾರದು,'' ಎಂದು ಪುನರುಚ್ಚರಿಸಿದರು.

ರಾಜ್ಯದ ವೈದ್ಯರ ಸೇವೆಗೆ ವಿಶ್ವದ ಕಣ್ಣು

ವೈದ್ಯರು ಕಣ್ಣಿಗೆ ಕಾಣುವ ದೇವರು, ಜನರ ನಂಬಿಕೆ ಉಳಿಸಿಕೊಳ್ಳಿ: ಸಿಎಂ ಡಿಕೆಶಿ ಕಿವಿಮಾತು

■ ವಿಕ ಸುದ್ದಿಲೋಕ ಬೆಂಗಳೂರು

''ವೈದ್ಯರು ಕಣ್ಣಿಗೆ ಕಾಣುವ ದೇವರು. ಜನ ಎಷ್ಟೇ ಕಷ್ಟ ಇದ್ದರೂ ನಂಬಿಕೆ ಹಾಗೂ ವಿಶ್ವಾಸದಿಂದ ವೈದ್ಯರ ಬಳಿ ಹೋಗುತ್ತಾರೆ. ನೀವು ಅವರ ನಂಬಿಕೆ ಉಳಿಸಿಕೊಳ್ಳಬೇಕು,'' ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವೈದ್ಯ ಪದವೀಧರರಿಗೆ ಕಿವಿಮಾತು ಹೇಳಿದರು.

ಜಿಕೆವಿಕೆ ಆವರಣದಲ್ಲಿ ಮಂಗಳವಾರ ನಡೆದ ರಾಜೀವ್ ಗಾಂಧಿ ಆರೋಗ್ಯ ವಿವಿ 28ನೇ ವಾರ್ಷಿಕ ಘಟಿಕೋತ್ಸವದಲ್ಲಿ ಅವರು ಮಾತನಾಡಿ, ''ವೈದ್ಯ ವೃತ್ತಿಯಲ್ಲಿ ನಿತ್ಯವೂ ಸವಾಲುಗಳು ಸಹಜವಾಗಿದೆ. ಜಗತ್ತಿನಲ್ಲೇ ಅತಿ ಹೆಚ್ಚು ವೈದ್ಯರನ್ನು ನೀಡುತ್ತಿರುವುದು ನಮ್ಮ ರಾಜ್ಯ. ರಾಜ್ಯದ ವೈದ್ಯರ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಗುಣಮಟ್ಟದ ಸೇವೆ ನೀಡುತ್ತಿರುವುದು ವಿಶ್ವದೆಲ್ಲೆಡೆ ಗಮನ ಸೆಳೆಯುತ್ತಿದೆ,'' ಎಂದು ಪ್ರಶಂಸೆ ವ್ಯಕ್ತಪಡಿಸಿದರು.

''ಭಾರತ ಈಗ ಸಾಮಾಜಿಕ ಹಾಗೂ ತಂತ್ರಜ್ಞಾನ ಪರಿವರ್ತನೆಯ ತಿರುವಿನಲ್ಲಿದೆ. ಅತ್ಯಾಧುನಿಕ ಅವಿಷ್ಕಾರ ಮಾಡುತ್ತಿದೆ. ಕೇವಲ ನಗರ ಪ್ರದೇಶಗಳಲ್ಲಿ ಆರೋಗ್ಯ ಸೇವೆಗೆ ಗಮನ ಹರಿಸದೇ ಗ್ರಾಮೀಣ ಭಾಗದ ಕಡೆಗೂ ಗಮನಹರಿಸಬೇಕು,'' ಎಂದು ಕರೆ ನೀಡಿದರು.

''ನಮ್ಮ ರಾಜ್ಯ ಕೇವಲ ಐಟಿ ಕ್ಷೇತ್ರ ಮಾತ್ರವಲ್ಲದೆ ಇತರೆ ಕ್ಷೇತ್ರಗಳಲ್ಲಿಯೂ ಪ್ರತಿಭಾವಂತ ಮಾನವ ಸಂಪನ್ಮೂಲವನ್ನು ಹೊಂದಿದೆ. ಬೆಂಗಳೂರಿನಲ್ಲಿ 26 ಲಕ್ಷ ಐಟಿ ವೃತ್ತಿಪರರಿದ್ದಾರೆ. ಕ್ಯಾಲಿಫೋರ್ನಿಯಾದಲ್ಲಿ 13 ಲಕ್ಷ ಐಟಿ ವೃತ್ತಿಪರರಿದ್ದಾರೆ. ನಮ್ಮ ರಾಜ್ಯದಲ್ಲೇ ಅತಿ ಹೆಚ್ಚು ಮೆಡಿಕಲ್ ಕಾಲೇಜುಗಳಿವೆ. ಇದು ನಮ್ಮ ಶಕ್ತಿ,'' ಎಂದರು.

ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ''ವೈದ್ಯಕೀಯ ವೃತ್ತಿ ಕೇವಲ ಉದ್ಯೋಗವಲ್ಲ, ಅದು ಸೇವೆ ಮತ್ತು ಕರುಣೆಯ ಕ್ಷೇತ್ರ,'' ಎಂದರು.

ಘಟಿಕೋತ್ಸವದಲ್ಲಿ ವಿವಿಧ ವಿಷಯಗಳಲ್ಲಿ ಪದವಿ ಪಡೆದ 72,741 ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. 103 ವಿದ್ಯಾರ್ಥಿಗಳಿಗೆ 115 ಚಿನ್ನದ ಪದಕ ಪ್ರದಾನ ಮಾಡಲಾಯಿತು. ವೈದ್ಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಆರ್. ಪಾಟೀಲ್, ವಿವಿ ಕುಲಪತಿ ಡಾ. ಭಗವಾನ್ ಬಿ.ಸಿ.ಉಪಸ್ಥಿತರಿದ್ದರು.

ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ 28ನೇ ಘಟಿಕೋತ್ಸವದಲ್ಲಿ ಬೆಂಗಳೂರಿನ ರಾಜರಾಜೇಶ್ವರಿ ಸಮೂಹ ಶಿಕ್ಷಣ ಸಂಸ್ಥೆಗಳ ಸ್ಥಾಪಕ ಅಧ್ಯಕ್ಷ ಡಾ.ಎ.ಸಿ.ಷಣ್ಮುಗಂ, ಡಾ.ನೈಲಾಡಿ ಶ್ರೀಧರ್‌ಶೆಟ್ಟಿ, ಡಾ.ಹರ್ಷಿಣಿಗಿ ವೀರಭದ್ರಪ್ಪ ಅವರಿಗೂ ಗೌರವ ಡಾಕ್ಟರೇಟ್ ಪದವಿಯನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಪ್ರದಾನ ಮಾಡಿದರು. ಸಿಎಂ ಡಿಕೆಶಿ ಇದ್ದರು.

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99
Vol. 27 Issue No.167

ಕರಾವಳಿ, ಮಲೆನಾಡಲ್ಲಿ ಮುಂಗಾರು ಮುನಿಸು

ಕೃಷಿ ವಲಯದ ರಕ್ಷಣೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಮುಂಗಾರು ಆರಂಭದಲ್ಲೇ ಮಂಕು ಕವಿದಿದ್ದು, ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ಭಾರಿ ಮಳೆ ಕೊರತೆ ಸೃಷ್ಟಿಯಾಗಿದೆ. ಜಲಾಶಯಗಳ ನೀರಿನ ಮಟ್ಟ ಕುಸಿಯುತ್ತಿರುವ ಬೆನ್ನಲ್ಲೇ ಎಚ್ಚೆತ್ತಿರುವ ಸರಕಾರ ಬರ ಪರಿಸ್ಥಿತಿಯ ಮುನ್ಸೂಚನೆ ಹಿನ್ನೆಲೆಯಲ್ಲಿ ತುರ್ತು ಕ್ರಮಗಳಿಗೆ ಮುಂದಾಗಿದೆ. ಈ ಕುರಿತು ಮಹತ್ವದ ಸಭೆ ನಡೆಸಿರುವ ಸಿಎಂ ಡಿ.ಕೆ. ಶಿವಕುಮಾರ್‌ಅವರು, ಅತಿವೃಷ್ಟಿ ಹಾಗೂ ಅನಾವೃಷ್ಟಿ ಎರಡನ್ನೂ ಎದುರಿಸಲು ಸಿದ್ಧರಾಗಿರುವಂತೆ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದಾರೆ.

ಈಗಿನ ಅಂಕಿ-ಅಂಶಗಳ ಪ್ರಕಾರ ಕರಾವಳಿಯಲ್ಲಿ ಶೇ.41ರಷ್ಟು ಮಳೆ ಕೊರತೆ ಇದೆ. ಕಾವೇರಿ ಕಣಿವೆ ಪ್ರದೇಶಗಳಲ್ಲಿ ಕೂಡ ಶೇ.36ರಷ್ಟು ಮಳೆ ಕಡಿಮೆಯಾಗಿದೆ. ಇದು ಕೃಷಿ, ಕುಡಿಯುವ ನೀರಿನ ಸಂಗ್ರಹ ಮತ್ತು ಜಲಾಶಯಗಳ ನೀರಿನ ಮಟ್ಟದ ಮೇಲೆ ನೇರ ಪರಿಣಾಮ ಬೀರುವ ಸಾಧ್ಯತೆ ಇದೆ. ಪ್ರಾದೇಶಿಕ ಮಟ್ಟದಲ್ಲಿ ಮಳೆಯ ಸ್ಥಿತಿ ನೋಡಿದರೆ, ದಕ್ಷಿಣ ಒಳನಾಡು ಪ್ರದೇಶಗಳಲ್ಲಿ ಸರಾಸರಿ ಮಳೆ 41.8 ಮಿಮೀ ಆಗಿರಬೇಕು. ಆದರೆ, ಈಗಾಗಲೇ 40.8 ಮಿಮೀ ಮಳೆ ಮಾತ್ರ ಬಂದಿದೆ. ಅಂದರೆ ಇಲ್ಲಿ ಮಳೆ ಕೊರತೆ ತೀರಾ ಕಡಿಮೆ ಇದ್ದರೂ ವಾಡಿಕೆಗಿಂತ ಸ್ವಲ್ಪ ತಗ್ಗಿದೆ. ಉತ್ತರ ಒಳನಾಡು ಪ್ರದೇಶಗಳಲ್ಲಿ ಸರಾಸರಿ 51.5 ಮಿ.ಮೀ. ಮಳೆಯಾಗಬೇಕಾದರೆ, 51.2 ಮಿ.ಮೀ. ಮಳೆಯಾಗಿದೆ. ಇಲ್ಲಿ ಮಳೆ ಪ್ರಮಾಣ ಬಹುತೇಕ ಸಾಮಾನ್ಯ ಮಟ್ಟದಲ್ಲೇ ಇದೆ ಎಂದು ಹೇಳಬಹುದು.

ಆದರೆ, ಮಲೆನಾಡು ಪ್ರದೇಶಗಳಲ್ಲಿ ಪರಿಸ್ಥಿತಿ ಗಂಭೀರವಾಗಿದೆ. ಮಲೆನಾಡಿನಲ್ಲಿ ಸಾಮಾನ್ಯವಾಗಿ 132 ಮಿಮೀ ಮಳೆಯಾಗಬೇಕಾಗಿತ್ತು. ಈಗ 84.8 ಮಿಮೀ ಮಳೆ ಮಾತ್ರ ದಾಖಲಾಗಿದೆ. ಅಂದರೆ ಇಲ್ಲಿ ದೊಡ್ಡ ಮಟ್ಟದಲ್ಲಿ ಮಳೆ ಕೊರತೆ ಇದೆ. ಮಲೆನಾಡಿನ ನದಿ ಮೂಲಗಳು, ಜಲಾಶಯಗಳು, ಅಣೆಕಟ್ಟುಗಳು ಈ ಮಳೆಯ ಮೇಲೆ ಅವಲಂಬಿತವಾಗಿರುವುದರಿಂದ ಮಳೆ ಕೊರತೆ ಪರಿಣಾಮ ಮುಂದಿನ ದಿನಗಳಲ್ಲಿ ಹೆಚ್ಚಾಗಿ ಗೋಚರಿಸಬಹುದು.

ಬಿತ್ತನೆ ಬೀಜಗಳ ವಿವರ: 2026ರ ಮುಂಗಾರು ಹಂಗಾಮಿನಲ್ಲಿ ನಾನಾ ಕೃಷಿ ಬೆಳೆಗಳನ್ನು ಬೆಳೆಯಲು 82.48 ಲಕ್ಷ ಹೆಕ್ಟೇರ್ ಗುರಿ ಹೊಂದಲಾಗಿದ್ದು, ಪೂರ್ವ ಮುಂಗಾರು ಹಂಗಾಮಿನಲ್ಲಿ 2.78 ಲಕ್ಷ ಹೆಕ್ಟೇರ್ ಗುರಿಗೆ ಅನುಗುಣವಾಗಿ 28,900 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. 2026ರ ಮುಂಗಾರು ಹಂಗಾಮಿನಲ್ಲಿ 4.71 ಲಕ್ಷ ಕ್ವಿಂಟಾಲ್ ವಿವಿಧ ಬಿತ್ತನೆ ಬೀಜಗಳಿಗೆ ಬೇಡಿಕೆಯಿದ್ದು, 5.46 ಲಕ್ಷ ಕ್ವಿಂಟಾಲ್ ಸಂಗ್ರಹವಿದೆ ಎನ್ನುತ್ತಾರೆ ಕೃಷಿ ಇಲಾಖೆ ಅಧಿಕಾರಿಗಳು. 2026-27ನೇ ಸಾಲಿನ ಮುಂಗಾರು ಹಂಗಾಮಿಗೆ (ಏಪ್ರಿಲ್ ಮಾಹೆಯಿಂದ ಸೆಪ್ಟೆಂಬರ್ ವರೆಗೆ) 30.05 ಲಕ್ಷ ಮೆಟ್ರಿಕ್ ಟನ್ ವಿವಿಧ ರಾಸಾಯನಿಕ ರಸಗೊಬ್ಬರಗಳಿಗೆ ಬೇಡಿಕೆಯಿದೆ. ಬೇಡಿಕೆಗೆ ಅನುಗುಣವಾಗಿ ಪ್ರತಿ ತಿಂಗಳು ಕೇಂದ್ರ ಸರಕಾರ ಬಿಡುಗಡೆ ಮಾಡುತ್ತದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದರು.

ಪರ್ಯಾಯ ಜಲ ಮೂಲ ಗುರುತಿಸಿ: ಖಂಡ್ರೆ ಸೂಚನೆ

ಮಳೆ ಕೊರತೆಯ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದ್ದು, ಪರ್ಯಾಯ ಜಲ ಮೂಲಗಳನ್ನು ಗುರುತಿಸಿ ನೀರಿನ ಪರೀಕ್ಷೆ ಮಾಡಿ ಸನ್ನದ್ಧ ಸ್ಥಿತಿಯಲ್ಲಿರುವಂತೆ ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಅವರು ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

''ಈ ಬಾರಿ ರಾಜ್ಯದಲ್ಲಿ ಮಳೆಯ ಸರಾಸರಿ ಪ್ರಮಾಣ ಮತ್ತು ಸರಾಸರಿ ಮಳೆಯ ಅವಧಿ ಕಡಿಮೆ ಆಗುವ ಭೀತಿಯಿಂದ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರುವ ಅಪಾಯವೂ ಇದೆ. ಈ ಸಂಬಂಧ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾಸಗಿ ತೆರೆದ ಬಾವಿ, ಕೊಳವೆ ಬಾವಿಗಳನ್ನು ಗುರುತಿಸಿ, ಆ ಬಾವಿಗಳ ನೀರಿನ ಪ್ರಮಾಣ, ಲಭ್ಯತೆ ಖಚಿತಪಡಿಸಿಕೊಳ್ಳಿ. ಖಾಸಗಿ ಜಲ ಮೂಲಗಳ ಮಾಲೀಕರೊಂದಿಗೆ ಮಾತುಕತೆ ನಡೆಸಿ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳಿ,'' ಎಂದು ಸೂಚಿಸಿದ್ದಾರೆ.

ಮತದಾರರ ಪಟ್ಟಿ ಪರಿಷ್ಕರಣೆ ಟಾರ್ಗೆಟ್ ಬಗ್ಗೆ ಎಚ್ಚರ!

ಶಾಸಕರಿಗೆ ಸಿಎಂ, ಸುರ್ಜೇವಾಲಾ ಸೂಚನೆ | ಸಿಎಲ್‌ಪಿ ಸಭೆಯಲ್ಲಿ ಎಸ್‌ಐಆರ್ ಚರ್ಚೆಗೇ ಒತ್ತು

■ **ವಿಕ ಸುದ್ದಿಲೋಕ** ಬೆಂಗಳೂರು

ಮಾಸಾಂತ್ಯದಿಂದ ರಾಜ್ಯದಲ್ಲಿ ಆರಂಭಿಸಲಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ವೇಳೆ ಪಕ್ಷದ ಶಾಸಕರು ತಮ್ಮ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸಾಂಪ್ರದಾಯಿಕ ಬೆಂಬಲಿಗ ಮತದಾರರು ಪಟ್ಟಿಯಿಂದ ಕೈಬಿಟ್ಟು ಹೋಗದಂತೆ ಎಚ್ಚರಿಕೆ ವಹಿಸಬೇಕು ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹಾಗೂ ಸಿಎಂ ಡಿ.ಕೆ.ಶಿವಕುಮಾರ್ ಸೂಚನೆ ನೀಡಿದ್ದಾರೆ.

''ಕೇಂದ್ರ ಬಿಜೆಪಿ ನಾಯಕರ ಕಣ್ಣು ಕರ್ನಾಟಕದ ಮೇಲೆ ಬಿದ್ದಿದ್ದು, ಎಸ್‌ಐಆರ್‌ನಲ್ಲಿ ಕಾಂಗ್ರೆಸ್ ಶಾಸಕರ ಕ್ಷೇತ್ರಗಳನ್ನು ಟಾರ್ಗೆಟ್ ಮಾಡಿಕೊಂಡಿದೆ. ಅಲ್ಪಸಂಖ್ಯಾತ, ದಲಿತ ಹಾಗೂ ಒಬಿಸಿ ಮತದಾರರಿಗೆ ಕತ್ತರಿ ಹಾಕುವ ಸಾಧ್ಯತೆಗಳು ದಟ್ಟವಾಗಿವೆ. ನಿಮ್ಮ ಬೆಂಬಲಿಗ ಹಾಗೂ ಪಕ್ಷದ ಮತದಾರರ ಹೆಸರುಗಳು ಪಟ್ಟಿಯಿಂದ ಕೈಬಿಟ್ಟು ಹೋಗದಂತೆ ಎಚ್ಚೆತ್ತುಕೊಳ್ಳಿ,'' ಎಂದು ಸೂಚಿಸಿದ್ದಾರೆ.

ನಗರ ಹೊರವಲಯದ ಬಿಡದಿ ಬಳಿಯ ವಂಡರ್ ಲಾ ರೆಸಾರ್ಟ್‌ನಲ್ಲಿ ಮಂಗಳವಾರ ರಾತ್ರಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ

ನಡೆದ ಸಿಎಲ್‌ಪಿ ಸಭೆಯಲ್ಲಿ ಮಾತನಾಡಿದರು.

ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಎಷ್ಟೇ ಹೋರಾಡಿದರೂ, ಎಸ್‌ಐಆರ್ ಮೂಲಕ ಅವರ ರಾಜಕೀಯ ಅಸ್ತಿತ್ವವನ್ನೇ ಕಸಿದುಕೊಳ್ಳಲಾಯಿತು. ಬಿಜೆಪಿಯವರ ಮುಂದಿನ ಗುರಿ ಕರ್ನಾಟಕ ಆಗಿದೆ ಎಂಬ ಬಗ್ಗೆ ಅನುಮಾನವೇ ಬೇಡ. ಕ್ಷೇತ್ರಗಳಲ್ಲಿ ಶಾಸಕರೇ ಪೂರ್ಣ ಜವಾಬ್ದಾರಿ ತೆಗೆದುಕೊಳ್ಳಬೇಕು ಎಂದು ನಿರ್ದೇಶನ ನೀಡಲಾಯಿತು.

ಗೆಲುವು ನಮ್ಮದೇ

ವಿಧಾನ ಪರಿಷತ್ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳಾಗಿರುವ ಬಿ.ಕೆ.ಹರಿಪ್ರಸಾದ್, ತಿಪ್ಪಣ್ಣಪ್ಪ ಕಮಕನೂರ, ಪಿ.ಪಿ.ಮೋಹನ್, ಮಳವಳ್ಳಿ ಶಿವಣ್ಣ ಮತ್ತು ವಿನಯ್ ಕಾರ್ತಿಕ್ ಗೆಲುವು ಖಚಿತ. ಅದಕ್ಕಾಗಿ ಸ್ಪಷ್ಟ ಕಾರ್ಯತಂತ್ರ ಆಗಿದೆ. ಪ್ರತಿಯೊಬ್ಬರೂ ಪಕ್ಷದ ಸೂಚನೆ ಪಾಲಿಸಿ,'' ಎಂದು ಡಿಕೆಶಿ ಸೂಚಿಸಿದರು.

''ಕುಮಾರಸ್ವಾಮಿ ಅವರು ಕೆಲವು ಕಾಂಗ್ರೆಸ್ ಶಾಸಕರು ಸಂಪರ್ಕದಲ್ಲಿದ್ದಾರೆ ಎಂದು ಹೇಳಿದ್ದಾರೆ. ಜೆಡಿಎಸ್‌ನವರು ಪಕ್ಷದ ಕೆಲವು ಶಾಸಕರನ್ನು ಸಂಪರ್ಕಕ್ಕೆ ಪ್ರಯತ್ನ ಮಾಡಿರುವುದೂ ನಿಜ. ಆದರೆ, ಪಕ್ಷದ ಶಾಸಕರನ್ನು ಅವರು ಸೆಳೆಯಲು ಸಾಧ್ಯವೇ ಇಲ್ಲ, ವಾಸ್ತವದಲ್ಲಿ ಪ್ರತಿಪಕ್ಷ ಪಾಳೆಯದ ಕೆಲವು ಶಾಸಕರೇ ನಮ್ಮ ಅಭ್ಯರ್ಥಿಗಳಿಗೆ ಮತ ಹಾಕಲಿದ್ದಾರೆ. ಅದು ಚುನಾವಣೆ ಮುಗಿದ ಬಳಿಕ ಗೊತ್ತಾಗುತ್ತದೆ,'' ಎಂದು ಡಿ.ಕೆ.ಶಿವಕುಮಾರ್ ಸೂಚ್ಯವಾಗಿ ಹೇಳಿದರು.

ಅಣಕು ಮತದಾನ

''ಪಕ್ಷದ ಯಾವ ಮತವೂ ಕುಲಗೆಡಬಾರದು. ಅದಕ್ಕಾಗಿ ಬುಧವಾರ (ಜೂ.17) ಮಧ್ಯಾಹ್ನ 12 ರಿಂದ 3 ಗಂಟೆವರೆಗೆ ಅಣಕು ಮತದಾನದ ತರಬೇತಿ ನಡೆಯಲಿದೆ. ಬಳಿಕ ಯಾವ ಶಾಸಕರು ಯಾವ ಅಭ್ಯರ್ಥಿಗೆ ಮತ ಹಾಕಬೇಕು ಎಂದು ಸೂಚಿಸಲಾಗುತ್ತದೆ. ಗುರುವಾರ ಬೆಳಗ್ಗೆ ಒಟ್ಟಿಗೇ ವಿಧಾನಸೌಧಕ್ಕೆ ಆಗಮಿಸಿ ಮತದಾನದಲ್ಲಿ ಭಾಗವಹಿಸಬೇಕು,'' ಎಂದು ಸಿಎಂ ಹೇಳಿದರು.

ಪಂಚಾಯಿತಿ ಚುನಾವಣೆಗೆ ಸಜ್ಜಾಗಿ

''ಜಿ.ಪಂ., ತಾಪಂ., ಗ್ರಾಮ ಪಂಚಾಯಿತಿ ಹಾಗೂ ಜಿಬಿಎ ಚುನಾವಣೆ ನಡೆಯಲಿದೆ. ಪಕ್ಷದ ಶಾಸಕರು ತಮ್ಮ ಭಾಗಗಳಲ್ಲಿ ಚುನಾವಣೆಗೆ ತಯಾರಿ ಮಾಡಿಕೊಳ್ಳಬೇಕು'' ಎಂದು ಸುರ್ಜೇವಾಲಾ ಸೂಚಿಸಿದರು..

ಸಿದ್ದು ಮೌನ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭೆಯಲ್ಲಿ ಮಾತನಾಡಲಿಲ್ಲ. ಎಐಸಿಸಿ ಕಾರ್ಯದರ್ಶಿಗಳಾದ ಅಭಿಷೇಕ್ ದತ್ತ, ಗೋಪಿನಾಥ್ ಪಳನಿಸ್ವಾಮಿ ಸಭೆಯಲ್ಲಿ ಭಾಗವಹಿಸಿದ್ದರು. ಒಟ್ಟು 120 ಶಾಸಕರು ಸಭೆಯಲ್ಲಿ ಪಾಲ್ಗೊಂಡಿದ್ದರು. ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರು ಸಭೆಗೆ ಗೈರಾದರು. ಸಭೆಗೆ ಹಾಜರಾಗದಿರುವ ಬಗ್ಗೆ ಸಿಎಲ್‌ಪಿ ಕಾರ್ಯದರ್ಶಿಗೆ ಪರಮೇಶ್ವರ್ ಅವರು ಮುಂಚಿತವಾಗಿ ಪತ್ರ ನೀಡಿದ್ದರು.

ಡಿಕೆಶಿಗೆ 'ದಲ್ಲಾಳಿ' ಪದಬಳಕೆ: ಶಾಸಕ ಬಾಲಕೃಷ್ಣ ಕಿಡಿ

ಬೆಂಗಳೂರು/ಬಿಡದಿ: ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು 'ದಲ್ಲಾಳಿ' ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಸಂಬೋಧಿಸಿರುವುದನ್ನು ಮಾಗಡಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಚ್.ಸಿ.ಬಾಲಕೃಷ್ಣ 'ಎಕ್ಸ್'ನಲ್ಲಿ ತೀವ್ರವಾಗಿ ಆಕ್ಷೇಪಿಸಿದ್ದಾರೆ.

''ಪ್ರತಿಪಕ್ಷ ನಾಯಕರಾಗಿ ನಿಮ್ಮ ಸ್ಥಾನದ ಘನತೆ ಮರೆತು ಮುಖ್ಯಮಂತ್ರಿಗಳ ಬಗ್ಗೆ ಕೆಟ್ಟ ಭಾಷೆಯಲ್ಲಿ ಸಂಬೋಧಿಸುವುದು ಎಷ್ಟರ ಮಟ್ಟಿಗೆ ಸರಿ? ಮುಖ್ಯಮಂತ್ರಿಗಳನ್ನು ದಲ್ಲಾಳಿ ಎಂದು ಕರೆಯುವುದು ಕನ್ನಡ ನಾಡಿನ ಜನರಿಗೆ ಮತ್ತು ಸಂವಿಧಾನಕ್ಕೆ ಮಾಡುವ ಅಪಮಾನ,'' ಎಂದು ಹೇಳಿದ್ದಾರೆ.

''ಒಕ್ಕಲಿಗ ಸಮುದಾಯದಲ್ಲಿ ತಮಗೆ ಪರ್ಯಾಯ ನಾಯಕನಾಗಿ ಬೆಳೆಯ ಬಾರದು ಎನ್ನುವ ಕುತಂತ್ರದಿಂದ, ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಮತ್ತು ಕುಟುಂಬ ಈ ಹಿಂದೆ ಡಿ.ಕೆ.ಶಿವಕುಮಾರ್ ವಿರುದ್ಧ ಅಕ್ರಮ ತನಿಖೆಗೆ ಆಗ್ರಹಿಸಿ ಪ್ರಧಾನಿಗೆ ಪತ್ರ ಬರೆದಿದ್ದರು. ಶಿವಕುಮಾರ್ ಅವರನ್ನು ಬಲಿ ಹಾಕಲು ಎಚ್‌ಡಿಕೆ ಯಾರ್‍ಯಾರಿಗೆ ಕರೆ ಮಾಡಿದ್ದಾರೆ ಎಂಬುದನ್ನು ಸಮಯ ಬಂದಾಗ ಹೇಳುತ್ತೇನೆ,'' ಎಂದು ಆರೋಪ ಮಾಡಿದರು.

''ಡಿಕೆಶಿ ಅವರ ಆದಾಯ ನೋಡಿ ದೇಶದಲ್ಲಿರುವ ಎಲ್ಲಾ ಇಲಾಖೆಗಳಿಂದಲೂ ಇವರೇ ತನಿಖೆ ಮಾಡಿಸಿದರು. ಆದರೂ, ಏನೂ ಸಿಗಲಿಲ್ಲ, ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ವಜಾಗೊಂಡಿತು. ನಾನು ರಿಯಲ್ ಎಸ್ಟೇಟ್ ಜತೆಗೆ ಬಿಸಿನೆಸ್ ಮಾಡುತ್ತೇನೆ ಎಂದು ಶಿವಕುಮಾರ್ ಹೇಳಿದ್ದಾರೆ. ಅದೇ ರೀತಿ ಎಚ್‌ಡಿಕೆ ಮತ್ತು ಆರ್. ಅಶೋಕ್ ಸಹ ತಮ್ಮ ಕುಟುಂಬದವರ ಆಸ್ತಿಗಳ ಕುರಿತು ತನಿಖೆಗೆ ಸಿದ್ಧರಿದ್ದಾರೆಯೇ ಎಂದು ಪ್ರಶ್ನಿಸಿದರು.

ಟೌನ್‌ಶಿಪ್‌ಗೆ ಭೂಮಿ ಕೊಡಲು ಬಹುಪಾಲು ರೈತರ ಸಮ್ಮತಿ: ಕಾಂಗ್ರೆಸ್

■ **ವಿಕ ಸುದ್ದಿಲೋಕ** ಬೆಂಗಳೂರು

- 1,367 ರೈತರಿಂದ ಆಕ್ಷೇಪ
- 247 ಸಮಿತಿ ಮುಂದೆ ಬರದ ರೈತರು
- 259 ರೈತರಿಂದ ಹೆಚ್ಚು ಪರಿಹಾರಕ್ಕೆ ಮನವಿ
- 663 ಜಮೀನು ಬಿಡದ ರೈತರು

ಜನರಿಗೆ ಅನುಕೂಲ ಮಾಡಿಕೊಡುವ ಬಿಡದಿ ಟೌನ್‌ಶಿಪ್ ಯೋಜನೆಗೆ ಭೂಮಿ ಬಿಟ್ಟುಕೊಡಲು ಬಹುಪಾಲು ರೈತರ ಸಮ್ಮತಿ ಇದ್ದು, ಈ ಯೋಜನೆ ಯಾವ ಕಾರಣಕ್ಕೂ ನಿಲ್ಲುವುದಿಲ್ಲ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಸ್ಪಷ್ಟಪಡಿಸಿದ್ದಾರೆ.

ಪಕ್ಷದ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''ಬಿಡದಿ ಟೌನ್‌ಶಿಪ್ ಯೋಜನೆ ಕುಮಾರಸ್ವಾಮಿ ಕೂಸು,'' ಎಂದು ಹೇಳಿದರು.

''ಐಟಿ ಹಾಗೂ ಇತರೆ ಕ್ಷೇತ್ರದ ಉದ್ಯಮಗಳಿಗೆ ಮೂಲಸೌಕರ್ಯ ನೀಡುವ ಈ ಯೋಜನೆ ಇದಾಗಿದ್ದು, ಯಾವುದೇ ರೀತಿಯ ರಿಯಲ್ ಎಸ್ಟೇಟ್ ವ್ಯವಹಾರದ ಉದ್ದೇಶವಿಲ್ಲ. ಈ ಯೋಜನೆಯಲ್ಲಿ ಲೂಟಿ ಮಾಡಲು ಅವಕಾಶ ಎಲ್ಲಿದೆ? ಮಾಹಿತಿ ಇದ್ದರೆ ಕೇಂದ್ರ ಸಚಿವ ಕುಮಾರಸ್ವಾಮಿ ಮತ್ತು ಪ್ರತಿಪಕ್ಷ ನಾಯಕ ಆರ್.ಅಶೋಕ್ ಸಾಬೀತುಪಡಿಸಲಿ. ಶೇ.80ರಷ್ಟು ರೈತರು ಭೂಮಿ ನೀಡಲು ಒಪ್ಪಿಗೆ ನೀಡಿಲ್ಲ ಎಂಬ ಕುಮಾರಸ್ವಾಮಿ ಮಾತು ಅಪ್ಪಟ ಸುಳ್ಳು,'' ಎಂದು ತಿಳಿಸಿದರು.

ಎಚ್ಡಿಕೆಗೆ ತಿರುಗೇಟು: ''ಸರಕಾರ ಯೋಜನೆಗೆ ಅಧಿಸೂಚನೆ ಹೊರಡಿಸಿದ ಬಳಿಕ ಅನಿತಾ ಕುಮಾರಸ್ವಾಮಿ ಅವರು ಪತ್ರ ಬರೆದು, 35 ಎಕರೆ ಜಮೀನು ತಮ್ಮ ಹೆಸರಿನಲ್ಲಿ ಖಾತೆ, ಪಹಣಿ ಮಾಡಿಸಲಾಗಿದೆ. ಕಾರಣಾಂತರಗಳಿಂದ ವಿನಯ್ ಗೌಡ ಹೆಸರಿಗೆ ಜಿಪಿಎ ಮಾಡಲಾಗಿತ್ತು. ಈಗ ಸಂಪೂರ್ಣವಾಗಿ ತಮ್ಮ ಹೆಸರಿಗೆ ಪಡೆದುಕೊಂಡಿದ್ದು, ಈ ಜಮೀನು ಭೂಸ್ವಾಧೀನವಾದಲ್ಲಿ ಸಂಬಂಧಿಸಿದ ದಾಖಲಾತಿ, ನೋಟಿಸ್‌ಗಳು ಹಾಗೂ ಪರಿಹಾರವನ್ನು ನನ್ನ ವಿಳಾಸಕ್ಕೆ ನೀಡಬೇಕೆಂದು ಮನವಿ ನೀಡಿದ್ದಾರೆ. ವಿನಯ್‌ಗೌಡ ಎಂಬ ಬೇನಾಮಿ ಹೆಸರಿನಲ್ಲಿ ಈ ಜಮೀನನ್ನು ಪಡೆಯಲಾಗಿದೆ. ಈಗ ಬಿಎಂಆರ್‌ಡಿಎ ಮೂಲಕ ಪ್ರತಿ ಎಕರೆಗೆ 2.14 ಕೋಟಿ ರೂ. ಪರಿಹಾರ ಘೋಷಿಸಲಾಗಿದೆ. ಹಣ ಪಡೆದು ಜಮೀನು ನೀಡಬಹುದು ಅಥವಾ 40:60 ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ಭೂಮಿ ಪಡೆಯಬಹುದು. ಕುಮಾರಸ್ವಾಮಿ ಅವರು ಈ ಹಿಂದೆ ಘೋಷಿಸಿದ್ದಕ್ಕಿಂತ ಹೆಚ್ಚಿನ ಪರಿಹಾರವನ್ನೇ ನೀಡಲಾಗುತ್ತಿದೆ,'' ಎಂದು ತಿರುಗೇಟು ನೀಡಿದರು.

ಟೌನ್‌ಶಿಪ್ ಗ್ರಾಮಗಳಿಗೆ ಬಿಜೆಪಿ ನಿಯೋಗ ಭೇಟಿ

ಬೆಂಗಳೂರು: ಬಿಡದಿ ಟೌನ್‌ಶಿಪ್ ನಿರ್ಮಾಣ ಯೋಜನೆಯಿಂದ ಭೂಮಿ ಕಳೆದುಕೊಳ್ಳಲಿರುವ ಆತಂಕದಲ್ಲಿರುವ ರೈತರನ್ನು ಬಿಜೆಪಿ ನಾಯಕರ ನಿಯೋಗ ಬುಧವಾರ ಭೇಟಿಯಾಗಲಿದೆ. ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್, ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವತ್ಥನಾರಾಯಣ, ಮಾಜಿ ಸಚಿವ ಎಸ್.ಸುರೇಶ್ ಕುಮಾರ್ ಇತರರು ನಿಯೋಗದಲ್ಲಿ ರೈತರನ್ನು ಭೇಟಿಯಾಗಲಿದ್ದಾರೆ. ಬುಧವಾರ ಬೆಳಗ್ಗೆ 11 ಗಂಟೆಗೆ ಬಿಜೆಪಿ ನಿಯೋಗವು ಕೆಂಪಯ್ಯನಪಾಳ್ಯ, ಆರಳಾಳು ಸಂದ್ರ, ಹೊಸೂರು, ಬನ್ನಿಗಿರಿ ಗ್ರಾಮಗಳಿಗೆ ಭೇಟಿ ನೀಡಲಿದೆ.

ಬಿಜೆಪಿ- ಜೆಡಿಎಸ್ ಶಾಸಕರ ಸಭೆ ಇಂದು

ಬೆಂಗಳೂರು: ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ಗುರುವಾರ ಮತದಾನ ನಡೆಯಲಿರುವ ಹಿನ್ನೆಲೆಯಲ್ಲಿ ಎನ್‌ಡಿಎ ಅಭ್ಯರ್ಥಿ ಗೆಲುವಿಗೆ ಬಿಜೆಪಿ, ಜೆಡಿಎಸ್ ನಗರದ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಸಂಜೆ 6 ಗಂಟೆಗೆ ಸಭೆ ನಡೆಸಲಿವೆ. ಸಂಖ್ಯಾಬಲ ಆಧರಿಸಿ ಬಿಜೆಪಿಯ ರಘು ಕೌಟಿಲ್ಯ ಹಾಗೂ ಲಿಂಗರಾಜ್ ಪಾಟೀಲ್ ಗೆಲ್ಲಲಿದ್ದು, ಜೆಡಿಎಸ್ ಅಭ್ಯರ್ಥಿ ಗೆಲುವಿಗೆ ಕಾರ್ಯತಂತ್ರ ಹೆಣೆಯಲಿವೆ ಎಂದು ಮೂಲಗಳು ಹೇಳಿವೆ.

ಹೊರರಾಜ್ಯಕ್ಕೆ ನಿರಾಣಿ ಸಮೂಹದ ಉದ್ಯಮ ವಲಸೆ

■ **ವಿಕ ಸುದ್ದಿಲೋಕ** ಬಾಗಲಕೋಟೆ

''ವಿಮಾನ ಇಂಧನ, ಬಯೊ ಪ್ಲಾಸ್ಟಿಕ್ ಉತ್ಪಾದಿಸುವ ಪರಿಸರ ಸ್ನೇಹಿ ಉದ್ಯಮ ಸ್ಥಾಪಿಸಲು ರಾಜ್ಯ ಸರಕಾರ ಅನುಮತಿ ನೀಡಿಲ್ಲ'' ಎಂದು ಮಾಜಿ ಸಚಿವ, ಬಿಜೆಪಿ ಉಪಾಧ್ಯಕ್ಷ ಮುರಗೇಶ ನಿರಾಣಿ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ''ನಿರಾಣಿ ಸಮೂಹದಿಂದ ಜಮಖಂಡಿ ಅಥವಾ ಬಾದಾಮಿ ಘಟಕ ಆರಂಭಿಸಲು ಸಿದ್ದರಾಮಯ್ಯ ಸಿಎಂ ಇದ್ದಾಗ ಎರಡು ಬಾರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು,'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಿಎಂಗೆ ಮನವಿ: ''ಅಂದಾಜು 3,200 ಕೋಟಿ ರೂ. ವೆಚ್ಚದಲ್ಲಿ ಅತ್ಯಾಧುನಿಕ ಘಟಕ ಸ್ಥಾಪಿಸುವ ಉದ್ದೇಶವಿದೆ. ವಿಮಾನ ಇಂಧನ, ಬಯೊ ಪ್ಲಾಸ್ಟಿಕ್ ಉತ್ಪಾದಿಸಲು ಕಬ್ಬು, ಮೆಕ್ಕೆಜೋಳ, ಮೊಲ್ಯಾಸಿಸ್, ಕಬ್ಬಿನ ರವದಿ, ಧಾನ್ಯ ತ್ಯಾಜ್ಯ ಬಳಕೆಯಾಗುತ್ತವೆ. 2,500 ಕೋಟಿ ರೂ. ವೆಚ್ಚದಲ್ಲಿ ಘಟಕ ಆರಂಭಿಸಲಾಗುತ್ತದೆ. ಜಪಾನ್‌ನ ಸುಮಿಟೊಮೊ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ,'' ಎಂದರು.

''ನಮ್ಮ ಎರಡು ಉದ್ಯಮಗಳಿಗೆ ಪೂರಕ ಸೌಲಭ್ಯ ಒದಗಿಸಲು ಮೂರು ರಾಜ್ಯಗಳ ಮುಖ್ಯಮಂತ್ರಿಗಳು ಆಸಕ್ತಿ ವಹಿಸಿದ್ದಾರೆ. ಮಹಾರಾಷ್ಟ್ರದ ಸಿಎಂ ದೇವೇಂದ್ರ ಫಡ್ನವಿಸ್ ಭೂಮಿ ಒದಗಿಸಿ, ಶೇ.50 ರಷ್ಟು ಸಬ್ಸಿಡಿ ಒದಗಿಸುವುದಾಗಿ ಘೋಷಿಸಿದ್ದಾರೆ. ಆಂಧ್ರ ಪ್ರದೇಶದ ಸಿಎಂ ಚಂದ್ರಬಾಬು ನಾಯ್ಡು 400 ಎಕರೆ ಭೂಮಿ ನೀಡುವ ಭರವಸೆ ನೀಡಿದ್ದಾರೆ. ಬಿಹಾರ ಸಿಎಂ ಸಾಮ್ರಾಟ್ ಚೌಧರಿ ಕೂಡ ಉದ್ಯಮ ಸ್ಥಾಪಿಸಿ ಎಂದು ಹೇಳಿದ್ದಾರೆ. ಆದರೆ ಕನ್ನಡದ ನೆಲದಲ್ಲಿ ಉದ್ಯಮ ಸ್ಥಾಪಿಸಿ ಕನ್ನಡಿಗರಿಗೆ ಉದ್ಯೋಗ, ರೈತರಿಗೆ ನೆರವು ನೀಡುವುದು ನನ್ನ ಉದ್ದೇಶವಾಗಿದೆ. ಸರಕಾರ ಸ್ಪಂದಿಸದಿದ್ದರೆ ವಿಧಾನಸೌಧದ ಎದುರು ಪ್ರತಿಭಟಿಸಬೇಕಾಗುತ್ತದೆ. ಇನ್ನೆರಡು ತಿಂಗಳು ಕಾಯ್ದು ನೋಡುತ್ತೇನೆ, ಅನುಮತಿ ಕೊಡದಿದ್ದರೆ ಬೇರೆ ರಾಜ್ಯದಲ್ಲಿ ಉದ್ಯಮ ಸ್ಥಾಪಿಸುತ್ತೇನೆ,'' ಎಂದು ನಿರಾಣಿ ತಿಳಿಸಿದರು.

ರಾಜ್ಯ ಸರಕಾರದ ಅಸಹಕಾರಕ್ಕೆ ಮುರಗೇಶ ನಿರಾಣಿ ಅಸಮಾಧಾನ

ಮೇ 7ಕ್ಕೆ ದೂರು, ಮೇ 6ಕ್ಕೆ ಬೇಲ್ ಮಂಜೂರು | ಜೂ.23ಕ್ಕೆ ವಿಚಾರಣೆ ಮುಂದೂಡಿಕೆ

ವಚನಾನಂದ ಶ್ರೀಗಳ ಜಾಮೀನು ಆದೇಶಕ್ಕೆ ಹೈಕೋರ್ಟ್ ಆಘಾತ

ವಿಕ ಸುದ್ದಿಲೋಕ ಬೆಂಗಳೂರು

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯಿದೆಯಡಿ ದಾಖಲಾಗಿರುವ ಪ್ರಕರಣದಲ್ಲಿ ಹರಿಹರದ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುವ ವಿಚಾರಣಾ ನ್ಯಾಯಾಲಯದ ಕ್ರಮಕ್ಕೆ ಹೈಕೋರ್ಟ್ ಆಘಾತ ವ್ಯಕ್ತಪಡಿಸಿದೆ.

ವಚನಾನಂದ ಸ್ವಾಮೀಜಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುವುದನ್ನು ಪ್ರಶ್ನಿಸಿ ಸಂತ್ರಸ್ತ ಬಾಲಕನ ತಾಯಿ ಸಲ್ಲಿಸಿರುವ ಅರ್ಜಿ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠದ ಮುಂದೆ ಮಂಗಳವಾರ ವಿಚಾರಣೆಗೆ ಬಂದಿತು.

ಕೆಲ ಕಾಲ ಅರ್ಜಿ ಪರಿಶೀಲಿಸಿದ ನ್ಯಾಯಪೀಠ, ಪೋಕ್ಸೊ ಪ್ರಕರಣದಲ್ಲಿ ಆರೋಪಿಗೆ ನಿರೀಕ್ಷಣಾ ಜಾಮೀನು ನೀಡಿರುವುದಕ್ಕೆ ತೀವ್ರ ಕಳವಳ ವ್ಯಕ್ತಪಡಿಸಿತು. ಆದರೆ, ಜಾಮೀನು ಪಡೆದಿರುವ ಆರೋಪಿಯ ವಾದ ಆಲಿಸದೆ ಯಾವುದೇ ಆದೇಶ ಹೊರಡಿಸಲಾಗದು ಎಂದು ಅಭಿಪ್ರಾಯಪಟ್ಟು, ಆರೋಪಿ ವಚನಾನಂದ ಸ್ವಾಮೀಜಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆಯನ್ನು ಜೂ.23ಕ್ಕೆ ಮುಂದೂಡಿತು.

ಅರ್ಜಿದಾರರ ಪರ ವಾದಿಸಿದ ಹಿರಿಯ ವಕೀಲ ಡಿ.ಆರ್. ರವಿಶಂಕರ್, ''ವಿಚಾರಣಾ ನ್ಯಾಯಾಲಯದ ಆಕ್ಷೇಪಾರ್ಹ ಜಾಮೀನು ಆದೇಶದ 14ನೇ ಪ್ಯಾರಾ ಗಮನಿಸಬೇಕು. ಜಾಮೀನು ಮಂಜೂರು ಮಾಡಿರುವ ವಿಧಾನ ನಿಜಕ್ಕೂ ಆಘಾತಕಾರಿಯಾಗಿದೆ,'' ಎಂದರು.

ಈ ವೇಳೆ ಮಧ್ಯಪ್ರವೇಶಿಸಿದ ನ್ಯಾಯಪೀಠ, ''ಖಂಡಿತವಾಗಿಯೂ ಇದು ಆಘಾತಕಾರಿ. ಪೋಕ್ಸೊ ಹಾಗೂ ಅತ್ಯಾಚಾರ ಪ್ರಕರಣಗಳಲ್ಲಿ ಈ ರೀತಿಯಾಗಬಾರದು, ನಿರೀಕ್ಷಣಾ ಜಾಮೀನು ನೀಡುವ ಪ್ರಶ್ನೆಯೇ ಇರುವುದಿಲ್ಲ,'' ಎಂದು ಹೇಳಿತು.

ನ್ಯಾಯಾಲಯದ ಆದೇಶವನ್ನು ಓದಿದ ವಕೀಲರು, ''ಮಠದ ಟ್ರಸ್ಟಿಗಳು, ಭಕ್ತರು, ಮಕ್ಕಳು ಅಥವಾ ಅವರ ಪೋಷಕರು ನೀಡುವ ಯಾವುದೇ ದೂರು ಅಥವಾ ಪೋಕ್ಸೊ ಕಾಯಿದೆ ಸೆಕ್ಷನ್‌ಗಳಾದ 4, 6, 8,

10 ಮತ್ತು 12 ಅಥವಾ ಸಂಬಂಧಿತ ನಿಬಂಧನೆಗಳಡಿ ಎಫ್ಐಆರ್ ದಾಖಲಾಗಿ ಸ್ವಾಮೀಜಿಯನ್ನು ಬಂಧಿಸಿದರೆ ಅವರಿಂದ 1 ಲಕ್ಷ ರೂ. ಮೌಲ್ಯದ ವೈಯಕ್ತಿಕ ಬಾಂಡ್ ಹಾಗೂ ಒಬ್ಬರ ಶ್ಯೂರಿಟಿ ಪಡೆದು ಬಿಡುಗಡೆ ಮಾಡಬೇಕೆಂದು ಆದೇಶಿಸಲಾಗಿದೆ,'' ಎಂದು ವಿವರಿಸಿದರು.

ಬ್ರೈಂಟನ್ ರಸ್ತೆ, ಬೆಂಗಳೂರು – 560025, ದೂ. ಸಂ. 080-69548770

ದಿನಾಂಕ : 17.06.2026
ಸ್ಥಳ : ಬೆಂಗಳೂರು

ಭಾರತ ಸರ್ಕಾರ
ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ

ಸೆಂಟರ್ ಫಾರ್ ಪ್ರೋಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್ (ಸಿ-ಪಿಎಸಿಇ)
ಐಐಸಿಎ ಬಿಲ್ಡಿಂಗ್, 7ನೇ ಮಹಡಿ, ಪ್ಲಾಟ್ ಪಿ-6,7,8, ಸೆಕ್ಟರ್-5, ಐಎಂಟಿ ಮನೇಸರ್, ಗುರ್ಗಾಂವ್, ಹರ್ಯಾಣ-122050, ಇಮೇಲ್: roc.cpace@mca.gov.in
सत्यमेव जयते

ಫಾರ್ಮ್ ನಂ. ಎಸ್‌ಟಿಕೆ-6
ಸಾರ್ವಜನಿಕ ಪ್ರಕಟಣೆ

[ಕಂಪನಿಗಳ ಕಾಯ್ದೆ 2013ರ ಕಲಂ 248ರ ಉಪ ಕಲಂ (2) ಮತ್ತು ಉಪ ಕಲಂ (4) ಹಾಗೂ ಕಂಪನಿಗಳ (ಕಂಪನಿಗಳ ರಿಜಿಸ್ಟರ್‌ನಿಂದ ಕಂಪನಿಗಳ ಹೆಸರುಗಳನ್ನು ತೆಗೆಯುವುದು) ನಿಯಮಗಳು 2016ರ ನಿಯಮ 7ರ ಅನುಸಾರ]

ಸಾರ್ವಜನಿಕ ಪ್ರಕಟಣೆ: ಆರ್‌ಒಸಿ/ಸಿ-ಪಿಎಸಿಇ/ಎಸ್‌ಟಿಕೆ-2/248(2)/2026-27/468 ದಿನಾಂಕ: 08.06.2026

ಉಲ್ಲೇಖ:

ಕಂಪನಿಗಳ ಕಾಯಿದೆ 2013ರ ಕಲಂ 248ರ ಅನ್ವಯ ಕರ್ನಾಟಕ ರಾಜ್ಯದಲ್ಲಿನ ಕಂಪನಿಗಳ ಹೆಸರುಗಳನ್ನು (41) ಹೊಡೆದುಹಾಕುವುದು ಅಥವಾ ತೆಗೆದುಹಾಕುವ ವಿಷಯಕ್ಕೆ ಸಂಬಂಧಿಸಿದಂತೆ:

ಕ್ರ. ಸಂ.	ವರ್ಕ್ ಐಟಂ	ಸಿಐಎನ್	ಕಂಪನಿ ಹೆಸರು
1	AC3736917	U72900KA2021OPC152721	E2I ಪ್ರೊ ಟೆಕ್ನಾಲಜೀಸ್ (OPC) ಪ್ರೈವೇಟ್ ಲಿಮಿಟೆಡ್
2	AC3722192	U80302KA2022PTC166389	ಜಯಶ್ರೀ ಟೆಕ್ನಾಲಜಿ & ಫಾರಿನ್ ಸ್ಟಡೀಸ್ ಪ್ರೈವೇಟ್ ಲಿಮಿಟೆಡ್
3	AC3106021	U62013KA2025PTC209274	ಟ್ವಿಸ್ಟ್ ಇನ್ಸೈಟ್ಸ್ ಸಾಫ್ಟ್‌ಟೆಕ್ ಪ್ರೈವೇಟ್ ಲಿಮಿಟೆಡ್
4	AC3716148	U74999KA2022PTC161411	ಲೀಸುರೆಟೆಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
5	AC3714326	U63121KA2024PTC190924	ಡಿಜಿಸ್ವಾಗತ್ ಪ್ರೈವೇಟ್ ಲಿಮಿಟೆಡ್
6	AC3690115	U74900KA2015PTC082381	ಬೈ ಬೆಮಿಸಾಲ್ ಆನ್‌ಲೈನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
7	AC3674379	U72900KA2016PTC097839	ಅಪರಿಮಿತಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
8	AC3664927	U74999KA2012PTC063497	ಟೌರೀಸ್ ಸೈನರ್ಜಿ ಕನ್ಸಲ್ಟೆಂಟ್ & ಎಂಜಿನಿಯರ್ ಪ್ರೈವೇಟ್ ಲಿಮಿಟೆಡ್
9	AC3718676	U55101KA2013PTC067681	ಶಿವಾಸ್ ಎ.ಆರ್ ಹೋಟೆಲ್ಸ್ ಮತ್ತು ರೆಸ್ಟೋರೆಂಟ್ಸ್ ಪ್ರೈವೇಟ್ ಲಿಮಿಟೆಡ್
10	AC3256499	U51909KA2019PTC121306	ನ್ಯೂಟ್ರಿಜಿಯಾನ್ ಲೈಫ್ ಸೈನ್ಸ್ ಪ್ರೈವೇಟ್ ಲಿಮಿಟೆಡ್
11	AC3626908	U15549KA2016PTC092800	ಎನ್‌ಎಂಸಾಹು ಫುಡ್ಸ್ ಪ್ರೈವೇಟ್ ಲಿಮಿಟೆಡ್
12	AC3620651	U72501KA2017PTC104731	ನೆಕ್ಸ್ಟ್‌ಜೆನ್ ಸ್ಮಾರ್ಟ್ ಟ್ರಾನ್ಸ್‌ಫಾರ್ಮೇಶನ್ಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
13	AC3599407	U43900KA2024PTC184139	ನೆಲಮನೆ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್
14	AC3548483	U26107KA2024FTC191106	ಆಪ್ಷಮ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
15	AC3515623	U74140KA2020PTC141795	ಸವೆನ್ನಾ ಫಿನ್‌ಫ್ಲೊ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
16	AC3463456	U72900KA2017PTC107082	ಸ್ಪಿನ್‌ಮರ್ಜ್ ಕಾಗ್ನಿಟಿವ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್
17	AC3283668	U58201KA2024PTC192342	ಕೋಡ್‌ಪಲ್ಸ್ ರೋಬೋಟಿಕ್ಸ್ ಪ್ರೈವೇಟ್ ಲಿಮಿಟೆಡ್
18	AC3294598	U85110KA2022PTC168333	ಎಕ್ಸೆಂಪ್ಲರ್ ಹೆಲ್ತ್‌ಕೇರ್ ಪ್ರೈವೇಟ್ ಲಿಮಿಟೆಡ್
19	AC3272197	U45309KA2018PTC115696	ಎನಾಪ್ಟರ್ ಎಂಟಿಸಿ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್
20	AC3703815	U27100KA2013PTC068643	ರಾಸಿಯಾ ಸ್ಟೀಲ್ಸ್ ಪ್ರೈವೇಟ್ ಲಿಮಿಟೆಡ್
21	AC3719766	U15490KA2018PTC119780	ವೆಜ್‌ಹಾಕ್ಸ್ ಫುಡ್ಸ್ ಪ್ರೈವೇಟ್ ಲಿಮಿಟೆಡ್
22	AC3686411	U72900KA2017PTC100812	ನಿವಿಡ್ಕಾನ್ ಐಟಿ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
23	AC3668168	U79120KA2023PTC182832	ಕಾನ್ಶಿಯಸ್ ಟೂರಿಸಂ & ಲೀಸರ್ ಪ್ರೈವೇಟ್ ಲಿಮಿಟೆಡ್
24	AC3661622	U45100KA2019PTC122185	ಗ್ರೀನ್ಸೆಂಟ್ ಇನ್ಫ್ರಾಟೆಕ್ ಪ್ರೈವೇಟ್ ಲಿಮಿಟೆಡ್
25	AC3678940	U64200KA2020PTC137459	ವಿರೋಹ ಟವರ್ಸ್ ಪ್ರೈವೇಟ್ ಲಿಮಿಟೆಡ್
26	AC3673044	U74999KA2018PTC118646	ಅಡಿಶನ್‌ವರ್ಕ್ಸ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
27	AC3676343	U74999KA2018PTC116847	ಡಿಎಸ್‌ಎಎನ್ ಪೊಸಿಟೆಕ್ ಪ್ರೈವೇಟ್ ಲಿಮಿಟೆಡ್
28	AC3654137	U74999KA2022OPC168235	ಅಪ್ಲೋಜ್ ಇ-ಕಾಮರ್ಸ್ (OPC) ಪ್ರೈವೇಟ್ ಲಿಮಿಟೆಡ್
29	AC3625487	U46529KA2024PTC189284	ಪ್ರೊಯೆಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
30	AC3615941	U74140KA2008PTC048251	ಸವಾರಿ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್
31	AC3602125	U72900KA2019PTC128700	ಇಗ್ನೈಟ್ 3I ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಆ್ಯಂಡ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
32	AC3581092	U74999KA2017PTC104479	ಎನ್‌ಒಸಿಪಿಆರ್‌ಒ ಐಒಟಿ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್
33	AC3565986	U13999KA2025FTC206414	ನಮ್ಯಾಂಗ್ ಗ್ಲೋಬಲ್ ಸೋರ್ಸಿಂಗ್ ಪ್ರೈವೇಟ್ ಲಿಮಿಟೆಡ್
34	AC3438190	U72900KA2016PTC094072	ಎಫ್ರೈಮ್ & ಜಾನ್ ಪ್ರೈವೇಟ್ ಲಿಮಿಟೆಡ್
35	AC3550394	U70100KA1988PTC009331	ಎಸ್‌ಎಸ್ ಲಿವಿಂಗ್ ಕಾನ್ಸೆಪ್ಟ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್
36	AC3533263	U86202KA2021PTC147365	ಗ್ಲೋಸಿ ಕಾಸ್ಮೆಟಿಕ್ಸ್ ಪ್ರೈವೇಟ್ ಲಿಮಿಟೆಡ್
37	AC3500512	U74999KA2018PTC109795	ಐಟಿಡಬ್ಲ್ಯೂ ಪ್ಲೇವರ್ಕ್ ಮ್ಯೂಸಿಕ್ ಪ್ರೈವೇಟ್ ಲಿಮಿಟೆಡ್
38	AC3506765	U72900KA2019OPC130150	ಅಶ್ಮಿತಾ ಇನ್ನೋವೇಟಿವ್ ಸೊಲ್ಯೂಷನ್ಸ್ (OPC) ಪ್ರೈವೇಟ್ ಲಿಮಿಟೆಡ್
39	AC3471663	U15549KA2018PTC116190	ಅಬ್ಬಯಾಸ್ ಫುಡ್ಸ್ ಆ್ಯಂಡ್ ಬೆವರೇಜಸ್ ಪ್ರೈವೇಟ್ ಲಿಮಿಟೆಡ್
40	AC3663974	U74900KA2022PTC162585	ಝುಡ್‌ಟಿಎ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್
41	AC3466439	U73200KA2021PTC143653	ವ್ಯಾಲಿರಿಯಾನ್ ಫೋರ್ಜ್ ಪ್ರೈವೇಟ್ ಲಿಮಿಟೆಡ್

(2) ಕಂಪನಿಗಳ ರಿಜಿಸ್ಟ್ರಾರ್ ಅವರು ಕಂಪನಿಗಳ ಕಾಯಿದೆ 2013ರ ಕಲಂ 248(2)ರಡಿ ಕಂಪನಿಗಳ ರಿಜಿಸ್ಟರ್‌ನಿಂದ ಅದರ/ಅವರ ಹೆಸರನ್ನು (ಗಳನ್ನು) ತೆಗೆದುಹಾಕಲು ಮೇಲೆ ತಿಳಿಸಿದ ಕಂಪನಿಗಳಿಂದ ಅರ್ಜಿಗಳನ್ನು ಸ್ವೀಕರಿಸಿದ್ದಾರೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ಅವರು ತಮ್ಮ ಸಂಯೋಜನೆಯ ಒಂದು ವರ್ಷದೊಳಗೆ ವ್ಯವಹಾರವನ್ನು ಪ್ರಾರಂಭಿಸಲು ವಿಫಲರಾಗಿದ್ದಾರೆ ಅಥವಾ ಕಂಪನಿ(ಗಳು) ಹಣಕಾಸು ವರ್ಷಗಳ ಹಿಂದಿನ ಎರಡು ಅವಧಿಗೆ ಯಾವುದೇ ವ್ಯವಹಾರ ಅಥವಾ ಕಾರ್ಯಾರಂಭ ನಡೆಸಿಲ್ಲ ಮತ್ತು ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ, ಕಂಪನಿಗಳ ಕಾಯಿದೆ 2013ರ ಕಲಂ 455ರಡಿ ನಿಷ್ಕ್ರಿಯ ಕಂಪನಿಯ ಸ್ಥಿತಿಯನ್ನು ಪಡೆಯಲು ಅಂತಹ ಅವಧಿಯೊಳಗೆ ಅಥವಾ ಕಂಪನಿ(ಗಳು) ನಿಷ್ಕ್ರಿಯ ಕಂಪನಿಯ ಸ್ಥಾನಮಾನವನ್ನು ಪಡೆದಿದೆ/ಮೆಮೊರಾಂಡಮ್‌ಗೆ ಚಂದಾದಾರರು ತಾವು ಕೈಗೊಂಡ ಚಂದಾದಾರಿಕೆಯನ್ನು ಪಾವತಿಸಿಲ್ಲ, ಕಂಪನಿಯ ಸಂಯೋಜನೆ ಸಮಯದಲ್ಲಿ ಪಾವತಿಸಿ ಮತ್ತು ಈ ಪರಿಣಾಮದ ಘೋಷಣೆಯನ್ನು ಕಲಂ 10ಎ/ರ ಉಪವಿಭಾಗ (1)ರಡಿ ಅದರ ಸಂಯೋಜನೆಯ ನೂರಾ ಎಂಬತ್ತು ದಿನಗಳೊಳಗೆ ಸಲ್ಲಿಸಲಾಗಿಲ್ಲ, ನಂತರ ಬಹಿರಂಗಪಡಿಸಿದಂತೆ ಯಾವುದೇ ವ್ಯವಹಾರ ಅಥವಾ ಕಾರ್ಯಾರಂಭ ನಡೆಸಿಲ್ಲ, ಕಲಂ 12ರ ಉಪ-ವಿಭಾಗ (9)ರಡಿ ಭೌತಿಕ ಪರಿಶೀಲನೆಯನ್ನು ಕೈಗೊಳ್ಳಲಾಗುತ್ತದೆ. ಆದರೆ ಅದು/ಅವರು ಕಂಪನಿಗಳಾಗಿ ಅದರ/ತಮ್ಮ ನೋಂದಣಿಯನ್ನು ಮುಂದುವರಿಸಲು ಬಯಸುವುದಿಲ್ಲ ಮತ್ತು ಆದ್ದರಿಂದ, ಕಂಪನಿಗಳ ರಿಜಿಸ್ಟರ್‌ನಿಂದ ಅದರ/ಅವರ ಹೆಸರುಗಳನ್ನು ತೆಗೆದುಹಾಕಲು/ಹೊಡೆದುಹಾಕಲು ವಿನಂತಿಸಿದ್ದಾರೆ.

(3) ಅದರಂತೆ, ಕಂಪನಿಗಳ ರಿಜಿಸ್ಟ್ರಾರ್ ರವರು ಮೇಲೆ ತಿಳಿಸಿದ ಕಂಪನಿಗಳ ಹೆಸರನ್ನು ಕಂಪನಿಗಳ ರಿಜಿಸ್ಟರ್‌ನಿಂದ ತೆಗೆದುಹಾಕಲು ಅಥವಾ ಹೊಡೆದುಹಾಕಲು ಪ್ರಸ್ತಾಪಿಸುತ್ತಾರೆ.

(4) ಕಂಪನಿಗಳ ರಿಜಿಸ್ಟರ್‌ನಿಂದ ಕಂಪನಿಗಳ ಹೆಸರನ್ನು ತೆಗೆದುಹಾಕುವ ಅಥವಾ ಹೊಡೆದುಹಾಕುವುದಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ ಆಕ್ಷೇಪಣೆ ಸಲ್ಲಿಸಬಹುದು, ಆತ ಅಥವಾ ಆಕೆಯ ಆಕ್ಷೇಪಣೆಯನ್ನು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಮೇಲೆ ನಮೂದಿಸಿದ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

ಇರ್ಕಾನ್ ಟರ್ಕಿ
ಡೆಪ್ಯುಟಿ ರಿಜಿಸ್ಟ್ರಾರ್
ಸೆಂಟರ್ ಫಾರ್ ಪ್ರೋಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೋರೇಟ್ ಎಕ್ಸಿಟ್

CBC 07123/11/0210/2627

ಜೂ.22ರವರೆಗೆ ಟೆಲಿಗ್ರಾಂ ಆ್ಯಪ್ ಬ್ಯಾನ್ | ಪ್ರಶ್ನೆಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಕೇಂದ್ರ ಕ್ರಮ

ನೀಟ್ ಮರುಪರೀಕ್ಷೆಗೆ 'ಸೇನಾ' ಭದ್ರತೆ

ಹೊಸದಿಲ್ಲಿ: ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಸರಕಾರ ಜೂನ್ 21ರಂದು ನಡೆಯಲಿರುವ ಮರುಪರೀಕ್ಷೆಗೆ ಬಹುಹಂತದ ಭದ್ರತೆ ಕೈಗೊಂಡಿದೆ.

» ಪ್ರಶ್ನೆಪತ್ರಿಕೆ ಸಿದ್ಧಪಡಿಸುವವರ ಐಸೋಲೇಷನ್

ಪ್ರಶ್ನೆಪತ್ರಿಕೆ ಸಿದ್ಧಪಡಿಸುವವರನ್ನು ಇಂಟರ್ನೆಟ್ ಹಾಗೂ ಫೋನ್ ಬಳಕೆಗೆ ಅವಕಾಶವಿಲ್ಲದ ಐಸೋಲೇಷನ್ ಕೊಠಡಿಯಲ್ಲಿ ಇರಿಸಲಾಗಿದೆ. ಸಿದ್ಧಪಡಿಸಿದ ಪ್ರಶ್ನೆಪತ್ರಿಕೆಯನ್ನು ಎನ್‌ಕ್ರಿಪ್ಟ್ ಮಾದರಿಯಲ್ಲಿ ಮಾಸ್ಟರ್ ಕಂಪ್ಯೂಟರ್‌ನಲ್ಲಿ ಸ್ಟೋರ್ ಮಾಡಲಾಗುತ್ತದೆ. ಬ್ಯಾಕ್‌ಅಪ್ ಜತೆ ನಾನ್-ಸ್ಟ್ಯಾಂಡರ್ಡ್ ಕೋಡ್‌ಗಳೊಂದಿಗೆ ಹಲವು ಸೆಟ್‌ಗಳ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿ ಇಡಲಾಗಿರುತ್ತದೆ. ಉತ್ತರ ಆಯ್ಕೆಗಳನ್ನೂ ಶೆಫಲ್ ಮಾಡಿ ಇಡಲಾಗಿರುತ್ತದೆ.

» ಮುದ್ರಣ ಮೇಲ್ವಿಚಾರಣೆ

ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆಗೆ ಎಳ್ಳಷ್ಟೂ ಅವಕಾಶವಿಲ್ಲದ ಹಾಗೂ ಸಿಸಿಟಿವಿ ನಿಗಾವಣೆಯಲ್ಲಿ ಪ್ರಶ್ನೆಪತ್ರಿಕೆಗಳನ್ನು ಮುದ್ರಿಸಲಾಗುತ್ತದೆ. ಒಂದೊಮ್ಮೆ ಸೋರಿಕೆಯಾದರೂ ಅದರ ಮೂಲ ಪತ್ತೆ ಹಚ್ಚಲು ಸಹಕಾರಿಯಾಗುವಂತೆ ಪ್ರತಿ ಪ್ರಶ್ನೆಪತ್ರಿಕೆಯನ್ನೂ ವಿಶೇಷವಾಗಿ ಮಾರ್ಕ್ ಮಾಡಲಾಗಿರುತ್ತದೆ.

» ಏರ್‌ಲಿಫ್ಟ್ ಮತ್ತು ಜಿಪಿಎಸ್ ಆಧಾರಿತ ಸಾರಿಗೆ

ಪ್ರಶ್ನೆಪತ್ರಿಕೆಗಳ ಸಾಗಣೆಗೆ ಭಾರತೀಯ ವಾಯುಪಡೆಯ ವಿಮಾನಗಳು ಬಳಕೆಯಾಗಲಿದ್ದು, ಸಿಆರ್‌ಪಿಎಫ್ ಹಾಗೂ ಸಿಐಎಸ್‌ಎಫ್ ಯೋಧರ ಭದ್ರತೆಯೊಂದಿಗೆ ಸೀಲ್ ಮಾಡಿದ ಪ್ರಶ್ನೆಪತ್ರಿಕೆ ಬಂಡಲ್‌ಗಳು ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲಾಗುತ್ತದೆ. ಕೇಂದ್ರಕ್ಕೆ ತಲುಪಿಸಬೇಕಾದ ಪ್ರಶ್ನೆಪತ್ರಿಕೆ ಹಾಗೂ ವಿದ್ಯಾರ್ಥಿಗಳ ಒಎಂಆರ್ ಆನ್ಸರ್‌ಶೀಟ್ ವಾಪಸ್ ಪಡೆದು ರವಾನಿಸಲು ಎರಡೂ ಹಂತದ ಭದ್ರತೆ ಇರುತ್ತದೆ. ಜಿಪಿಎಸ್ ಆಧಾರಿತ ವ್ಯವಸ್ಥೆಯೊಂದಿಗೆ ನಿರ್ದಿಷ್ಟ ಬ್ಯಾಂಕ್‌ಗಳು ಇದನ್ನು ಸಂಗ್ರಹಿಸಲಿವೆ.

» ಭದ್ರತೆಯಲ್ಲಿ ಮೊಹರು ಮಾಡಿದ ಟ್ರಂಕ್ ತೆರೆಯುವಿಕೆ

ಪರೀಕ್ಷಾ ದಿನದಂದು ಪ್ರಶ್ನೆಪತ್ರಿಕೆಗಳಿರುವ ಮೊಹರು ಮಾಡಿದ ಟ್ರಂಕ್‌ಗಳನ್ನು ಸ್ಟ್ರಾಂಗ್‌ರೂಮ್‌ನಲ್ಲಿ ಪರೀಕ್ಷೆ ಆರಂಭವಾಗುವ 45 ನಿಮಿಷ ಮೊದಲು ಜಿಲ್ಲಾಡಳಿತದ ನಿಗಾದಲ್ಲಿ ತೆರೆಯಲಾಗುತ್ತದೆ.

» ಬಯೋಮೆಟ್ರಿಕ್ ಮತ್ತು ಚಹರೆ ಗುರುತಿಸುವಿಕೆ

ಪರೀಕ್ಷಾ ಕೇಂದ್ರದ ಪ್ರವೇಶ ದ್ವಾರದಲ್ಲಿ ವಿದ್ಯಾರ್ಥಿಗಳು 'ಆಧಾರ್' ಆಧಾರಿತ ಬಯೋಮೆಟ್ರಿಕ್ ಮತ್ತು ಮುಖ ಚಹರೆ ಗುರುತಿಸುವಿಕೆ (ಫೇಶಿಯಲ್ ರೆಕಗ್ನಿಷನ್) ಪ್ರಕ್ರಿಯೆಗೆ ಒಳಪಡುವುದು ಕಡ್ಡಾಯ. ಅಲ್ಲದೇ ಪ್ರಾಕ್ಸಿ ಅಭ್ಯರ್ಥಿಗಳನ್ನು ತಡೆಯಲು ಲೈವ್ ಫೋಟೋಗ್ರಫಿ ವ್ಯವಸ್ಥೆಯನ್ನೂ ಬಳಸಲಾಗುತ್ತದೆ.

» ಬಹುಹಂತದ ತಪಾಸಣೆ, ಎಲೆಕ್ಟ್ರಾನಿಕ್ ಸಾಧನಗಳ ನಿಷೇಧ

ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಪ್ರತ್ಯೇಕವಾದ ವ್ಯವಸ್ಥೆಯಡಿ ಮೆಟಲ್ ಡಿಟೆಕ್ಟರ್ ಸೇರಿದಂತೆ ಬಹುಹಂತದ ತಪಾಸಣೆ ಪ್ರಕ್ರಿಯೆಗಳಿಗೆ ಒಳಪಡಬೇಕಾಗುತ್ತದೆ. ಅಲ್ಲದೇ ಮೊಬೈಲ್ ಫೋನ್, ಸ್ಮಾರ್ಟ್ ವಾಚ್, ಕ್ಯಾಲ್ಕುಲೇಟರ್ ಹಾಗೂ ಇತರೆ ಎಲೆಕ್ಟ್ರಾನಿಕ್ ಸಾಧನಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಪರೀಕ್ಷಾಕೇಂದ್ರದ ಬಳಿ ಮೊಬೈಲ್ ಸಿಗ್ನಲ್ ಜಾಮರ್‌ಗಳನ್ನೂ ಅಳವಡಿಸಲಾಗಿರುತ್ತದೆ.

» ಸಿಸಿಟಿವಿ ಹಾಗೂ ಎಐ ಕ್ಯಾಮೆರಾ ಕಣ್ಗಾವಲು

ಪ್ರತಿಯೊಂದು ಪರೀಕ್ಷಾ ಕೇಂದ್ರದಲ್ಲಿ 4 ಹಂತದ ಕಣ್ಗಾವಲು ವ್ಯವಸ್ಥೆ ಇರಲಿದ್ದು, ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಮೂಲಕ ವಿದ್ಯಾರ್ಥಿಗಳ ಪ್ರತಿಯೊಂದು ಚಲನವಲನಗಳ ಮೇಲೆ ನಿಗಾ ಇಡಲಾಗುತ್ತದೆ. ಎನ್‌ಟಿಎ ನಿಯಂತ್ರಣ ಕೊಠಡಿ, ರಾಜ್ಯ ಮಟ್ಟದ ಹಾಗೂ ಜಿಲ್ಲಾಮಟ್ಟದ ಕೇಂದ್ರಗಳು, ಕೇಂದ್ರ ಶಿಕ್ಷಣ ಸಚಿವಾಲಯ ಹಾಗೂ ಕೇಂದ್ರ ಸರಕಾರದ ಸಂಸ್ಥೆಗಳ ನಡುವೆ ನಿರಂತರ ಸಮನ್ವಯ ಇರುತ್ತದೆ.

» ಹೆಚ್ಚಿನ ಅವಧಿ, ಬೇಗ ನಿರ್ಗಮಿಸುವಂತಿಲ್ಲ

ಈ ಹಿಂದೆ 180 ನಿಮಿಷವಿದ್ದ ಪರೀಕ್ಷಾ ಅವಧಿಯನ್ನು ಮರುಪರೀಕ್ಷೆಗೆಂದೇ 15 ನಿಮಿಷ (ಒಟ್ಟು 195 ನಿಮಿಷ) ವಿಸ್ತರಿಸಲಾಗಿದೆ. ಪರೀಕ್ಷೆಯ ಪ್ರಾರಂಭ ಮತ್ತು ಅಂತ್ಯದಲ್ಲಿ ಮೇಲ್ವಿಚಾರಣಾ ಕಾರ್ಯಗಳನ್ನು ನಿರ್ವಹಿಸಲು ಈ ಹೆಚ್ಚುವರಿ ಸಮಯ ಉಪಯುಕ್ತವಾಗಲಿದೆ. ಪರೀಕ್ಷಾ ಅವಧಿ ಪೂರ್ಣಗೊಳ್ಳುವವರೆಗೂ ವಿದ್ಯಾರ್ಥಿಗಳಿಗೆ ಹೊರಹೋಗಲು ಅವಕಾಶವಿರುವುದಿಲ್ಲ.

5,432 ಪರೀಕ್ಷಾ ಕೇಂದ್ರ | **6,000** ವೀಕ್ಷಕರ ನೇಮಕ | **5** ಲಕ್ಷ ಭದ್ರತಾ ಸಿಬ್ಬಂದಿ ನಿಯೋಜನೆ

674 ನಗರ ಸಮನ್ವಯಕಾರರ ನೇಮಕ

ಚಾನೆಲ್ ಮೇಲೆ ನಿಗಾ

ಪ್ರಶ್ನೆಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ವಿವಿಧ ನಕಲಿ ಚಾನೆಲ್, ಗ್ರೂಪ್‌ಗಳ ಮೇಲೆ ನಿಗಾ ಇಡಲಾಗಿದೆ. ಇತ್ತೀಚೆಗಷ್ಟೇ ಅಹಮದಾಬಾದ್‌ನ ಸೈಬರ್‌ಕ್ರೈಂ ವಿಭಾಗವು ಇಂತಹ ಎಂಟು ಚಾನೆಲ್‌ಗಳನ್ನು ನಡೆಸುತ್ತಿದ್ದ ಅಂತರ್‌ರಾಜ್ಯ ತಂಡವನ್ನು ಪತ್ತೆಹಚ್ಚಿದ್ದು, ಸುಮಾರು 1.5 ಕೋಟಿ ರೂಪಾಯಿಗಳ ಆರ್ಥಿಕ ವಹಿವಾಟನ್ನು ಪತ್ತೆ ಮಾಡಿದೆ. ಜೂನ್ 21ರಂದು ನಡೆಯುವ ನೀಟ್ ಮರುಪರೀಕ್ಷೆಗೆ ಈಗಾಗಲೇ ಪ್ರವೇಶಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ನೀಡಿದ್ದು, ಸುಮಾರು 1 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಪ್ರವೇಶ ಪತ್ರ ಪಡೆದುಕೊಂಡಿದ್ದಾರೆ ಎಂದು ಎನ್‌ಟಿಎ ತಿಳಿಸಿದೆ.

ನೀಟ್ ಮರುಪರೀಕ್ಷೆಗೆ ಸರಕಾರ 'ಸೇನಾ ಮಾದರಿ'ಯ ಬಿಗಿ ಕ್ರಮಗಳನ್ನು ತೆಗೆದುಕೊಂಡಿದ್ದು, ಇದು ಈಗಾಗಲೇ ಮಾನಸಿಕವಾಗಿ ಒತ್ತಡದಲ್ಲಿರುವ ವೈದ್ಯ ಆಕಾಂಕ್ಷಿ ವಿದ್ಯಾರ್ಥಿಗಳ ಮೇಲೆ ಇನ್ನಷ್ಟು ಒತ್ತಡ ಸೃಷ್ಟಿಸಲಿದೆ. ಸೇನಾ ಮಾದರಿಯ ಭದ್ರತೆ, ಎಐ ಕಣ್ಗಾವಲು ವ್ಯವಸ್ಥೆ, ಬಯೋಮೆಟ್ರಿಕ್, ಮುಖ ಚಹರೆ ಗುರುತಿಸುವಿಕೆ ಇತ್ಯಾದಿ ಕ್ರಮಗಳು ನಮ್ಮ ಪರೀಕ್ಷಾ ವ್ಯವಸ್ಥೆಯ ಸಂಪೂರ್ಣ ಉದ್ದೇಶ ಹಾಗೂ ಒತ್ತಡ ಕಡಿಮೆ ಮಾಡಬೇಕೆಂಬ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಗುರಿಯನ್ನು ಹಾಳು ಮಾಡುತ್ತದೆ.

- **ಕೆ. ಅಣ್ಣಾಮಲೈ** 'ವಿ ದಿ ಲೀಡರ್ಸ್' ಸಂಘಟನೆಯ ಸ್ಥಾಪಕ

ಗೂಗಲ್ ಪ್ಲೇ ಸ್ಟೋರ್‌ನಿಂದ ಆ್ಯಪ್ ಡಿಲೀಟ್

ಭಾರತದಾದ್ಯಂತ ಆಂಡ್ರಾಯ್ಡ್ ಮೊಬೈಲ್‌ಗಳಲ್ಲಿ ಟೆಲಿಗ್ರಾಂ ಆ್ಯಪ್ ಡೌನ್‌ಲೋಡ್ ಮಾಡಲು ಪ್ರಯತ್ನಿಸುತ್ತಿರುವ ಬಳಕೆದಾರರಿಗೆ ಈಗ 'ಲಭ್ಯವಿಲ್ಲ' (ನಾಟ್ ಅವೆಲೆಬಲ್) ಎಂಬ ಸಂದೇಶ ಕಾಣಿಸುತ್ತಿದೆ. ನೀಟ್ ಮರುಪರೀಕ್ಷೆ ಹಿನ್ನೆಲೆಯಲ್ಲಿ ಸರಕಾರದ ನಿರ್ದೇಶನದ ಮೇರೆಗೆ ಗೂಗಲ್ ಪ್ಲೇ ಸ್ಟೋರ್‌ನಿಂದ ಟೆಲಿಗ್ರಾಂ ಆ್ಯಪ್‌ಅನ್ನು ತಾತ್ಕಾಲಿಕವಾಗಿ ತೆಗೆದುಹಾಕಲಾಗಿದೆ.

'ಟೆಲಿಗ್ರಾಂ ಆ್ಯಪ್ ನಿರ್ಬಂಧ ಕೆಟ್ಟ ಆಲೋಚನೆ'

ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆಯಂತಹ ಅಕ್ರಮ ಜಾಲಗಳನ್ನು ಮಟ್ಟಹಾಕಲು ಹಾಗೂ ತಪ್ಪು ಮಾಹಿತಿ ತಡೆಗಟ್ಟುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಜೂನ್ 22ರವರೆಗೆ ದೇಶದಲ್ಲಿ ಟೆಲಿಗ್ರಾಂ ಮೆಸೇಜಿಂಗ್ ಆ್ಯಪ್ ಮೇಲೆ ತಾತ್ಕಾಲಿಕ ನಿರ್ಬಂಧ ಹೇರಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮಂಗಳವಾರ ಹೇಳಿದೆ. ಎನ್‌ಟಿಎ ಶಿಫಾರಸುಗಳ ಆಧಾರದ ಮೇಲೆ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಮಾಹಿತಿ ತಂತ್ರಜ್ಞಾನ ಕಾಯಿದೆ-2000ರ ಸೆಕ್ಷನ್ 69ಎ ಅನುಸಾರ ಈ ಕ್ರಮ ಕೈಗೊಂಡಿದೆ.

ಸಿಬಿಎಸ್‌ಇ ಪರಿಚಯಿಸಿದ ಹೊಸ ಡಿಜಿಟಲ್ ಮರುಮೌಲ್ಯಮಾಪನ ವ್ಯವಸ್ಥೆ 'ಆನ್‌ಸ್ಕ್ರೀನ್ ಮಾರ್ಕಿಂಗ್ ಸಿಸ್ಟಮ್'ನಲ್ಲಿ (ಒಎಸ್‌ಎಂ) ಇರುವ ಲೋಪದೋಷಗಳನ್ನು ಬಯಲಿಗೆಳೆದಿದ್ದ 12ನೇ ತರಗತಿ ವಿದ್ಯಾರ್ಥಿ ಸಾರ್ಥಕ್ ಸಿದ್ಧಾಂತ್, ಸರಕಾರದ ಈ ನಡೆಯನ್ನು ಟೀಕಿಸಿದ್ದಾರೆ. ''ಎನ್‌ಟಿಎ ಅಸಮರ್ಥತೆಯಿಂದಾಗಿ ದೇಶಾದ್ಯಂತ ಟೆಲಿಗ್ರಾಂ ಆ್ಯಪ್ ಅನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿರುವುದು ಒಂದು ಕೆಟ್ಟ ಆಲೋಚನೆಯಾಗಿದೆ. ಈ ನಿರ್ಬಂಧದಿಂದ ಆ್ಯಪ್‌ನ ಅನೇಕ ಕಾನೂನುಬದ್ಧ ಬಳಕೆದಾರರಿಗೆ ತೊಂದರೆಯಾಗಲಿದೆ,'' ಎಂದು ಹೇಳಿದ್ದಾರೆ.

ನಿರ್ಬಂಧ ತಪ್ಪಿತಸ್ಥರನ್ನು ಶಿಕ್ಷಿಸದು: ''ಭಾರತದಲ್ಲಿ ಸರಕಾರವು ಟೆಲಿಗ್ರಾಂ ಆ್ಯಪ್‌ಅನ್ನು ತಾತ್ಕಾಲಿಕವಾಗಿ ನಿಷೇಧಿಸಿರುವುದರಿಂದ ಸುಮಾರು 15 ಕೋಟಿ ಸಾಮಾನ್ಯ ಬಳಕೆದಾರರಿಗೆ ಸಮಸ್ಯೆಯಾಗಲಿದೆ,'' ಎಂದು ಕಿಡಿಕಾರಿರುವ ಟೆಲಿಗ್ರಾಂ ಆ್ಯಪ್‌ನ ಸಿಇಒ ಪಾವೆಲ್ ಡುರೊವ್ ಅವರು, ''ಈ ನಿರ್ಬಂಧದಿಂದ ಪ್ರಶ್ನೆಪತ್ರಿಕೆ ಸೋರಿಕೆ ದಂಧೆಕೋರರನ್ನು ಮಟ್ಟಹಾಕಲು ಸಾಧ್ಯವಾಗದು. ಅಂಥ ದುರುಳರು ಈಗಾಗಲೇ ಬೇರೆ ಆ್ಯಪ್‌ಗಳ ಮೊರೆ ಹೋಗಿರುತ್ತಾರೆ,'' ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಎಥೆನಾಲ್ ಆಗುವುದೇ ಪರ್ಯಾಯ?

- ಶೇ.100ರಷ್ಟು ಎಥೆನಾಲ್ ಮಿಶ್ರಣದ ಜಾರಿಗೆ ಈಗ ಅನುಮೋದನೆ
- ಆಟೋಮೊಬೈಲ್ ಕಂಪನಿಗಳಿಂದ ಇ100 ಬಳಕೆಯ ವಾಹನಗಳ ತಯಾರಿಕೆ
- ಇ100ಗೆ ಸಂಬಂಧಿಸಿದಂತೆ ದೇಶಾದ್ಯಂತ ಮೂಲಸೌಕರ್ಯಗಳ ಜಾರಿ

ಭಾರತದಲ್ಲಿ ಶೇ.20ರಷ್ಟು ಎಥೆನಾಲ್ ಮಿಶ್ರಿತ ಇಂಧನ ಬಳಕೆ ಗುರಿ ಸಾಧಿಸಿದ ಬೆನ್ನಲ್ಲೇ ವಾಹನಗಳಿಗೆ ಶೇ.100ರಷ್ಟು ಎಥೆನಾಲ್ ಇಂಧನ ಬಳಕೆಗೆ ಕೇಂದ್ರ ಸರಕಾರ ಅನುಮೋದನೆ ನೀಡಿದೆ. ಇ-20 ಜೈವಿಕ ಇಂಧನ ಸಾಧನೆ ಬೆನ್ನಲ್ಲೇ ಏಕಾಏಕಿ ಶೇ.100ರಷ್ಟು ಎಥೆನಾಲ್ ಬಳಕೆಗೆ ಅಸ್ತು ಎಂದಿರುವುದು ಅಚ್ಚರಿ ಮೂಡಿಸಿದೆ. ಹಾಗೆಯೇ, ಶೇ.100ರಷ್ಟು ಎಥೆನಾಲ್‌ಗೆ ದೇಶದ ಕೋಟ್ಯಂತರ ವಾಹನಗಳು ಸಜ್ಜಾಗಿಲ್ಲ ಎಂಬುದೂ ವಾಸ್ತವದ ಸಂಗತಿಯಾಗಿದೆ. ಏನಿದು ಎಥೆನಾಲ್ 100%? ಏಕೆ ಇದು ಪ್ರಮುಖ ನಿರ್ಧಾರ? ಮುಂದೇನಾಗಲಿದೆ? ಸವಾಲುಗಳು ಏನೇನು ಎಂಬುದರ ಮಾಹಿತಿ ಇಲ್ಲಿದೆ.

100% ಎಥೆನಾಲ್‌ಗೆ ಸಮ್ಮತಿ: ಏನಿವೆ ಭವಿಷ್ಯದ ಸವಾಲುಗಳು?

ವಿಕ EXPLAINER

ಏನಿದು ಎಥೆನಾಲ್?: ಎಥೆನಾಲ್ ದೇಶದ ಪ್ರಮುಖ ಜೈವಿಕ ಇಂಧನಗಳಲ್ಲಿ ಒಂದಾಗಿದೆ. ಇದನ್ನು ಕಬ್ಬು, ಮೆಕ್ಕೆಜೋಳ, ಕಾಕಂಬಿ, ಧಾನ್ಯದ ನುಚ್ಚು, ಬಿದಿರು ಸೇರಿ ಹಲವು ಕೃಷಿ ಉತ್ಪನ್ನಗಳಿಂದ, ತ್ಯಾಜ್ಯಗಳಿಂದ ತಯಾರಿಸಲಾಗುತ್ತದೆ. ಎಥೆನಾಲ್ ಕೂಡ ಆಲ್ಕೊಹಾಲ್ ಆಗಿದ್ದು, ಇದನ್ನು ಮದ್ಯಕ್ಕಿಂತ ಹೆಚ್ಚು ಸಂಸ್ಕರಣೆ ಮಾಡಲಾಗುತ್ತದೆ. ಹಾಗಾಗಿಯೇ, ಇದನ್ನು ವಾಹನಗಳಿಗೆ ಬಳಸಬಹುದು.

ಇ-100 ಎಂದರೇನು?: ವಾಹನಗಳಿಗೆ ಈಗ ಶೇ.20ರಷ್ಟು ಎಥೆನಾಲ್ ಮಿಶ್ರಣ ಮಾಡಲಾಗುತ್ತಿದೆ. ಅಂದರೆ, ಒಂದು ಲೀಟರ್ ಪೆಟ್ರೋಲ್‌ಗೆ ಶೇ.20ರಷ್ಟು ಎಥೆನಾಲ್ ಮಿಶ್ರಣ ಮಾಡಲಾಗುತ್ತಿದೆ. ಇದನ್ನೇ ಇ-20 ಎಂದು ಕರೆಯಲಾಗುತ್ತದೆ. ಈಗ ಕೇಂದ್ರ ಸರಕಾರವು ಶೇ.100ರಷ್ಟು ಎಥೆನಾಲ್ ಬಳಸಲು ಅನುಮೋದನೆ ನೀಡಿದೆ. ಅಂದರೆ, ಪೆಟ್ರೋಲ್, ಡೀಸೆಲ್ ಇಲ್ಲದೆ, ಸಂಪೂರ್ಣವಾಗಿ ಎಥೆನಾಲ್ ಮೂಲಕವೇ ವಾಹನ ಸಂಚರಿಸಲು ಅನುಮೋದನೆ ನೀಡಿದೆ ಎಂದರ್ಥ. ಇದನ್ನೇ ಇ-100 ಎಂದು ಕರೆಯಲಾಗುತ್ತದೆ.

ಎಥೆನಾಲ್‌ಗೆ ಏಕೆ ಆದ್ಯತೆ?: ಜಾಗತಿಕ ಸಂಘರ್ಷಗಳಿಂದಾಗಿ ಆಗಾಗ ತೈಲ ಪೂರೈಕೆಗೆ ತೊಂದರೆಯಾಗುತ್ತಲೇ ಇರುತ್ತದೆ. ಆದರಲ್ಲೂ, ಭಾರತವು ಶೇ.88ರಷ್ಟು ಕಚ್ಚಾತೈಲವನ್ನು ಆಮದು ಮಾಡಿಕೊಳ್ಳುತ್ತದೆ. ಹಾಗಾಗಿ, ಕೇಂದ್ರ ಸರಕಾರವು ದೇಶದಲ್ಲಿಯೇ ಉತ್ಪಾದಿಸುವ ಎಥೆನಾಲ್ ಇಂಧನ ಬಳಕೆಗೆ ಹೆಚ್ಚು ಆದ್ಯತೆ ನೀಡುತ್ತಿದೆ. ಇದರಿಂದ ಭಾರತವು ಕಚ್ಚಾತೈಲದ ಆಮದು ಮೇಲಿನ ಅವಲಂಬನೆ ಕಡಿಮೆಯಾಗುವ ಜತೆಗೆ ದೇಶದಲ್ಲಿ ಇಂಧನ ಬೆಲೆಯಲ್ಲಿ ಸ್ಥಿರತೆಯನ್ನೂ ಕಾಪಾಡಬಹುದು.

ಮೈಲೇಜ್ ಕಡಿಮೆ: ಪೆಟ್ರೋಲ್ ಅಥವಾ ಡೀಸೆಲ್‌ಗೆ ಹೋಲಿಸಿದರೆ, ಎಥೆನಾಲ್ ಜೈವಿಕ ಇಂಧನದಿಂದ ಚಲಿಸುವ ವಾಹನಗಳು ಹೆಚ್ಚು ಮೈಲೇಜ್ ಕೊಡುವುದಿಲ್ಲ, ಪೆಟ್ರೋಲ್‌ಗಿಂತ ಎಥೆನಾಲ್ ಸಾಮರ್ಥ್ಯವು 30% ಕಡಿಮೆ ಇರುತ್ತದೆ. ಸದ್ಯ, ಒಂದು ಲೀಟರ್ ಎಥೆನಾಲ್ ಬೆಲೆ 60-65 ರೂ. ಇದೆ.

ಈಗ ಇ100 ಬಳಸಬಹುದೇ?: ಈಗಿರುವ ವಾಹನಗಳ ಎಂಜಿನ್‌ಗಳು ಶೇ.100ರಷ್ಟು ಎಥೆನಾಲ್ ಮಿಶ್ರಿತ ಇಂಧನದಿಂದ ಚಲಿಸುವುದಿಲ್ಲ, ಈಗ ಏನಿದ್ದರೂ ಶೇ.20ರಷ್ಟು ಎಥೆನಾಲ್ ಮಿಶ್ರಿತ ಇಂಧನದಿಂದ ಚಲಿಸುತ್ತವೆ. ಹಾಗೇನಾದರೂ ವಾಹನಗಳಿಗೆ ಇ100 ಇಂಧನ ಬಳಸಿದರೆ ವಾಹನದ ರಬ್ಬರ್ ಪೈಪ್‌ಗಳು ಕರಗಿ ಹೋಗುತ್ತವೆ. ಎಂಜಿನ್‌ಗಳಿಗೆ ಹಾನಿಯಾಗುತ್ತದೆ. ಇದಕ್ಕಾಗಿ, ದೇಶದ ಆಟೋಮೊಬೈಲ್ ಕಂಪನಿಗಳು ಫ್ಲೆಕ್ಸ್-ಫ್ಯುಯೆಲ್ ಎಂಜಿನ್‌ಗಳು ಇರುವ ವಾಹನಗಳನ್ನು ತಯಾರಿಸಬೇಕು. ಆಗ ಮಾತ್ರ ಶೇ.100ರಷ್ಟು ಎಥೆನಾಲ್ ಇಂಧನ ಬಳಸಲು ಸಾಧ್ಯವಾಗುತ್ತದೆ. ಇದಕ್ಕಾಗಿ ಸಮಯ ಬೇಕಾಗುತ್ತದೆ.

ಇ20, ಇ85 ಹಾಗೂ ಇ100 ನಡುವಿನ ವ್ಯತ್ಯಾಸ

	ಇ20	ಇ85	ಇ100
ಎಥೆನಾಲ್ ಪ್ರಮಾಣ	20%	80-85%	93-100%
ಪೆಟ್ರೋಲ್ ಪ್ರಮಾಣ	80%	15-20%	ಬೇಕಾಗಿಲ್ಲ
ಈಗಿನ ವಾಹನಗಳಿಗೆ ಹಾಕಬಹುದೆ?	ಹೌದು	ಇಲ್ಲ	ಇಲ್ಲ
ಫ್ಲೆಕ್ಸ್-ಫ್ಯುಯೆಲ್ ವಾಹನ ಬೇಕಾ?	ಇಲ್ಲ	ಹೌದು	ಹೌದು
ಬಳಕೆ ಕುರಿತು ಸದ್ಯದ ಸ್ಟೇಟಸ್	ದೇಶಾದ್ಯಂತ ಆರಂಭ	ಜೂನ್‌ನಲ್ಲಿ ಆರಂಭ	ಜೂನ್‌ನಲ್ಲಿ ಸಮ್ಮತಿ
ನಿರ್ಧಾರದ ಉದ್ದೇಶ	ಆಮದು ಇಳಿಕೆ	ಫ್ಲೆಕ್ಸ್-ಫ್ಯುಯೆಲ್ ಇಂಧನಕ್ಕೆ ಪ್ರೋತ್ಸಾಹ	ಗರಿಷ್ಠ ಎಥೆನಾಲ್ ಬಳಕೆ



ದಾಳಿಯ ಹಿಂದೆ ಆರ್‌ಎಸ್‌ಎಸ್: ದೀಪ್ಕೆ

ಹೊಸದಿಲ್ಲಿ: ''ನನ್ನ ಮೇಲಿನ ದಾಳಿಯ ಹಿಂದೆ ಆರ್‌ಎಸ್‌ಎಸ್ ಕೈವಾಡವಿದೆ,'' ಎಂದು ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಸಂಸ್ಥಾಪಕ ಅಭಿಜಿತ್ ದೀಪ್ಕೆ ಮಂಗಳವಾರ ಆರೋಪಿಸಿದ್ದಾರೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆ, ನಿರುದ್ಯೋಗ ವಿರೋಧಿಸಿ ಜೈಪುರದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ವೇಳೆ ದೀಪ್ಕೆ ಅವರಿಗೆ ಕೆಲ ಯುವಕರು ಕಪಾಳಕ್ಕೆ ಹೊಡೆದಿದ್ದರು. ಈ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ದೀಪ್ಕೆ, ''ಪ್ರತಿಭಟನಾ ಸ್ಥಳದಲ್ಲಿ ಆರ್‌ಎಸ್‌ಎಸ್‌ಗೆ ಸೇರಿದವರಿದ್ದರು. ಯಾರಾದರೂ ಕೇಂದ್ರದ ವಿರುದ್ಧ ಅಥವಾ ಸಿದ್ಧಾಂತದ ವಿರುದ್ಧ ಮಾತನಾಡಿದಾಗಲೆಲ್ಲಾ ಅವರ ಮೇಲೆ ಹೀಗೆಯೇ ದಾಳಿ ಮಾಡುತ್ತಾರೆ. ಇದರಲ್ಲಿ ಹೊಸದೇನೂ ಇಲ್ಲ,'' ಎಂದಿದ್ದಾರೆ.

ಚುನಾವಣೆಗೆ ಸ್ಪರ್ಧಿಸುವ ಇರಾದೆ ಇಲ್ಲ: ''ಚುನಾವಣೆಗಳಲ್ಲಿ ಸ್ಪರ್ಧಿಸುವ ಇರಾದೆ ನಮಗಿಲ್ಲ, ನಾವೇಕೆ ಚುನಾವಣೆಗಳಲ್ಲಿ ಸ್ಪರ್ಧಿಸಬೇಕು? ಅಂದರೆ, ಚುನಾವಣೆಗಳಲ್ಲಿ ಸ್ಪರ್ಧಿಸಿದರೆ ಮಾತ್ರವೇ ಹಕ್ಕುಗಳಿಗಾಗಿ ಹೋರಾಡಬಹುದೇ? ಇದು ಹೇಗೆ ಸರಿಯಾಗುತ್ತದೆ,'' ಎಂದು ದೀಪ್ಕೆ ಹೇಳಿದ್ದಾರೆ.

ಬ್ರಿಟಿಷರಿಗೆ ನನ್ನಜ್ಜ 10 ಬಾರಿ ಕ್ಷಮಾದಾನ ಅರ್ಜಿ ಸಲ್ಲಿಸಿದ್ದರು: ಸಾವರ್ಕರ್ ಮೊಮ್ಮಗ

ಮುಂಬಯಿ: ಸ್ವಾತಂತ್ರ್ಯ ಹೋರಾಟದ ವೇಳೆ ವಿ.ಡಿ. ಸಾವರ್ಕರ್ ಅವರು ಬ್ರಿಟಿಷ್ ಆಡಳಿತಕ್ಕೆ ಒಟ್ಟು 10 ಬಾರಿ ಕ್ಷಮಾದಾನ ಅರ್ಜಿಗಳನ್ನು ಸಲ್ಲಿಸಿದ್ದರು ಎಂಬ ಸಂಗತಿಯನ್ನು ಅವರ ಮೊಮ್ಮಗ ಸಾತ್ಯಕಿ ಸಾವರ್ಕರ್ ಅವರು ಪುಣೆ ನ್ಯಾಯಾಲಯದ ಮುಂದೆ ಬಹಿರಂಗಪಡಿಸಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಸಾತ್ಯಕಿ ದಾಖಲಿಸಿರುವ ಕ್ರಿಮಿನಲ್ ಮಾನನಷ್ಟ ಮೊಕದ್ದಮೆಯ ವಿಚಾರಣೆ ವೇಳೆ ವಿಶೇಷ ನ್ಯಾ. ಅಮೋಲ್ ಶಿಂಧೆ ಅವರಿದ್ದ ಪೀಠದ ಮುಂದೆ ಅವರು ಈ ಹೇಳಿಕೆ ನೀಡಿದ್ದಾರೆ. ರಾಹುಲ್ ಗಾಂಧಿ ಪರ ವಕೀಲ ಮಿಲಿಂದ್ ಪವಾರ್ ಅವರು ಸಾತ್ಯಕಿ ಅವರ ವಿಚಾರಣೆ ನಡೆಸಿದರು. ಅದೇ ಕಾಲದ ಕ್ರಾಂತಿಕಾರಿಗಳಾದ ರಾಜಗುರು, ಬಟುಕೇಶ್ವರ ದತ್ ಕ್ಷಮಾದಾನ ಅರ್ಜಿ ಸಲ್ಲಿಸಿರಲಿಲ್ಲ ಎಂಬುದನ್ನು ಸಾತ್ಯಕಿ ಕೋರ್ಟ್‌ನಲ್ಲಿ ಒಪ್ಪಿಕೊಂಡಿದ್ದಾರೆ.

''ಭಗತ್ ಸಿಂಗ್ ಮತ್ತು ಬಟುಕೇಶ್ವರ ದತ್ ಬ್ರಿಟಿಷ್ ಆಡಳಿತಕ್ಕೆ ಅರ್ಜಿ ಸಲ್ಲಿಸಿ ತಮ್ಮನ್ನು ಯುದ್ಧ ಕೈದಿಗಳಂತೆ ಪರಿಗಣಿಸಬೇಕು ಎಂದು ಕೋರಿದ್ದರು ಹಾಗೂ ಯಾವುದೇ ರಿಯಾಯಿತಿ ಅಥವಾ ದಯಾ ಕ್ರಮಗಳನ್ನು ನಿರಾಕರಿಸಿದ್ದರು ಎಂಬುದು ನನಗೆ ತಿಳಿದಿರಲಿಲ್ಲ, ಆದರೆ ಅವರು ಕೊನೆಯವರೆಗೂ ತಮ್ಮ ತತ್ವ ಮತ್ತು ಸಿದ್ಧಾಂತಗಳಲ್ಲಿ ದೃಢವಾಗಿ ನಿಂತಿದ್ದರು. ಬ್ರಿಟಿಷರೊಂದಿಗೆ ನಡೆಸಿದ ವ್ಯವಹಾರಗಳಲ್ಲಿಯೂ ಅವರು ರಾಜಿ ಮಾಡಿಕೊಂಡಿರಲಿಲ್ಲ ಎಂಬುದು ನಿಜ,'' ಎಂದೂ ಸಾತ್ಯಕಿ ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಸಾವರ್ಕರ್ ಸಲ್ಲಿಸಿದ್ದ 10 ಕ್ಷಮಾದಾನ ಅರ್ಜಿಗಳ ದಾಖಲೆಗಳು ಸರಕಾರಿ ದಾಖಲೆಗಳಲ್ಲಿ ಲಭ್ಯವಿವೆ ಎಂದು ಸಾತ್ಯಕಿ ಹೇಳಿದ್ದಾರೆ.

ಬಾಂಬರ್ ಪತನ: 8 ಮಂದಿ ಸಾವು

ವಾಷಿಂಗ್ಟನ್: ಅಮೆರಿಕ ವಾಯುಪಡೆಯ ಬಿ-52 ಬಾಂಬರ್ ವಿಮಾನ ಜೂನ್ 15ರ ಸೋಮವಾರ ಬೆಳಗ್ಗೆ ಟೇಕಾಫ್ ಆದ ಕೆಲವೇ ನಿಮಿಷಗಳಲ್ಲಿ ಪತನಗೊಂಡಿದ್ದು, ಅದರಲ್ಲಿದ್ದ ಎಲ್ಲ 8 ಸಿಬ್ಬಂದಿ ಮೃತಪಟ್ಟಿದ್ದಾರೆ. ದಕ್ಷಿಣ ಕ್ಯಾಲಿಫೋರ್ನಿಯಾದ ವಾಯು ನೆಲೆಯಿಂದ ವಿಮಾನ ದೈನಂದಿನ ಪರೀಕ್ಷಾ ಕಾರ್ಯಾಚರಣೆ ಭಾಗವಾಗಿ ಸ್ಥಳೀಯ ಕಾಲಮಾನ ಬೆಳಗ್ಗೆ 11.20ಕ್ಕೆ ಟೇಕಾಫ್ ಆಯಿತು. ಟೇಕಾಫ್ ಆದ ಕೆಲವೇ ನಿಮಿಷಗಳಲ್ಲಿ ಲಾಸ್ ಏಂಜಲೀಸ್‌ನ ಈಶಾನ್ಯಕ್ಕಿರುವ ಮಿಲಿಟರಿ ನೆಲೆಯ ಸಮೀಪ ಪತನವಾಗಿದೆ.

ಬೆಸ್ಕಾಂ BESCOM

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)

ಟೆಂಡರ್‌ಪ್ರಕಟಣೆ (KPP ಪೋರ್ಟಲ್ ಮೂಲಕ ಮಾತ್ರ)

ಬೆವಿಕಂ, ಟೆಂಡರ್ ನಿರ್ದಿಷ್ಟತೆಯ ಪ್ರಕಾರ ಕೆಪಿಪಿ ಪೋರ್ಟಲ್ ಮೂಲಕ 11 ಕೆವಿ ಸ್ಟ್ರಕ್ಚರಲ್ ಮೆಟೀರಿಯಲ್ಸ್ (ಜಿಐ) ಪೂರೈಕೆಗಾಗಿ ಟೆಂಡರ್ ಆಹ್ವಾನಿಸಿದೆ.

ಕ್ರ.ಸಂ.	ಇಂಡೆಂಟ್ ಸಂಖ್ಯೆ	ಟೆಂಡರ್ ವಿವರ
1	ಬೆಸ್ಕಾಂ/2026-27/ಐಎನ್‌ಡಿ0265	25/63/100 ಕೆವಿಎ ಜಿಐಗಾಗಿ ಡಬಲ್ ಪೋಲ್ ಟಿಸಿ ಸೆಟ್
2	ಬೆಸ್ಕಾಂ/2026-27/ಐಎನ್‌ಡಿ0266	11 ಕೆವಿ ಹೆಚ್- ಫ್ರೇಮ್‌ಗಳ ಪೂರೈಕೆ
3	ಬೆಸ್ಕಾಂ/2026-27/ಐಎನ್‌ಡಿ0267	ಆರ್‌ಸಿಸಿ/ಪಿಎಸ್‌ಸಿಸಿ ಪೋಲ್‌ಗಳಿಗಾಗಿ ಡಿಪಿ ಸೆಟ್ 2 ಪೋಲ್ ಸ್ಟ್ರಕ್ಚರ್‌ಕಿಟ್-ಜಿಐ

ಬಿಡ್ ದಸ್ತಾವೇಜುಗಳ ಲಭ್ಯತೆ: 17.06.2026. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.07.2026, 17.00 ಗಂಟೆವರೆಗೆ. ಬಿಡ್ ದಸ್ತಾವೇಜುಗಳನ್ನು ತೆರೆಯುವ ದಿನಾಂಕ: 17.07.2026, 17.15 ಗಂಟೆಗೆ.

ಟೆಂಡರ್ ದಸ್ತಾವೇಜುಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in** ನಿಂದ ಪಡೆಯಬಹುದು. ಆಸಕ್ತಿಯುಳ್ಳ ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು. ಸಹಾಯಕ್ಕಾಗಿ ಬಿಡ್ಡುದಾರರು ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: **+91-8046010000, +91-8068948777**ಗೆ ಸಂಪರ್ಕಿಸಿ ಅಥವಾ ಇ-ಮೇಲ್: **support@eprochelpdesk.com**ಗೆ ಭೇಟಿ ನೀಡಿ.

ಸಹಿ/- ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿದ್ಯುತ್), ಪ್ರೊಕ್ಯೂರ್‌ಮೆಂಟ್, ಬೆವಿಕಂ, 2ನೇ ಮಹಡಿ, ಕೆ.ಆರ್. ಸರ್ಕಲ್, ಬೆಂಗಳೂರು-560 001, ದೂ.ಸಂ.: 080-22354939.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಶ್ರೀ ದೇವರಾಜ ಅರಸ್ ಬಡಾವಣೆ, ಟಮಕ, ಕೋಲಾರ-563 103
E-Mail:bnuregevl@karnataka.gov.in
web: www.bnu.karnataka.gov.in
ದಿನಾಂಕ: 15.06.2026

ಇ-ಟೆಂಡರ್ ಅಧಿಸೂಚನೆ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ ಇಲ್ಲಿಗೆ ಈ ಕೆಳಕಂಡಂತೆ ವಿವಿಧ ಪ್ರಕ್ರಿಯೆಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. (1) ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ 6ನೇ ಘಟಿಕೋತ್ಸವದ ಅಂಗವಾಗಿ ಪರೀಕ್ಷಾ ವಿಭಾಗಕ್ಕೆ **ಗೋಲ್ಡ್ ಮೆಡಲ್** ಸರಬರಾಜು ಮಾಡುವ ಬಗ್ಗೆ. **ಟೆಂಡರ್‌ನಂ: BNU/2026-27/IND0068.** (2) ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರದ ಪರೀಕ್ಷಾ ವಿಭಾಗಕ್ಕೆ **Kora Cloth Bag** ಗಳನ್ನು ಸರಬರಾಜು ಮಾಡುವ ಬಗ್ಗೆ. **ಟೆಂಡರ್‌ನಂ: BNU/2026-27/IND0069** ಕರ್ನಾಟಕ ಪಾರದರ್ಶಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಕಾಯ್ದೆಯಡಿಯಲ್ಲಿ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಇಲಾಖೆಯಲ್ಲಿ ನೋಂದಾಯಿತ ಸಂಸ್ಥೆಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು **ಟೆಂಡರ್ ದಾಖಲೆಗಳನ್ನು ದಿನಾಂಕ: 12.06.2026** ರಿಂದ **http://kppp. karna taka.gov.in ವೆಬ್‌ಸೈಟ್ ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು**. ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಸಚಿವರು ಮೌಲ್ಯಮಾಪನ ಕಛೇರಿಯನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/- ಕುಲಸಚಿವರು(ಮೌ)
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಟಮಕ, ಕೋಲಾರ-563103
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:121/ಕೆಎಸ್‌ಎಂಸಿಎ/2026-27

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿ. KSMC
(ಕರ್ನಾಟಕ ಸರ್ಕಾರದ ಉದ್ಯಮ)
ಆಡಳಿತ ಕಛೇರಿ: 'ಎ' ಬ್ಲಾಕ್, 5ನೇ ಮಹಡಿ, ಟಿಟಿಎಂಸಿ ಕಟ್ಟಡ, ಬಿಎಂಟಿಸಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು - 560 027.
ದೂರವಾಣಿ: 080-22278813/14/15/16, ಫ್ಯಾಕ್ಸ್: 080-22213172
ವೆಬ್‌ಸೈಟ್:www.ksmc.karnataka.gov.in

ಟೆಂಡರ್ ನಂ:ಕೆಎಸ್‌ಎಂಸಿಎಲ್/2026-27/ಎಸ್‌ಇ0064/ಕಾಲ್-3

ಮಾರಾಟ ಗುತ್ತಿಗೆದಾರರನ್ನು ನೇಮಕ ಮಾಡಲು ಇ-ಹರಾಜು ಪ್ರಕಟಣೆ

ಕರ್ನಾಟಕ ಸ್ಟೇಟ್ ಮಿನರಲ್ ಕಾರ್ಪೋರೇಷನ್ ಲಿಮಿಟೆಡ್ (ಕೆಎಸ್‌ಎಮ್‌ಸಿಎಲ್) ಸಂಸ್ಥೆಯು ಬೆಂಗಳೂರು ದಕ್ಷಿಣ ಜಿಲ್ಲೆಯ ದೊಡ್ಡಮುದವಾಡಿ ಶಿಲಾ ಗಣಿಯಲ್ಲಿ ಉತ್ಪಾದನಾ ಗುತ್ತಿಗೆದಾರರು ಉತ್ಪಾದಿಸಿದ ಶಿಲಾ ದಿಮ್ಮಿಗಳನ್ನು ಮಾರಾಟ ಮಾಡಲು ಮಾರಾಟ ಗುತ್ತಿಗೆದಾರರನ್ನು ನೇಮಕ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮುಖಾಂತರ ಇ-ಟೆಂಡರ್ ಆಹ್ವಾನಿಸಲಾಗಿದೆ.
ಆಸಕ್ತಿ ಹೊಂದಿರುವವರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ (https://kppp.karnataka.gov.in) ನಿಂದ ಇ-ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಯಾವುದೇ ಸಹಾಯಕ್ಕಾಗಿ ದಯವಿಟ್ಟು ಸಂಪರ್ಕಿಸಿ: ಮೊ.ಸಂಖ್ಯೆ:- **9448510684 & 9620558595 / 8073422957.**

ಸಹಿ/-
ಪ್ರಧಾನ ವ್ಯವಸ್ಥಾಪಕರು (ಮಾರುಕಟ್ಟೆ)
ಡಿಐಪಿಆರ್/ಸಿಪಿ/1185/ಸಿಸಿಎಲ್/2026-27

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಇ-(ಐಆರ್‌ಇಪಿಎಸ್) ಟೆಂಡರು ಸೂಚನೆ ಸಂ.: 10 UBL 2026-27 ದಿನಾಂಕ: 09.06.2026

ಕ್ರಸಂ	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
1	**ಹುಬ್ಬಳ್ಳಿ ವಿಭಾಗ: ಲೋಂಡಾ-ಮೀರಜ್ (ಎಲ್‌ಡಿ-ಎಂಆರ್‌ಜೆ):** ಲೋಂಡಾ - ಮೀರಜ್ (ಎಲ್‌ಡಿ-ಎಂಆರ್‌ಜೆ) ವಿಭಾಗದಲ್ಲಿ 1) ಗುಂಜಿ-ಖಾನಾಪುರ (ಜಿಎನ್‌ಜೆ-ಕೆಎನ್‌ಪಿ) ನಡುವೆ ಬ್ರಿಡ್ಜ್ ನಂ. 44 @ ಕಿಮೀ. 583/700-900, ಸ್ಪಾನ್ 10 x 6.10 ಮೀ. + 3 x 9.10 ಮೀ. ಮತ್ತು 2) ಕುಡಚಿ - ಉಗರ್‌ಖುರ್ದ್ (ಕೆಯುಡಿ-ಯುಜಿಆರ್) ನಡುವೆ ಬ್ರಿಡ್ಜ್ ನಂ. 184 @ ಕಿಮೀ. 716/00-900, ಸ್ಪಾನ್ 14 x 45.72 ಮೀ. ರಲ್ಲಿ 2026-27 ಮತ್ತು 2027-28 ರ 2 ವರ್ಷಗಳ ಕಾಲದ ಮಾನ್ಸೂನ್ ಅವಧಿಯ ಕಾಲದಲ್ಲಿ ಹಾಗೂ ನಂತರದಲ್ಲಿ ಹೈಡ್ರೋಮೆಟರೋಲಾಜಿಕಲ್ ದತ್ತಾಂಶದ ಸಂಗ್ರಹಣಾ ಕಾಮಗಾರಿ.	ರೂ. 48,87,848/-
2	**ಹುಬ್ಬಳ್ಳಿ ವಿಭಾಗ: ಲೋಂಡಾ-ಮೀರಜ್ (ಎಲ್‌ಡಿ-ಎಂಆರ್‌ಜೆ):** ಕಿಮೀ. 553/400 ರಿಂದ 557/200 ಮತ್ತು 579/200 ರಿಂದ 579/400 ನಡುವೆ ಬ್ರಿಡ್ಜ್ ಸಂ. 86, 87, 88, 90, 91 ಮತ್ತು 34 ರಲ್ಲಿ ನದಿಗಳ ಪ್ರವಾಹದಿಂದ ತಪ್ಪಿಸಲು ಬ್ರಿಡ್ಜ್ ಮತ್ತು ದಡಗಳಲ್ಲಿ ಮಾಡಬೇಕಾದ ಸುರಕ್ಷತಾ ಕಾಮಗಾರಿಳು.	ರೂ. 8,78,95,804/-
3	**ಹುಬ್ಬಳ್ಳಿ ವಿಭಾಗ: ಉಪ ಕಾಮಗಾರಿ-1: ಲೋಂಡಾ-ವಾಸ್ಕೋ-ಡ-ಗಾಮಾ (ಎಲ್‌ಡಿ-ವಿಎಸ್‌ಜಿ) ವಿಭಾಗ:** ಲೋಂಡಾ-ತಾವರಗಟ್ಟಿ (ಎಲ್‌ಡಿ-ಟಿಜಿಟಿ) ನಡುವೆ ಕ್ರಮವಾಗಿ ಬಾಕ್ಸ್ ಪುಶಿಂಗ್ ಮಾದರಿಯ ಮೂಲಕ ಎಲ್‌ಸಿ ನಂ. 06 @ ಕಿಮೀ. 10/200-300 ಕ್ಕೆ ಬದಲಾಗಿ ಆರ್‌ಯುಬಿ ಯ ನಿರ್ಮಾಣ. **ಉಪ ಕಾಮಗಾರಿ-2: ಲೋಂಡಾ-ವಾಸ್ಕೋ-ಡ-ಗಾಮಾ (ಎಲ್‌ಡಿ-ವಿಎಸ್‌ಜಿ) ವಿಭಾಗ:** ತಾವರಗಟ್ಟಿ ಯಾರ್ಡ್‌ನಲ್ಲಿ ಕ್ರಮವಾಗಿ ಬಾಕ್ಸ್ ಪುಶಿಂಗ್ ಮಾದರಿಯ ಮೂಲಕ ಎಲ್‌ಸಿ ನಂ. 07 @ ಕಿಮೀ. 12/0-100 ಕ್ಕೆ ಬದಲಾಗಿ ಆರ್‌ಯುಬಿ ಯ ನಿರ್ಮಾಣ.	ರೂ. 11,43,66,812/-
4	**ಹುಬ್ಬಳ್ಳಿ ವಿಭಾಗ:** ಭೈರಿದೇವರಕೊಪ್ಪ (ಬಿಡಿಕೆಎ) ಮತ್ತು ನವಲೂರ (ಎನ್‌ವಿಯು) ಯಾರ್ಡ್‌ಗಳಲ್ಲಿ ಸೆಸ್ ಬಾಲಾಸ್ಟ್ ಸಂಗ್ರಹಣೆ.	ರೂ. 1,34,76,055/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **09.07.2026, 11:00 ಗಂಟೆಯವರೆಗೆ**

ಇ-(ಐಆರ್‌ಇಪಿಎಸ್) ಟೆಂಡರು ಸೂಚನೆ ಸಂ.: 11 UBL 2026-27 ದಿನಾಂಕ: 10.06.2026

ಕ್ರಸಂ.	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
1	**ಹುಬ್ಬಳ್ಳಿ ವಿಭಾಗ: ಲೋಂಡಾ-ಮೀರಜ್ (ಎಲ್‌ಡಿ-ಎಂಆರ್‌ಜೆ) ವಿಭಾಗ:** ಸುಳಧಾಳ-ಪಚ್ಚಾಪುರ (ಎಸ್‌ಯುಎಲ್-ಪಿಸಿಹೆಚ್) ನಿಲ್ದಾಣಗಳ ನಡುವೆ ಕ್ರಮವಾಗಿ ಏರ್/ಬಾಕ್ಸ್ ಪುಶಿಂಗ್ ಮಾದರಿಯ ಮೂಲಕ ಎಲ್‌ಸಿ ನಂ. 413 @ ಕಿಮೀ. 643-300-400 ಕ್ಕೆ ಬದಲಾಗಿ ಆರ್‌ಯುಬಿ ಯ ನಿರ್ಮಾಣ.	ರೂ. 6,24,02,121/-
2	**ಹುಬ್ಬಳ್ಳಿ ವಿಭಾಗ:** ಸಹಾಯಕ ವಿಭಾಗೀಯ ಇಂಜಿನಿಯರ್/ಪ್ರಕ/ವ್ಯಾಪ್ತಿಯಲ್ಲಿ ಒಂದು ವರ್ಷದ ಅವಧಿಗೆ ಪಿವಿಸಿ ಟ್ಯಾಂಕ್‌ಗಳು, ಜಿಎಲ್‌ಆರ್‌ಗಳು ಮತ್ತು ಓಹೆಚ್‌ಟಿಗಳ ಶುದ್ಧೀಕರಣ.	ರೂ. 35,92,849/-
3	**ಹುಬ್ಬಳ್ಳಿ ವಿಭಾಗ:** ವರಿಷ್ಠ ವಿಭಾಗೀಯ ಇಂಜಿನಿಯರ್/ಪಶ್ಚಿಮ/ವ್ಯಾಪ್ತಿಯಲ್ಲಿ ಬರುವ ನಿಲ್ದಾಣಗಳಲ್ಲಿ ಟ್ರ್ಯಾಕ್ಸೈಲ್ ಪಾಥ್‌ನ ವ್ಯವಸ್ಥೆ.	ರೂ. 1,82,00,827/-
4	**ಹುಬ್ಬಳ್ಳಿ ವಿಭಾಗ:** ವರಿಷ್ಠ ವಿಭಾಗೀಯ ಇಂಜಿನಿಯರ್/ಪ್ರ.ಕ./ವ್ಯಾಪ್ತಿಯಲ್ಲಿ ಬರುವ ನಿಲ್ದಾಣಗಳಲ್ಲಿ ಟ್ರ್ಯಾಕ್ಸೈಲ್ ಪಾಥ್‌ನ ವ್ಯವಸ್ಥೆ.	ರೂ. 69,68,597/-
5	**ಹುಬ್ಬಳ್ಳಿ ವಿಭಾಗ:** ವರಿಷ್ಠ ವಿಭಾಗೀಯ ಇಂಜಿನಿಯರ್/ಕೇಂದ್ರ/ವ್ಯಾಪ್ತಿಯಲ್ಲಿ ಬರುವ ನಿಲ್ದಾಣಗಳಲ್ಲಿ ಟ್ರ್ಯಾಕ್ಸೈಲ್ ಪಾಥ್‌ನ ವ್ಯವಸ್ಥೆ.	ರೂ. 2,20,23,892/-
6	**ಹುಬ್ಬಳ್ಳಿ ವಿಭಾಗ: ಹೆಬಸೂರ :** 02 ಹೆಚ್ಚುವರಿ ಲೂಪ್ ಲೈನುಗಳ ವ್ಯವಸ್ಥೆ:	ರೂ. 10,64,12,687/-
7	**ಹುಬ್ಬಳ್ಳಿ ವಿಭಾಗ:** ವರಿಷ್ಠ ವಿಭಾಗೀಯ ಇಂಜಿನಿಯರ್/ಪೂರ್ವ/ವ್ಯಾಪ್ತಿಯಲ್ಲಿ ಬರುವ ನಿಲ್ದಾಣಗಳಲ್ಲಿ ಟ್ರ್ಯಾಕ್ಸೈಲ್ ಪಾಥ್‌ನ ವ್ಯವಸ್ಥೆ.	ರೂ. 1,75,19,578/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **10.07.2026, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

PUB/205/AAF/PRB/SWR/2026-27 ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಹುಬ್ಬಳ್ಳಿ

ಸುಲಭ ಟಿಕೆಟ್ ಬುಕಿಂಗ್, **PNR** ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು

ಟೆಂಡರ್ ಪ್ರಕಟಣೆ - ಕೆ.ಪಿ.ಪಿ. ಪೋರ್ಟಲ್ ಮುಖಾಂತರ

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂ: ಕಾಸಮಂ/ತಾ.ಶಾ./ಸ.ಇ./ಟೆಂಡರ್-09/2026/1665 ದಿ: 16.06.2026

ಉಲ್ಲೇಖಿತ ಪ್ರಕಟಣೆಯನ್ವಯ ಆಹ್ವಾನಿಸಲಾದಂತೆ ಉಡುಪಿ ಜಿಲ್ಲೆಯ ಕಾಮಗಾರಿಗಳಿಗೆ ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲ್ಯೂನಲ್ಲಿರುವ ಕಲಂನನ್ವಯ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ https://kppp.karnataka.gov.in ನಲ್ಲಿ ಅರ್ಹ ಗುತ್ತಿಗೆದಾರರಿಂದ ದಿ: 01.07.2026ರ ಸಂಜೆ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್‌ದಾರರು ಕರ್ನಾಟಕ ಸರಕಾರದ ಕೆ.ಪಿ.ಪಿ. ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ ಮುಖಾಂತರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಪಡೆಯಬಹುದಾಗಿದೆ. (Download) ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಪಡೆಯಬಹುದು. (ದೂರವಾಣಿ ಸಂ: 0824-2440720)

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಗಳೂರು
DIPR/DK/KSMCA/379/26-27 dt. 16.06.2026

SHRI HALASIDHANATH CO-OPERATIVE SUGAR FACTORY LTD
Shankaranand Nagar, Nipani- 591237 Dist: Belagavi (Karnataka)
Phone: 9036754225 E mail: hsskpch@gmail.com

NO: HSSK/PCH/26-27/817 Date: 16-06-2026

TENDER NOTIFICATION

Sealed tenders are invited in TWO COVERS, Ist Cover-Technical and IInd Cover-Price Bid system for the following from reputed bidders for

SN	Items	Tender Fee
1	DESIGN, MANUFACTURE, SUPPLY, ERECTION & COMM--ISSIONING OF 12TPD COMPRESSED BIO GAS PLANT ON TURN KEY BASIS BY USING RAW MATERIAL AS SUGAR PRESSMUD, NAPIER GRASS & SPENT WASH	Rs.10,000/-

Terms & Conditions:

1. The bid documents can be obtained after visiting the job site in factory for studying the existing quantum of job work from the Office of Shri Halasidhanath Co-operative Sugar Factory Ltd; (Multi-state). Tal: Nipani. Dist: Belagavi during working hours from 18/06/2026 to 27/06/2026 on submission of above prescribed non-refundable tender fees by means of Demand Draft or by ON LINE mode after remittance of tender fee through RTGS/NEFT.
2. The last date for submission of Ist cover (Technical) is 30/06/2026 and IInd cover (Commercial) tender is after Technical bid completion along with EMD at 1% of the quoted value of the each tender in the form of Demand Draft / RTGS / NEFT.
3. Technical Pre-Bid meeting will be held conveniently before submission of completed tenders and the date will be separately intimated.
4. The bidder should enclose Tender Form fee and EMD by means of demand draft/RTGs/NEFT only drawn on any Nationalized Bank in favour of the Managing Director, Shree Halasidhanath S.S.K.Ltd., Nipani payable at Nipani.
5. The bidder should send their technical clarifications/ queries, if any by e-mail to hsskdistilley@gmail.com, gm.halasugar@gmail.com and hsskpch@gmail.com Mobile Nos.9036754221/ 9036754213/ 9036754225 / 8762685519.

The management reserves the right to accept or reject any or all the tenders without assigning any reasons whatsoever.

Sd/- (Appasaheb A.Shiragave)
Managing Director

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. CAO/CN/BNC/186/2026, ದಿನಾಂಕ: 09.06.2026

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
ಕೋಟೆಗಂಗೂರು ಯಾರ್ಡ್‌ನಲ್ಲಿ ತ್ವರಿತ ಕೋಚ್ ವಾಟರಿಂಗ್ ಸಿಸ್ಟಮ್‌ಅನ್ನು ಸ್ಥಾಪನೆ ಮಾಡಲು ಸಿವಿಲ್ ಮತ್ತು ಸಾಮಾನ್ಯ ಎಲೆಕ್ಟ್ರಿಕಲ್‌ನ ಸಂಯುಕ್ತ ಕಾಮಗಾರಿ. (ಟೆಂಡರು ಉಲ್ಲೇಖ ಸಂಖ್ಯೆ: KGH-DEPOT-04)	ರೂ. 3,68,32,693/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **02.07.2026, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ ಬೆಂಗಳೂರು ಕಂಟೋನ್ಮೆಂಟ್
PUB/202/AAF/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, **PNR** ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಇ-ಟೆಂಡರ್ ಸೂಚನೆ ಸಂಖ್ಯೆ 04/2027/ಎಸ್‌ಬಿಸಿ ದಿನಾಂಕ: 11.06.2026

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗೆ ಸಹಿ ಮಾಡಿರುವವರು ಈ ಕೆಳಗಿನ ಕೆಲಸಕ್ಕಾಗಿ ಇ-ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ.ಸಂ.	ಟೆಂಡರ್ ಸಂಖ್ಯೆ	ಸಂಕ್ಷಿಪ್ತ ವಿವರಣೆ (ಇ-ಮುಕ್ತ ಟೆಂಡರ್)	ಪ್ರಮಾಣ	ಘಟಕ
1	ಎಲ್ 8265924	ಎಸ್‌ಎಸ್ ಬೋಲ್ಟ್ ನಟ್ ಮತ್ತು ವಾಷರ್ ಸಂಪೂರ್ಣ ಅಸೆಂಬ್ಲಿಯೊಂದಿಗೆ ಸಮಾನಾಂತರ ಕ್ಲಾಂಪ್ (ಆರ್‌ಐ ಸಂಖ್ಯೆ 1031-3) ಪೂರೈಕೆ.	16000	ಸೆಟ್
		ಸರಬರಾಜು ವಸ್ತುವಿನ ವಿವರಣೆ: ಸಮಾನಾಂತರ ಕ್ಲಾಂಪ್ ಪೂರೈಕೆ (157-65/107/150) (ಆರ್‌ಐ ಸಂಖ್ಯೆ.1031-3) ಸಂಪೂರ್ಣ ಅಸೆಂಬ್ಲಿ	1000	ಸೆಟ್

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08-07-2026 ರಂದು 10.30 ಗಂಟೆಗಳವರೆಗೆ**

ಹೆಚ್ಚಿನ ಮಾಹಿತಿಗಳಿಗಾಗಿ: **www.ireps.gov.in** ಲಾಗಿನ್ ಮಾಡಿ

ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು, ಬೆಂಗಳೂರು
ಪಿಯುಬಿ/212/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯೂ ಆರ್/2026-27

ಸುಲಭ ಟಿಕೆಟ್ ಬುಕಿಂಗ್, ಪಿಎನ್‌ಆರ್ ಸ್ಥಿತಿ ಪರಿಶೀಲನೆ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | @SWRAILWAYHQ | @sw_railways

ಕರ್ನಾಟಕ ಸರಕಾರ (ಕರ್ನಾಟಕ ಸರ್ಕಾರದ ಸ್ವಾಯುತ್ತ ಸಂಸ್ಥೆ)
ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ಹಿಂದಿನ ಹೆಸರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ ಮುಳಗುಂದ ರಸ್ತೆ, ಮಲ್ಲಸಮುದ್ರ, ಗದಗ-582103 ದೂರವಾಣಿ ಸಂಖ್ಯೆ: 08372-200601
E-mail ID : gimsgadag@gmail.com
web : www.gimsgadag.karnataka.gov.in
File No : KHPIMS/Tender/Cost Per Test/20/2026-27/35
Date : 16.06.2026

ಇ-ಟೆಂಡರ ಪ್ರಕಟಣೆ

ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಜೀವ ರಸಾಯನ ವಿಭಾಗಕ್ಕೆ Biochemistry Analyser Reagents Cost Per Reportable Test Reagent Rental Basis ಮುಖಾಂತರ ವೈದ್ಯಕೀಯ ಪ್ರಯೋಗ ಶಾಲಾ ಪರೀಕ್ಷೆಗಳಿಗಾಗಿ ಬಾಡಿಗೆ ಆದಾರದ ಮೇಲೆ ಸರಬರಾಜುವಿಗಾಗಿ ಕರೆದ ಟೆಂಡರ ಆಸಕ್ತಿಯುಳ್ಳ ಸಂಘ-ಸಂಸ್ಥೆಗಳಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಮರು ಟೆಂಡರ ಕರೆಯಲಾಗಿದ್ದು, ದಿನಾಂಕ : **17.06.2026** ರಿಂದ ದಿನಾಂಕ : **01.07.2026**ರ ಸಾಯಂಕಾಲ 4:00 ಗಂಟೆವರೆಗೆ ಇ-ಪೋರ್ಟಾಲ್ ಸಂಖ್ಯೆ:DME/2026-27/IND2076 (https://kppp.Karnataka .gov.in/)ನಲ್ಲಿ ಟೆಂಡರ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ತವ್ಯದ ದಿನಗಳಲ್ಲಿ ಕೆಳಗಡೆ ಸಹಿ ಮಾಡಿದವರ ಕಛೇರಿಗೆ ಸಂಪರ್ಕಿಸಬಹುದು.

ಸಹಿ/- ನಿರ್ದೇಶಕರು
ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ವಾಸಾಸಂಇ/ಗದಗ/122/ಕೆಎಸ್‌ಎಂಸಿಎ/2026-27

ದಾವಣಗೆರೆ ದೃಶ್ಯಕಲಾ ಸಂಸ್ಥೆ ಬಿವಿಎ ಪ್ರವೇಶಕ್ಕೆ ಅರ್ಜಿ

ದಾವಣಗೆರೆ: ಬೆಣ್ಣೆ ನಗರಿ ದಾವಣಗೆರೆಯ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ 2026–27ನೇ ಸಾಲಿನ ಬ್ಯಾಚಲರ್ ಆಫ್ ವಿಷ್ಯುವಲ್ ಆರ್ಟ್ಸ್ (ಬಿವಿಎ) ಕೋರ್ಸ್‌ಗಳ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಪಿಯುಸಿ ಪಾಸಾದವರು ಅರ್ಜಿ ಸಲ್ಲಿಸಬಹುದು.

ಪದವಿ ಕೋರ್ಸ್ ಒಟ್ಟು 4 ವರ್ಷದಲ್ಲಿ 8 ಸೆಮಿಸ್ಟರ್‌ಗಳನ್ನು ಹೊಂದಿರುತ್ತದೆ. ಒಂದು ವರ್ಷದ ಫೌಂಡೇಷನ್ ನಂತರ ಬಿವಿಎ ಪೇಂಟಿಂಗ್, ಬಿವಿಎ ಅನ್ವಯಿಕ ಕಲಾ, ಬಿವಿಎ ಶಿಲ್ಪಕಲಾ ಹಾಗೂ ಬಿವಿಎ ಅನಿಮೇಷನ್ ವಿಭಾಗಗಳಲ್ಲಿ ಯಾವುದಾದರೂ ಒಂದು ವಿಭಾಗವನ್ನು ಆಯ್ಕೆ ಮಾಡಿಕೊಂಡು ಪದವಿ ಪಡೆಯಬಹುದು.

ಬಿವಿಎ ಪದವೀಧರರು ಇದೇ ಸಂಸ್ಥೆಯಲ್ಲಿ ಬಿವಿಎ ಪೇಂಟಿಂಗ್ ಹಾಗೂ ಬಿವಿಎ ಅನ್ವಯಿಕ ಕಲಾ ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿ, ನಂತರ ಪಿಎಚ್.ಡಿ ಅಧ್ಯಯನ ಮಾಡಲು ಕೂಡ ಅವಕಾಶವಿದೆ. ಮಹಾವಿದ್ಯಾಲಯದ ಕಲಾ ಗಂಗೋತ್ರಿ ಆವರಣದಲ್ಲಿ ಸುಸಜ್ಜಿತ ಕೊಠಡಿ, ಕಂಪ್ಯೂಟರ್ ಲ್ಯಾಬ್, ಗ್ರಂಥಾಲಯ, ಇಂಟರ್‌ನೆಟ್ ಸೌಲಭ್ಯ ಇವೆ. ಕಲಾ ಗ್ಯಾಲರಿ, ಬಯಲು ರಂಗಮಂದಿರ, ವಸತಿ ನಿಲಯಗಳೂ ಇವೆ.

ಬಿವಿಎ ಫೌಂಡೇಷನ್ ಶುಲ್ಕ 8,669 ರೂಪಾಯಿ. ಅರ್ಜಿ ಸಲ್ಲಿಕೆಗೆ ಜೂನ್ 30 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ https://davangereuniversity.ac.in/fine-arts/

ಶಾಲೆ ಚಾವಣಿ ಕುಸಿತ

ಹುಬ್ಬಳ್ಳಿ: ತಾಲೂಕಿನ ಬಂಡಿವಾಡ ಗ್ರಾಮದಲ್ಲಿ ಬೀಸಿದ ಭಾರಿ ಗಾಳಿಗೆ ಸರಕಾರಿ ಶಾಲಾ ಕಟ್ಟಡದ ಚಾವಣಿ ಕುಸಿದಿದ್ದು, ಹಲವು ತಗಡಿನ ಶೀಟ್‌ಗಳು ಹಾರಿ ಹೋಗಿವೆ. ಈ ಘಟನೆ ಶಾಲಾ ಅವಧಿ ಮುಗಿದ ಬಳಿಕ ನಡೆದಿದ್ದು, ಮಕ್ಕಳು ಅಪಾಯದಿಂದ ಪಾರಾಗಿದ್ದಾರೆ. ಸೋಮವಾರ ಸಂಜೆ ಬೀಸಿದ ಭಾರಿ ಗಾಳಿಗೆ ಚಾವಣಿ ಶೀಟ್‌ಗಳು ಕೊಠಡಿಯೊಳಗೆ ಬಿದ್ದಿದ್ದರೆ, ಇನ್ನು ಕೆಲವು ನೂರಾರು ಮೀಟರ್ ದೂರ ಹಾರಿ ಹೋಗಿವೆ ಎಂದು ಗ್ರಾಮದ ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಎಲ್‌ಕೆಜಿಯಿಂದ 8ನೇ ತರಗತಿವರೆಗೆ ಅಂದಾಜು 200 ಮಕ್ಕಳು ಈ ಶಾಲೆಯಲ್ಲಿ ಓದುತ್ತಿದ್ದಾರೆ. ಶಾಲಾ ಅವಧಿ ಮುಗಿದ ಹತ್ತು ನಿಮಿಷಗಳಲ್ಲೇ ಹಠಾತ್ ಆಗಿ ಬಿರುಗಾಳಿಯಂತೆ ಗಾಳಿ ರಭಸವಾಗಿ ಬೀಸಿತು. ನೋಡ ನೋಡುತ್ತಿದ್ದಂತೆ ಶಾಲಾ ಚಾವಣಿ ತಗಡುಗಳು ಹಾರಿ ಹೋದವು. ಕೆಲವು ಕೊಠಡಿಯೊಳಗೆ ಬಿದ್ದಿವೆ.

ರಾಜ್ಯದಲ್ಲಿ 5 ದಿನ ಮಳೆ

ಬೆಂಗಳೂರು: ರಾಜ್ಯದ ಕೆಲ ಜಿಲ್ಲೆಗಳಲ್ಲಿ ಮಳೆ ಚುರುಕುಗೊಂಡಿದ್ದು, ಮುಂದಿನ ಐದು ದಿನಗಳ ಕಾಲ ವಿವಿಧ ಜಿಲ್ಲೆಗಳಲ್ಲಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಜೂ.17 ರಂದು ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ಸೂಚನೆಯಿದೆ. ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಕೆಲ ಭಾಗಗಳಲ್ಲಿ ಬಿರುಗಾಳಿ ಬೀಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಕಲಬುರಗಿ, ಬೀದರ್, ರಾಯಚೂರು, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಮಳೆಯಾಗುವ ನಿರೀಕ್ಷೆಯಿದೆ. ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಮತ್ತು ವಿಜಯನಗರ ಜಿಲ್ಲೆಯ ಕೆಲ ಭಾಗಗಳಲ್ಲಿ ಮಳೆಯಾಗುವ ನಿರೀಕ್ಷೆಯಿದೆ.

ಬೆಂಗಳೂರು ನಗರದಲ್ಲಿ ಮುಂದಿನ 48 ಗಂಟೆಗಳಲ್ಲಿ ಮೋಡ ಕವಿದ ವಾತಾವರಣವಿರಲಿದ್ದು, ಕೆಲ ಭಾಗಗಳಲ್ಲಿ ಹಗುರದಿಂದ ಮಧ್ಯಮ ಮಳೆಯಾಗುವ ನಿರೀಕ್ಷೆಯಿದೆ. ಗಂಟೆಗೆ 30 ರಿಂದ 40 ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದ್ದು, ಗರಿಷ್ಠ ಮತ್ತು ಕನಿಷ್ಠ ತಾಪಮಾನ 31 ಡಿಗ್ರಿ ಸೆಲ್ಸಿಯಸ್ ಹಾಗೂ 21 ಡಿಗ್ರಿ ಸೆಲ್ಸಿಯಸ್ ಇರಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಖಾಸಗಿ ವಿಡಿಯೊ–ಫೋಟೊ ಪ್ರಸಾರ, ಎಫ್‌ಐಆರ್‌ಗೆ ಮಾರ್ಗಸೂಚಿ | ಡಿಜಿಪಿ ಸಲೀಂ ಖಡಕ್ ಎಚ್ಚರಿಕೆ

ಡಿಜಿಟಲ್‌ನ ವಿಕೃತಿಗೆ ಬ್ರೇಕ್

■ **ವಿಕ ಸುದ್ದಿಲೋಕ** ಬೆಂಗಳೂರು

ವ್ಯಕ್ತಿಯ ಅನುಮತಿಯಿಲ್ಲದೆ ಖಾಸಗಿ ವಿಡಿಯೊ ಮತ್ತು ಫೋಟೊ ಪ್ರಕಟಿಸುವುದು ಅಥವಾ ಪ್ರಸಾರ ಮಾಡುವ ಪ್ರಕರಣಗಳಲ್ಲಿ ಪೊಲೀಸರು ತಡ ಮಾಡದೆ ತಕ್ಷಣವೇ ದೂರು ದಾಖಲಿಸುವ ಸಂಬಂಧ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ.ಎಂ.ಎ.ಸಲೀಂ ಏಕರೂಪ ಮಾರ್ಗಸೂಚಿ ಒಳಗೊಂಡ ಆದೇಶ ಹೊರಡಿಸಿದ್ದಾರೆ.

ಯಾವುದೇ ವ್ಯಕ್ತಿಯ ಖಾಸಗಿ ವಿಡಿಯೊ ಹಾಗೂ ಫೋಟೊಗಳನ್ನು ಅವರ ಅನುಮತಿಯಿಲ್ಲದೆ ಪ್ರಕಟಿಸುವ ಅಥವಾ ಪ್ರಸಾರ ಮಾಡುವ ಪ್ರಕರಣಗಳಿಗೆ ಸಂಬಂಧಿಸಿದಂತೆ ದೂರು ದಾಖಲಿಸಲು ಪೊಲೀಸರು ನಿರಾಕರಿಸುತ್ತಿರುವುದು, ವಿಳಂಬವಾಗಿ ದೂರು ದಾಖಲಿಸುತ್ತಿರುವುದು ಗಮನಕ್ಕೆ ಬಂದಿದೆ. ಸಂತ್ರಸ್ತರು ಮೊದಲು ಖಾಸಗಿ ಫೋಟೊ ಅಥವಾ ವಿಡಿಯೊಗಳ ಚಿತ್ರೀಕರಣಕ್ಕೆ ಒಪ್ಪಿಗೆ ನೀಡಿದ್ದರು ಎಂಬ ಕಾರಣ ಕೊಟ್ಟು ದೂರು ಸ್ವೀಕರಿಸದಿರುವುದು ಕಂಡು ಬಂದಿದೆ. ಆದರೆ, ವ್ಯಕ್ತಿಯು ನಿಯಮಾನುಸಾರ ಚಿತ್ರೀಕರಣಕ್ಕೆ ನೀಡಿದ ಒಪ್ಪಿಗೆಗೂ ಮತ್ತು ಇತರರಿಗೆ ಹಂಚಿಕೆ ಅಥವಾ ಪ್ರಸಾರಕ್ಕೆ ನೀಡುವ ಒಪ್ಪಿಗೆಗೂ ವ್ಯತ್ಯಾಸವಿದೆ ಎಂದು ಸಲೀಂ ಆದೇಶದಲ್ಲಿ ತಿಳಿಸಿದ್ದಾರೆ.

ಇಂತಹ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸದಿರುವುದು ಅಥವಾ ಪೂರ್ವಾನುಮತಿ ಎಂಬ ಕಾರಣ ಕೊಟ್ಟು ಎಫ್‌ಐಆರ್ ವಿಳಂಬ ಮಾಡಿದರೆ ಅದನ್ನು ಕರ್ತವ್ಯ ಲೋಪವೆಂದು ಪರಿಗಣಿಸಿ ಸಿಬ್ಬಂದಿ ವಿರುದ್ಧ ಶಿಸ್ತುಕ್ರಮ ಜರುಗಿಸುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

ಮಾರ್ಗಸೂಚಿ ಅಂಶಗಳು

- ಖಾಸಗಿ ಫೋಟೊ ಅಥವಾ ವಿಡಿಯೊ ಚಿತ್ರೀಕರಣಕ್ಕೆ ನೀಡಿದ ಒಪ್ಪಿಗೆ ಎಂದರೆ ಪ್ರಸಾರಕ್ಕೆ ನೀಡಿದ ಒಪ್ಪಿಗೆಯಲ್ಲ. ಬಿಎನ್‌ಎಸ್ ಸೆಕ್ಷನ್ 77ರ ವಿವರಣೆ 2ರ ಪ್ರಕಾರ ಖಾಸಗಿ ಫೋಟೊ ಅಥವಾ ವಿಡಿಯೊ ಸೆರೆ ಹಿಡಿಯಲು ಒಪ್ಪಿಗೆ ನೀಡಿದ್ದರೂ ಮೂರನೇ ವ್ಯಕ್ತಿಗಳಿಗೆ ಹಂಚಲು ಸಮ್ಮತಿಸದೆ ಅವು ಹಂಚಿಕೆಯಾಗಿದ್ದರೆ ಅದು ಅಪರಾಧ.
- ಮಾಹಿತಿ ತಂತ್ರಜ್ಞಾನ ಕಾಯಿದೆ 2000ರ ಸೆಕ್ಷನ್ 66(ಇ), 67 ಮತ್ತು 67(ಎ)ಗಳು ಲಿಂಗ ತಟಸ್ಥವಾಗಿದ್ದು, ಚಿತ್ರೀಕರಣಕ್ಕೆ ಪೂರ್ವಾನುಮತಿ ಇದ್ದರೂ ಅನುಮತಿಯಿಲ್ಲದ ಪ್ರಸಾರ ಮಾಡಿದರೆ ಮುಖ್ಯ ಅಪರಾಧವಾಗುತ್ತದೆ.
- ಮಹಿಳೆ ಖಾಸಗಿ ಕ್ರಿಯೆಯಲ್ಲಿ ತೊಡಗಿರುವಾಗ ಯಾರೂ ನೋಡಬಾರದೆಂಬ ನಿರೀಕ್ಷೆಯ ಪರಿಸ್ಥಿತಿಯಲ್ಲಿ ಆಕೆಯನ್ನು ನೋಡುವುದು, ಫೋಟೊ ಅಥವಾ ವಿಡಿಯೊ ಸೆರೆ ಹಿಡಿಯುವುದು, ಅವುಗಳನ್ನು ಪ್ರಸಾರ ಮಾಡುವುದು ಬಿಎನ್‌ಎಸ್ ಸೆಕ್ಷನ್ 77ರ ಪ್ರಕಾರ ಅಪರಾಧ. (ಇದು ಮಹಿಳಾ ಸಂತ್ರಸ್ತರಿಗೆ ಮಾತ್ರ ಅನ್ವಯ)
- ವ್ಯಕ್ತಿಯ ಖಾಸಗಿ ಅಂಗಗಳ ಫೋಟೊ ಅಥವಾ ವಿಡಿಯೊವನ್ನು ಅವರ ಅನುಮತಿಯಿಲ್ಲದೆ ಸೆರೆ ಹಿಡಿಯುವುದು, ಪ್ರಕಟಿಸುವುದು ಅಥವಾ ಪ್ರಸಾರ ಮಾಡುವುದು, ಗೌಪ್ಯತೆಯನ್ನು ಉಲ್ಲಂಘಿಸುವ ಸಂದರ್ಭಗಳಲ್ಲಿ ನಡೆದರೆ ಅದು ಮಾಹಿತಿ ತಂತ್ರಜ್ಞಾನ ಕಾಯಿದೆ ಸೆಕ್ಷನ್ 66ಇ ಪ್ರಕಾರ ಅಪರಾಧ.
- ಎಲೆಕ್ಟ್ರಾನಿಕ್ ರೂಪದಲ್ಲಿ ಅಶ್ಲೀಲ, ಕಾಮ ಉದ್ದೀಪನ ಅಥವಾ ಕಾಮ ಪ್ರಚೋದಕ ವಿಷಯ ಪ್ರಕಟಿಸುವುದು, ಪ್ರಸಾರ ಮಾಡುವುದು ಮಾಹಿತಿ ತಂತ್ರಜ್ಞಾನ ಕಾಯಿದೆ ಸೆಕ್ಷನ್ 67ರ ಅನ್ವಯ ಅಪರಾಧ.

ಕೊಡಗು ಜಿಲ್ಲೆಯ ಗೋಣಿಕೊಪ್ಪ ಸಮೀಪದ ತಿತಿಮತಿ ವಲಯ ಅರಣ್ಯ ವ್ಯಾಪ್ತಿಯ ಮೇಕೂರು- ಹೊಸ್ಕೇರಿ, ಬಾಡಗ- ಬಾಣಂಗಾಲ ಮತ್ತು ಘಟ್ಟದಳ್ಳ ಭಾಗದ ಕಾಫಿ ತೋಟಗಳಲ್ಲಿ ಬೀಡು ಬಿಟ್ಟಿದ್ದ 5 ಮರಿಯಾನೆಗಳು ಸೇರಿ 27 ಕಾಡಾನೆಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ಕಾಡಿಗಟ್ಟುವಲ್ಲಿ ಯಶಸ್ವಿಯಾದರು.

ಜಾತಿ ಗಣತಿ ವರದಿ ಬಹಿರಂಗ ಬೇಡ: ಹೈಕೋರ್ಟ್ ಸೂಚನೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಜಾತಿಗಳ ಆರ್ಥಿಕ, ಸಾಮಾಜಿಕ ಸಮೀಕ್ಷೆ ನಡೆಸಿ ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ವರದಿಯನ್ನು ಮುಚ್ಚಿದ ಲಕೋಟೆಯಿಂದ ತೆರೆಯದಂತೆ ಹೈಕೋರ್ಟ್ ಸರಕಾರಕ್ಕೆ ಸೂಚನೆ ನೀಡಿದೆ.

ಸಮೀಕ್ಷೆಯ ಸಿಂಧುತ್ವವನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಹಿರಿಯ ವಕೀಲ ಕೆ.ಎನ್.ಸುಬ್ಬಾರೆಡ್ಡಿ ಸೇರಿದಂತೆ ಹಲವು ಸಂಘಟನೆಗಳು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಮುಖ್ಯ ನ್ಯಾಯಮೂರ್ತಿ ಬಿಭು ಬಖ್ರು ಮತ್ತು ನ್ಯಾ. ಕೆ.ಎಸ್.ಹೇಮಲೇಖಾ ಅವರಿದ್ದ ವಿಭಾಗೀಯ ಪೀಠದ ಮುಂದೆ ಮಂಗಳವಾರ ವಿಚಾರಣೆಗೆ ಬಂದವು.

ಆಗ ಅರ್ಜಿದಾರರ ಪರ ವಕೀಲರು, ''ಹಿಂದುಳಿದ ವರ್ಗಗಳ ಆಯೋಗ ಸಮೀಕ್ಷಾ ವರದಿಯನ್ನು ಸರಕಾರಕ್ಕೆ ಸಲ್ಲಿಸಿದೆ. ಆದರೆ, ಹಿಂದೆ ನ್ಯಾಯಾಲಯ ದತ್ತಾಂಶದಲ್ಲಿ ಗೌಪ್ಯತೆ ಕಾಯ್ದುಕೊಳ್ಳಬೇಕು, ಯಾವುದೇ ಕಾರಣಕ್ಕೂ ಸೋರಿಕೆಯಾಗಬಾರದು ಮತ್ತು ದತ್ತಾಂಶ ಹಂಚಿಕೊಳ್ಳಬಾರದು ಎಂಬ ಆದೇಶವಿದ್ದರೂ ಆಯೋಗ ವರದಿ ಸಲ್ಲಿಸಿದ ಬಳಿಕ ದತ್ತಾಂಶ ಸೋರಿಕೆಯಾಗಿದೆ. ಹಾಗಾಗಿ, ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸರಕಾರಕ್ಕೆ ನಿರ್ದೇಶನ ನೀಡಬೇಕು,'' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಆದರೆ, ಅಡ್ವೊಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, ''ಹಿಂದುಳಿದ ವರ್ಗಗಳ ಆಯೋಗ ದತ್ತಾಂಶ ಹಂಚಿಕೊಂಡಿಲ್ಲ,'' ಎಂದು ನ್ಯಾಯಾಲಯಕ್ಕೆ ಸಮಜಾಯಿಷಿ ನೀಡಿದರು. ಆಗ ನ್ಯಾಯಪೀಠ ಸರಕಾರಕ್ಕೆ ಮುಚ್ಚಿದ ಲಕೋಟೆಯಲ್ಲಿರುವ ವರದಿ ತೆರೆಯದಂತೆ ಮೌಖಿಕ ಸೂಚನೆ ನೀಡಿ ವಿಚಾರಣೆಯನ್ನು ಆ.20ಕ್ಕೆ ಮುಂದೂಡಿತು.

ಅಕ್ರಮ ಮದ್ಯ ವಿರುದ್ಧ ಮಹಿಳೆಯರ ಸಮರ

ಹೊಳೆನರಸೀಪುರ (ಹಾಸನ): ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ದಂಧೆಯಿಂದ ಬೇಸತ್ತಿದ್ದ ಮಹಿಳಾ ಸಂಘದ ಸದಸ್ಯೆಯರು ರಾತ್ರೋರಾತ್ರಿ ಪೊಲೀಸರಿಗೆ ಮಾಹಿತಿ ನೀಡುವ ಮೂಲಕ ಮಾರಾಟ ದಂಧೆ ನಿರತರನ್ನು ಮಾಲು ಸಹಿತ ಹಿಡಿದುಕೊಟ್ಟಿರುವ ಘಟನೆ ನಡೆದಿದೆ.

ತಾಲೂಕಿನ ಹಳ್ಳಿಮೈಸೂರು ಹೋಬಳಿಯ ತಾತನಹಳ್ಳಿಯಲ್ಲಿ ಸೋಮವಾರ ರಾತ್ರಿ ಮಹಿಳಾ ಸಂಘದ ಸದಸ್ಯೆಯರು ನೀಡಿದ್ದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು, ಇಬ್ಬರನ್ನು ಬಂಧಿಸಿ, ಮಾರಾಟ ಮಾಡಲು ತಂದಿದ್ದ ಮದ್ಯ ವಶಪಡಿಸಿಕೊಂಡಿದ್ದಾರೆ.

''ಗ್ರಾಮೀಣ ಭಾಗದಲ್ಲಿ ಅಕ್ರಮ ಮದ್ಯ ಮಾರಾಟ ಮಿತಿ ಮೀರಿದೆ. ಅಯಾಕಟ್ಟಿನ ಹಳ್ಳಿಗಳ ಹೊರವಲಯದ ಟೀ ಅಂಗಡಿ, ಚಿಕ್ಕ ಕ್ಯಾಂಟೀನ್ ಹಾಗೂ ಕಿರಾಣಿ ಅಂಗಡಿಗಳಲ್ಲಿ ಹೆಚ್ಚಿನ ಹಣಕ್ಕೆ ಮಾರಾಟ ಮಾಡಲಾಗುತ್ತಿದೆ. ಪಟ್ಟಣದ ಬಹುತೇಕ ಮದ್ಯದ ಅಂಗಡಿಗಳ ದಾಸ್ತಾನುದಾರರೇ ಗ್ರಾಮೀಣ ಭಾಗದ ಅಂಗಡಿಗಳಿಗೆ ನೀಡಿ ದಂಧೆ ನಡೆಸಿದ್ದಾರೆ. 20–30 ರೂ. ಹೆಚ್ಚಿನ ಹಣ ನೀಡಿದರೂ, ಸ್ಥಳೀಯವಾಗಿಯೇ ಸುಲಭವಾಗಿ ಮದ್ಯ ದೊರಕುವ ಪರಿಣಾಮ ಮದ್ಯ ವ್ಯಸನಿಗಳು ಬೆಳಗಿನಿಂದ ರಾತ್ರಿವರೆಗೂ ನಶೆ ಏರಿಸಿಕೊಳ್ಳುತ್ತಿದ್ದಾರೆ. ಕೂಲಿ ಕಾರ್ಮಿಕರು, ಶ್ರಮ ಜೀವಿಗಳು ಮದ್ಯ ಇಲ್ಲದೆ ಕೆಲಸಕ್ಕೆ ಬಾರದ ಸ್ಥಿತಿ ತಲೆದೋರಿದೆ. ಹೀಗಾಗಿ ಇದಕ್ಕೆ ಕಡಿವಾಣ ಹಾಕಲು ಹೋರಾಟಕ್ಕೆ ಮುಂದಾಗಿದ್ದೇವೆ,'' ಎನ್ನುತ್ತಾರೆ ಸದಸ್ಯೆಯರು.

ಚುನಾವಣಾ ಕರ್ತವ್ಯ ಲೋಪ: ಶಿಕ್ಷಕಿ ಅಮಾನತು

ಚಿತ್ರದುರ್ಗ: ಚುನಾವಣಾ ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ ಆರೋಪದ ಮೇಲೆ ಹಿರಿಯೂರು ತಾಲೂಕಿನ ಬೀರೇನಹಳ್ಳಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಕೆ.ಶಿವಲೀಲಾ ಅವರನ್ನು ಅಮಾನತು ಮಾಡಲಾಗಿದೆ. ಅಮಾನತು ಅವಧಿಯಲ್ಲಿ ನೌಕರರು ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೆ ಕೇಂದ್ರ ಸ್ಥಾನ ಬಿಡುವಂತಿಲ್ಲ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚಿಸಿದ್ದಾರೆ.

ಅಬಕಾರಿ ಡಿಸಿ ಅಮಾನತಿಗೆ ಶಿಫಾರಸು

ರೂಫ್‌ಟಾಪ್ ರೆಸ್ಟೋರೆಂಟ್ ಅಗ್ನಿ ದುರಂತ ಪ್ರಕರಣ | ಸ್ಥಳಕ್ಕೆ ಸಚಿವ ಡಾ.ಯತೀಂದ್ರ ಭೇಟಿ

■ **ವಿಕ ಸುದ್ದಿಲೋಕ** ಮೈಸೂರು

ದಟ್ಟಗಳ್ಳಿಯಲ್ಲಿನ ರೂಫ್‌ಟಾಪ್ ರೆಸ್ಟೋರೆಂಟ್‌ನಲ್ಲಿ ನಡೆದ ಅಗ್ನಿ ದುರಂತ ಪ್ರಕರಣ ಸಂಬಂಧ ಅಬಕಾರಿ ಇಲಾಖೆ ಉಪ ಆಯುಕ್ತರನ್ನು ಅಮಾನತು ಮಾಡಲು ಶಿಫಾರಸು ಮಾಡಲು ಸೂಚಿಸಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ರೆಸ್ಟೋರೆಂಟ್‌ಗೆ ಹೊಂದಿಕೊಂಡಂತೆ ಬಾರ್ ಮತ್ತು ಪಬ್ ಇದ್ದು, ಪರವಾನಗಿ ಇಲ್ಲದೆ ಬಾರ್ ಮತ್ತು ರೆಸ್ಟೋರೆಂಟ್ ನಡೆಯುತ್ತಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವ ಕಾರಣ ಅಬಕಾರಿ ಉಪ ಆಯುಕ್ತ ನಾಗರಾಜು ಅವರ ಅಮಾನತಿಗೆ ಸರಕಾರಕ್ಕೆ ಶಿಫಾರಸು ಮಾಡುವಂತೆ ಜಿಲ್ಲಾಧಿಕಾರಿಗೆ ತಿಳಿಸಿರುವೆ. ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಅಮಾನತುಪಡಿಸಲು ಆದೇಶ ಹೊರಡಿಸಲು ಕ್ರಮಕೈಗೊಳ್ಳಲಾಗುವುದು,'' ಎಂದರು.

''ಆಸ್ಪತ್ರೆ ಪಕ್ಕದಲ್ಲೇ ಬಾರ್ ಮತ್ತು ರೆಸ್ಟೋರೆಂಟ್ ಇದೆ. ಪಾಲಿಕೆ ಅಧಿಕಾರಿಗಳು ಅರ್ಜಿಯನ್ನು ತಿರಸ್ಕರಿಸದೆ ಸುಮ್ಮನಾಗಿದ್ದಾರೆ. ಅಗ್ನಿ ಶಾಮಕದ ದಳದ ನಿರ್ಲಕ್ಷ್ಯವೂ ಕಂಡು ಬಂದಿದ್ದು, ಅಧಿಕಾರಿಗಳ ನಡವಳಿಕೆ ನೋಡಿದರೆ ನಿರ್ಲಕ್ಷ್ಯ ಕಾಣುತ್ತದೆ. ಹಾಗಾಗಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು,'' ಎಂದರು.

''ಘಟನೆಯಲ್ಲಿ ರೆಸ್ಟೋರೆಂಟ್ ಇಬ್ಬರು ಸಿಬ್ಬಂದಿ ಮೃತಪಟ್ಟಿದ್ದು, ಅವರ ಕುಟುಂಬದವರನ್ನು ಭೇಟಿ ಮಾಡಿ ಸಾಂತ್ವನ ಹೇಳಲಾಗಿದೆ. ಜತೆಗೆ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿರುವ ಅವವರನ್ನೂ ಭೇಟಿ ಮಾಡಿ ಆರೋಗ್ಯ ವಿಚಾರಿಸಲಾಗಿದೆ. ರೆಸ್ಟೋರೆಂಟ್‌ನ ಮಾಲೀಕರೂ ಆಸ್ಪತ್ರೆಗೆ ದಾಖಲಾಗಿದ್ದು, ಪ್ರಕರಣದ ಆರೋಪಿ ಆತನೇ ಆಗಿರುವುದರಿಂದ ಆತನ ಆರೋಗ್ಯ ವಿಚಾರಿಸಲು ಹೋಗಿಲ್ಲ'' ಎಂದರು.



ಗಾಯಾಳುಗಳನ್ನು ಭೇಟಿಯಾದ ಸಚಿವ ಡಾ. ಯತೀಂದ್ರ.

''ಮೃತರ ಕುಟುಂಬದವರಿಗೆ ಪರಿಹಾರ ನೀಡುವ ಕುರಿತು ಮುಖ್ಯಮಂತ್ರಿಗಳ ಜತೆ ಮಾತುಕತೆ ನಡೆಸಿದ್ದೇನೆ. ಹೆಚ್ಚಿನ ಪರಿಹಾರಕ್ಕೆ ಕೇಳಿಕೊಂಡಿದ್ದೇನೆ. ಪೂರ್ಣ ವಿವರ ಬಂದ ಬಳಿಕ ಕುಟುಂಬದವರಿಗೆ ಪರಿಹಾರ ಕೊಡಲಿದ್ದಾರೆ,'' ಎಂದು ಹೇಳಿದರು.

ಸಾಹಿನ್ ಶವ ಹಸ್ತಾಂತರ: ಮೃತಪಟ್ಟ ಸಿಬ್ಬಂದಿಯ ಮೃತದೇಹಗಳನ್ನು ಮೃತರ ಊರಿಗೆ ಸಾಗಿಸಲು ರೆಸ್ಟೋರೆಂಟ್ ಮಾಲೀಕರು ವ್ಯವಸ್ಥೆ ಮಾಡಿದ್ದಾರೆ. ಸಾಹಿನ್ ಅವರ ಮೃತದೇಹ ಮರಣೋತ್ತರ ಪರೀಕ್ಷೆಯ ಮೂಲಕ ಅವರ ಕುಟುಂಬದವರಿಗೆ ಹಸ್ತಾಂತರಿಸಲಾಯಿತು. ಪ್ರಕಾಶ್ ಅವರ ಕುಟುಂಬದವರು ಇನ್ನೂ ಬಾರದ ಹಿನ್ನೆಲೆಯಲ್ಲಿ ಅವರು ಬಂದ ಬಳಿಕ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬದವರಿಗೆ ಹಸ್ತಾಂತರಿಸಲು ನಿರ್ಧರಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ರೆಸ್ಟೋರೆಂಟ್ ಮಾಲೀಕರ ವಿರುದ್ಧ ದೂರು: ರೂಫ್‌ಟಾಪ್ ರೆಸ್ಟೋರೆಂಟ್‌ನಲ್ಲಿ ಮುಂಜಾಗ್ರತಾ ಕ್ರಮ ವಹಿಸದೇ ನಿರ್ಲಕ್ಷ್ಯವಹಿಸಿದ ಆರೋಪದ ಮೇಲೆ ಮಾಲೀಕರಾದ ಪ್ರೀತಮ್ ಪುನೀತ್ ಮತ್ತು ಕೇಶವ ಮೂರ್ತಿ ವಿರುದ್ಧ ಪ್ರಕರಣ ದಾಖಲಾಗಿದೆ. ಕುವೆಂಪುನಗರ ಪೊಲೀಸ್ ಪ್ರಕರಣ ದಾಖಲಾಗಿದೆ.

> ಸೋದರ ಸಾಹಿನ್ ನನ್ನೊಂದಿಗೆ ಬೆಂಗಳೂರಿನಲ್ಲಿಯೇ ಕೆಲಸ ಮಾಡಿಕೊಂಡಿದ್ದ. ಆರು ತಿಂಗಳ ಹಿಂದೆಯಷ್ಟೇ ಮೈಸೂರಿನ ರೆಸ್ಟೋರೆಂಟ್‌ಗೆ ಕೆಲಸಕ್ಕೆ ಸೇರಿಕೊಂಡಿದ್ದ. ನಾವಿಬ್ಬರೇ ಕುಟುಂಬಕ್ಕೆ ಆಧಾರವಾಗಿದ್ದೆವು. ಸೋದರನ ಸಾವಿನಿಂದ ಕುಟುಂಬಕ್ಕೆ ಆಧಾರವೇ ಇಲ್ಲದಂತಾಗಿದೆ. ಕುಟುಂಬದ ಜವಾಬ್ದಾರಿ ಈಗ ನನ್ನ ಮೇಲೆ ಬಿದ್ದಿದೆ.
>
> **- ಅನಾಮಿಕಾ ಮುಕ್ಯಾರ್** ಸಾಹಿನ್ ಸೋದರಿ

ಸಿಲಿಂಡರ್ ಸ್ಫೋಟ: ಮೂವರ ವಿರುದ್ಧ ಕೇಸ್

■ **ವಿಕ ಸುದ್ದಿಲೋಕ** ದಾವಣಗೆರೆ

ತಾಲೂಕಿನ ಎಚ್. ಕಲ್ಪನಹಳ್ಳಿಯ ಗೋದಾಮಿನಲ್ಲಿ 15 ಅಡುಗೆ ಅನಿಲದ ಸಿಲಿಂಡರ್‌ಗಳ ಸ್ಫೋಟಕ್ಕೆ ಸಂಬಂಧಿಸಿದಂತೆ ತೋಟದ ಗೋದಾಮಿನ ಮಾಲೀಕ ಶಿವಕುಮಾರ್, ಗಾಯಗೊಂಡ ವ್ಯಕ್ತಿ ಅನಿಲ್ ಹಾಗೂ ಉನ್ನಿತ್ ಎಂಟರ್‌ಪ್ರೈಸಸ್‌ನ ಜ್ಯೋತಿ ಗ್ಯಾಸ್ ವಿರುದ್ಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಕ followup

ಪೊಲೀಸ್ ಇಲಾಖೆ, ವಿಧಿವಿಜ್ಞಾನ ಪ್ರಯೋಗಾಲಯ ಮತ್ತು ಆಹಾರ ಮತ್ತು ನಾಗರಿಕ ಸೇವಾ ಪೂರೈಕೆ ಇಲಾಖೆ ಅಧಿಕಾರಿಗಳು ಮಂಗಳವಾರ ಮಹಜರ್ ನಡೆಸಿದರು.

ಅನಧಿಕೃತವಾಗಿ ಅಡುಗೆ ಅನಿಲದ ಸಿಲಿಂಡರ್‌ಗಳನ್ನು ಸಂಗ್ರಹಿಸಲಾಗಿತ್ತು ಎಂಬುದನ್ನು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ದೃಢಪಡಿಸಿದೆ. ಸಿಲಿಂಡರ್ ದಾಸ್ತಾನು ಇಟ್ಟಿದ್ದ ಕಟ್ಟಡದಲ್ಲಿ ಅಗ್ನಿ ಸುರಕ್ಷತೆಯ ಕ್ರಮ ಅನುಸರಿಸಿಲ್ಲ ಎಂದು ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಎಂ. ಎನ್. ನಾಗೇಶ್ ತಿಳಿಸಿದ್ದಾರೆ.

''ಅಡಕೆ ಬೇಯಿಸುವುದಕ್ಕೆಂದು ಗೋದಾಮು ಬಾಡಿಗೆ ಪಡೆದಿದ್ದ ಅನಿಲ್, ಸಿಲಿಂಡರ್‌ಗಳನ್ನು ಸಂಗ್ರಹಿಸಿ ಇಟ್ಟಿರುವುದು ನನ್ನ ಗಮನಕ್ಕೆ ಬಂದಿರಲಿಲ್ಲ,'' ಎಂದು ತೋಟದ ಮಾಲೀಕ ಶಿವಕುಮಾರ್ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

> ಅನುಮತಿ ಪಡೆಯದೇ ಈ ಗೋದಾಮಿನಲ್ಲಿ ಅನಧಿಕೃತವಾಗಿ ಅಡುಗೆ ಅನಿಲದ ಸಿಲಿಂಡರ್‌ಗಳನ್ನು ದಾಸ್ತಾನು ಮಾಡಲಾಗಿತ್ತು. ಇಲ್ಲಿ ಸಿಲಿಂಡರ್ ದಾಸ್ತಾನು ಮಾಡಿದವರ ಹಾಗೂ ಗೋದಾಮು ಬಾಡಿಗೆಗೆ ನೀಡಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಆಗಲಿದೆ.
>
> **– ಮಧುಸೂದನ್** ಉಪನಿರ್ದೇಶಕ, ಆಹಾರ ಮತ್ತು ನಾಗರಿಕ ಸೇವೆ ಪೂರೈಕೆ ಇಲಾಖೆ

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಅವರು ಆದಿಚುಂಚನಗಿರಿ ಮಠದ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಸಂಘವು ಜುಲೈ 11 ರಂದು ಬೆಂಗಳೂರಿನಲ್ಲಿ ಹಮ್ಮಿಕೊಂಡಿರುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದರು. ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಬಸವರಾಜ್, ಚೇತನ್, ರಾಜಣ್ಣ ಹಾಗೂ ರಾಜ್ಯ ಪದಾಕಾರಿಗಳು ಉಪಸ್ಥಿತರಿದ್ದರು.

ಲೈಂಗಿಕ ದೌರ್ಜನ್ಯ, ಆರೋಪಿ ಸೆರೆ

ಸಿಂಧನೂರು (ರಾಯಚೂರು): ಬಾಲಕಿಯರಿಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಬಾಬುಸಾಬ್ (44) ಎಂಬುವವನನ್ನು ಪೊಲೀಸರು ಸೋಮವಾರ ರಾತ್ರಿ ಬಂಧಿಸಿದ್ದಾರೆ.

ಐಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದ ಆರೋಪಿ, ಪಾಲಕರು ಕೂಲಿ ಕೆಲಸಕ್ಕೆ ತೆರಳಿದಾಗ 8 ಮತ್ತು 9 ವರ್ಷಗಳ ಬಾಲಕಿಯರ ಮನೆಗೆ ತೆರಳಿ ಅವರ ಮೇಲೆ 5 ದಿನ ನಿರಂತರ ಲೈಂಗಿಕ ದೌರ್ಜನ್ಯ ಎಸಗಿದ್ದ. ಪಾಲಕರಿಗೆ ವಿಷಯ ತಿಳಿಸಿದರೆ ಕೊಲೆ ಮಾಡುವುದಾಗಿ ಜೀವ ಬೆದರಿಕೆ ಹಾಕಿದ್ದ ಎನ್ನಲಾಗಿದೆ. ಸಂತ್ರಸ್ತೆಯರ ಪಾಲಕರು ನೀಡಿದ ದೂರು ಆಧರಿಸಿ ಪೋಕ್ಸೊ ಕಾಯಿದೆಯಡಿ ಪ್ರಕರಣ ದಾಖಲಾಗಿದೆ.

ಲೈಂಗಿಕ ಕಿರುಕುಳ: ಶಿಕ್ಷಕನಿಗೆ ಪೋಷಕರಿಂದ ಧರ್ಮದೇಟು

ಚಿಕ್ಕೋಡಿ (ಬೆಳಗಾವಿ): ತಾಲೂಕಿನ ಪ್ರೌಢಶಾಲೆಯೊಂದರ ಶಿಕ್ಷಕ ಶ್ರೀಶೈಲ ಕುಂಬಾರ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದಾನೆ ಎಂದು ಆಕ್ರೋಶಗೊಂಡ ಪೋಷಕರು ಮಂಗಳವಾರ ಶಾಲೆಗೆ ನುಗ್ಗಿ ಶಿಕ್ಷಕನನ್ನು ಥಳಿಸಿದ್ದಾರೆ. ಚಿಕ್ಕೋಡಿ ಪಿಎಸ್‌ಐ ಬಸಗೌಡಾ ನೇರ್ಲಿ ಹಾಗೂ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಶಿಕ್ಷಕನನ್ನು ವಶಕ್ಕೆ ಪಡೆದಿದ್ದಾರೆ.

ಘಟನಾ ಸ್ಥಳಕ್ಕೆ ಚಿಕ್ಕೋಡಿ ಡಿಡಿಪಿಐ ಸೀತಾರಾಮು ಆರ್.ಎಸ್., ಸಿಪಿಐ ವಿಶ್ವನಾಥ ಚೌಗಲಾ ಹಾಗೂ ಬಿಇಒ ಪ್ರಭಾವತಿ ಪಾಟೀಲ ಭೇಟಿ ನೀಡಿ, ಎಸ್‌ಡಿಎಂಸಿ ಸದಸ್ಯರು ಮತ್ತು ಪಾಲಕರೊಂದಿಗೆ ಸಭೆ ನಡೆಸಿದರು. ''ಕರ್ತವ್ಯಲೋಪ ಹಾಗೂ ಅಸಭ್ಯ ವರ್ತನೆ ತೋರಿದ ಆರೋಪಿ ಶಿಕ್ಷಕನನ್ನು ತಕ್ಷಣ ಅಮಾನತುಗೊಳಿಸಲಾಗುವುದು,'' ಎಂದು ಡಿಡಿಪಿಐ ಸೀತಾರಾಮು ಆರ್.ಎಸ್. ಹೇಳಿದರು.

ಕರ್ನಾಟಕ ಸರ್ಕಾರ
ಬೆಂಗಳೂರು ನಗರಜಿಲ್ಲಾ ಪಂಚಾಯತ್
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಬೆಂಗಳೂರು ದಕ್ಷಿಣ ತಾಲ್ಲೂಕು,
ಬಿ.ಎಸ್.ಟಿ.ಎ.ಪಿ.ಸಿ.ಎಂ.ಎಸ್.ಕಟ್ಟಡ, ಮೊದಲನೇ ಮಹಡಿ, ಎಸ್ ಕರಿಯಪ್ಪ ರಸ್ತೆ ಬನಶಂಕರಿ,
ಬೆಂಗಳೂರು–70. ದೂ : 080–26713097, ಇ-ಮೇಲ್: icdsprojectsouth@gmail.com
ಸಂಖ್ಯೆ:ಶಿಅಯೋ/ಬೆಂದತಾ/ಐಸಿಡಿಎಸ್/ಅಂ.ಕಾ.ಕ.ಸ.ಖಾ.ಹು/2026–27 ದಿನಾಂಕ: 15.06.2026

ಪ್ರಕಟಣೆ

ವಿಷಯ:–ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಖಾಲಿ ಹುದ್ದೆಗಳಿಗೆ ತಾತ್ಕಾಲಿಕವಾಗಿ ಆಯ್ಕೆಯಾಗಿರುವ ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುತ್ತಿರುವ ಕುರಿತು.

****

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ದಕ್ಷಿಣಯೋಜನಾ ವ್ಯಾಪ್ತಿಯಲ್ಲಿರುವ ಬೆಂಗಳೂರು ದಕ್ಷಿಣ ಮತ್ತು ಪೂರ್ವ ತಾಲ್ಲೂಕಿನಲ್ಲಿ ಹಾಲಿ ಖಾಲಿ ಇರುವಂತಹ **29** ಗೌರವ ಅಂಗನವಾಡಿ ಕಾರ್ಯಕರ್ತೆ ಮತ್ತು 101 ಸಹಾಯಕಿಯರ ಹುದ್ದೆಗಳಿಗೆ ಅರ್ಹರಿಂದ **ದಿನಾಂಕ:24–02–2026** ರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು, ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ:25–03–2026** ಆಗಿತ್ತು. ಅದರಂತೆ ಗೌರವ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಖಾಲಿ ಹುದ್ದೆಗಳಿಗೆ ತಾತ್ಕಲಿಕವಾಗಿ ಆಯ್ಕೆಯಾಗಿರುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಿದ್ದು, ಸದರಿ ಆಯ್ಕೆಯ ಕುರಿತಾಗಿ ಆಕ್ಷೇಪಣೆಗಳಿದ್ದಲ್ಲಿ, **ದಿನಾಂಕ:22–06–2026** ರೊಳಗೆ ಕಛೇರಿಯ ಅಧಿಕೃತ ವಿಳಾಸ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಬೆಂಗಳೂರು ದಕ್ಷಿಣ ತಾಲ್ಲೂಕು ಬಿ.ಎಸ್.ಟಿ.ಎ.ಪಿ.ಸಿ.ಎಂ.ಎಸ್.ಕಟ್ಟಡ, ಮೊದಲನೇ ಮಹಡಿ ಎಸ್.ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು–70. ಇಲ್ಲಿ ಭೌತಿಕವಾಗಿ ಸಲ್ಲಿಸಬೇಕಾಗಿರುತ್ತದೆ.

ಸಹಿ/–
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಬೆಂಗಳೂರು ದಕ್ಷಿಣ ತಾಲ್ಲೂಕು
ವಾಸಾಸಂಇ/ವಾಪ್ರ/1174/ಶಿರಡಿ ಸಾಯಿ/2026–27

ಸಾರ್ವಜನಿಕ ಪ್ರಕಟಣೆ

ನಾವು ನಮ್ಮ ಕಕ್ಷಿದಾರರ ಪರವಾಗಿ ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ ('ಕೆವಿವಿಎಸ್") ಎಂಬ ಹೆಸರಿನ ಶೀರ್ಷಿಕೆಯನ್ನು ಪರಿಶೀಲಿಸುತ್ತಿದ್ದೇವೆ ಎಂದು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ. ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960 ರ ಅಡಿಯಲ್ಲಿ ನೋಂದಾಯಿಸಲಾದ ಈ ಸೊಸೈಟಿಯು ಆಸ್ತಿ/ಪುರಸಭೆ ಸಂಖ್ಯೆ 18/1, ಕಲ್ಯಾಣ ಸಮುಚ್ಚಯ, 2ನೇ ಮಹಡಿ, 6ನೇ ಕ್ರಾಸ್, ಗಾಂಧಿನಗರ, ಬೆಂಗಳೂರು 560 009 ನಲ್ಲಿ ನೋಂದಾಯಿತ ವಿಳಾಸವನ್ನು ಹೊಂದಿದೆ. ಖಾಲಿ ಮತ್ತು ಫ್ರೀಹೋಲ್ಡ್ ಭೂಮಿಯ ಎಲ್ಲಾ ಭಾಗಗಳು ಇಲ್ಲಿ ಕೆಳಗೆ ಬರೆಯಲಾದ ಷೆಡ್ಯೂಲ್‌ನಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾಗಿದೆ ('ಹೇಳಿದ ಭೂಮಿ' ಎಂದು ಉಲ್ಲೇಖಿಸಲಾಗಿದೆ), ಅವರು ಸ್ಪಷ್ಟ ಮತ್ತು ಮಾರುಕಟ್ಟೆ ಮಾಡಬಹುದಾದ ಶೀರ್ಷಿಕೆಯನ್ನು ಹೊಂದಿರುವ, ಯಾವುದೇ ಹೊರೆಗಳಿಂದ ಮುಕ್ತವಾಗಿರುವ (ಶಾಮರಾವ್ ವಿಠಲ ಕೋ–ಆಪರೇಟಿವ್ ಬ್ಯಾಂಕ್, ನಾಗರಭಾವಿ ಪರವಾಗಿ ರಚಿಸಲಾದ ಸಮಾನ ಅಡಮಾನವನ್ನು ಹೊರತುಪಡಿಸಿ) ನಿರ್ಬಂಧಗಳು, ಹಕ್ಕುಗಳು, ಮೊಕದ್ದಮೆಗಳು, ಮೂರನೇ ವ್ಯಕ್ತಿಯ ಹಕ್ಕುಗಳು ಇತ್ಯಾದಿಗಳಿಂದ ಮುಕ್ತವಾಗಿವೆ ಮತ್ತು ಅವರು ಸದರಿ ಭೂಮಿಗೆ ಸಂಬಂಧಿಸಿದಂತೆ ದೀರ್ಘಾವಧಿಯ ಗುತ್ತಿಗೆ ಹಕ್ಕುಗಳನ್ನು ಗ್ಲೋಬಲ್ ಬಿಜ್‌ಪ್ರೋಪ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ ರವರಿಗೆ ನೀಡಲು ಬಯಸುತ್ತಾರೆ.

ಯಾವುದೇ ಮಾರಾಟ, ವರ್ಗಾವಣೆ, ವಿನಿಮಯ, ಕ್ರಯದ ಕರಾರು, ತಿಳುವಳಿಕೆ ಪತ್ರ, ಜಂಟಿ ಅಭಿವೃದ್ಧಿ, ಜಂಟಿ ಉದ್ಯಮ, ಗುತ್ತಿಗೆ, ಉಪ–ಗುತ್ತಿಗೆ, ನಿಯೋಜನೆ, ಅಡಮಾನ, ಶುಲ್ಕ, ಹಕ್ಕುದಾರಿಕೆ, ಉಯಿಲು, ಉತ್ತರಾಧಿಕಾರ, ದಾನ, ವಿನ್ಯಾಸ, ನಿರ್ವಹಣೆ, ದಾರಿಯ ಹಕ್ಕು, ಸರಾಗಗೊಳಿಸುವಿಕೆ(ಗಳು), ಟ್ರಸ್ಟ್, ಉತ್ತರಾಧಿಕಾರ, ಬಾಡಿಗೆ, ಉಪ–ಬಾಡಿಗೆ, ರಜೆ ಮತ್ತು ಪರವಾನಗಿ, ಆಸ್ಯೆಕೆದಾರರ ಆಧಾರ, ಉದ್ಯೋಗ, FSI, ಸ್ವಾಧೀನ, ಕುಟುಂಬ ವ್ಯವಸ್ಥೆ/ಇತ್ಯರ್ಥ, ಲಿಸ್–ಪೆಂಡೆನ್ಸ್‌ಗಳು ಲಗತ್ತು, ಒಪ್ಪಂದಗಳು/ಒಪ್ಪಂದಗಳು, ಅಭಿವೃದ್ಧಿ ಹಕ್ಕುಗಳು ಮತ್ತು/ಅಥವಾ ಸಾಗಣೆ, ಪರವಾನಗಿ, ಯಾವುದೇ ಮೊಕದ್ದಮೆಯಲ್ಲಿ ಅಥವಾ ಯಾವುದೇ ಇತರ ಹಕ್ಕು ಅಥವಾ ಆಸಕ್ತಿ, ಮೊಕದ್ದಮೆ, ಪ್ರಶಸ್ತಿ, ತೀರ್ಪು ಅಥವಾ ಯಾವುದೇ ನ್ಯಾಯಾಲಯ ಅಥವಾ ನ್ಯಾಯಮಂಡಳಿಯ ಆದೇಶ ಅಥವಾ ಯಾವುದೇ ರೀತಿಯ ಆದೇಶವನ್ನು ನೀಡಿದರೆ ಅಥವಾ ಸದರಿ ಭೂಮಿ ಅಥವಾ ಅದರ ಯಾವುದೇ ಭಾಗಕ್ಕೆ ಅಥವಾ ಅದರ ಮೇಲೆ, ಮತ್ತು/ಅಥವಾ ಸದರಿ ಭೂಮಿ ಅಥವಾ ಅದರ ಯಾವುದೇ ಭಾಗಕ್ಕೆ ಅಥವಾ ಅದರ ಮೇಲೆ ಅಥವಾ ಅದರ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಅಥವಾ KVVR ತಮ್ಮೊಂದಿಗೆ ಠೇವಣಿ ಇಟ್ಟಿರುವ ಸದರಿ ಭೂಮಿಗೆ ಸಂಬಂಧಿಸಿದ ಯಾವುದೇ ಶೀರ್ಷಿಕೆ ದಾಖಲೆಗಳನ್ನು ಹೊಂದಿರುವ ಮತ್ತು/ಅಥವಾ ಹೊಂದಿರುವ ಆಧಾರದ ಮೇಲೆ ಅಥವಾ ಈ ಮೂಲಕ ಕರೆಯಲಾದ ಯಾವುದೇ ರೀತಿಯಲ್ಲಿ, ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 14 (ಹದಿನಾಲ್ಕು) ದಿನಗಳ ಅವಧಿಯೊಳಗೆ ಕೆಳಗೆ ಸಹಿ ಮಾಡಿದವರಿಗೆ ಲಿಖಿತವಾಗಿ ತಿಳಿಸಲು ಕರೆ ನೀಡಲಾಗಿದೆ. ಅಂತಹ ಹಕ್ಕುಗಳನ್ನು ಸಲ್ಲಿಸಿದ ಆಧಾರದ ಮೇಲೆ ಎಲ್ಲಾ ದಾಖಲೆಗಳ ಪ್ರತಿಗಳೊಂದಿಗೆ, ಅಂತಹ ಯಾವುದೇ ಆಪಾದಿತ ಹಕ್ಕು, ಶೀರ್ಷಿಕೆ, ಪ್ರಯೋಜನ, ಆಸಕ್ತಿ, ಪಾಲು, ಹಕ್ಕು, ಆಕ್ಷೇಪಣೆ ಮತ್ತು/ಅಥವಾ ಬೇಡಿಕೆ, ಯಾವುದಾದರೂ ಇದ್ದರೆ, ಅವುಗಳನ್ನು ಮನ್ನಾ ಮಾಡಲಾಗಿದೆ/ಕೈಬಿಡಲಾಗಿದೆ ಮತ್ತು ಬದ್ಧವಾಗಿಲ್ಲ ಎಂದು ಪರಿಗಣಿಸಲಾಗುತ್ತದೆ.

ಮೇಲಿನ ಷೆಡ್ಯೂಲ್ ಅನ್ನು ಉಲ್ಲೇಖಿಸಲಾಗಿದೆ
(ಹೇಳಿದ ಭೂಮಿಯ ವಿವರಣೆ)

ಬೆಂಗಳೂರು 560 009, ಗಾಂಧಿನಗರ, ಶೇಷಾದ್ರಿ ರಸ್ತೆಯ ಅಸ್ತಿ/ಪುರಸಭೆ ಸಂಖ್ಯೆ 18 ಮತ್ತು 18/2 ಹೊಂದಿರುವ ಇ–ಪಿಐಡಿ ಸಂಖ್ಯೆ 1606194719 ಹೊಂದಿರುವ 6,895.7 ಚದರ ಮೀಟರ್ (74,225 ಚದರ ಅಡಿಗಳಿಗೆ ಸಮ) ಇದಕ್ಕೆ ಚೆಕ್ಕುಬಂದಿ,
ಪೂರ್ವಕ್ಕೆ ಅಥವಾ ಕಡೆಗೆ :– ಪುರಸಭೆ/ಅಸ್ತಿ ಸಂಖ್ಯೆ 17 (ಖಾಸಗಿ ಆಸ್ತಿ)
ಪಶ್ಚಿಮಕ್ಕೆ ಅಥವಾ ಕಡೆಗೆ :– 5ನೇ ಮುಖ್ಯ ರಸ್ತೆ, ಗಾಂಧಿನಗರ
ಉತ್ತರಕ್ಕೆ ಅಥವಾ ಕಡೆಗೆ :– ಶೇಷಾದ್ರಿ ರಸ್ತೆ
ದಕ್ಷಿಣಕ್ಕೆ ಅಥವಾ ಕಡೆಗೆ :– ಪುರಸಭೆ/ಅಸ್ತಿ ಸಂಖ್ಯೆ 18/1 ರ ಸ್ವತ್ತು
ದಿನಾಂಕ : 17/6/2026

M/s. Economic Laws Practice
(ವಕೀಲರು ಮತ್ತು ಸಾಲಿಸಿಟರ್‌ಗಳು)
Sd/-ಹೀನಾ ಛೇಡ್ಡಾ ಪಾಲುದಾರರು
ಇ–ಮೇಲ್ : heenachheda@elp-in.com

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನಿಯರ್‌ರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬೀದರ
ಸಂ:ಕಾನಿಇಂ/ಲೋಇ/ವಿ–ಬಿ/ಜೆಇ:5/2026–27/701 ದಿನಾಂಕ : 08.06.2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ 2026–27 ನೇ ಸಾಲಿಗೆ ಈ ಕೆಳಕಂಡ ಕಾಮಗಾರಿಗಳ, ಲೆಕ್ಕ ಶೀರ್ಷಿಕೆ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಡಿಯ ಕನಿಷ್ಠ ರೂ. 25.00 ಲಕ್ಷಗಳ ಮತ್ತು ಗರಿಷ್ಠ ರೂ. 354.00 ಲಕ್ಷಗಳ ಮೊತ್ತದ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಕರೆಯಲಾಗಿದೆ.

PWD/2025-26/BD/RD/OW WORK_INDENT	
GENERAL (09)	36169, 36003, 33173,35940,36066,36217, 36259, 35973,36323,
SC (03)	35954, 36216, 36324.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ರಿಂದ ದಾಖಲಾತಿಗಳನ್ನು ದಿನಾಂಕ: 08.06.2026 ರಿಂದ ಡೌನ್‌ಲೋಡ್ ಮಾಡಿಕೊಂಡು ದಿನಾಂಕ: 22.06.2026 ರ ಸಂಜೆ 16.00 ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಅಂತರ್ಜಾಲ ತಾಣ ಅಥವಾ ಈ ಕಚೇರಿಗೆ ಸಂಪರ್ಕಿಸುವುದು.

ವಿಶೇಷ ಸೂಚನೆ :– ಯು.ಡಿ.ಐ ನಂಬರ ಹೊಂದಿರುವ ಟರ್ನಓವರ್ ಸರ್ಟಿಫಿಕೆಟ್ ಗಳನ್ನು ಮಾತ್ರ ಪರಿಗಣಿಸಲಾಗುವುದು ಎಂದು ಗುತ್ತಿಗೆದಾರರ ಗಮನಕ್ಕೆ ತರಲಾಗಿದೆ.

ಸಹಿ/–
(ಶಿವಶಂಕರ ವಿ. ಕಾಮಶೆಟ್ಟಿ)
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಬೀದರ

ಕರ್ನಾಟಕ ಗೃಹ ಮಂಡಳಿ
3, 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.
Karnataka Housing Board – Building communities
ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಪ.ಪ್ರ/63/2026–27 ದಿನಾಂಕ: 16–06–2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಮೆ: ಪ್ರತಿಪಾಟಿ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರೊಂದಿಗೆ ಜಂಟಿ ಸಹಭಾಗಿತ್ವ ಯೋಜನೆಯಡಿ (Marketing JV) ಕೊಡಗು ಜಿಲ್ಲೆ, ಮಡಿಕೇರಿ ನಗರದ ಕೆ. ನಿಡುಗಣೆ ಗ್ರಾಮದ ವಿವಿಧ ಸರ್ವೆ ನಂಬರ್‌ಗಳನ್ನು ಒಳಗೊಂಡಂತೆ ಒಟ್ಟು 94.45 ಎಕರೆ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳೊಂದಿಗೆ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ ಸಾರ್ವಜನಿಕರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ವಿವಿಧ ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ನೀಡಿದ್ದು, ಆರಂಭಿಕ ಠೇವಣಿ ಮೊತ್ತದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16–06–2026 ಆಗಿರುತ್ತದೆ. **ಸಾರ್ವಜನಿಕರ ಹಿತದೃಷ್ಟಿಯಿಂದ ಅರಂಭಿಕ ಠೇವಣಿ ಮೊತ್ತದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ದಿನಾಂಕ: 04–07–2026 ರವರೆಗೆ ಕಾಲಾವಕಾಶ ವಿಸ್ತರಿಸಲಾಗಿರುತ್ತದೆ.** ಉಳಿದಂತೆ ದಿನಾಂಕ: 10–05–2026ರ ಪ್ರಕಟಣೆಯಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ನೊಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯನ್ನು e-payment ಮೂಲಕ ಪಾವತಿಸಿ ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸಬಹುದಾಗಿದೆ. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 04–07–2026.**

ಹೆಚ್ಚಿನ ಮಾಹಿತಿಗಾಗಿ ಜಂಟಿ ಸಹಭಾಗಿತ್ವ ಯೋಜನೆ ಪಾಲುದಾರರ ಸಂಸ್ಥೆಯ **ಶ್ರೀ ದಯಾನಂದ ಕೆ.ಬಿ, ಮ್ಯಾನೇಜರ್, ದೂರವಾಣಿ ಸಂಖ್ಯೆ: 9739946532, ಶ್ರೀ ಗುರುರಾಜ್, ಸೈಟ್ ಇಂಜಿನಿಯರ್, ದೂರವಾಣಿ ಸಂಖ್ಯೆ: 9686202507** ಮತ್ತು ಹಂಚಿಕೆ ಹಾಗೂ ಅರ್ಜಿ ಸಲ್ಲಿಕೆ ಸಂಬಂಧ ವಿವರಗಳಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು/ಕಂದಾಯ ಅಧಿಕಾರಿಗಳು, ಕ.ಗೃ.ಮಂ., ಕೊಡಗು ಉಪ–ವಿಭಾಗ, ಮೈಸೂರು ಇವರನ್ನು ಖುದ್ದಾಗಿ ಅಥವಾ **ದೂರವಾಣಿ ಸಂಖ್ಯೆ: 0821–2343094/0821–2543237** ಹಾಗೂ ಕಂದಾಯ ಅಧಿಕಾರಿ/ಸಹಾಯಕ ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: **080–22273511, 307, 309** ಮೂಲಕ ಸಂಪರ್ಕಿಸುವುದು.

ಸಹಿ/–
ಕಾರ್ಯದರ್ಶಿಗಳು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾಸಾಸಂಇ/ವಾಪ್ರ/1181/ಎಂಎಎ/2026–27

Bennett & Coleman
THE TIMES OF INDIA

ಸಂಪಾದಕೀಯ EDITORIAL

ಫಾರ್ವರ್ಡ್ ಒತ್ತುವ ಮುನ್ನ
ಖಾಸಗಿತನ ರಕ್ಷಣೆಗೆ ದಿಟ್ಟ ಹೆಜ್ಜೆ

ಇಂದಿನ ಡಿಜಿಟಲ್ ಯುಗದಲ್ಲಿ ಸ್ಮಾರ್ಟ್‌ಫೋನ್‌ಗಳು ಪ್ರತಿಯೊಬ್ಬರ ಕೈಯಲ್ಲೂ ಅಸ್ತ್ರಗಳಾಗಿ ಮಾರ್ಪಟ್ಟಿವೆ. ತಂತ್ರಜ್ಞಾನ ಬೆಳೆದಂತೆಲ್ಲಾ ವ್ಯಕ್ತಿಯೊಬ್ಬರ ಖಾಸಗಿತನಕ್ಕೆ ಧಕ್ಕೆ ತರುವ, ಅವರ ಅನುಮತಿಯೇ ಇಲ್ಲದೆ ವಿಡಿಯೊ, ಫೋಟೋಗಳನ್ನು ಹಂಚಿಕೊಂಡು ವಿಕೃತ ಆನಂದ ಪಡುವ ಪ್ರವೃತ್ತಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಅದರಲ್ಲೂ ವಿಶೇಷವಾಗಿ ಮಹಿಳೆಯರನ್ನು ಗುರಿಯಾಗಿಸಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿರುವ ಇಂಥ ಸೈಬರ್ ದೌರ್ಜನ್ಯಗಳಿಗೆ ಬ್ರೇಕ್ ಹಾಕಲು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ. ಎಂ.ಎ. ಸಲೀಂ ಅವರು ಬಿಡುಗಡೆ ಮಾಡಿರುವ ಹೊಸ ಮಾರ್ಗಸೂಚಿಗಳು ಜನಪರ, ಸಂತ್ರಸ್ತರ ಪರ ದನಿಯನ್ನು ಒಳಗೊಂಡಿವೆ. ಯಾರದ್ದೋ ವೈಯಕ್ತಿಕ ಬದುಕನ್ನು ಇಂಟರ್ನೆಟ್ ಜಗತ್ತಿನಲ್ಲಿ ಹರಾಜಿಗಿಟ್ಟು ಮಜಾ ನೋಡುವ ವಿಕೃತಿಗಳಿಗೆ ಈ ಮೂಲಕ ಕಾನೂನಿನ ಬಿಸಿ ಮುಟ್ಟಿಸಲು ಖಾಕಿ ಪಡೆ ಮುಂದಾಗಿರುವುದು ಶ್ಲಾಘನೀಯ.

ಈ ಹೊಸ ಮಾರ್ಗಸೂಚಿ ಕೇವಲ ಎಚ್ಚರಿಕೆಯಷ್ಟೇ ಅಲ್ಲ, ತಪ್ಪು ಮಾಡುವವರ ಬೆನ್ನೆಲುಬು ಮುರಿಯುವಂಥ ಕಠಿಣ ಕಾನೂನು ಕ್ರಮಗಳನ್ನೂ ಒಳಗೊಂಡಿದೆ. ಸಾರ್ವಜನಿಕರೇ ಆಗಲಿ ಅಥವಾ ಆಪ್ತರೇ ಆಗಲಿ, ಯಾರದ್ದೇ ಫೋಟೊ ಅಥವಾ ವಿಡಿಯೊ ಚಿತ್ರೀಕರಿಸಲು ಹಾಗೂ ಅದನ್ನು ಮೂರನೇ ವ್ಯಕ್ತಿಗೆ ಹಂಚಿಕೊಳ್ಳಲು ಅವರ ಪೂರ್ವಾನುಮತಿ ಕಡ್ಡಾಯ ಎಂಬ ನಿಯಮ ಪ್ರಸ್ತುತ ಸನ್ನಿವೇಶಕ್ಕೆ ಅನಿವಾರ್ಯವಾಗಿತ್ತು. ಅದರಲ್ಲೂ ಮಹಿಳೆಯರ ಆಕ್ಷೇಪಾರ್ಹ ಚಿತ್ರಗಳನ್ನು ಹಂಚಿಕೊಂಡು ಬ್ಲ್ಯಾಕ್‌ಮೇಲ್ ಮಾಡುವ ನೀಚತನಗಳೂ ಅವ್ಯಾಹತವಾಗಿ ನಡೆಯುತ್ತಿದ್ದವು. ಇಂಥ ನೀಚರಿಗೆ ಈಗ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಹಾಗೂ ಐಟಿ ಕಾಯಿದೆಯಡಿ ಗರಿಷ್ಠ 7 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 10 ಲಕ್ಷ ರೂಪಾಯಿಗಳವರೆಗೆ ದಂಡ ವಿಧಿಸುವ ಕಠಿಣ ನೀತಿ, ಡಿಜಿಟಲ್ ಅಪರಾಧಿಗಳಲ್ಲಿ ನಡುಕ ಹುಟ್ಟಿಸುವುದರಲ್ಲಿ ಸಂಶಯವಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯ ಅಥವಾ ಸಾಮಾಜಿಕ ಜಾಲತಾಣದ ಬಳಕೆಯೆಂದರೆ ಇತರರ ಖಾಸಗಿ ಬದುಕಿಗೆ ಲಗ್ಗೆ ಇಡುವುದಲ್ಲ ಎಂಬ ಸಂದೇಶವನ್ನು ಈ ಮಾರ್ಗಸೂಚಿ ಸ್ಪಷ್ಟವಾಗಿ ರವಾನಿಸಿದೆ.

ಅಷ್ಟೇ ಅಲ್ಲದೆ, ಈ ಮಾರ್ಗಸೂಚಿಯಲ್ಲಿ ಪೊಲೀಸರ ಹೊಣೆಗಾರಿಕೆಯನ್ನೂ ನಿಗದಿಪಡಿಸಿರುವುದು ಸಾರ್ವಜನಿಕರಲ್ಲಿ ಕಾನೂನಿನ ಮೇಲಿನ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸುವಂಥ ಅಂಶ. ಇಂಥ ಸೂಕ್ಷ್ಮ ಪ್ರಕರಣಗಳಲ್ಲಿ ದೂರು ಬಂದ ತಕ್ಷಣವೇ ಎಫ್ಐಆರ್ ಅಥವಾ ಅಗತ್ಯಬಿದ್ದರೆ ಝೀರೊ ಎಫ್‌ಐಆರ್ ದಾಖಲಿಸಿಕೊಳ್ಳಬೇಕು ಮತ್ತು ತನಿಖೆಯಲ್ಲಿ ವಿಳಂಬ ಧೋರಣೆ ಅನುಸರಿಸಿದರೆ ಸ್ವತಃ ಪೊಲೀಸ್ ಅಧಿಕಾರಿಗಳ ವಿರುದ್ಧವೇ ಕ್ರಮ ಕೈಗೊಳ್ಳಲಾಗುವುದು ಎಂಬ ಎಚ್ಚರಿಕೆ ಅತ್ಯಂತ ಪ್ರಮುಖವಾದುದು. ಇದು ಸಂತ್ರಸ್ತರಿಗೆ ಸಕಾಲದಲ್ಲಿ ನ್ಯಾಯ ಸಿಗುವಂತೆ ಮಾಡುತ್ತದೆ. ಒಟ್ಟಾರೆಯಾಗಿ, ಈ 10 ಅಂಶಗಳ ಮಾರ್ಗಸೂಚಿ ಪ್ರತಿಯೊಂದು ಪೊಲೀಸ್ ಠಾಣೆಯಲ್ಲೂ ಕಟ್ಟುನಿಟ್ಟಾಗಿ, ಪಾರದರ್ಶಕವಾಗಿ ಜಾರಿಗೆ ಬರಬೇಕಿದೆ. ನಾಗರಿಕರು ಕೂಡ ಸಾಮಾಜಿಕ ಜಾಲತಾಣಗಳನ್ನು ಜವಾಬ್ದಾರಿಯಿಂದ, ವಿವೇಚನೆಯಿಂದ ಬಳಸುವ ಮೂಲಕ ಈ ಹೊಸ ಕಾನೂನು ಆಶಯಕ್ಕೆ ಕೈಜೋಡಿಸಬೇಕಿದೆ.

ಬೋಧಿ ವೃಕ್ಷ
ದೈವತ್ವ ತಿಳಿದವ ದೇವರಾಗಬಲ್ಲ!

ದೈವತ್ವದ ಪರಮಜ್ಞಾನವನ್ನು ಪಡೆದವನು ಎಲ್ಲವನ್ನೂ ತಿಳಿದವನಾಗುತ್ತಾನೆ. ಮೇಲ್ನೋಟಕ್ಕೆ ಇದು ಅತಿಶಯೋಕ್ತಿಯಂತೆ ಕಾಣಬಹುದು. ಆದರೆ, ಈ ಮಾತಿನ ಅರ್ಥ ಅತ್ಯಂತ ಸೂಕ್ಷ್ಮ. ಪರಮಾತ್ಮನನ್ನು ಅರಿತಾಗ, ಎಲ್ಲವೂ ಅದೇ ಸ್ವರೂಪದಲ್ಲಿಯೇ ತಿಳಿಯತೊಡಗುತ್ತದೆ. ದೈವತ್ವವನ್ನು ತಿಳಿದವನು ದೇವರೇ ಆಗುತ್ತಾನೆ.

ತಿಳಿಯುವವನು ಮತ್ತು ತಿಳಿಯಲ್ಪಡುವ ಸತ್ಯ, ಇವೆರಡೂ ಒಂದೇ ಆಗಿಬಿಡುತ್ತವೆ. ಇದು ಒಂದು ವಿಶಿಷ್ಟ ಸ್ಥಿತಿ. ಇಲ್ಲಿ ತಿಳಿಯುವವನು, ತಿಳಿವಳಿಕೆ (ಜ್ಞಾನ) ಮತ್ತು ತಿಳಿಯಲ್ಪಡುವುದು (ದೈವತ್ವ) ಈ ಮೂರೂ ಒಂದೇ ಆಗಿಬಿಡುತ್ತವೆ. ಬೇರೆಬೇರೆ ಎಂಬ ಭಾವನೆ ಸಂಪೂರ್ಣವಾಗಿ ಕರಗಿ ಹೋಗುತ್ತದೆ. ಅದಕ್ಕಾಗಿಯೇ ಆತ್ಮಜ್ಞಾನವನ್ನು ಪರಮಜ್ಞಾನ ಎಂದು ಕರೆಯಲಾಗುತ್ತದೆ. ದೇವರನ್ನು ತಿಳಿಯಲು ಯತ್ನಿಸುವವನು ಕೊನೆಗೆ ದೇವರಾಗಿಬಿಡುತ್ತಾನೆ. ಅಹಂ ಕರಗಿ ಹೋಗುತ್ತದೆ. ನಾವು ಜೀವಂತವಾಗಿದ್ದೇವೆ ಎಂದು ನಮಗೆ ಹೇಗೆ ತಿಳಿಯುತ್ತದೆ? ಜೀವಂತವಾಗಿರುವುದರಿಂದಲೇ. ಅದೇ ರೀತಿಯಲ್ಲಿ, ದೇವರನ್ನು ತಿಳಿಯಬೇಕಾದರೆ ದೈವತ್ವವನ್ನು ಅನುಭವಿಸಬೇಕು. ಅದನ್ನು ಹೊರಗಿನಿಂದ ಅರಿಯಲು ಸಾಧ್ಯವಿಲ್ಲ, ಹಾಗಾದರೆ ಈ ಪರಮಾತ್ಮನನ್ನು ಹೇಗೆ ಅರಿಯಬೇಕು? ಇದಕ್ಕೆ ಕೆಲವು ಸ್ಪಷ್ಟ ಮಾರ್ಗಗಳಿವೆ. ಮೊದಲನೆಯದು, ಅಂತರ್ಮುಖಿಯಾಗುವುದು. ಅಂದರೆ, ಎಲ್ಲ ಅನುಭವಗಳನ್ನು ಸಾಕ್ಷಿಯಾಗಿ ನೋಡುವುದನ್ನು ಕಲಿಯುವುದು. ಎರಡನೆಯದು, ದೇವರ ಸ್ವಭಾವವಾದ ಸ್ವಾರ್ಥರಹಿತತೆಯನ್ನು ಅಳವಡಿಸಿಕೊಳ್ಳುವುದು. ನಿರೀಕ್ಷೆಯಿಲ್ಲದ ಪ್ರೀತಿ ಮತ್ತು ನಿಷ್ಕಾಮ ಸೇವೆಯೇ ಆತ್ಮಜ್ಞಾನಕ್ಕೆ ದಾರಿ. ಮೂರನೆಯದು, ಒಳ್ಳೆಯ ಮಾರ್ಗವನ್ನು ಆಯ್ಕೆ ಮಾಡುವುದು.

ಒಳ್ಳೆಯದನ್ನು ಮಾಡುವ ಮೂಲಕ ಮನುಷ್ಯನು ಪರಮಾತ್ಮನಿಗೆ ಹತ್ತಿರವಾಗುತ್ತಾನೆ. ಯಾವುದನ್ನು ಅರಿತರೆ ಉಳಿದ ಎಲ್ಲವೂ ಅರಿತಂತಾಗುತ್ತದೆಯೋ, ಆ ಪರಮಸತ್ಯವನ್ನು ತಿಳಿಯಲು ಶ್ರಮಿಸುವುದಕ್ಕಿಂತ ಉತ್ತಮವಾದ ಪ್ರಯತ್ನ ಮತ್ತೊಂದಿಲ್ಲ. ಆತ್ಮಜ್ಞಾನವೇ ಮನುಷ್ಯನಿಗೆ ನಿಜವಾದ ಮುಕ್ತಿಯ ದಾರಿಯಾಗಿದೆ.

(ಸದ್ಗುರು ಶ್ರೀ ಮಧುಸೂದನ ಸಾಯಿ, ಸತ್ಯಸಾಯಿ ಗ್ರಾಮ, ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ)

ವಿಕ ತಗೋ ಕನ್ನಡ
ಸಮೆ, ಸವೆ

ಈ ಅಚ್ಚಗನ್ನಡ ಪದಕ್ಕೆ ಇರುವ ವಿವಿಧ ಅರ್ಥಗಳು: 1) ಕಟ್ಟು, ನಿರ್ಮಿಸು 2) ಅಣಿಗೊಳಿಸು 3) ಕೆತ್ತು 4) ರಚಿತವಾಗು 5) ಬರೆ, ರಚಿಸು 6) ಅಡುಗೆಮಾಡು 7) ಮುಗಿ, ತೀರು 8) ಅಳಿ, ನಾಶವಾಗು 9) ತೇದುಹೋಗು, ಸವೆದುಹೋಗು 10) ಶಕ್ತಿಗುಂದು, ಬಲಹೀನವಾಗು 11) ಕಳೆ, ನೀಗು 12) ಬಡವಾಗು, ಸೊರಗು. (ಸಮೆಯಿಸು, ಸಮೆಸು ಮುಂತಾದ ಪದಗಳೂ ಇವೆ). ಮೇಲಿನ ಎಲ್ಲ ಅರ್ಥಗಳಲ್ಲೂ ಕವಿಗಳು ಈ ಪದವನ್ನು ಬಳಸಿದ್ದಾರೆ. ವಿವಿಧ ಕವಿಪ್ರಯೋಗಗಳನ್ನು ಗಮನಿಸಿದರೆ ನಮ್ಮ ಭಾಷೆಯ ಬಗ್ಗೆ ಹೆಮ್ಮೆಯಾಗುತ್ತದೆ. ವಿಜಯನಗರದ ಅಮಾತ್ಯನಾಗಿದ್ದ ಲಕ್ಷ್ಮೀಧರನ ತಾಯಿ ತನ್ನ ಮಗುವಿಗೆ ಹಾಲನ್ನೂಡಿಸುತ್ತಿದ್ದಾಗ ಹೇಳುತ್ತಿದ್ದ ಮಾತುಗಳು: ''ಕೆರೆಯಂ ಕಟ್ಟಿಸು, ಬಾವಿಯಂ 'ಸವೆಸು', ದೇವಾಗಾರಮಂ ಮಾಡಿಸು; ಅದರಂತೆ ನಡೆದ ಲಕ್ಷ್ಮೀಧರನು ಕನ್ನಡನಾಡಿನ ಚರಿತ್ರೆಯಲ್ಲಿ ಕೀರ್ತಿವಂತನಾಗಿದ್ದಾನೆ.

- ಜಿ.ವಿ. ಅರುಣ

ಪದ ಸೂಚಿಸಿದವರು: ಹೇಮಂತ್ ಹಿರೇಮಳಲಿ ಚನ್ನಗಿರಿ

ಬತ್ತಳಿಕೆ

ವಿಕ ಜೋಕ್ FALLS

ಕೋಳಿ ಮೊಟ್ಟೆ: ಅಮ್ಮಾ, ನಾವೂ ಹುಟ್ಟಿದ ತಕ್ಷಣ ಮನುಷ್ಯರಂತೆ ಹೆಸರು ಇಟ್ಕೋಬಹುದಲ್ವಾ?
ಕೋಳಿ: ಇಲ್ಲಾಪುಟ್ಟಾ... ನಾವು ಸತ್ತಮೇಲೆ ಹೆಸರು ಇಟ್ಕೋತೀವಿ, ಚಿಕನ್ ಟಿಕ್ಕಾ, ಚಿಕನ್ ಕಬಾಬ್, ಚಿಕನ್ ಬಿರಿಯಾನಿ, ಚಿಕನ್ ಲಾಲಿಪಾಪ್.... ಹೀಗೆ.

''ಯುದ್ಧ ಸೋಲುವುದಕ್ಕಿಂತ ದೊಡ್ಡ ದುರಂತವೊಂದಿದ್ದರೆ ಅದು ಯುದ್ಧ ಗೆಲ್ಲುವುದು,'' ಎಂದು ಬ್ರಿಟಿಷ್ ಪ್ರಧಾನಿ ವೆಲ್ಲಿಂಗ್ಟನ್ ಒಮ್ಮೆ ಹೇಳಿದ್ದರು. ಈ ಇರಾನ್-ಅಮೆರಿಕ ಯುದ್ಧವೂ ಅದಕ್ಕೆ ಹೊರತಾಗಿಲ್ಲ. ರಾಜತಾಂತ್ರಿಕವಾಗಿ ಇಬ್ಬರೂ ತಮ್ಮದೇ ಆದ ಜಯದ ಹಕ್ಕು ಮಂಡಿಸುತ್ತಿದ್ದರೂ, ಅಂತಿಮವಾಗಿ ಸೋತಿದ್ದು ಮಾತ್ರ ಮಾನವೀಯತೆ. ಅಷ್ಟಕ್ಕೂ ಈ ಯುದ್ಧದಲ್ಲಿ ಗೆದ್ದವರಾರು? ಬಿದ್ದವರಾರು?

ಯುದ್ಧದಲ್ಲಿ ಗೆದ್ದವರು ಯಾರು?
ವಿಶ್ವಶಾಂತಿಗೆ ಎಲ್ಲರೂ ತಲೆ ಬಾಗಲೇಬೇಕು...

ವಿಕ ಫೋಕಸ್

■ ಸಂತೋಷ್ ವರ್ಕಾಡಿ

ಯುದ್ಧದಲ್ಲಿ ಗೆಲುವು ಎಂಬುದಿಲ್ಲ, ಕೇವಲ ವಿನಾಶಗಳು ಮಾತ್ರ ಇರುತ್ತವೆ. ಗೆದ್ದವನು ಸೋತವನಿಗಿಂತ ಸ್ವಲ್ಪ ತಡವಾಗಿ ಅಳುತ್ತಾನೆ, ಅಷ್ಟೇ...

ಜಾಗತಿಕ ತಲ್ಲಣಕ್ಕೆ ಕಾರಣವಾದ ಇರಾನ್-ಅಮೆರಿಕ ಮತ್ತು ಇಸ್ರೇಲ್ ನಡುವಿನ 108 ದಿನಗಳ ಯುದ್ಧ ಜೂ.14ರಂದು ಶಾಂತಿ ಒಪ್ಪಂದದ ಮೂಲಕ ತಾತ್ಕಾಲಿಕ ಅಂತ್ಯ ಕಂಡಂತಿದೆ. ಆಧುನಿಕ ಯುದ್ಧಗಳು ಕೇವಲ ದೇಶಗಳ ಗಡಿಭಾಗಕ್ಕೆ ಮಾತ್ರ ಸೀಮಿತವಾಗಿರದೆ, ಜಾಗತಿಕ ಆರ್ಥಿಕತೆ ಮತ್ತು ರಾಜತಾಂತ್ರಿಕತೆಯ ಮೇಲೆ ಎಷ್ಟು ಭೀಕರ ಪರಿಣಾಮ ಬೀರಬಲ್ಲವು ಎಂಬುದಕ್ಕೆ ಈ ಸಂಘರ್ಷವೇ ತಾಜಾ ಉದಾಹರಣೆ.

ಅಮೆರಿಕ- ಇಸ್ರೇಲ್ ಫೆ.28ರಂದು ನಡೆಸಿದ 'ಆಪರೇಷನ್ ಎಪಿಕ್‌ಫ್ಯೂರಿ' ಕಾರ್ಯಾಚರಣೆಯಲ್ಲಿ ಇರಾನ್‌ನ ಪರಮೋಚ್ಚ ನಾಯಕ ಆಯಾತ್‌ಉಲ್ಲಾ ಅಲಿ ಖಮೇನಿ ಸೇರಿದಂತೆ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ನ (ಐಆರ್‌ಜಿಸಿ) ಪ್ರಮುಖ ಸೇನಾ ಕಮಾಂಡರ್‌ಗಳು ಹತರಾದರು.

ಇರಾನ್‌ನ ಧಾರ್ಮಿಕ ನಾಯಕ ಖಮೇನಿಯನ್ನು ಕೊಂದರೆ ಯುದ್ಧವನ್ನು 2-3 ದಿನಗಳಲ್ಲಿ ಕೊನೆಗೊಳಿಸಬಹುದೆಂದು ಅಮೆರಿಕ, ಇಸ್ರೇಲ್ ಯೋಜಿಸಿದವು. ಆದರೆ ಇರಾನ್, ತನ್ನ ನಾಯಕನ ಹತ್ಯೆಯ ಧೃತಿಗೆಡದೆ ದಾಳಿ ನಡೆಸಿತು. ಕೊನೆಗೆ ಜಾಗತಿಕ ತೈಲ ಸಾಗಾಟದ ಪ್ರಮುಖ ಮಾರ್ಗ ಹರ್ಮುಜ್ ಜಲಸಂಧಿಯನ್ನು ಮುಚ್ಚಿತು. ಇದು ಅಮೆರಿಕಕ್ಕೆ ಅನಿರೀಕ್ಷಿತವಾಗಿತ್ತು. ಇರಾನ್‌ನ ಈ ನಿರ್ಧಾರ ಜಾಗತಿಕ ತಲ್ಲಣಕ್ಕೆ ಕಾರಣವಾಗಿ ಅಮೆರಿಕದ ವಿರುದ್ಧ ಯುದ್ಧ ಕೊನೆಗೊಳಿಸಲು ಒತ್ತಡ ಬರಲಾರಂಭಿಸಿತು.

ಇನ್ನೊಂದು ಕಡೆ ಇಸ್ರೇಲ್, ಲೆಬನಾನನ್ನು ಆಕ್ರಮಿಸಿ ಗ್ರೇಟರ್ ಇಸ್ರೇಲ್ ಕನಸನ್ನು ಸಾಕಾರಗೊಳಿಸಿಕೊಳ್ಳಲು ಹೊರಟಿತು. ಆದರೆ, ಇರಾನ್ ದಾಳಿಯನ್ನು ಪೂರ್ಣವಾಗಿ ತಡೆದುಕೊಳ್ಳಲು ಇಸ್ರೇಲ್‌ಗೂ ಈ ಬಾರಿ ಸಾಧ್ಯವಾಗಲಿಲ್ಲ. ಇಸ್ರೇಲ್ ತನ್ನ ಉದಯದ ಕಾಲದಲ್ಲೇ ಆರು ರಾಷ್ಟ್ರಗಳನ್ನು ಎದುರಿಸಿ ಯುದ್ಧ ಗೆದ್ದಿದ್ದರೂ ಇಲ್ಲಿ ಇರಾನ್ ನಿಯಂತ್ರಿಸಲು ಹೆಣಗಾಡಬೇಕಾಯಿತು.

ಒಟ್ಟಿನಲ್ಲಿ ಈ ಮೂರು ರಾಷ್ಟ್ರಗಳು ತಮ್ಮ ಗುರಿಗಳನ್ನು ತಲುಪಲು ಸಾಧ್ಯವಾಗಲೇ ಇಲ್ಲ. ಬೃಹತ್ ಸೇನೆ, ಅತ್ಯಾಧುನಿಕ ತಂತ್ರಜ್ಞಾನ, ಗುಪ್ತಚರ ನೆಟ್‌ವರ್ಕ್ ಹೊಂದಿರುವ ಅಮೆರಿಕ, ಇಸ್ರೇಲ್ ಹಾಗೂ ಪ್ರಕೃತಿದತ್ತವಾದ ತೈಲೋತ್ಪನ್ನಗಳನ್ನು, ಜಲಸಂಧಿಯನ್ನು ನಿಯಂತ್ರಿಸಿ ಗೆಲುವಿಗೆ ಶ್ರಮಿಸಿದ ಇರಾನ್ ಕೊನೆಗೆ ಶಾಂತಿ ಒಪ್ಪಂದಕ್ಕೆ ಶರಣಾಗಬೇಕಾಯಿತು. ಇಲ್ಲಿ ಗೆದ್ದದ್ದು ಯುದ್ಧವಲ್ಲ, ಶಾಂತಿ ಎಂಬುದು ಜಗಜ್ಜಾಹೀರಾಯಿತು.

ಯುದ್ಧದ ಕೊನೆಯಲ್ಲಿ ಪ್ರತಿ ರಾಷ್ಟ್ರಗಳು ಜಯ ತಮ್ಮದೆಂದು ಹೇಳಿಕೆ ನೀಡಿದ್ದರೂ, ವಾಸ್ತವಿಕವಾಗಿ ಈ ಯುದ್ಧದಲ್ಲಿ ಯಾರಿಗೆ ಏನು ಲಾಭ, ನಷ್ಟವಾಗಿದೆ ಎಂದು ನೋಡಿದರೆ ಎಲ್ಲರೂ ಕಳಕೊಂಡದ್ದೇ ಅಧಿಕ, ಗಳಿಕೆ ಶೂನ್ಯ.

AI ಚಿತ್ರ

ಇದು ಶಾಶ್ವತ ಶಾಂತಿಯೇ?

ರಾಜತಾಂತ್ರಿಕ ತಜ್ಞರು ಈ ಒಪ್ಪಂದವನ್ನು ಕೇವಲ ಒಂದು ತಾತ್ಕಾಲಿಕ ಕದನ ವಿರಾಮ ಎಂದು ನೋಡುತ್ತಿದ್ದಾರೆಯೇ ಹೊರತು ಶಾಶ್ವತ ಪರಿಹಾರವಲ್ಲ. ಇರಾನ್ ಬಹುದೊಡ್ಡ ಥ್ರೆಟ್ ಆಗಿರುವುದು ಇಸ್ರೇಲ್‌ಗೆ. ಈ ಯುದ್ಧ ನೇರವಾಗಿ ನಡೆಯುತ್ತಿರುವುದು ಇರಾನ್‌ನ ಐಆರ್‌ಜಿಸಿ ಮತ್ತು ಇಸ್ರೇಲ್ ಮಧ್ಯೆ. ವಿಪರ್ಯಾಸವೆಂದರೆ ಶಾಂತಿ ಒಪ್ಪಂದ ಆಗುತ್ತಿರುವುದು ಅಮೆರಿಕ ಮತ್ತು ಇರಾನ್ ಸರಕಾರದ ನಡುವೆ. ಇರಾನ್‌ನಲ್ಲಿ ಚುನಾಯಿತ ಸರಕಾರದ ಅಧಿಕಾರ ಸೀಮಿತವಾಗಿದ್ದು, ಖಮೇನಿ ಮತ್ತು ಅವರ ಸೇನೆ ಐಆರ್‌ಜಿಸಿ ಅಧಿಕಾರದಲ್ಲಿ ಹೆಚ್ಚಿನ ಹಿಡಿತ ಹೊಂದಿದೆ. ಆದರೆ ಈ ಒಪ್ಪಂದದಲ್ಲಿ ಇಸ್ರೇಲ್ ಹಾಗೂ ಐಆರ್‌ಜಿಸಿ ಇರದಿರುವುದು ಮತ್ತು ಇವರಿಗೆ ಈ ಒಪ್ಪಂದ ಒಪ್ಪಿಗೆಯೇ ಎಂಬುದು ಗೊತ್ತಿಲ್ಲ, ಈಗಾಗಲೇ ಇರಾನ್ ಒಳಗಿನ ಕಟ್ಟರ್‌ವಾದಿಗಳು ಯುದ್ಧ ನಿಲ್ಲಿಸಬಾರದೆಂದು ಪ್ರತಿಭಟಿಸುತ್ತಿದ್ದಾರೆ.

ಇನ್ನೊಂದೆಡೆ ಇರಾನ್, ಒಪ್ಪಂದದ ಹೊರತಾಗಿಯೂ ಹರ್ಮುಜ್ ಜಲಸಂಧಿಯಲ್ಲಿ ಶುಲ್ಕ ವಿಧಿಸುವ ಅಧಿಕಾರ ತನಗಿದೆ ಎಂದು ಹೇಳಿಕೆ ನೀಡಿದ್ದು, ಗೊಂದಲ ಮೂಡಿಸಿದೆ.

ಮತ್ತೊಂದೆಡೆ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ವಿರುದ್ಧ ದೇಶದಲ್ಲಿ ಆಡಳಿತ ವಿರೋಧಿ ಅಲೆ ಇದೆ. ಯುದ್ಧ ಸಾಗಿದಷ್ಟು ದಿನ ನೆತನ್ಯಾಹು ಅಧಿಕಾರ ಇರಲಿದೆ.

ಇಸ್ರೇಲ್ ಗುಟುರು

ಈ ಶಾಂತಿ ಒಪ್ಪಂದಕ್ಕೂ ನಮಗೂ ಸಂಬಂಧವೇ ಇಲ್ಲ ಎಂದು ಇಸ್ರೇಲ್ ಗುಟುರು ಹಾಕಿದೆ. ಅಷ್ಟಕ್ಕೂ ಒಪ್ಪಂದ ಆಗ್ತಿರೋದು ಇರಾನ್ ಹಾಗೂ ಅಮೆರಿಕ ನಡುವೆ. ಇದರಲ್ಲಿ ನಮ್ಮ ಪಾತ್ರ ಏನೂ ಇಲ್ಲ, ನಾವು ಲೆಬನಾನ್ ಮೇಲೆ ನಡೆಸುತ್ತಿರುವ ದಾಳಿಯನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ. ಲೆಬನಾನ್ ಪರವಾಗಿ ಇರಾನ್ ದಾಳಿ ನಡೆಸಿದರೆ ಅಥವಾ ಲೆಬನಾನ್‌ಗೆ ಬೆಂಬಲವಾಗಿ ನಿಂತರೆ ಇರಾನ್ ವಿರುದ್ಧವೂ ದಾಳಿ ಮುಂದುವರಿಯಲಿದೆ ಎಂದು ಇಸ್ರೇಲ್ ಕಡ್ಡಿ ಮುರಿದಂತೆ ಹೇಳಿದೆ.

ವಿಶ್ವಾಸಾರ್ಹತೆ ಕಳೆದುಕೊಂಡ ಟ್ರಂಪ್

ಭಾರತ- ಪಾಕಿಸ್ತಾನ ಯುದ್ಧದಲ್ಲಿ ಅಮೆರಿಕ ಅಧ್ಯಕ್ಷ ಟ್ರಂಪ್ ಮಾತನ್ನು ಹಲವರು ನಂಬಿದ್ದರು. ಆದರೆ, ಇರಾನ್ ಜತೆಗಿನ ಯುದ್ಧದ ಸಂದರ್ಭ ದಿನಕ್ಕೊಂದು ಹೇಳಿಕೆ ನೀಡತೊಡಗಿದರು. ಆರಂಭದಲ್ಲಿ ಮೂರು ದಿನಗಳಲ್ಲಿ ಯುದ್ಧ ಮುಗಿಯುತ್ತದೆ ಎಂದರು, ಯುದ್ಧ ವಿರಾಮದ ಬಗ್ಗೆ ಮಾತನಾಡಿದರು, ರಾತೋರಾತ್ರಿ ದಾಳಿ ಮಾಡಿ ಇರಾನ್ ಧ್ವಂಸ ಮಾಡುವುದಾಗಿ ತಿಳಿಸಿದರು. ಕೊನೆಗೆ ಒಪ್ಪಂದ ಮಾಡಿಕೊಳ್ಳುವಂತೆ ದುಂಬಾಲು ಬಿದ್ದರು. ಒಂದು ವೇಳೆ ಒಪ್ಪಂದ ನಡೆಯದೇ ಇದ್ದರೆ ಟ್ರಂಪ್ ಆಡಳಿತ ಕಳೆದುಕೊಳ್ಳುವ ಭೀತಿ ಇತ್ತು. ಅಮೆರಿಕದಲ್ಲಿ ನವೆಂಬರ್‌ನಲ್ಲಿ ಮಧ್ಯಂತರ ಚುನಾವಣೆ ನಡೆಯಲಿದ್ದು, ಈ ಚುನಾವಣೆಯಲ್ಲಿ ಟ್ರಂಪ್ ಸೋತರೆ, ಅವರ ವಿರುದ್ಧ ಮಹಾಭಿಯೋಗ ನಡೆಯಲಿದೆ. ಜತೆಗೆ ಹಲವು ಪ್ರಕರಣಗಳು ದಾಖಲಾಗುವ ಸಾಧ್ಯತೆಯೂ ಇದೆ. ಆದ್ದರಿಂದ ಟ್ರಂಪ್‌ಗೆ ಇರಾನ್ ವಿರುದ್ಧದ ಗೆಲುವಿಗಿಂತ ಒಪ್ಪಂದ ಅತಿ ಮುಖ್ಯವಾಗತೊಡಗಿದೆ.

ಅಮೆರಿಕ

ಈ ಯುದ್ಧದಲ್ಲಿ ಅಮೆರಿಕ ಜಾಗತಿಕ ಸೂಪರ್ ಪವರ್ ಆಗಿ ಭಾಗವಹಿಸಿದರೂ, ಅದಕ್ಕೆ ಸಿಕ್ಕಿದ ಲಾಭಕ್ಕಿಂತ ಅನುಭವಿಸಿದ ನಷ್ಟವೇ ಹೆಚ್ಚು ಎಂದು ಜಾಗತಿಕ ವಿಶ್ಲೇಷಕರು ಹೇಳುತ್ತಾರೆ.

ಸಾಧಿಸಿದ್ದು
- ಇರಾನ್‌ನ ಪರಮಾಣು ಕನಸನ್ನು ಕನಿಷ್ಠ 10 ವರ್ಷಗಳಷ್ಟು ಹಿಂದಕ್ಕೆ ತಳ್ಳಿರುವುದು.
- ತನ್ನ ಕಟು ಶತ್ರುವಾಗಿದ್ದ ಆಯಾತ್‌ಉಲ್ಲಾ ಅಲಿ ಖಮೇನಿ ಮತ್ತು ಐಆರ್‌ಜಿಸಿ ಕಮಾಂಡರ್‌ಗಳನ್ನು ಹತ್ಯೆ ಮಾಡಿದ್ದು.
- ಬಿಲಿಯನ್‌ಗಟ್ಟಲೆ ಡಾಲರ್ ಮೌಲ್ಯದ ಶಸ್ತ್ರಾಸ್ತ್ರಗಳ ಮಾರಾಟ.

ಕಳೆದುಕೊಂಡಿದ್ದು
- ಕೆಲವೇ ತಿಂಗಳುಗಳ ಯುದ್ಧಕ್ಕಾಗಿ ಅಮೆರಿಕದ ಬಿಲಿಯನ್‌ಗಟ್ಟಲೆ ಡಾಲರ್ ಖರ್ಚು, ಕುಸಿದ ಆರ್ಥಿಕ ವ್ಯವಸ್ಥೆ.
- ಜೂ.14ರ ಶಾಂತಿ ಒಪ್ಪಂದದ ಭಾಗವಾಗಿ, ತಾನು ಮುಟ್ಟುಗೋಲು ಹಾಕಿಕೊಂಡಿದ್ದ ಇರಾನ್‌ನ 12 ಬಿಲಿಯನ್ ಡಾಲರ್ ಹಣ ಬಿಡುಗಡೆ.
- ಹರ್ಮುಜ್ ಜಲಸಂಧಿಯನ್ನು ಇರಾನ್ ಬಂದ್ ಮಾಡಿದಾಗ, ಅದನ್ನು ತಕ್ಷಣವೇ ತೆರವುಗೊಳಿಸಲು ಸಾಧ್ಯವಾಗದಿರುವುದು.
- ಅಮೆರಿಕವನ್ನು ಕಟ್ಟಿಹಾಕಲು ಚೀನಾ ಮತ್ತು ರಷ್ಯಾ ಇರಾನ್‌ಗೆ ಪರೋಕ್ಷವಾಗಿ ಬೆಂಬಲ.
- ನೂರಾರು ಅಮೆರಿಕನ್ ಸೈನಿಕರು ಜೀವ ಕಳೆದುಕೊಂಡರು ಮತ್ತು ಗಾಯಗೊಂಡರು.
- ಯುದ್ಧದಿಂದಾಗಿ ಅಮೆರಿಕದಲ್ಲೂ ತೈಲ ಬೆಲೆ ಏರಿಕೆಯಾಗಿ ಹಣದುಬ್ಬರ ಸೃಷ್ಟಿ ಜನಸಾಮಾನ್ಯರ ಆಕ್ರೋಶ.
- ನ್ಯಾಟೋ ದೇಶಗಳು ಅಮೆರಿಕದ ಕೈಬಿಟ್ಟಿದ್ದು.

ಪಾಠ: ಜಗತ್ತಿನ ಸೂಪರ್ ಪವರ್ ಎಂದೆನಿಸಿಕೊಂಡು ತನಗೆ ಬೇಕಾದಾಗ ಯಾವ ರಾಷ್ಟ್ರದ ಮೇಲಾದರೂ ದಾಳಿ ಮಾಡಿ ವಶಪಡಿಸಿಕೊಳ್ಳಬಲ್ಲೆ ಎಂಬ ಅಹಂಗೆ ಪೆಟ್ಟು ಬಿತ್ತು.

ಇಸ್ರೇಲ್

ಇರಾನ್ ವಿರುದ್ಧದ ಯುದ್ಧದಲ್ಲಿ ಮುಂಚೂಣಿಯಲ್ಲಿದ್ದ ಇಸ್ರೇಲ್‌ಗೆ ಈ ಸಂಘರ್ಷ ಅಸ್ತಿತ್ವದ ಹೋರಾಟವಾಗಿತ್ತು. ಆದರೆ, ಈಗಿನ ಕದನ ವಿರಾಮದಿಂದ ಇಸ್ರೇಲ್ ಅಷ್ಟೇನೂ ಹ್ಯಾಪಿ ಆಗಿಲ್ಲ.

ಸಾಧಿಸಿದ್ದು
- ಇರಾನ್‌ನ ಕೆಲವು ಪರಮಾಣು ಸ್ಥಾವರಗಳ ಧ್ವಂಸ.
- ಇರಾನ್‌ನ ಪರಮೋಚ್ಚ ನಾಯಕ ಆಯಾತ್‌ಉಲ್ಲಾ ಅಲಿ ಖಮೇನಿ ಮತ್ತು ಪ್ರಮುಖ ಸೇನಾ ದಂಡನಾಯಕರ ಹತ್ಯೆ.
- ಇಸ್ರೇಲ್ ಮಿಲಿಟರಿ ಮತ್ತು ಗುಪ್ತಚರ ಇಲಾಖೆಯ ಸರ್ವಶ್ರೇಷ್ಠತೆ ಜಗತ್ತಿಗೆ ಸಾಬೀತು.

ಕಳೆದುಕೊಂಡಿದ್ದು
- ಇಸ್ರೇಲ್ ಅಬೇಧ್ಯ ರಕ್ಷಣಾ ಕೋಟೆ ಭೇದಿಸಿದ ಇರಾನ್‌ನ ಹಗ್ಗದ ಕ್ಷಿಪಣಿ, ಡ್ರೋನ್‌ಗಳು.
- ಉತ್ತರ ಇಸ್ರೇಲ್ ಮತ್ತು ಪ್ರಮುಖ ನಗರಗಳಲ್ಲಿ ಭಾರಿ ಪ್ರಮಾಣದ ಆಸ್ತಿಪಾಸ್ತಿ ನಷ್ಟ
- ಇರಾನ್‌ನ ಕ್ಷಿಪಣಿಗಳನ್ನು ಹೊಡೆದುರುಳಿಸಲು ಶತಕೋಟಿ ಡಾಲರ್‌ಗಟ್ಟಲೆ ವೆಚ್ಚ
- ಯುದ್ಧದ ಭೀತಿಯಿಂದಾಗಿ ನೆಲಕಚ್ಚಿದ ದೇಶದ ಆದಾಯ ಮೂಲಗಳು.
- ಯುದ್ಧದಿಂದ ಇರಾನ್ ಬೆಂಬಲಿತ ಹೆಜ್ಬೊಲ್ಲಾಗಳು ಹಾಗೂ ಹೌತಿಗಳು ಸಂಪೂರ್ಣ ನಾಶವಾಗಿಲ್ಲ.
- ಇರಾನ್‌ನ ಹೊಸ ನಾಯಕತ್ವ ಮತ್ತೆ ಕಟ್ಟರ್ ಪಂಥೀಯನಾದರೆ ಇಸ್ರೇಲ್‌ಗೆ ಮತ್ತೆ ಭದ್ರತೆ ಭೀತಿ.

ಪಾಠ: ಆಧುನಿಕ ತಂತ್ರಜ್ಞಾನ, ಬಲಿಷ್ಠ ಗುಪ್ತಚರ ನೆಟ್‌ವರ್ಕ್ ಇದ್ದರೆ ಯುದ್ಧ ಗೆಲ್ಲಬಹುದೆಂಬ ನಂಬಿಕೆಗೆ ಪೆಟ್ಟು.

ಇರಾನ್

ಇರಾನ್‌ಗೆ ಈ ಯುದ್ಧ ಸಾರ್ವಭೌಮತ್ವವನ್ನು ಉಳಿಸಿಕೊಳ್ಳುವ ಹೋರಾಟವಾಗಿತ್ತು.

ಸಾಧಿಸಿದ್ದು
- ಅಮೆರಿಕದಿಂದ ನಿರ್ಬಂಧಿಸಲ್ಪಟ್ಟಿದ್ದ 12 ಶತಕೋಟಿ ಡಾಲರ್ ಹಣ ಬಿಡುಗಡೆ ಮಾಡಿಸಿಕೊಳ್ಳುವಲ್ಲಿ ಯಶಸ್ವಿ
- ಹರ್ಮುಜ್ ಜಲಸಂಧಿಯನ್ನು ಬಂದ್ ಮಾಡುವ ಮೂಲಕ, ಅಮೆರಿಕವನ್ನು ಒಪ್ಪಂದದ ಮೇಜಿಗೆ ತಂದಿದ್ದು, ಮತ್ತು ವಿಶ್ವವನ್ನು ಅಮೆರಿಕದ ವಿರುದ್ಧ ನಿಲ್ಲುವಂತೆ ಮಾಡಿರುವುದು.
- ಹೆಜ್ಬೊಲ್ಲಾ, ಹೌತಿಗಳ ಮೂಲಕ ದಾಳಿ ನಡೆಸಿ ತನ್ನ ಪ್ರಾದೇಶಿಕ ನೆಟ್‌ವರ್ಕ್ ಎಷ್ಟು ಶಕ್ತಿಶಾಲಿ ಎಂಬುದನ್ನು ತೋರಿಸಿದ್ದು.

ಕಳೆದುಕೊಂಡಿದ್ದು
- ತನ್ನ ಪರಮೋಚ್ಚ ಧಾರ್ಮಿಕ ನಾಯಕ ಖಮೇನಿ ಸೇರಿದಂತೆ ಐಆರ್‌ಜಿಸಿಯ ಉನ್ನತ ಕಮಾಂಡರ್‌ಗಳನ್ನು ಕಳೆದುಕೊಂಡಿತು.
- ಇರಾನ್‌ನ ಪರಮಾಣು ತಂತ್ರಜ್ಞಾನದ ಬೆಳವಣಿಗೆ ಕನಿಷ್ಠ ಒಂದು ದಶಕದಷ್ಟು ಹಿಂದಕ್ಕೆ ಹೋಗಿದೆ.
- ಇರಾನ್‌ನ ಪ್ರಮುಖ ವಾಯು ರಕ್ಷಣಾ ವ್ಯವಸ್ಥೆಗಳು, ಕ್ಷಿಪಣಿ ತಯಾರಿಕಾ ಘಟಕಗಳು ಮತ್ತು ರಡಾರ್ ಕೇಂದ್ರಗಳು ತೀವ್ರವಾಗಿ ಹಾನಿಗೊಳಗಾಗಿವೆ.
- ದಾಳಿಗಳ ಭೀಕರತೆಗೆ ಇರಾನ್‌ನ ಸಾವಿರಾರು ಸೈನಿಕರು ಮತ್ತು ನಾಗರಿಕರ ಬಲಿ.

ಪಾಠ: ಪ್ರಕೃತಿದತ್ತವಾದ ಸಂಪತ್ತನ್ನು ನಿಯಂತ್ರಿಸಿದರೆ ಯುದ್ಧ ಗೆಲ್ಲಲು ಸಾಧ್ಯವಿಲ್ಲ ಎಂದು ಸಾಬೀತು.

santhosh.kumar2@timesofindia.com

ಅಮ್ಮ ಕ್ಷಮಿಸಿದರೂ, ಕನ್ನಡಮ್ಮ ಕ್ಷಮಿಸಲ್ಲ!

■ ವೀರಕಪುತ್ರ ಶ್ರೀನಿವಾಸ

ಅದೊಂದು ಹಳ್ಳಿ. ಆ ಹಳ್ಳಿಯಿಂದ ಪಟ್ಟಣಕ್ಕೆ ಹೋಗಲು ದಿನವೂ ಒಂದು ಬಸ್ ಬರುತ್ತಿತ್ತು. ಅದು ಕೇವಲ ಬಸ್ಸಾಗಿರಲಿಲ್ಲ; ಜನರ ನಂಬಿಕೆಯಾಗಿತ್ತು. ಅದರ ಸಮಯಪಾಲನೆಗೆ ಜನರು ತಮ್ಮ ಗಡಿಯಾರ ಸರಿಪಡಿಸಿಕೊಳ್ಳುತ್ತಿದ್ದರು. ಆ ಬಸ್ಸು ಇದೆ ಅನ್ನುವ ಭರವಸೆಯೇ ಆ ಊರಿನ ಬದುಕಿನ ಒಂದು ಭಾಗವಾಗಿತ್ತು. ಆದರೆ, ಕಾಲ ಬದಲಾಯಿತು. ಬಸ್ಸು ಮೊದಲಿನಂತಿರಲಿಲ್ಲ, ಸಮಯಕ್ಕೆ ಸರಿಯಾಗಿ ಬರಲಿಲ್ಲ, ಆಸನಗಳು ಹಾಳಾದವು. ಎಲ್ಲೆಂದರಲ್ಲಿ ಕೆಟ್ಟು ನಿಲ್ಲುವುದು ಸಾಮಾನ್ಯವಾಯಿತು. ಅದರ ಸದ್ದಿಗೆ ತಲೆನೋವು, ಅಲಗಾಡುಪಿಕೆಗೆ ಮೈಕೈನೋವು ಬರುವಂತಾಯಿತು. ಎಷ್ಟು ದಿನ ಅಂತ ಜನ ಅದನ್ನು ಸಹಿಸಿಕೊಳ್ಳುತ್ತಾರೆ? ಅವರು ಪರ್ಯಾಯಗಳನ್ನು ಹುಡುಕಿಕೊಂಡರು. ಪಕ್ಕದ ಊರಿನ ಬಸ್ಸು ಹತ್ತಿದರು. ಆಟೊ ಬಳಸಿದರು. ಬೈಕ್ ಖರೀದಿಸಿದರು. ಹೀಗೆ ಬಸ್ಸಿನ ಮೇಲಿದ್ದ ನಂಬಿಕೆ ಕರಗತೊಡಗಿತು. ಆಗ ಸಂಬಂಧಪಟ್ಟವರು ಎಚ್ಚೆತ್ತುಕೊಂಡು ವಾರಕ್ಕೊಮ್ಮೆ ರಾಜಹಂಸದಂಥ ಬಸ್ಸನ್ನು ರಸ್ತೆಗೆ ಇಳಿಸಿದರು. ಆದರೆ, ಆಗಲೇ ತಡವಾಗಿತ್ತು. ಏಕೆಂದರೆ, ಜನರು ಬಸ್ಸನ್ನು ತೊರೆದಿರಲಿಲ್ಲ; ಅದರ ಮೇಲಿನ ನಂಬಿಕೆಯನ್ನು ತೊರೆದಿದ್ದರು. ಪರ್ಯಾಯಗಳನ್ನು ಹುಡುಕಿಕೊಂಡಿದ್ದರು.

ವಿಕ ಚರ್ಚೆ



ಕನ್ನಡ ಚಿತ್ರರಂಗದ ಸ್ಥಿತಿಯೂ ಇಂದು ಇದೇ ಆಗಿದೆ. ಪ್ರೇಕ್ಷಕರು ಕನ್ನಡ ಸಿನಿಮಾವನ್ನು ದ್ವೇಷಿಸುತ್ತಿಲ್ಲ; ಅವರು ನಿರಾಶೆಗೊಂಡಿದ್ದಾರೆ. ಒಳ್ಳೆ ಸಿನಿಮಾಗಳು ಬರುತ್ತಿಲ್ಲವೆಂದಲ್ಲ, ಖಂಡಿತವಾಗಿಯೂ ಬರುತ್ತಿವೆ. ಆದರೆ, ಅವು ಸ್ಟಾರ್ ಸಿನಿಮಾಗಳಲ್ಲ, ಹೊಸಬರ ಸಿನಿಮಾಗಳು. ಹೊಸಬರು ಸರ್ವಸ್ವವನ್ನೂ ಒತ್ತೆಯಿಟ್ಟು ಸಿನಿಮಾ ಮಾಡುತ್ತಿದ್ದಾರೆ. ವಿಭಿನ್ನ ಕಥೆಗಳು ಹೇಳುತ್ತಿವೆ. ಆದರೆ, ಜನರು ಅವುಗಳತ್ತ ತಿರುಗಿ ನೋಡುತ್ತಿಲ್ಲ, ಏಕೆಂದರೆ, ನಂಬಿಕೆಯ ಸೇತುವೆ ಕುಸಿದುಬಿಟ್ಟಿದೆ. ಕಳೆದೊಂದು ದಶಕದಲ್ಲಿ ಕನ್ನಡ ಪ್ರೇಕ್ಷಕನಿಗೆ ಆದ ಮೋಸ ಸಣ್ಣದೇನಲ್ಲ, ಆ ಕಾರಣಕ್ಕೆ ಅವನಿಗೆ ಪರ್ಯಾಯ ಸಿನಿಮಾಗಳು ಒಗ್ಗಿಹೋಗಿವೆ. ಇಂಥ ಸಂದರ್ಭದಲ್ಲಿ ನಮ್ಮ ಸ್ಟಾರ್ ನಟರು ಏನು ಮಾಡಬಹುದು? ದೊಡ್ಡದೇನೂ ಅಲ್ಲ, ಹೊಸಬರು ''ಒಳ್ಳೆಯ ಸಿನಿಮಾ ಮಾಡಿದ್ದಾರೆ, ನೋಡಿ'' ಎಂದು ಒಂದು ಪೋಸ್ಟ್ ಹಾಕಬಹುದು. ಒಂದು ಟ್ವೀಟ್ ಮಾಡಬಹುದು. ಒಂದು ವಿಡಿಯೊ ಮಾಡಬಹುದು. ಅದರಿಂದ ಸಿನಿಮಾ ಹಿಟ್ ಆಗಿಬಿಡುವುದಿಲ್ಲ, ಆದರೆ, ಅದೊಂದು ಹಣತೆಯನ್ನು ಹತ್ತಿಸುತ್ತದೆ. ನಾವು ನಮ್ಮ ಚಿತ್ರರಂಗದ ಜತೆ ಇದ್ದೇವೆ ಭರವಸೆಯನ್ನು ಹುಟ್ಟಿಸುತ್ತದೆ. ಕನ್ನಡ ಪ್ರೇಕ್ಷಕನನ್ನು ಕನ್ನಡ ಸಿನಿಮಾದ ಜತೆಗೆ ಉಳಿಯುವಂತೆ ಮಾಡುತ್ತದೆ.

ಆದರೆ, ಅದು ನಡೆಯುವುದೇ ಇಲ್ಲ, ಏಕೆಂದರೆ, ನಮ್ಮ ಸ್ಟಾರ್‌ಗಳು ಈ ಜಗತ್ತಿನ ಅತ್ಯಂತ ಅದೃಷ್ಟವಂತರು. ಜನರ ಹಣದಿಂದ ಅವರು ಸ್ಟಾರ್‌ಗಳಾಗುತ್ತಾರೆ. ಅಭಿಮಾನಿಗಳ ಪ್ರೀತಿಯಿಂದ ಸೂಪರ್ ಸ್ಟಾರ್‌ಗಳಾಗುತ್ತಾರೆ. ಆದರೆ, ಅವರು ನಾಡು ನುಡಿ ಹೋರಾಟಗಳಲ್ಲಿ ಭಾಗವಹಿಸಬೇಕಿಲ್ಲ, ನೆಲ-ಜಲದ ವಿಷಯಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಕಿಲ್ಲ, ಅಲ್ಯಾರೋ ಮರ್ಯಾದೆ ಹತ್ಯೆಯಾದರೆ, ಇಲ್ಯಾರೋ ಜಾತಿನಿಂದನೆ ಅನುಭವಿಸಿದರೆ, ಮತ್ತೆಲ್ಲೋ ರೈತ ಹೋರಾಟವಾದರೆ, ಹಕ್ಕುಗಳ ಹರಣವಾದರೆ, ಆಶಯಗಳ ಮರಣವಾದರೆ ಅವರು ಸ್ಪಂದಿಸಬೇಕಿಲ್ಲ. ಅಷ್ಟೇಕೆ ಅವರದ್ದೇ ಚಿತ್ರರಂಗ ಕಷ್ಟದಲ್ಲಿದ್ದರೂ ಅವರು ಸ್ಪಂದಿಸಬೇಕಿಲ್ಲ. ಜಸ್ಟ್ ಸಿನಿಮಾದಲ್ಲಿ ನಟಿಸಿ, ಅದು ಹಿಟ್ ಆದ್ರೆ ಸಾಕು ಅವರು ದೈವ ಸಮಾನರಾಗಿಬಿಡುತ್ತಾರೆ. ಎಂಥ ಅದೃಷ್ಟವಂತರಲ್ವಾ? ಹಾಗಾದ್ರೆ ದುರಾದೃಷ್ಟವಂತರು ಯಾರು? ಇನ್ಯಾರು ಅದು ನಾವು ನೀವೇ! ಕೃಷಿಗೆ ಕಾವೇರಿ ಸಮಸ್ಯೆಯಾದರೆ ನಮಗೆ ಗಂಟಲಲ್ಲಿ ನೀರು ಸಿಕ್ಕಿಕೊಳ್ಳುತ್ತದೆ. ಕನ್ನಡದಲ್ಲಿ ನಾಮಫಲಕ ಕಾಣದೇ ಹೋದರೆ ಕಣ್ಣಲ್ಲಿ ನೀರು ತುಂಬಿಕೊಳ್ಳುತ್ತದೆ. ರೈತ ಆತ್ಮಹತ್ಯೆ ಮಾಡಿಕೊಂಡರೆ ಮನದಲ್ಲಿ ಸೂತಕ ಆವರಿಸಿಕೊಳ್ಳುತ್ತೆ. ನಟನಿಗೆ ಅವಮಾನವಾದರೆ ಮೈಯಲ್ಲಿ ಬೆಂಕಿ ಹತ್ತಿಕೊಳ್ಳುತ್ತೆ. ಹೋರಾಟಗಾರನಿಗೆ ಊಟಕ್ಕಿಲ್ಲದೇ ಹೋದರೆ ನಮ್ಮ ಮನೆಯ ಒಲೆ ಸಂಕಟದಿಂದ ಉರಿಯುತ್ತೆ. ಕೊನೆಗೆ ಈ ಚಿತ್ರರಂಗ ಕಷ್ಟಕ್ಕೆ ಸಿಕ್ಕಿಕೊಂಡಾಗಲೂ ನಾವೇ ಅದರ ಉತ್ತರಾಧಿಕಾರಿಗಳಂತೆ ಮೈಯ್ಯೊಡ್ಡಿ ನಿಂತುಬಿಡುತ್ತೇವೆ. ಅಷ್ಟಕ್ಕೂ ನಟರಿಗೆ ನಾಡು, ನುಡಿ, ನೆಲ, ಜಲ, ರೈತ, ಅದು ಇದು ಕೊನೆಗೆ ಅವರದ್ದೇ ಚಿತ್ರರಂಗವೂ ಅವರ ಜವಾಬ್ದಾರಿಯಂತೆ ಎನಿಸುವುದಿಲ್ಲ ಅನ್ನೋದೇ ದೊಡ್ಡ ಅಚ್ಚರಿ. ಅದಕ್ಕೂ ನಾವೇ ಆಗಬೇಕು. ಆಹಾ...!

ಕೆಲವು ತಿಂಗಳುಗಳ ಹಿಂದೆ, ''ನೂರು ರೂಪಾಯಿ ಕೊಟ್ಟು ಸಿನಿಮಾ ನೋಡೋಕ್ಕೆ ಆಗಲ್ವೇನ್ರಯ್ಯಾ?,'' ಎಂಬ ಮಾತೊಂದು ಸದ್ದು ಮಾಡಿತ್ತು. ಖಂಡಿತ ಆಗುತ್ತೆ ಇಷ್ಟು ವರ್ಷಗಳಿಂದ ಕನ್ನಡ ಪ್ರೇಕ್ಷಕ ಅದನ್ನೇ ತಾನೇ ಮಾಡುತ್ತಾ ಬಂದಿದ್ದು. ತನ್ನ ಜೇಬಿನಿಂದ ದುಡ್ಡು ತೆಗೆದು ಚಿತ್ರರಂಗವನ್ನು ಬದುಕಿಸಿದ್ದಾನೆ. ಆ ನೂರು ರೂಪಾಯಿಯೇ ನಟರನ್ನು ಸ್ಟಾರ್‌ಗಳನ್ನಾಗಿ ಮಾಡಿದ್ದು. ಆ ನೂರು ರೂಪಾಯಿಯೇ ಸಿನಿ ಬ್ಯಾನರ್‌ಗಳನ್ನು ಬೆಳೆಸಿದ್ದು. ಆ ನೂರು ರೂಪಾಯಿಯೇ ಕಟೌಟುಗಳ ಹೈಟನ್ನು ಹೆಚ್ಚಿಸಿದ್ದು. ಆ ನೂರು ರೂಪಾಯಿಯೇ ನಟರ ಕನಸುಗಳಿಗೆ ರೆಕ್ಕೆ ಕಟ್ಟಿದ್ದು. ಆದರೆ, ಈಗ ಪ್ರೇಕ್ಷಕನೂ ಅದೇ ಪ್ರಶ್ನೆಯನ್ನು ಕೇಳುತ್ತಿದ್ದಾನೆ. ನಾವು ನಮ್ಮ ಕೆಲಸ ಮಾಡಿದ್ದೇವೆ. ನೀವು ನಿಮ್ಮ ಕೆಲಸ ಮಾಡಿದ್ದೀರಾ?

ನಿಮ್ಮ ಸಿನಿಮಾ ವರ್ಷಕ್ಕೊಮ್ಮೆ ಬರಲಿ, ಎರಡು ವರ್ಷಕ್ಕೊಮ್ಮೆ ಬರಲಿ, ಐದು ವರ್ಷಕ್ಕೊಮ್ಮೆ ಬರಲಿ. ಯಾರಿಗೂ ತೊಂದರೆಯಿಲ್ಲ, ಆದರೆ, ಆ ನಡುವೆ ಬರುವ ಒಳ್ಳೆಯ ಸಿನಿಮಾಗಳನ್ನು ನೀವು ನೋಡಬಹುದಲ್ಲವೇ? ಅದರ ಬಗ್ಗೆ ನಾಲ್ಕು ಒಳ್ಳೆಯ ಮಾತು ಆಡಬಹುದಲ್ಲವೇ? ಹೊಸಬರ ಹೆಗಲ ಮೇಲೆ ಕೈ ಇಡಬಹುದಲ್ಲವೇ? ಯಾಕೆಂದರೆ, ಒಂದು ಕಾಲದಲ್ಲಿ ನೀವೂ ಹೊಸಬರೇ ಆಗಿದ್ದಿರಿ. ಅದನ್ನು ಮರೆಯಬೇಡಿ ಎಂದು ಕೇಳುತ್ತಿದ್ದಾನೆ. ಪ್ರೇಕ್ಷಕರು ಮೂರ್ಖರಲ್ಲ, ಒಮ್ಮೆ ಅವರು ಪರ್ಯಾಯಗಳನ್ನು ಕಂಡುಕೊಂಡರೆ, ಮತ್ತೆ ಅವರನ್ನು ಮರಳಿ ಕರೆತರುವುದು ಸುಲಭವಲ್ಲ, ಆಗ ರಾಜಹಂಸದಂತಹ ದೊಡ್ಡ ಸಿನಿಮಾಗಳು ಬಂದರೂ, ಖಾಲಿ ಕುರ್ಚಿಗಳೇ ಉತ್ತರ ಕೊಡಬಲ್ಲವು. ಆದ್ದರಿಂದ ನಿಮ್ಮದೇ ಚಿತ್ರರಂಗದ ಬಗ್ಗೆ ಕಾಳಜಿವಹಿಸಿ ಎಂದು ಕೇಳುತ್ತಿದ್ದಾನೆ. ಹೊಸಬರ ಕನ್ನಡ ಸಿನಿಮಾಗಳನ್ನು ನೋಡಿ, ಅದರ ಬಗ್ಗೆ ಮಾತನಾಡಿ, ನಂಬಿಕೆಯನ್ನು ಮರುಸ್ಥಾಪಿಸಿ ಎಂದು ಸಲಹೆ ನೀಡುತ್ತಿದ್ದಾನೆ. ಏಕೆಂದರೆ, ಕೊನೆಗೆ ಚಿತ್ರರಂಗವನ್ನು ಉಳಿಸುವುದು ದೊಡ್ಡ ಬಜೆಟ್ ಸಿನಿಮಾಗಳಲ್ಲ; ನಿರಂತರವಾಗಿ ಬರುತ್ತಿರುವ ಒಳ್ಳೆಯ ಸಿನಿಮಾಗಳು. ಮತ್ತು ಆ ಸಿನಿಮಾಗಳ ಹಿಂದೆ ನಿಂತಿರುವವರು ಕೇವಲ ಹೊಸಬರಲ್ಲ; ಕನ್ನಡದ ಭವಿಷ್ಯ.

ಅಷ್ಟೂ ಮಾಡದೇ ಹೋದರೆ, ನಿಮ್ಮಮ್ಮ ಕ್ಷಮಿಸಿದರೂ ಕನ್ನಡಮ್ಮ ಕ್ಷಮಿಸುವುದಿಲ್ಲ.

(ಲೇಖಕರು: ಪುಸ್ತಕೋದ್ಯಮಿ)

ಪುರುಷ ನರ್ಸ್‌ಗಳ ತೊಳಲಾಟ

■ ಶಿವಕುಮಾರ್ ಶೆಟ್ಟಿಗಾರ್

ನರ್ಸಿಂಗ್ ಕ್ಷೇತ್ರದಲ್ಲಿರುವುದು ಸುಮಾರು ಶೇ.90ರಷ್ಟು ಮಹಿಳೆಯರೇ. ಆದರೆ, ಈಗೀಗ ಈ ಸೇವಾ ಕ್ಷೇತ್ರದ ಚಹರೆ ಬದಲಾಗುತ್ತಿದೆ. ಪುರುಷರೂ ನರ್ಸಿಂಗ್ ಕ್ಷೇತ್ರಕ್ಕೆ ಬರುತ್ತಿದ್ದಾರೆ. ಅವರು ಸಾಮಾಜಿಕ ಮತ್ತು ವೃತ್ತಿಪರ ಮಟ್ಟದಲ್ಲಿ ಹಲವು ಕಠಿಣ ಪರಿಸ್ಥಿತಿಗಳನ್ನು ಎದುರಿಸಬೇಕಾಗಿರುವುದು ವಿಪರ್ಯಾಸ.

ಸಮಾಜದಲ್ಲಿ ಪುರುಷ ನರ್ಸ್‌ಗಳು ವೈದ್ಯಕೀಯ ಸೀಟು ಸಿಗದೆ ಇಲ್ಲಿಗೆ ಬಂದಿದ್ದಾರೆ ಹಾಗೂ ವೈದ್ಯರಿಗಿಂತ ಕೀಳು ಎಂಬ ತಪ್ಪು ಕಲ್ಪನೆ ಇತರರಲ್ಲಿದೆ. ನರ್ಸಿಂಗ್ ವೃತ್ತಿಯನ್ನು ತಾಯಿ, ತಾಯ್ತನ ಮತ್ತು ಮಹಿಳಾ ಸಹಜ ಕಾಳಜಿಗೆ ಮಾತ್ರ ಸೀಮಿತಗೊಳಿಸಿ ನೋಡುತ್ತಿರುವುದು ಪೂರ್ವಗ್ರಹವೇ ಸರಿ. ಕೆಲಸದ ಸ್ಥಳದಲ್ಲಿ ಮಹಿಳಾ ಸಹೋದ್ಯೋಗಿಗಳ ನಡುವೆ ಪುರುಷ ನರ್ಸ್‌ಗಳು ಒಂಟಿತನ ಅನುಭವಿಸುತ್ತಾರೆ. ಅವರ ಔಪಚಾರಿಕ ಹಾಗೂ ಅನೌಪಚಾರಿಕ ಚರ್ಚೆಗಳಿಂದ ಹೊರಗುಳಿಯುವುದರಿಂದ ಸಹೋದ್ಯೋಗಿಗಳಿಂದ ದೂರ ವಿರುವಿಕೆ ಎದ್ದು ಕಾಣುತ್ತದೆ. ನರ್ಸಿಂಗ್ ಕಾಲೇಜುಗಳಲ್ಲಿ ಅಥವಾ ಆಸ್ಪತ್ರೆಗಳಲ್ಲಿ ಉನ್ನತ ಹುದ್ದೆಗಳಲ್ಲಿ ಪುರುಷ ಅಧಿಕಾರಿಗಳು ಕಡಿಮೆ ಇರುವುದರಿಂದ ಹೊಸಬರಿಗೆ ಸರಿಯಾದ ಮಾರ್ಗದರ್ಶನ ಸಿಗದೆ ಮಾರ್ಗದರ್ಶನದ ಅಭಾವ ಕಾಡುತ್ತಿದೆ. ಆಸ್ಪತ್ರೆಗಳಲ್ಲಿ ಪುರುಷ ನರ್ಸ್‌ಗಳು ಎದುರಿಸುವ ವಿಶಿಷ್ಟ ಸವಾಲುಗಳನ್ನು, ಅಂದರೆ ರೋಗಿಗಳ ನಿರಾಕರಣೆಯಂಥ ಸಂದರ್ಭಗಳನ್ನು ನಿಭಾಯಿಸುವ ಪ್ರತ್ಯೇಕ ನಿಯಮ ನಿಬಂಧನೆಗಳಿಲ್ಲದಿರುವುದು ಲಿಂಗ ತಾರತಮ್ಯ ರಹಿತ ನೀತಿಗಳ ಕೊರತೆ ಎತ್ತಿ ತೋರಿಸುತ್ತದೆ. ಕೆಲಸದ ಸ್ಥಳದಲ್ಲಿ ತಮ್ಮ ನೈಜ ನಡವಳಿಕೆಯನ್ನು ಹತ್ತಿಕ್ಕಿ ಸಮಾಜ ನಿರೀಕ್ಷಿಸುವ ಒತ್ತಡದಲ್ಲಿ ಕೆಲಸ ಮಾಡುವುದು ತೀವ್ರ ಮಾನಸಿಕ ಆಯಾಸಕ್ಕೆ ಕಾರಣವಾಗಿ ಮಾನಸಿಕ ಒತ್ತಡ ಮತ್ತು ವೃತ್ತಿ ತಾರತಮ್ಯ ಉಂಟಾಗುತ್ತಿದೆ. ಈ ನಿರಂತರ ಒತ್ತಡ, ಒಂಟಿತನ ಮತ್ತು ಸಮಾಜಕ್ಕೆ ಸದಾ ತಮ್ಮ ಯೋಗ್ಯತೆಯನ್ನು ಸಾಬೀತುಪಡಿಸಬೇಕಾದ ಪರಿಸ್ಥಿತಿಯಿಂದಾಗಿ ಅನೇಕರು ಕೆಲಸ ತೊರೆಯುತ್ತಿದ್ದಾರೆ. ಕೇವಲ ಸರಕಾರಿ ಸಂಸ್ಥೆಗಳಲ್ಲಿ ಮಾತ್ರ ಅವರಿಗೆ ಹೆಚ್ಚಿನ ವರಮಾನ ಹಾಗೂ ಭದ್ರತೆಯಿರುತ್ತದೆ. ನರ್ಸಿಂಗ್ ಕ್ಷೇತ್ರದಲ್ಲಿ ಆರಂಭಿಕ ಸಂಬಳ ಕಡಿಮೆ ಇರುವುದು ಪುರುಷ ದಾದಿಯರಲ್ಲಿ ಆಂತರಿಕ ಅಸಮಾಧಾನ ಮೂಡಿಸಿ ಸಾಮಾಜಿಕ ಪಾತ್ರಗಳ ಸಂಘರ್ಷಕ್ಕೆ ಕಾರಣವಾಗುತ್ತದೆ.

ವೈದ್ಯಕೀಯ ಸವಾಲುಗಳು ಮತ್ತು ರೋಗಿಗಳ ವರ್ತನೆಯೂ ಪುರುಷ ನರ್ಸ್‌ಗಳಿಗೆ ಕಠಿಣವಾಗಿರುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಮಹಿಳಾ ರೋಗಿಗಳು ಕ್ಯಾತಿಟರ್ ಅಳವಡಿಕೆ ಅಥವಾ ಖಾಸಗಿ ಅಂಗಗಳ ಸ್ವಚ್ಛತೆಯಂಥ ಆಪ್ತ ಆರೈಕೆಯನ್ನು ಪುರುಷ ನರ್ಸ್‌ಗಳಿಂದ ಪಡೆಯಲು ಹಿಂಜರಿಯುತ್ತಾರೆ ಹಾಗೂ ಸೇವೆಯನ್ನು ನಿರಾಕರಿಸುತ್ತಾರೆ. ದೈಹಿಕ ತಪಾಸಣೆ ನಡೆಸುವಾಗ ಪುರುಷ ನರ್ಸ್‌ಗಳನ್ನು ಸಂಶಯದ ದೃಷ್ಟಿಯಿಂದ ನೋಡುವುದರಿಂದ ಅವರು ಸದಾ ಜಾಗರೂಕರಾಗಿರಬೇಕಾಗುತ್ತದೆ. ರೋಗಿಗಳನ್ನು ಎತ್ತುವುದು, ತೂಕದ ವಸ್ತುಗಳನ್ನು ಸಾಗಿಸುವುದು ಅಥವಾ ಆಕ್ರೋಶಭರಿತ ರೋಗಿಗಳನ್ನು ನಿಯಂತ್ರಿಸುವ ಕಠಿಣ ದೈಹಿಕ ಕೆಲಸಗಳನ್ನು ಸಹೋದ್ಯೋಗಿಗಳು ಪುರುಷ ನರ್ಸ್‌ಗಳಿಗೆ ವಹಿಸುವುದರಿಂದ ದೈಹಿಕ ಶ್ರಮದ ದುರುಪಯೋಗವಾಗುತ್ತಿದೆ. ಆಸ್ಪತ್ರೆಗಳು ಪುರುಷ ನರ್ಸ್‌ಗಳನ್ನು ಹೆಚ್ಚಾಗಿ ತುರ್ತು ಚಿಕಿತ್ಸಾ ವಿಭಾಗ, ತೀವ್ರ ನಿಗಾ ಘಟಕ ಅಥವಾ ಮನೋವೈದ್ಯಕೀಯ ವಿಭಾಗಗಳಿಗೆ ಮಾತ್ರ ಸೀಮಿತಗೊಳಿಸುತ್ತಿವೆ. ಜತೆಗೆ ಚಲನಚಿತ್ರ ಮತ್ತು ಮಾಧ್ಯಮಗಳು ನರ್ಸ್‌ಗಳನ್ನು ಕೇವಲ ಮಹಿಳೆಯರನ್ನಾಗಿ ಬಿಂಬಿಸುವುದರಿಂದ ಮಾಧ್ಯಮಗಳ ತಪ್ಪು ಚಿತ್ರಣದಿಂದಾಗಿ ತಾರತಮ್ಯಗಳು ಹೆಚ್ಚುತ್ತಲೇ ಸಾಗಿವೆ.

ವಿಕ ಪ್ರಸ್ತುತ

AI ಚಿತ್ರ

ಆಸ್ಪತ್ರೆಗಳ ಆಡಳಿತ ಮಂಡಳಿ, ಶೈಕ್ಷಣಿಕ ಸಂಸ್ಥೆಗಳು ಮತ್ತು ಸಮಾಜದ ಜಂಟಿ ಪ್ರಯತ್ನಗಳಿಂದ ಮಾತ್ರವೇ ಪರಿಹಾರಗಳು ಸಾಧ್ಯ. ಈ ವೃತ್ತಿಯಲ್ಲಿ ಲಿಂಗ ಸಮಾನತೆ ತರಲು ಮತ್ತು ಪುರುಷರಿಗೆ ಉತ್ತಮ ವಾತಾವರಣ ನಿರ್ಮಿಸಲು ಶೈಕ್ಷಣಿಕ, ಜಾಗೃತಿ ಹಾಗೂ ಆಡಳಿತಾತ್ಮಕ ಬದಲಾವಣೆಗಳನ್ನು ತರಬೇಕು. ನರ್ಸಿಂಗ್ ಕಾಲೇಜುಗಳ ಜಾಹೀರಾತು ಮತ್ತು ಕರಪತ್ರಗಳಲ್ಲಿ ನರ್ಸ್‌ಗಳ ಚಿತ್ರಗಳನ್ನು ಬಳಸಿ ಲಿಂಗ ತಟಸ್ಥ ಪ್ರಚಾರ ಮಾಡಬೇಕು. ನರ್ಸಿಂಗ್ ಪಠ್ಯಗಳಲ್ಲಿ ಕೇವಲ ಮಹಿಳೆಯರನ್ನೇ ಬಿಂಬಿಸುವುದನ್ನು ನಿಲ್ಲಿಸಿ ಪುರುಷರ ಕೊಡುಗೆಗಳನ್ನು ಸೇರಿಸುವ ಪಠ್ಯಪುಸ್ತಕಗಳ ಸುಧಾರಣೆಯಾಗಬೇಕು. ಪ್ರೌಢಶಾಲಾ ಹಂತದಲ್ಲೇ ನರ್ಸಿಂಗ್ ಕೇವಲ ಮಹಿಳೆಯರ ಕೆಲಸವಲ್ಲ, ಅದೊಂದು ಗೌರವಾನ್ವಿತ ವೈದ್ಯಕೀಯ ವೃತ್ತಿ ಎಂದು ವಿದ್ಯಾರ್ಥಿಗಳಿಗೆ ತಿಳಿಸಿ ಜಾಗೃತಿ ಮೂಡಿಸಬೇಕು. ಆಸ್ಪತ್ರೆಗಳಲ್ಲಿ ಆಡಳಿತಾತ್ಮಕ ಸುಧಾರಣೆಗಳನ್ನು ಜಾರಿಗೆ ತರಬೇಕು; ಮಹಿಳಾ ರೋಗಿಗಳಿಗೆ ಆಪ್ತ ಆರೈಕೆ ನೀಡುವಾಗ ಗೊಂದಲ ಅಥವಾ ಸಂಶಯ ಬಾರದಂತೆ ತಡೆಯಲು, ಆಸ್ಪತ್ರೆಗಳು ಕಡ್ಡಾಯವಾಗಿ 'ಚಾಪೆರಾನ್ ನೀತಿ' ಅಂದರೆ ಮತ್ತೊಂದು ಮಹಿಳಾ ಸಿಬ್ಬಂದಿಯ ಉಪಸ್ಥಿತಿಯನ್ನು ಜಾರಿಗೆ ತರಬೇಕು.

(ಲೇಖಕರು: ಪುರುಷ ದಾದಿ ಹಾಗೂ ಹವ್ಯಾಸಿ ಬರಹಗಾರರು)

ವಾಚಕರ ವಿಜಯಕ್ಕೆ ಚಿಂತನಾರ್ಹ, ವಿಚಾರ ಪ್ರಚೋದಕ, ರಾಜ್ಯ ವ್ಯಾಪ್ತಿಯ ವಿಷಯಗಳ ಪತ್ರಗಳಿಗೆ ಸ್ವಾಗತ. ನಿಮ್ಮ ಪತ್ರ 50 ಪದ ಮೀರದಿರಲಿ. Whatsapp: 63664 22240 E-mail: editor@vijaykarnataka.com, ಇ-ಮೇಲ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಿ. ಕಚೇರಿ ವಿಳಾಸ:- ವಾಚಕರ ವಿಜಯ, ನಂ. 74/2, ಸಂಜನಾ ಪ್ಲಾಜಾ, 4ನೇ ಮಹಡಿ, ಆನೆಬಂಡೆ ರಸ್ತೆ, ಜಯನಗರ 3ನೇ ಬ್ಲಾಕ್, ಬೆಂಗಳೂರು-560011.

ಎಂಟು ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ »10

ರಾಜಧಾನಿಗೆ ನೀರಿನ ಅಭಾವದ ಭೀತಿ | ಜಲಾಶಯಗಳ ಪರಿಸ್ಥಿತಿಯೂ ಗಂಭೀರ
9.56 ಟಿಎಂಸಿ ನೀರು ಕಾಯ್ದಿರಿಸುವಂತೆ ಕಾವೇರಿ ನೀರಾವರಿ ನಿಗಮಕ್ಕೆ ಜಲಮಂಡಳಿ ಪತ್ರ
ಮುನಿದ ಮುಂಗಾರು, ಆತಂಕ ನೂರಾರು

■ **ಬಿ.ಎನ್.ಧನಂಜಯ** ಬೆಂಗಳೂರು
dhananjaya.gowda@timesofindia.com

ರಾಜಧಾನಿ ಬೆಂಗಳೂರಿಗೆ ಕುಡಿಯುವ ನೀರಿನ ಆಸರೆಯಾಗಿರುವ ಕಾವೇರಿ ಜಲಾನಯನ ಪ್ರದೇಶದಲ್ಲೂ ಈ ಬಾರಿಯ ಮುಂಗಾರಿಗೆ ಆರಂಭದಲ್ಲಿಯೇ ಹಿನ್ನಡೆಯಾಗಿದೆ. ಮಳೆರಾಯ ಹೀಗೆ ಮುನಿಸಿಕೊಂಡರೆ, ನಾಲ್ಕು ತಿಂಗಳ ಬಳಿಕ ಬೆಂಗಳೂರಿನಲ್ಲಿ ತೀವ್ರ ನೀರಿನ ಅಭಾವ ಎದುರಾಗುವ ಆತಂಕ ಕಾಡಲಾರಂಭಿಸಿದೆ.

ಈ ಹಿನ್ನೆಲೆಯಲ್ಲಿ ಪರಿಸ್ಥಿತಿ ಅವಲೋಕಿಸಿರುವ ಜಲಮಂಡಳಿ, ಮುಂಜಾಗ್ರತಾ ಕ್ರಮವಾಗಿ ಸೆಪ್ಟೆಂಬರ್‌ವರೆಗೂ ಕುಡಿಯುವ ಉದ್ದೇಶಕ್ಕೆ ನಗರಕ್ಕೆ 9.56 ಟಿಎಂಸಿ ನೀರು ಕಾಯ್ದಿರಿಸುವಂತೆ ಕಾವೇರಿ ನೀರಾವರಿ ನಿಗಮಕ್ಕೆ ಪತ್ರ ಬರೆದಿದೆ. ಒಂದು ವೇಳೆ ಮುಂಗಾರು ಮಳೆಯು ವಾಡಿಕೆಯಂತೆ ಆಗದಿದ್ದರೆ, ಸೆಪ್ಟೆಂಬರ್ ನಂತರ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವ ಸಾಧ್ಯತೆಯಿದೆ.

ಸುಮಾರು 1.50 ಕೋಟಿ ಜನಸಂಖ್ಯೆಯನ್ನು ಹೊಂದಿರುವ ರಾಜಧಾನಿಯ 11.50 ಲಕ್ಷಕ್ಕೂ ಅಧಿಕ ಸಂಪರ್ಕಗಳಿಗೆ ಬೆಂಗಳೂರು ಜಲಮಂಡಳಿ ನಿತ್ಯ ನೀರು ಸರಬರಾಜು ಮಾಡುತ್ತಿದೆ. ಕಾವೇರಿ 5ನೇ ಹಂತದ 775 ಎಂಎಲ್‌ಡಿ ಸೇರಿದಂತೆ ನಿತ್ಯ ಒಟ್ಟು 2225 ಎಂಎಲ್‌ಡಿ ನೀರು ಪೂರೈಕೆ ಮಾಡುವ ಸಾಮರ್ಥ್ಯವನ್ನು ಮಂಡಳಿ ಹೊಂದಿದೆ. ಈ ಪೈಕಿ 5ನೇ ಹಂತದ ವ್ಯಾಪ್ತಿಯ 110 ಹಳ್ಳಿಗಳಲ್ಲಿ ಹೆಚ್ಚಿನ ಸಂಪರ್ಕಗಳು ಪಡೆಯದಿರುವ ಪರಿಣಾಮ, ಶೇ.50ರಷ್ಟು ನೀರು ಉಳಿಯುತ್ತಿದ್ದು, ಅದನ್ನು ಸಂಚಾರಿ ಕಾವೇರಿ ಯೋಜನೆಯಡಿ ಪೂರೈಕೆ ಮಾಡಲಾಗುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ನಗರದ ದಾಹ ನೀಗಿಸಲು ಕೇವಲ ನಾಲ್ಕು ತಿಂಗಳಿಗೆ ಆಗುವಷ್ಟು ನೀರು ಮಾತ್ರ ದೊರೆಯಲಿದೆ.

ವಾಡಿಕೆಯಂತೆ ಜೂನ್ ಮೊದಲ ವಾರದಲ್ಲೇ ಆರ್ಭಟಿಸಬೇಕಿದ್ದ ಮುಂಗಾರು, ಕಾವೇರಿ ಜಲಾನಯನ ಪ್ರದೇಶದಲ್ಲಿ ಇನ್ನೂ ಚುರುಕಾಗಿಲ್ಲ. ಮಳೆ ಹಿನ್ನಡೆಯಾಗಿರುವುದರಿಂದ ಕೆ.ಆರ್.ಎಸ್ ಮತ್ತು ಕಬಿನಿ ಜಲಾಶಯಗಳಿಗೆ ಹರಿದು ಬರುತ್ತಿರುವ ನೀರಿನ ಪ್ರಮಾಣ ಗಣನೀಯವಾಗಿ ಕುಸಿದಿದೆ. ಬೆಂಗಳೂರಿಗೆ ಕುಡಿಯುವ ನೀರು ಪೂರೈಸುವ ಪ್ರಮುಖ ಜಲಾಶಯಗಳ ಇಂದಿನ ಪರಿಸ್ಥಿತಿ ಕಳವಳಕಾರಿಯಾಗಿದೆ.

ಸಾಂದರ್ಭಿಕ ಚಿತ್ರ

ಜೂ.16ರ ಕಾವೇರಿ ಬೇಸಿನ್ ಡ್ಯಾಂಗಳ ನೀರಿನ ವಿವರ (ಟಿಎಂಸಿ ಪ್ರಮಾಣದಲ್ಲಿ)

ಅಣೆಕಟ್ಟು	ಒಟ್ಟು ಸಂಗ್ರಹ	ಪ್ರಸ್ತುತ ಸಂಗ್ರಹ	ಲೈವ್ ಸಂಗ್ರಹ	ಇದೇ ದಿನ 2025ರ ಸಂಗ್ರಹ ವಿವರ
ಹಾರಂಗಿ	8.500	3.086	2.336	5.564
ಹೇಮಾವತಿ	37.103	14.670	10.298	21.069
ಕೆಆರ್‌ಎಸ್	49.452	11.394	3.016	22.943
ಕಬಿನಿ	19.516	4.923	0.000	5.610

ಮಳೆ ಕೊರತೆ ಇರುವುದರಿಂದ ಭವಿಷ್ಯದ ದಿನಗಳಲ್ಲಿ ನೀರಿನ ಅಭಾವ ಉಂಟಾಗುವ ಸಾಧ್ಯತೆಗಳಿದ್ದು, ನಾಗರಿಕರು ಕುಡಿಯುವ ನೀರನ್ನು ಮಿತವಾಗಿ ಬಳಕೆ ಮಾಡಬೇಕು. ಅನ್ಯ ಉದ್ದೇಶಕ್ಕೆ ಅನಗತ್ಯವಾಗಿ ವೆಚ್ಚ ಮಾಡಬಾರದು ಎಂದು ಬೆಂಗಳೂರು ಜಲಮಂಡಳಿ ಸಾರ್ವಜನಿಕರಿಗೆ ಕರೆ ನೀಡಿದೆ.

ಕಾವೇರಿ ನೀರಾವರಿ ನಿಗಮಕ್ಕೆ ಪತ್ರ: ಪ್ರತಿ ತಿಂಗಳು ಬೆಂಗಳೂರಿಗೆ 2.13 ಟಿಎಂಸಿ ನೀರು ಅಗತ್ಯವಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಸದ್ಯ ಇರುವ ನೀರಿನ ಪೈಕಿ ಕೆ.ಆರ್.ಎಸ್‌ನಿಂದ 6.89 ಟಿಎಂಸಿ ಹಾಗೂ ಕಬಿನಿಯಿಂದ 2.67 ಟಿಎಂಸಿ ಸೇರಿ ಒಟ್ಟು 9.56 ಟಿಎಂಸಿ ನೀರು ಮುಂದಿನ ಮೂರ್‍ನಾಲ್ಕು ತಿಂಗಳಿಗೆ ಲಭ್ಯವಾಗಬಹುದು. ಇದು ಮುಗಿದ ನಂತರ ಕೆ.ಆರ್.ಎಸ್.ನಲ್ಲಿ 4.4ರಿಂದ 7 ಟಿಎಂಸಿ ಅಷ್ಟು ಡೆಡ್ ಸ್ಟೋರೇಜ್ ಕಡ್ಡಾಯವಾಗಿ ಉಳಿಸಬೇಕಿದೆ. ಅದನ್ನು ಕೃಷಿ ಮತ್ತಿತರ ಯಾವುದೇ ಉದ್ದೇಶಕ್ಕೆ ಬಳಸುವಂತಿಲ್ಲ, ಆದರೆ, ಕುಡಿಯುವ ನೀರಿನ ಪರಿಸ್ಥಿತಿ ತೀರಾ ಬಿಗಡಾಯಿಸಿದರೆ ಮಾತ್ರ ಇದರಲ್ಲಿ ಶೇ.50ರಷ್ಟನ್ನು ಕುಡಿಯುವ ಉದ್ದೇಶಕ್ಕೆ ಬಳಸಬಹುದು. ಜುಲೈ ಮತ್ತು ಆಗಸ್ಟ್ ತಿಂಗಳಲ್ಲೂ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದಿದ್ದರೆ ಜಲಾಶಯಗಳಿಗೆ ಇನ್‌ಫ್ಲೋ (ಒಳಹರಿವು) ಹೆಚ್ಚಾಗದಿದ್ದರೆ ಪರಿಸ್ಥಿತಿ ಕೈಮೀರಲಿದೆ. ಹಾಗಾಗಿ, ಆಗಸ್ಟ್ ಅಂತ್ಯದ ವೇಳೆಗೆ ಭಾರಿ ಮಳೆಯಾಗದಿದ್ದರೆ, ಆನಂತರ ಬೆಂಗಳೂರಿಗೆ ನೀರು ಪೂರೈಕೆ ಕಷ್ಟವಾಗುವ ಸಾಧ್ಯತೆ ಇದೆ. ಕಳೆದ ವರ್ಷ ಈ ವೇಳೆಗೆ ಉತ್ತಮ ಮಳೆಯಾಗಿತ್ತು. 2025ರಲ್ಲಿ ಜೂ.16ರಂದು ಕೆ.ಆರ್.ಎಸ್ ಜಲಾಶಯದಲ್ಲಿ 22.943 ಟಿಎಂಸಿ ಹಾಗೂ ಕಬಿನಿಯಲ್ಲಿ 5.610 ಟಿಎಂಸಿ ನೀರಿತ್ತು. ಆದರೆ, ಈ ವರ್ಷ ಜೂ.16ರಂದು ಕ್ರಮವಾಗಿ 11.394 ಟಿಎಂಸಿ ಹಾಗೂ 4.923 ಟಿಎಂಸಿ ಸಂಗ್ರಹವಿದೆ.

''ಬೆಂಗಳೂರು ನಗರಕ್ಕೆ ಅನುಮೋದಿತ ಕಾವೇರಿ 6ನೇ ಹಂತದ ಯೋಜನೆಗೂ ಸೇರಿದಂತೆ ಒಟ್ಟು 35 ಟಿಎಂಸಿ ನೀರು ಹಂಚಿಕೆಯಾಗಿದೆ. ಸದ್ಯ ಮುಂಗಾರು ಆರಂಭದಲ್ಲೇ ಹಿನ್ನಡೆಯಾಗಿರುವುದರಿಂದ ಪರಿಸ್ಥಿತಿಯನ್ನು ಅವಲೋಕಿಸಿ, ಜಲಮಂಡಳಿ ಕೆಆರ್‌ಎಸ್ ಮತ್ತು ಕಬಿನಿ ಜಲಾಶಯದಲ್ಲಿ ಸೆಪ್ಟೆಂಬರ್‌ವರೆಗೂ ಕುಡಿಯುವ ಉದ್ದೇಶಕ್ಕೆ ನಗರಕ್ಕೆ ಒಟ್ಟು 9.56 ಟಿಎಂಸಿ ನೀರು ಕಾಯ್ದಿರಿಸುವಂತೆ ಈಗಾಗಲೇ ಕಾವೇರಿ ನೀರಾವರಿ ನಿಗಮಕ್ಕೆ ಪತ್ರ ಬರೆಯಲಾಗಿದೆ,'' ಎಂದು ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರೌಡಿಶೀಟ್ ರದ್ದು: ಮೇಲ್ಮನವಿ ಸಲ್ಲಿಸಲು ಪೊಲೀಸರ ನಿರ್ಧಾರ

ಬೆಂಗಳೂರು: ಹೈಕೋರ್ಟ್ ಮಾರ್ಗಸೂಚಿ ಉಲ್ಲಂಘನೆ ಕಾರಣಕ್ಕೆ ಸುನಿಲ್ ಕುಮಾರ್ ಅಲಿಯಾಸ್ ಸೈಲೆಂಟ್ ಸುನಿಲ್ ಸೇರಿದಂತೆ ಕೆಲ ರೌಡಿಗಳ ರೌಡಿಶೀಟ್ ರದ್ದುಗೊಳಿಸಿರುವ ಪೊಲೀಸ್ ಪ್ರಾಧಿಕಾರದ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ನಗರ ಪೊಲೀಸರು ಸಿದ್ಧತೆ ನಡೆಸಿದ್ದಾರೆ. ಸೈಲೆಂಟ್ ಸುನಿಲ್, ಒಂಟೆ ರೋಹಿತ್ ಸೇರಿ ಏಳು ಮಂದಿಯ ರೌಡಿಶೀಟ್‌ಗಳನ್ನು ಪೊಲೀಸ್ ದೂರು ಪ್ರಾಧಿಕಾರ ಇತ್ತೀಚೆಗೆ ರದ್ದುಪಡಿಸಿತ್ತು. ಹೈಕೋರ್ಟ್ ಮಾರ್ಗಸೂಚಿ ಉಲ್ಲಂಘಿಸಿದ ಕಾರಣಕ್ಕೆ ರೌಡಿಶೀಟ್‌ಗಳು ರದ್ದಾಗಿದ್ದವು. ಈ ಕುರಿತು 'ವಿಜಯ ಕರ್ನಾಟಕ' ವಿಶೇಷ ವರದಿ ಪ್ರಕಟಿಸಿತ್ತು. ಈ ವಿಚಾರ ತೀವ್ರ ಚರ್ಚೆಗೆ ಗ್ರಾಸವಾಗಿತ್ತು.

7 ಮಂದಿಯ ರೌಡಿಶೀಟ್ ರದ್ದು ಹಿನ್ನೆಲೆ

ಸೈಲೆಂಟ್ ಸುನಿಲ್

ಈ ಕುರಿತು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಡಿಸಿಪಿಗಳ ಜತೆ ಚರ್ಚೆ ನಡೆಸಿದ್ದಾರೆ. ಜತೆಗೆ, ರೌಡಿಶೀಟ್‌ಗಳ ಪಾಲನೆಯಲ್ಲಿ ಆಗಿರುವ ಲೋಪಗಳ ಬಗ್ಗೆ ಮಾಹಿತಿ ಪಡೆದಿದ್ದಾರೆ. ಪ್ರಾಧಿಕಾರದ ಆದೇಶಗಳನ್ನು ಪಡೆದು ಪರಾಮರ್ಶೆ ನಡೆಸುವುದು ಹಾಗೂ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸುವ ಬಗ್ಗೆ ಚರ್ಚಿಸಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಈ ನಿಟ್ಟಿನಲ್ಲಿ ಆಯಾ ವಿಭಾಗದ ಡಿಸಿಪಿಗಳು ತಮ್ಮ ವ್ಯಾಪ್ತಿಯಲ್ಲಿನ ರೌಡಿಗಳ ಪಟ್ಟಿಯನ್ನು ಪರಿಶೀಲನೆ ನಡೆಸಿದ್ದು, ಪ್ರಾಧಿಕಾರದಿಂದ ರದ್ದಾಗಿರುವ ರೌಡಿಶೀಟ್ ಪಟ್ಟಿಯನ್ನು ಕ್ರೋಢೀಕರಿಸಲಾಗುತ್ತಿದೆ. ಬಹುತೇಕ ಸೈಲೆಂಟ್ ಸುನಿಲ್ ಸೇರಿ ಕೆಲ ಕುಖ್ಯಾತ ರೌಡಿಗಳ ಪಟ್ಟಿ ರದ್ದತಿ ಕುರಿತು ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಇದಕ್ಕೂ ಮುನ್ನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ''ನಗರ ವ್ಯಾಪ್ತಿಯಲ್ಲಿ ಏಳು ರೌಡಿಗಳ ರೌಡಿಶೀಟ್ ರದ್ದತಿ ಸಂಬಂಧ ಮೇಲ್ಮನವಿ ಸಲ್ಲಿಸಲಾಗುವುದು.ಈ ಕುರಿತು ಪೊಲೀಸ್ ಮಹಾನಿರ್ದೇಶಕರ ಜತೆ ಚರ್ಚಿಸಿ ಸಲಹೆ ಪಡೆಯಲಾಗುವುದು. ಜತೆಗೆ, ರೌಡಿಪಟ್ಟಿಯಿಂದ ಕೈ ಬಿಡಲು ಇಲಾಖೆಯಿಂದ ಲೋಪಗಳಾಗಿವೆಯೇ ಎಂಬುದರ ಬಗ್ಗೆಯೂ ಪರಾಮರ್ಶೆ ನಡೆಸಲಾಗುವುದು,'' ಎಂದರು.

ಪಾಲಿಕೆ ಶಾಲಾ-ಕಾಲೇಜುಗಳಲ್ಲಿ ಜು.31ರವರೆಗೆ ಪ್ರವೇಶಕ್ಕೆ ಅವಕಾಶ

ಬೆಂಗಳೂರು: ಜಿಬಿಎ ವ್ಯಾಪ್ತಿಯಲ್ಲಿನ ಪಾಲಿಕೆಗಳ ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಗೆ ಜು.31ರವರೆಗೆ ಅವಕಾಶ ಕಲ್ಪಿಸಲಾಗಿದೆ.

''ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಶಿಶು ವಿಹಾರ, ಶಾಲಾ-ಕಾಲೇಜುಗಳಲ್ಲಿ ಜೂ.1 ರಿಂದಲೇ ತರಗತಿಗಳು ಆರಂಭವಾಗಿವೆ. ದಾಖಲಾತಿ ಪ್ರಕ್ರಿಯೆಗೆ ಜು.31ರವರೆಗೆ ಅವಕಾಶವಿದೆ. ಈವರೆಗೆ 519 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿದ್ದಾರೆ,'' ಎಂದು ಆಯುಕ್ತ ಕೆ.ಎನ್.ರಮೇಶ್ ತಿಳಿಸಿದ್ದಾರೆ.

''ಉತ್ತರಹಳ್ಳಿ ಪಿಯು ಕಾಲೇಜಿನಲ್ಲಿ 98 ವಿದ್ಯಾರ್ಥಿಗಳು, 115 ವಿದ್ಯಾರ್ಥಿನಿಯರು ಪ್ರವೇಶ ಪಡೆದಿದ್ದಾರೆ. ಭೈರಸಂದ್ರದ ಪ್ರೌಢಶಾಲೆಯಲ್ಲಿ 69, ಭೈರಸಂದ್ರ ಶಿಶುವಿಹಾರದಲ್ಲಿ 84, ಕೋರಮಂಗಲ 30, ಮಾರೇನಹಳ್ಳಿ-ಜಯನಗರ 27, ಆಡುಗೋಡಿ 54 ಮತ್ತು ತಾವರೆಕೆರೆ ಶಿಶುವಿಹಾರದಲ್ಲಿ 42 ಮಕ್ಕಳು ಪ್ರವೇಶಾತಿ ಪಡೆದಿದ್ದಾರೆ. ಪ್ರವೇಶಾತಿಯಲ್ಲೂ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದಾರೆ,'' ಎಂದು ಹೇಳಿದ್ದಾರೆ.

''ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪಾಲಿಕೆಯ ಶಿಶು ವಿಹಾರ, ಪ್ರೌಢಶಾಲೆ ಹಾಗೂ ಪಿಯು ಕಾಲೇಜುಗಳಲ್ಲಿ ಈವರೆಗೆ ಒಟ್ಟು 272 ವಿದ್ಯಾರ್ಥಿನಿಯರು ಹಾಗೂ 247 ವಿದ್ಯಾರ್ಥಿಗಳು ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿದ್ದಾರೆ. ಪಾಲಿಕೆಯ ಶಾಲಾ-ಕಾಲೇಜುಗಳಿಗೆ ದಾಖಲಾಗುವ ಪ್ರತಿಯೊಬ್ಬ ವಿದ್ಯಾರ್ಥಿಗೂ ಎರಡು ಜೊತೆ ಸಮವಸ್ತ್ರ, ಶೂ, ಸಾಕ್ಸ್, ಸ್ವೆಟರ್, ಪಠ್ಯ ಪುಸ್ತಕಗಳು, ನೋಟ್ ಪುಸ್ತಕಗಳು ಹಾಗೂ ಮಧ್ಯಾಹ್ನದ ಬಿಸಿ ಊಟವನ್ನು ಉಚಿತವಾಗಿ ನೀಡಲಾಗುತ್ತಿದೆ,'' ಎಂದು ತಿಳಿಸಿದ್ದಾರೆ.

ಚಿತ್ರ ಬಿಡುಗಡೆಗೆ ತಡೆ ಕೋರಿ ಕೋರ್ಟ್ ಮೊರೆ ಹೋದ ದರ್ಶನ್ ದಂಪತಿ

ಬೆಂಗಳೂರು: ಇದೇ 19ರಂದು ರಾಜ್ಯಾದ್ಯಂತ ಬಿಡುಗಡೆಗೆ ಸಿದ್ಧವಾಗಿರುವ 'ಬಾಸ್' ಚಿತ್ರಕ್ಕೆ ತಡೆಯಾಜ್ಞೆ ಕೋರಿ ನಟ ದರ್ಶನ್ ಶ್ರೀನಿವಾಸ್ ಹಾಗೂ ಅವರ ಪತ್ನಿ ವಿಜಯಲಕ್ಷ್ಮಿ ದರ್ಶನ್ ಹೈಕೋರ್ಟ್ ಮೊರೆ ಹೋಗಿದ್ದಾರೆ. ಸಿವಿಲ್ ಕೋರ್ಟ್ ಚಿತ್ರ ಬಿಡುಗಡೆಗೆ ತಡೆ ನೀಡಲು ನಿರಾಕರಿಸಿದ್ದನ್ನು ಪ್ರಶ್ನಿಸಿ ಮಂಗಳವಾರ ಮೇಲ್ಮನವಿ ಸಲ್ಲಿಸಿದ್ದಾರೆ. ಆ ಮೇಲ್ಮನವಿ ಬುಧವಾರ ನ್ಯಾಯಪೀಠದ ಮುಂದೆ ವಿಚಾರಣೆಗೆ ಬರುವ ಸಾಧ್ಯತೆ ಇದೆ. 'ಬಾಸ್' ಚಿತ್ರದಲ್ಲಿ ಚಿತ್ರದುರ್ಗದ ರೇಣುಕಾಸ್ವಾಮಿ ಪ್ರಕರಣವನ್ನು ಪ್ರತಿಬಿಂಬಿಸಿದಂತೆ ಕಂಡು ಬರುತ್ತಿದೆ. ಪ್ರಕರಣ ಇನ್ನೂ ವಿಚಾರಣಾ ಹಂತದಲ್ಲಿರುವಾಗ ಚಿತ್ರ ಬಿಡುಗಡೆ ಸರಿಯಲ್ಲ ಎಂದು ಅರ್ಜಿಯಲ್ಲಿ ಆಕ್ಷೇಪಿಸಲಾಗಿದೆ. ಹಾಗಾಗಿ, ಬಹುಚರ್ಚಿತ 'ಬಾಸ್' ಸಿನಿಮಾಗೆ ಕಾನೂನು ಸಂಕಷ್ಟ ಎದುರಾಗಿದೆ. ಸಿನಿಮಾದ ಕಥಾವಸ್ತು, ಪಾತ್ರಗಳ ನಿರೂಪಣೆ ಹಾಗೂ ಇತರ ವಿವಾದಿತ ಅಂಶಗಳಿಗೆ ಸಂಬಂಧಿಸಿದಂತೆ ಗಂಭೀರ ಆಕ್ಷೇಪಣೆ ವ್ಯಕ್ತಪಡಿಸಲಾಗಿದೆ.

ರಾಜಸ್ಥಾನದಲ್ಲಿ ಸಿಕ್ಕಿಬಿದ್ದ ಪೊಲೀಸರ ವಿರುದ್ಧ ಶಿಸ್ತುಕ್ರಮ

ಬೆಂಗಳೂರು: ಲಂಚ ಪ್ರಕರಣದಲ್ಲಿ ರಾಜಸ್ಥಾನದ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ಸಿಕ್ಕಿ ಬಿದ್ದು ಜೈಲು ಪಾಲಾಗಿರುವ ನಗರದ ಎಚ್‌ಎಎಲ್ ಪೊಲೀಸ್ ಠಾಣೆಯ ಮಹಿಳಾ ಸಬ್ ಇನ್‌ಸ್ಪೆಕ್ಟರ್ ಸೇರಿದಂತೆ ಮೂವರು ಪೊಲೀಸರನ್ನು ಅಮಾನತು ಮಾಡಲಾಗಿದ್ದು, ತಪ್ಪಿತಸ್ಥ ಸಿಬ್ಬಂದಿ ವಿರುದ್ಧ ಶಿಸ್ತುಕ್ರಮ ಜರುಗಿಸುವುದಾಗಿ ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ತಿಳಿಸಿದ್ದಾರೆ.

ಎಚ್‌ಎಎಲ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಕೆ.ಅನಿತಾ, ಹೆಡ್ ಕಾನ್‌ಸ್ಟೆಬಲ್ ಉಳವಪ್ಪ ತೇಗೂರು ಹಾಗೂ ಕಾನ್‌ಸ್ಟೆಬಲ್ ಯತೀಶ್ ಅವರನ್ನು ಲಂಚ ಪಡೆದ ಆರೋಪದಡಿ ರಾಜಸ್ಥಾನದ ಎಸಿಬಿ ಅಧಿಕಾರಿಗಳು ಜೈಪುರದಲ್ಲಿ ಬಂಧಿಸಿದ್ದರು. ಇದರ ಬೆನ್ನಲ್ಲೇ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಸೂಚನೆಯಂತೆ ಈ ಮೂವರನ್ನು ಅಮಾನತು ಮಾಡಲಾಗಿತ್ತು. ಈ ಪ್ರಕರಣದಲ್ಲಿ ಭಾಗಿಯಾಗಿರುವ ಇತರೆ ಪೊಲೀಸ್ ಸಿಬ್ಬಂದಿ ಪತ್ತೆಗಾಗಿ ವಿಸ್ತೃತ ತನಿಖೆಗೆ ಆದೇಶಿಸಿದ್ದ ಸಚಿವ ಪ್ರಿಯಾಂಕ್ ಖರ್ಗೆ, ತಪ್ಪಿತಸ್ಥ ಸಿಬ್ಬಂದಿ ವಿರುದ್ಧ ಮುಲಾಜಿಲ್ಲದೆ ಶಿಸ್ತುಕ್ರಮ ಜರುಗಿಸುವುದಾಗಿ ಎಚ್ಚರಿಕೆ ಕೊಟ್ಟಿದ್ದರು.

ಎಸ್‌ಐ ಅನಿತಾ ಮತ್ತು ಸಿಬ್ಬಂದಿಯು ಎಚ್‌ಎಎಲ್ ಠಾಣೆಯಲ್ಲಿ ದಾಖಲಾಗಿದ್ದ ವರದಕ್ಷಿಣೆ ಕಿರುಕುಳ ಪ್ರಕರಣದ ತನಿಖೆಗಾಗಿ ಜೂ.12ರಂದು ರಾಜಸ್ತಾನದ ಜೈಪುರಕ್ಕೆ ಹೋಗಿದ್ದರು. ಈ ಪ್ರಕರಣದಿಂದ ಆರೋಪಿ ಮತ್ತು ಆತನ ಕುಟುಂಬ ಸದಸ್ಯರನ್ನು ಕೈಬಿಡಲು 2 ಲಕ್ಷ ರೂ. ಕೊಡುವಂತೆ ಅನಿತಾ ಹಾಗೂ ಸಿಬ್ಬಂದಿ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ಆರೋಪಿಯ ಕುಟುಂಬವು ರಾಜಸ್ಥಾನ ಎಸಿಬಿಗೆ ದೂರು ಕೊಟ್ಟಿತ್ತು. ಈ ದೂರು ಆಧರಿಸಿ ಕಾರ್ಯಾಚರಣೆ ನಡೆಸಿದ್ದ ಎಸಿಬಿ ಅಧಿಕಾರಿಗಳು, ಜೈಪುರದ ಹೋಟೆಲ್‌ನಲ್ಲಿ ಲಂಚದ ಭಾಗವಾಗಿ 40 ಸಾವಿರ ರೂ. ಪಡೆಯುತ್ತಿದ್ದಾಗಲೇ ಉಳವಪ್ಪ ತೇಗೂರು ಅವರನ್ನು ಹಣದ ಸಮೇತ ಬಂಧಿಸಿದ್ದರು.

ನಂತರ ವಿಚಾರಣೆ ವೇಳೆ ಉಳವಪ್ಪ ತೇಗೂರು, ಪ್ರಕರಣದಲ್ಲಿ ಎಸ್‌ಐ ಅನಿತಾ ಮತ್ತು ಕಾನ್‌ಸ್ಟೆಬಲ್ ಯತೀಶ್‌ರ ಪಾತ್ರ ಇರುವುದಾಗಿ ಹೇಳಿದ್ದರು. ಹೀಗಾಗಿ, ಎಸಿಬಿ ಅಧಿಕಾರಿಗಳು ಅನಿತಾ ಮತ್ತು ಯತೀಶ್‌ರನ್ನೂ ಬಂಧಿಸಿದ್ದರು.

ಐದೂವರೆ ವರ್ಷದ ಮಗು ಕೊಲೆ ಕೇಸ್
ಆರೋಪಿಗಳ ಮಂಪರು ಪರೀಕ್ಷೆಗೆ ತೀರ್ಮಾನ

■ **ವಿಕ ಸುದ್ದಿಲೋಕ** ಬೆಂಗಳೂರು

ಐದೂವರೆ ವರ್ಷದ ತನ್ನ ಮಗಳನ್ನು ಕೊಂದಿದ್ದ ವಕೀಲೆ ಪ್ರಿಯಾಂಕ ಹಾಗೂ ಆಕೆಯ ಪ್ರಿಯಕರ ಮೋಹನ್ ಜಿ. ಮಹಾಲಿಂಗಪ್ಪನಿಗೆ ಸುಳ್ಳು ಪತ್ತೆ ಪರೀಕ್ಷೆ (ಪಾಲಿಗ್ರಾಫ್ ಟೆಸ್ಟ್) ಮಾಡಿಸಲು ಪೊಲೀಸರು ನಿರ್ಧರಿಸಿದ್ದಾರೆ.

ಅತ್ಯಂತ ದಾರುಣವಾಗಿ ಮಗಳು ವೆನ್ನೆಲಾಳನ್ನು ಕೊಂದಿದ್ದ ಪ್ರಿಯಾಂಕ ಹಾಗೂ ಮೋಹನ್ ವಿಚಾರಣೆ ವೇಳೆ ಹಲವು ಸತ್ಯಗಳನ್ನು ಮುಚ್ಚಿಡುತ್ತಿದ್ದಾರೆ. ತನಿಖೆಗೆ ಸಹಕಾರ ನೀಡುತ್ತಿಲ್ಲ, ಮಗುವಿನ ಕೊಲೆ ಕುರಿತು ಇಬ್ಬರೂ ಆರೋಪಿಗಳು ಭಿನ್ನ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಮಗುವಿನ ಕೊಲೆಯ ಅಸಲಿ ಸತ್ಯ ಬಾಯ್ಬಿಡಿಸಲು ಸಜ್ಜಾಗಿರುವ ತನಿಖಾ ತಂಡವು ಆರೋಪಿಗಳಿಗೆ ಸುಳ್ಳು ಪತ್ತೆ ಪರೀಕ್ಷೆ ನಡೆಸಲು ತೀರ್ಮಾನಿಸಿದೆ. ಈ ಕುರಿತು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಕಾಫಿ ಶಾಪ್‌ನಲ್ಲಿ ಬರ್ತ್ ಡೇ ಆಚರಣೆ: ಆರೋಪಿ ಪ್ರಿಯಾಂಕಾಳ ಬರ್ತ್ ಡೇ ಮಾ.23ರಂದು ಆಚರಿಸಲಾಗಿತ್ತು. ಈ ನಿಟ್ಟಿನಲ್ಲಿ ಪ್ರಿಯಕರ ಮೋಹನ್ ಜತೆ ಕಾರಿನಲ್ಲಿ ಕೋಲಾರದ ಕಾಫಿ ಡೇ ಶಾಪ್‌ಗೆ ತೆರಳಿದ್ದು, ಅಲ್ಲಿ ಹುಟ್ಟು ಹಬ್ಬ ಆಚರಣೆ ಮಾಡಿಕೊಂಡಿದ್ದರು. ಈ ಸಮಯದಲ್ಲಿ ಮಗು ವೆನ್ನೆಲಾ ಕಾರಿನಲ್ಲಿತ್ತು. »10

ಎಂಟು ತಂಡದಿಂದ ವಿಸ್ತೃತ ತನಿಖೆ

ಕೋಲಾರಕ್ಕೆ ತೆರಳಿ ಸಾಕ್ಷ್ಯ ಸಂಗ್ರಹಿಸಿದ ತನಿಖಾ ತಂಡ

ಪಾರದರ್ಶಕ ತನಿಖೆ

ಮಗುವಿನ ಕೊಲೆಯು ಅತ್ಯಂತ ಸೂಕ್ಷ್ಮವಾಗಿದ್ದು, ಪೂರ್ವ ವಿಭಾಗದ ಡಿಸಿಪಿ ಉಸ್ತುವಾರಿಯಲ್ಲಿ ಪಾರದರ್ಶಕ ತನಿಖೆ ನಡೆಸಲಾಗುತ್ತಿದೆ. ಪ್ರಕರಣಕ್ಕೆ ಬೇಕಾದ ಸೂಕ್ತ ಸಾಕ್ಷ್ಯಾಧಾರ ಸಂಗ್ರಹಿಸಲಾಗುತ್ತಿದೆ. ಈ ಪ್ರಕರಣದ ಪ್ರಾಥಮಿಕ ತನಿಖೆಯಲ್ಲಿ ಕರ್ತವ್ಯಲೋಪ ಎಸಗಿದವರನ್ನು ಈಗಾಗಲೇ ಅಮಾನತು ಮಾಡಲಾಗಿದೆ. ಅದನ್ನು ಹೊರತುಪಡಿಸಿ ಊಹಾಪೋಹಗಳ ಆರೋಪಗಳ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ, ಹಿಂದಿನ ಇನ್‌ಸ್ಪೆಕ್ಟರ್ ಆರೋಪಿ ಜತೆ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದರು ಎಂಬುದರ ಬಗ್ಗೆ ಯಾವುದೇ ದೂರು ಬಂದಿಲ್ಲ ಎಂದು ನಗರ ಪೊಲೀಸ್ ಆಯುಕ್ತರು ತಿಳಿಸಿದರು.

ಕೇಸ್ ಹಿನ್ನೆಲೆ

ವಕೀಲೆಯಾದ ಪ್ರಿಯಾಂಕ ತನ್ನ ಮಗು ವೆನ್ನೆಲಾಳನ್ನು ಪ್ರಿಯಕರನ ಜತೆ ಸೇರಿ ಕೊಲೆಗೈದು ಸಾಕ್ಷ್ಯ ನಾಶಪಡಿಸಿದ ಆರೋಪ ಪ್ರಕರಣದಲ್ಲಿ ಬಂಧಿತರಾಗಿದ್ದಾರೆ. ಮಾ.4ರಂದು ಮಗುವಿನ ಕೊಲೆ ನಡೆದಿತ್ತು. ಆರಂಭದಲ್ಲಿ ಅಸಹಜ ಸಾವು ಎನ್ನಲಾಗಿತ್ತು. ಆದರೆ, ಮರಣೋತ್ತರ ಪರೀಕ್ಷೆಯು ಮಗುವಿನದ್ದು ಕೊಲೆ ಎಂಬುದನ್ನು ದೃಢಪಡಿಸಿತ್ತು. ಈ ನಿಟ್ಟಿನಲ್ಲಿ ಇತ್ತೀಚೆಗೆ ಕೊಲೆ ಪ್ರಕರಣ ದಾಖಲಿಸಿರುವ ಪೊಲೀಸರು, ಆರೋಪಿಗಳನ್ನು ಬಂಧಿಸಿ ತನಿಖೆ ಕೈಗೊಂಡಿದ್ದಾರೆ.

ಗುಂಡಿ ಇಲ್ಲದ ರಸ್ತೆ ನಿರ್ಮಾಣ ರಾಕೆಟ್ ಸೈನ್ಸಾ?

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರಿನಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುತ್ತಿರುವಂತೆಯೇ ಮತ್ತೊಂದು ಕಡೆ ಬಾಯ್ತೆರೆಯುವುದು ವಾಡಿಕೆಯಾಗಿಬಿಟ್ಟಿದೆ. ಇದರ ಬದಲಿಗೆ ಗುಂಡಿಗಳು ಬೀಳದಂತೆ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸಲು ನಿಮಗೇನು ಸಮಸ್ಯೆ? ಗುಣಮಟ್ಟದ ರಸ್ತೆಗಳ ನಿರ್ಮಾಣ ರಾಕೆಟ್ ಸೈನ್ಸ್‌ಗಿಂತ ಕಷ್ಟವೇ?

ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಮಂಗಳವಾರ ನಡೆದ ಮೊದಲ ಸಭೆಯಲ್ಲೇ ಕೃಷ್ಣ ಬೈರೇಗೌಡ ಅವರು ಜಿಬಿಎ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಪರಿ ಇದು.

''ದಕ್ಷಿಣ ಭಾರತದ ಇತರೆ ರಾಜ್ಯಗಳಿಗೆ ಹೋಲಿಸಿದರೆ ಬೆಂಗಳೂರಿನ ರಸ್ತೆಗಳು ತೀರಾ ಕಳಪೆಯಾಗಿವೆ. ಇನ್ಮುಂದೆ 'ಹಳೆ ಕಲ್ಲು, ಹೊಸ ಬಿಲ್' ಎಂಬಂತೆ ರಸ್ತೆ ಗುಂಡಿ ಮುಚ್ಚುವ ತಾತ್ಕಾಲಿಕ ಪರಿಹಾರದ ಬದಲಿಗೆ ಗುಣಮಟ್ಟದ ರಸ್ತೆಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು. ಕೆಟ್ಟ ರಸ್ತೆಗಳ ಕಾರಣಕ್ಕೆ ಜನರು ಅನುಭವಿಸುತ್ತಿರುವ ಬವಣೆ ನೀಗಬೇಕು. ಉತ್ತಮವಾಗಿ ಕೆಲಸ ಮಾಡುವ ಅಧಿಕಾರಿಗಳಿಗೆ ನಾನು ಸದಾ ಬೆಂಬಲವಾಗಿ ನಿಲ್ಲುತ್ತೇನೆ,'' ಎಂದು ಭರವಸೆ ನೀಡಿದರು.

ಜನರ ಜೀವನಮಟ್ಟ ಸುಧಾರಣೆಗೆ ಒತ್ತು: ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ನಗರದಲ್ಲಿ ನೆಲೆಸಿರುವ ಜನರ ಜೀವನಮಟ್ಟ ಸುಧಾರಣೆಯು ನಮ್ಮ ಮೊದಲ ಆದ್ಯತೆಯಾಗಿದ್ದು, ಆ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವಂತೆ ಎಲ್ಲ ಅಧಿಕಾರಿಗಳಿಗೆ ಸೂಚಿಸಲಾಗಿದೆ,'' ಎಂದರು.

''ಬೆಂಗಳೂರು ಹಲವು ಸವಾಲುಗಳನ್ನು ಎದುರಿಸುತ್ತಿರುವ ನಗರ. 1.5 ಕೋಟಿ ಜನರಿಗೆ ಆಶ್ರಯ ನೀಡಿರುವ ಈ ನಗರವು ಉದ್ಯೋಗ, ಶಿಕ್ಷಣ ಮತ್ತು ಉತ್ತಮ ಜೀವನಕ್ಕೆ ಅವಕಾಶ ನೀಡಿದೆ. ಬೆಂಗಳೂರು ನಮ್ಮ ರಾಜ್ಯ ಮತ್ತು ದೇಶದ ಅಮೂಲ್ಯ ಆಸ್ತಿಯಾಗಿದ್ದು, ವಿಶ್ವದ ನಾನಾ ದೇಶಗಳ ಜನರು, ಸಂಸ್ಥೆಗಳು ಇಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಹಿನ್ನೆಲೆಯಲ್ಲಿ ಜಿಬಿಎ ಆಡಳಿತ ಸುಧಾರಣೆಯ ಧ್ಯೇಯದೊಂದಿಗೆ ಕೆಲಸ ಮಾಡಲಿದೆ,'' ಎಂದು ಹೇಳಿದರು.

''ನಗರದ ಸಂಚಾರ ದಟ್ಟಣೆ ನಿವಾರಣೆಗೆ ಟನಲ್ ರಸ್ತೆ, ಎಲಿವೇಟೆಡ್ ಕಾರಿಡಾರ್ ಹಾಗೂ ಸಂಚಾರಯುಕ್ತ ರಸ್ತೆ ನಿರ್ಮಾಣದಂತೆ ಯೋಜನೆಗಳನ್ನು ರೂಪಿಸಿ ಅನುಷ್ಠಾನದ ಹಂತಕ್ಕೆ ತರಲಾಗಿದೆ. ಬೆಂಗಳೂರಿನ ದೀರ್ಘಾವಧಿಯ ಅಭಿವೃದ್ಧಿಗೆ ಅಗತ್ಯವಿರುವ ಯೋಜನೆಗಳನ್ನು ರೂಪಿಸಲಾಗಿದ್ದು, ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುವುದು. ಜನರ ಸಮಸ್ಯೆಗಳಿಗೆ ತ್ವರಿತ ಪರಿಹಾರ ಕಲ್ಪಿಸಲಾಗುವುದು. ಆಡಳಿತದಲ್ಲಿ ಚುರುಕು ಮೂಡಿಸಿ, ಸೇವಾ ವಿತರಣೆಯಲ್ಲಿ ಸುಧಾರಣೆ ತರಲಾಗುವುದು,'' ಎಂದು ತಿಳಿಸಿದರು.

''ಸಾಮಾಜಿಕ, ಸಾಂಸ್ಕೃತಿಕ, ಕಲಾತ್ಮಕ ಹಾಗೂ ಕ್ರೀಡಾ ಚಟುವಟಿಕೆಗಳನ್ನು ಒಳಗೊಂಡ ಸಮಗ್ರ ಅಭಿವೃದ್ಧಿಯಿಂದ ಮಾತ್ರ ಜೀವನದ ಗುಣಮಟ್ಟ ಸುಧಾರಿಸಲು ಸಾಧ್ಯ. ಈ ನಿಟ್ಟಿನಲ್ಲಿ 360 ಡಿಗ್ರಿ ದೃಷ್ಟಿಕೋನದೊಂದಿಗೆ ಬೆಂಗಳೂರಿನ ಜನರ ಜೀವನ ಗುಣಮಟ್ಟ ಸುಧಾರಣೆಗೆ ಹೆಚ್ಚಿನ ಪ್ರಯತ್ನ ಮಾಡಲಾಗುವುದು. ಅಧಿಕಾರಿಗಳು, ಆಡಳಿತ ವ್ಯವಸ್ಥೆ ಹಾಗೂ ಆಡಳಿತ ಮತ್ತು ಪ್ರತಿಪಕ್ಷಗಳ ಸಹಕಾರದೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸಲಾಗುವುದು,'' ಎಂದು ಹೇಳಿದರು.

ಗುಣಮಟ್ಟದ ರಸ್ತೆಗಳ ನಿರ್ಮಾಣ: ''ರಸ್ತೆ ಗುಂಡಿಗಳನ್ನು ಮುಚ್ಚಲು ಅಗತ್ಯ ಅನುದಾನ ಲಭ್ಯವಿದೆ. ವ್ಯವಸ್ಥಿತವಾಗಿ ಹಾಗೂ ಗುಣಮಟ್ಟದೊಂದಿಗೆ ಗುಂಡಿ ಮುಚ್ಚುವ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ರಸ್ತೆ ಕಾಮಗಾರಿಗಳ ಗುಣಮಟ್ಟವನ್ನು ಮತ್ತಷ್ಟು ಸುಧಾರಿಸಲು ಕ್ರಮ ವಹಿಸಲಾಗುವುದು,'' ಎಂದರು.

''ಮನೆ-ಮನೆಯಿಂದ ಕಸ ಸಂಗ್ರಹಿಸುವ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಬೇಕು. ಕೆಲವರು ಮನೆ ಬಾಗಿಲಿಗೆ ಕಸ ಸಂಗ್ರಹ ವಾಹನ ಬಂದರೂ ರಸ್ತೆ ಬದಿಯಲ್ಲಿ ಕಸವನ್ನು ತಂದು ಹಾಕುತ್ತಿರುವುದು ಕಂಡು ಬರುತ್ತಿದೆ. ಕಸ ಸಂಗ್ರಹಣಾ ವ್ಯವಸ್ಥೆಗೆ ನಾಗರಿಕರ ಸಹಕಾರವೂ ಅಗತ್ಯವಾಗಿದೆ. ಅಧಿಕಾರಿಗಳು ಮತ್ತು ಸಾರ್ವಜನಿಕರು ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಾಧ್ಯ,'' ಎಂದು ಹೇಳಿದರು.

ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್, ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಸುಷಮಾ ಗೋಡಬೋಲೆ, ಡಾ. ಕೆ.ಹರೀಶ್‌ಕುಮಾರ್, ವೆಂಕಟಾಚಲಪತಿ, ಬಿಡಬ್ಲ್ಯುಎಸ್‌ಎಸ್‌ಬಿ ... ಡಬ್ಲ್ಯೂಎಂಎಲ್‌ನ ಸಿಇಒ ಕರೀಗೌಡ, ನಗರ ಪಾಲಿಕೆಗಳ ಆಯುಕ್ತರು ಉಪಸ್ಥಿತರಿದ್ದರು.

ಮೊದಲ ಸಭೆಯಲ್ಲೇ ಜಿಬಿಎ ಅಧಿಕಾರಿಗಳ ಬೆವರಿಳಿಸಿದ ಸಚಿವ ಕೃಷ್ಣ ಬೈರೇಗೌಡ

ಬೆಂಗಳೂರು ನಗರಾಭಿವೃದ್ಧಿ ಖಾತೆ ವ್ಯಾಪ್ತಿಗೆ ಬಿಡಿಎ, ಬಿಎಂಆರ್‌ಡಿಎ ಸೇರಿಸುವುದು ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟ ವಿಚಾರ. ನಗರದ ಅಭಿವೃದ್ಧಿ ದೃಷ್ಟಿಯಿಂದ ಉತ್ತಮ ಆಡಳಿತ ನಡೆಸಲು, ಉತ್ತರದಾಯಿತ್ವ ಇಟ್ಟುಕೊಂಡು ಫಲಿತಾಂಶ ನೀಡಲು ಖಾತೆ ವಿಚಾರದಲ್ಲಿ ಸ್ಪಷ್ಟತೆ ಇರಬೇಕೆಂದು ಸಿಎಂ, ವರಿಷ್ಠರಿಗೆ ತಿಳಿಸಿದ್ದೇನೆ. ಈ ಬಗ್ಗೆ ಸ್ಪಷ್ಟತೆ ಕೊಟ್ಟ ಮೇಲೆ ಜವಾಬ್ದಾರಿ ವಹಿಸಿಕೊಳ್ಳುವುದು ಸೂಕ್ತವೆಂಬ ನಿಲುವು ಹೊಂದಿದ್ದೆ. ಆದರೆ, ವರಿಷ್ಠರು ಆ ಕುರಿತಂತೆ ನಾವು ತೀರ್ಮಾನ ಕೈಗೊಳ್ಳುತ್ತೇವೆ. ನೀವು ಕೆಲಸ ಆರಂಭಿಸಿ ಎಂದು ಹೇಳಿದರು. ಅವರಿಗೆ ಗೌರವ ಕೊಟ್ಟು ಕೆಲಸ ಶುರು ಮಾಡಿದ್ದೇನೆ.

-ಕೃಷ್ಣ ಬೈರೇಗೌಡ
ಬೆಂಗಳೂರು ನಗರಾಭಿವೃದ್ಧಿ ಸಚಿವ

ಬಿಡಿಎ ವತಿಯಿಂದ 15 ಲಕ್ಷ ಸಸಿ ನೆಡುವ ಕಾರ್ಯಕ್ರಮ | 224 ಕ್ಷೇತ್ರಗಳಲ್ಲಿ ಜಯಂತಿ ಆಚರಣೆಗೆ ತಲಾ 1 ಲಕ್ಷ ರೂ.
ಕೆಂಪೇಗೌಡ ಬಡಾವಣೆಯಲ್ಲಿ 27ಕ್ಕೆ ಕೆಂಪೇಗೌಡ ಜಯಂತಿ: ಸಿಎಂ ಡಿಕೆಶಿ

■ **ವಿಕ ಸುದ್ದಿಲೋಕ** ಬೆಂಗಳೂರು

''ನೂತನವಾಗಿ ನಿರ್ಮಾಣವಾಗುತ್ತಿರುವ ಕೆಂಪೇಗೌಡ ಬಡಾವಣೆಯಲ್ಲಿ ಜೂ.27ರಂದು ಬೆಳಗ್ಗೆ 11.30ಕ್ಕೆ ನಾಡಪ್ರಭು ಕೆಂಪೇಗೌಡ ಜಯಂತಿ ನಡೆಸಲು ತೀರ್ಮಾನಿಸಲಾಗಿದೆ. ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ನೇತೃತ್ವದಲ್ಲಿ ನಗರದಲ್ಲಿ 15 ಲಕ್ಷ ಸಸಿ ನೆಡಲಾಗುವುದು. ಈ ಬಡಾವಣೆಯಲ್ಲಿ ನೂತನ ರಸ್ತೆಯನ್ನು ಉದ್ಘಾಟಿಸಲಾಗುವುದು,'' ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ದೇವನಹಳ್ಳಿಯಲ್ಲಿ ಥೀಮ್‌ಪಾರ್ಕ್ ಶೀಘ್ರ ಉದ್ಘಾಟನೆ

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಂಗಳವಾರ ನಡೆದ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆಯ ಪೂರ್ವಭಾವಿ ಸಭೆ ಬಳಿಕ ಮಾತನಾಡಿ, ''ಕೆಂಪೇಗೌಡ ಜಯಂತಿಯ ರೂಪುರೇಷೆ ಬಗ್ಗೆ ಸಂಘಟನೆಗಳ ಜತೆ ಚರ್ಚಿಸಲಾಗಿದೆ. ಪ್ರತಿ ಬಾರಿಯಂತೆ ನಗರದ ನಾಲ್ಕು ಕೆಂಪೇಗೌಡ ಗೋಪುರಗಳಿಂದ ಪ್ರತ್ಯೇಕ ತಂಡಗಳು ಆಗಮಿಸಲಿವೆ. ನಾಲ್ಕು ಗೋಪುರಗಳ ಬಗ್ಗೆ ರಾಮಲಿಂಗಾ ರೆಡ್ಡಿ, ಕೃಷ್ಣಬೈರೇಗೌಡ, ಕೆ.ಜೆ.ಜಾರ್ಜ್ ಹಾಗೂ ಭೈರತಿ ಸುರೇಶ್ ಜವಾಬ್ದಾರಿ ವಹಿಸಲಿದ್ದಾರೆ. ಮಾಗಡಿ ತಂಡವನ್ನು ಸ್ಥಳೀಯ ಶಾಸಕರಾದ ಬಾಲಕೃಷ್ಣ, ಹುಲಿಯೂರು ದುರ್ಗ ಕಡೆಯಿಂದ ರಂಗನಾಥ್ ಅವರು ಮುನ್ನಡೆಸಲಿದ್ದಾರೆ. ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ಕಾರ್ಯಕ್ರಮವನ್ನು ಸಚಿವ ಕೆ.ಎಚ್. ಮುನಿಯಪ್ಪ ಅವರಿಂದ ನಡೆಸಲಾಗುವುದು. ಕೃಷ್ಣಬೈರೇಗೌಡ ಅವರ ನೇತೃತ್ವದಲ್ಲಿ ಬೆಂಗಳೂರಿನ ಕೆಲವು ಭಾಗಗಳಲ್ಲಿ ತಯಾರಿ ಮಾಡಲಾಗುವುದು,'' ಎಂದು ಹೇಳಿದರು.

''ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಆವರಣದಲ್ಲಿ ಕೆಂಪೇಗೌಡರ ಹೆಸರಿನಲ್ಲಿ ಟೌನ್ ಪ್ಲಾನಿಂಗ್ ಕಾಲೇಜು ನಿರ್ಮಿಸಲು ತೀರ್ಮಾನಿಸಲಾಗಿತ್ತು. ಅದರ ಸಿದ್ಧತೆ ನಡೆಸಲಾಗುತ್ತಿದೆ. 224 ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಜಯಂತಿ ಆಚರಿಸಲಾಗುವುದು. ಇದಕ್ಕಾಗಿ 1 ಲಕ್ಷ ರೂ. ಅನುದಾನ ಬಿಡುಗಡೆ ಮಾಡಲಾಗುತ್ತಿದೆ. ಬೇರೊಂದು ದಿನ ಬೆಂಗಳೂರಿನ 369 ವಾರ್ಡ್‌ಗಳಲ್ಲಿ ಈ ಕಾರ್ಯಕ್ರಮ ನಡೆಸಲು ಜಿಬಿಎ ವತಿಯಿಂದ ತಲಾ 1 ಲಕ್ಷ ರೂ. ಅನುದಾನ ನೀಡಲಾಗುವುದು. ಈ ಕಾರ್ಯಕ್ರಮದ ದಿನಾಂಕವನ್ನು ಬೆಂಗಳೂರು ನಗರದ ಸಚಿವರು ತೀರ್ಮಾನ ಮಾಡಲಿದ್ದಾರೆ. ಈ ಸಭೆಯಲ್ಲಿ ಅನೇಕ ಸಲಹೆಗಳು ಬಂದಿವೆ,'' ಎಂದರು.

''ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ಥೀಮ್ ಪಾರ್ಕ್ ಪೂರ್ಣಗೊಂಡಿದ್ದು, ಸಾರ್ವಜನಿಕರಿಗೆ ಮುಕ್ತಗೊಳಿಸಲು ಕೃಷ್ಣ ಬೈರೇಗೌಡ ನೇತೃತ್ವದಲ್ಲಿ ತಯಾರಿ ಮಾಡಲಾಗುತ್ತಿದೆ. ಕಾರ್ಯಕ್ರಮಕ್ಕೆ ಗಣ್ಯರು, ಸ್ವಾಮೀಜಿಗಳು ಹಾಗೂ ನಾಯಕರ ಆಹ್ವಾನದ ಜವಾಬ್ದಾರಿಯನ್ನು ಕೃಷ್ಣ ಬೈರೇಗೌಡರು ವಹಿಸಿಕೊಂಡಿದ್ದಾರೆ. ಈ ಕಾರ್ಯಕ್ರಮ ಒಂದು ಜಾತಿ ಅಥವಾ ಧರ್ಮಕ್ಕೆ ಸೀಮಿತವಲ್ಲ, ಕೆಂಪೇಗೌಡರು ಬೆಂಗಳೂರು ನಗರ ಹಾಗೂ ರಾಜ್ಯದ ಆಸ್ತಿ. ಎಲ್ಲಾ ಧರ್ಮ, ಜಾತಿ, ಸಂಘಟನೆಯವರು ಸೇರಿ ಜಯಂತಿ ಆಚರಿಸಲಾಗುವುದು,'' ಎಂದು ಮಾಹಿತಿ ನೀಡಿದರು.

ಕೆಂಪೇಗೌಡ ಸಮಾಧಿ ಸ್ಥಳವನ್ನು 10 ಎಕರೆ ಜಾಗದಲ್ಲಿ ಅಭಿವೃದ್ಧಿಪಡಿಸಬೇಕು. ಜತೆಗೆ, ಕೆಂಪೇಗೌಡರ ಕೋಟೆ ಅಭಿವೃದ್ಧಿಗೆ 100 ಕೋಟಿ ರೂ. ವೆಚ್ಚದ ಟೆಂಡರ್ ಕರೆಯಲಾಗಿದ್ದು, ಕಾಮಗಾರಿ ಆರಂಭಕ್ಕೆ ಕ್ರಮ ಕೈಗೊಳ್ಳಬೇಕು. ಜಿಬಿಎ ವ್ಯಾಪ್ತಿಯಲ್ಲಿ ಕೆಂಪೇಗೌಡ ಪ್ರಶಸ್ತಿ ಆಯ್ಕೆ ಸಮಿತಿ ರಚಿಸಬೇಕು ಎಂಬ ವಿಚಾರಗಳು ಸಭೆಯಲ್ಲಿ ಚರ್ಚೆಯಾದವು.

ಸಭೆಯಲ್ಲಿ ವ್ಯಕ್ತವಾದ ಸಲಹೆಗಳು

- ನಾಡಪ್ರಭು ಕೆಂಪೇಗೌಡ ಬೆಂಗಳೂರಿನ ಸಾಂಸ್ಕೃತಿಕ ನಾಯಕ ಎಂದು ಘೋಷಣೆ
- ಎಲ್ಲಾ ಜಿಲ್ಲೆಗಳಲ್ಲಿ ಕೆಂಪೇಗೌಡ ಜಿಲ್ಲಾ ಭವನ ನಿರ್ಮಾಣ
- ಕೆಂಪೇಗೌಡರ ಹೆಸರಿನಲ್ಲಿ ಅಂತಾರಾಷ್ಟ್ರೀಯ ಉದ್ಯಾನವನ ಹಾಗೂ ಅಂತಾರಾಷ್ಟ್ರೀಯ ಸಮುದಾಯ ಭವನ ನಿರ್ಮಾಣ
- ಕೆಂಪೇಗೌಡರ ವಸ್ತುಸಂಗ್ರಹಾಲಯ ಸ್ಥಾಪನೆ
- ಕೆಂಪೇಗೌಡರ ಸ್ಮರಣೆಯಲ್ಲಿ ಬೆಂಗಳೂರಿನ ಕೆರೆಗಳ ಶುದ್ಧೀಕರಣ, ಪುನಶ್ಚೇತನ
- ಸ್ವಾಮಿನಾಥನ್ ವರದಿ ಆಧರಿಸಿ ಜಲ ನಿರ್ವಹಣೆ ಬಗ್ಗೆ ಬೆಂಗಳೂರಿಗರಲ್ಲಿ ಜಾಗೃತಿ ಮೂಡಿಸಲು ಕಾರ್ಯಾಗಾರ
- ಪಠ್ಯಪುಸ್ತಕದಲ್ಲಿ ಕೆಂಪೇಗೌಡರ ಜೀವನ ಚರಿತ್ರೆ
- ಕೆಂಪೇಗೌಡ ಜಯಂತಿಯಂದು ಸರಕಾರಿ ರಜೆ ಘೋಷಣೆ
- ನಗರದ ನಾಲ್ಕು ದಿಕ್ಕಿನಲ್ಲಿ 50-60 ಅಡಿ ಎತ್ತರದ ಕೆಂಪೇಗೌಡರ ಕಲ್ಲಿನ ಪ್ರತಿಮೆ ನಿರ್ಮಾಣ
- ಬೆಂಗಳೂರು ಗ್ರಾಮಾಂತರ ಜಿಲ್ಲೆ ಆವತಿ ಗ್ರಾಮದ ಅಭಿವೃದ್ಧಿ

ಬೆಂಗಳೂರು-ತಿರುವನಂತಪುರಂ ವಿಶೇಷ ರೈಲುಗಳ ಸೇವೆ ವಿಸ್ತರಣೆ

ಬೆಂಗಳೂರು: ಪ್ರಯಾಣಿಕರ ಅನುಕೂಲಕ್ಕಾಗಿ ಮತ್ತು ಹೆಚ್ಚುವರಿ ದಟ್ಟಣೆ ನಿವಾರಿಸಲು ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ತಿರುವನಂತಪುರಂ ನಾರ್ತ್ ನಡುವೆ ಸಂಚರಿಸುವ ವಿಶೇಷ ರೈಲುಗಳ ಸೇವೆಯನ್ನು ವಿಸ್ತರಿಸಲಾಗಿದೆ. ಈ ರೈಲುಗಳು ಪ್ರಸ್ತುತ ಇರುವ ಸಮಯ, ನಿಲುಗಡೆ ಹಾಗೂ ಬೋಗಿಗಳೊಂದಿಗೆ ಸಂಚಾರ ಮುಂದುವರಿಸಲಿವೆ.

ಬೆಂಗಳೂರು- ತಿರುವನಂತಪುರಂ ನಾರ್ತ್ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 06523 ಎಸ್‌ಎಂವಿಟಿ) ಜೂನ್ 29ರಿಂದ ಜುಲೈ 27ರವರೆಗೆ ಪ್ರತಿ ಸೋಮವಾರ ಸಂಚರಿಸಲಿದೆ (ಜುಲೈ 6 ಹೊರತುಪಡಿಸಿ). ಮರುಪ್ರಯಾಣದ ವೇಳೆ (ರೈಲು 06524) ತಿರುವನಂತಪುರಂ ನಾರ್ತ್- ಎಸ್‌ಎಂವಿಟಿ ಬೆಂಗಳೂರು ವಿಶೇಷ ಎಕ್ಸ್‌ಪ್ರೆಸ್ ಜೂನ್ 30ರಿಂದ ಜುಲೈ 28ರವರೆಗೆ ಪ್ರತಿ ಮಂಗಳವಾರ (ಜುಲೈ 7 ಹೊರತುಪಡಿಸಿ) ಓಡಲಿದೆ.

ಹಾಗೆಯೇ, ಎಸ್‌ಎಂವಿಟಿ ಬೆಂಗಳೂರು-ತಿರುವನಂತಪುರಂ ನಾರ್ತ್ ವಿಶೇಷ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 06547) ಜುಲೈ 1ರಿಂದ ಜುಲೈ 29ರವರೆಗೆ ಪ್ರತಿ ಬುಧವಾರ ಸಂಚರಿಸಲಿದೆ (ಜುಲೈ 8 ಹೊರತುಪಡಿಸಿ). ಮರುಪ್ರಯಾಣದ ರೈಲು 06548 ತಿರುವನಂತಪುರಂ ನಾರ್ತ್-ಎಸ್‌ಎಂವಿಟಿ ಬೆಂಗಳೂರು ವಿಶೇಷ ಎಕ್ಸ್‌ಪ್ರೆಸ್ ಜುಲೈ 2ರಿಂದ 30ರವರೆಗೆ ಪ್ರತಿ ಗುರುವಾರ (ಜುಲೈ 9 ಹೊರತುಪಡಿಸಿ) ಕಾರ್ಯನಿರ್ವಹಿಸಲಿದೆ.

ಎಸ್‌ಎಂವಿಟಿ ಬೆಂಗಳೂರು-ತಿರುವನಂತಪುರಂ ನಾರ್ತ್ ವಿಶೇಷ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 06555) ಜುಲೈ 10ರಿಂದ 24ರವರೆಗೆ ಪ್ರತಿ ಶುಕ್ರವಾರ ಸಂಚರಿಸಲಿದೆ (ಜುಲೈ 3 ಹೊರತುಪಡಿಸಿ). ಮರುಪ್ರಯಾಣದ ರೈಲು (06556) ತಿರುವನಂತಪುರಂ ನಾರ್ತ್-ಎಸ್‌ಎಂವಿಟಿ ಬೆಂಗಳೂರು ವಿಶೇಷ ಎಕ್ಸ್‌ಪ್ರೆಸ್ ಜುಲೈ 12ರಿಂದ 26ರವರೆಗೆ ಪ್ರತಿ ಭಾನುವಾರ (ಜುಲೈ 5 ಹೊರತುಪಡಿಸಿ) ಸಂಚಾರ ನಡೆಸಲಿದೆ.

ಗಾಯನ ಸಮಾಜದಿಂದ ಸಂಗೀತ ಸ್ಪರ್ಧೆ

ಬೆಂಗಳೂರು: ಬೆಂಗಳೂರು ಗಾಯನ ಸಮಾಜವು ಆ.1ರಿಂದ ಸೆ.6ರವರೆಗೆ ಹಮ್ಮಿಕೊಳ್ಳಲಿರುವ ಸಂಗೀತ ಸ್ಪರ್ಧೆಗೆ ಅರ್ಜಿ ಆಹ್ವಾನಿಸಿದೆ. 121 ವರ್ಷಗಳ ಇತಿಹಾಸವಿರುವ ಈ ವಾರ್ಷಿಕ ಸಂಗೀತ ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಅರ್ಜಿ ಹಾಗೂ ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್: https://www.gayanasamaja.org/ ಭೇಟಿ ನೀಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಪರೀಕ್ಷೆಗೆ ತೀರ್ಮಾನ

» ನಮ್ಮ ಮೊದಲ ಪುಟದಿಂದ

ಆದರೆ, ಜೀವಂತವಾಗಿತ್ತೇ? ಅಷ್ಟರಲ್ಲಾಗಲೇ ಕೊಲೆಯಾಗಿತ್ತೇ ಎಂಬುದರ ಬಗ್ಗೆ ಇನ್ನಷ್ಟೇ ದೃಢಪಡಬೇಕಿದೆ. ಈ ನಿಟ್ಟಿನಲ್ಲಿ ಮಗುವಿನ ಮರಣೋತ್ತರ ಪರೀಕ್ಷಾ ವರದಿಯನ್ನು ಮತ್ತೊಮ್ಮೆ ವೈದ್ಯರಿಂದ ಪರಾಮರ್ಶೆಗೆ ಒಳಪಡಿಸಲಾಗುವುದು. ಬಳಿಕವಷ್ಟೇ ಮಗುವಿನ ಕೊಲೆ ನಿರ್ದಿಷ್ಟವಾಗಿ ಯಾವ ದಿನ ನಡೆದಿದೆ ಎಂಬುದು ಖಚಿತವಾಗಲಿದೆ ಎಂದು ಮೂಲಗಳು ತಿಳಿಸಿವೆ.

ಸಿಸಿಟಿವಿಯಲ್ಲಿ ಇದೆ ಸಾಕ್ಷ್ಯ: ಆರೋಪಿಗಳಾದ ಪ್ರಿಯಾಂಕ ಹಾಗೂ ಮೋಹನ್, ಮಗು ವೆನ್ನೆಲಾಳನ್ನು ಕಾರಿನಲ್ಲಿ ಕೂರಿಸಿಕೊಂಡು ಹಲವು ಕಡೆ ಸುತ್ತಾಡಿದ್ದಾರೆ. ಕೋಲಾರ, ಕೇರಳಕ್ಕೂ ತೆರಳಿದ್ದಾರೆ. ಇಂದಿರಾನಗರದಲ್ಲಿಯೂ ತಿರುಗಾಡಿದ್ದು, ಇದಕ್ಕೆ ಸಂಬಂಧಿಸಿದ ಕೆಲವು ಸಿಸಿಟಿವಿ ದೃಶ್ಯಾವಳಿ ಪಡೆಯಲಾಗಿದೆ. ಇದು ಕೂಡ ಪ್ರಮುಖ ಸಾಕ್ಷ್ಯಾಧಾರವಾಗಲಿದೆ.

ಅಷ್ಟೇ ಅಲ್ಲದೆ, ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಕಾರು ಹಾಗೂ ಕೃತ್ಯ ನಡೆದ ಸ್ಥಳದಲ್ಲಿ ವೈಜ್ಞಾನಿಕ ಮಾದರಿಯಲ್ಲಿ ಸಾಕ್ಷ್ಯಾಧಾರ ಸಂಗ್ರಹಿಸಿದಂತೆ ಈ ಪ್ರಕರಣದಲ್ಲಿಯೂ ಆ ಮಾದರಿ ಅಳವಡಿಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಎಂಟು ತಂಡದ ಕರಾರುವಕ್ ತನಿಖೆ: ಮಗು ವೆನ್ನೆಲಾ ಪ್ರಕರಣವನ್ನು ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಅತ್ಯಂತ ಸೂಕ್ಷ್ಮವಾಗಿ ಪರಿಗಣಿಸಿದ್ದು, ತನಿಖೆ ಸಲುವಾಗಿಯೇ ಎಂಟು ತಂಡಗಳನ್ನು ರಚಿಸಿದ್ದಾರೆ. ಪ್ರಕರಣದ ತನಿಖೆ ಎಲ್ಲಿಯೂ ದಿಕ್ಕು ತಪ್ಪದೆ ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕು. ಈ ನಿಟ್ಟಿನಲ್ಲಿ ಭಿನ್ನ ಆಯಾಮಗಳಲ್ಲಿ ತನಿಖೆ ನಡೆಸುವಂತೆ ಟಾಸ್ಕ್ ನೀಡಿದ್ದಾರೆ.

ಪೂರ್ವ ವಿಭಾಗದ ಡಿಸಿಪಿ ಡಾ.ವಿಕ್ರಮ್ ಅಮಟೆ ಉಸ್ತುವಾರಿಯಲ್ಲಿ ಬಾಣಸವಾಡಿ ಎಸಿಪಿ ಅನುಷಾ ನೇತೃತ್ವದ ತಂಡವು ಪ್ರಕರಣದ ತನಿಖೆ ನಡೆಸುತ್ತಿದೆ. ಎಂಟು ತಂಡಗಳು ಬೇರೆ ಬೇರೆ ಆಯಾಮಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಮಗು ಅನುಷಾ ಕೊಲೆ, ಕೊಲೆಯ ಬಳಿಕ ಆರೋಪಿಗಳು ಎಸಗಿದ ಸಾಕ್ಷ್ಯ ನಾಶ, ತಾಂತ್ರಿಕ ಹಾಗೂ ವೈಜ್ಞಾನಿಕ ಸಾಕ್ಷ್ಯಾಧಾರ ಸಂಗ್ರಹ ಸೇರಿ ಹಲವು ಹಂತದ ತನಿಖೆ ನಡೆಯುತ್ತಿದೆ ಎಂದು ಮೂಲಗಳು ಹೇಳಿವೆ.

ಎಲ್ಲಿ-ಏನು? ಬುಧವಾರ

ರಂಗಾಸ್ಥೆ: ದ್ರೋಪತಿ ಹೇಳ್ತವ್ಳೆ ನಾಟಕ ಪ್ರದರ್ಶನ. ಸಂಗೀತ ಸಂಯೋಜನೆ, ವಿನ್ಯಾಸ ಮತ್ತು ನಿರ್ದೇಶನ : ಗಣೇಶ್ ಮಂದಾರ್ತಿ
ಸ್ಥಳ : ರಂಗಶಂಕರ, ಜೆ.ಪಿ.ನಗರ, ಸಂಜೆ 7.30.
ಶ್ರೀ ರಾಜೇಶ್ವರಿ ಕಲಾನಿಕೇತನ : ರಂಗ ಸಂಭ್ರಮ-2026. ಶ್ರೀ ಕೃಷ್ಣ ರಾಯಬಾರ ನಾಟಕ ಪ್ರದರ್ಶನ.
ಸ್ಥಳ : ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ. 10.30

ನಗರ ಪೊಲೀಸರ ಭರ್ಜರಿ ಕಾರ್ಯಾಚರಣೆ | 23 ಆರೋಪಿಗಳ ಬಂಧನ | ಗಿಫ್ಟ್‌ಶಾಪ್‌ನಲ್ಲಿ 120 ಹುಕ್ಕಾ ಸೆಟ್ ವಶ

ಎಂಟು ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ

■ **ವಿಕ ಸುದ್ದಿಲೋಕ** ಬೆಂಗಳೂರು

ಮಾದಕ ವಸ್ತು ಜಾಲದ ವಿರುದ್ಧ ಕಾರ್ಯಾಚರಣೆ ಚುರುಕುಗೊಳಿಸಿರುವ ನಗರ ಪೊಲೀಸರು 23 ಮಂದಿ ಆರೋಪಿಗಳನ್ನು ಬಂಧಿಸಿ, ಎಂಟು ಕೋಟಿ ರೂ. ಮೌಲ್ಯದ ವಿವಿಧ ಮಾದರಿಯ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ಅಪರಾಧ ಕೃತ್ಯಗಳಲ್ಲಿ ರೂಢಿಗತ ಆರೋಪಿಯಾಗಿರುವ ಕಲಾಸಿಪಾಳ್ಯದ ಇಮ್ರಾನ್ ಪಾಶಾ ಅಲಿಯಾಸ್ ಚೀಲಾ ಇಮ್ರಾನ್ (36) ಎಂಬುವವನನ್ನು ಹೆಬ್ಬಾಳ ಪೊಲೀಸರು ಸೆರೆ ಹಿಡಿದಿದ್ದಾರೆ. ಆರೋಪಿ ಬಳಿಯಿಂದ ಬರೋಬ್ಬರಿ 2.20 ಕೋಟಿ ರೂ.ಮೌಲ್ಯದ ಮೂರು ಕೆ.ಜಿ. 180 ಗ್ರಾಂ ಹೈಡ್ರೋಗಾಂಜಾ ವಶಪಡಿಸಿಕೊಂಡಿದ್ದಾರೆ.

ಮುಂಬಯಿ ಡ್ರಗ್ಸ್ ಜಾಲದ ಸಂಪರ್ಕ ಹೊಂದಿರುವ ಇಮ್ರಾನ್, ಏಕಾಂಗಿಯಾಗಿ ದಂಧೆ ನಡೆಸುತ್ತಿದ್ದ. ಮುಂಬಯಿಯಿಂದ ಬಸ್‌ನಲ್ಲೇ ಡ್ರಗ್ಸ್ ತಂದು ನಗರದ ಕಾಲೇಜು ವಿದ್ಯಾರ್ಥಿಗಳು, ಉದ್ಯೋಗಿಗಳಿಗೆ ಮಾರುತ್ತಿದ್ದ. ಆರೋಪಿಯು ಡ್ರಗ್ಸ್ ಮಾರಲು ಬಂದ ಸಮಯದಲ್ಲಿಯೇ ದಾಳಿ ನಡೆಸಿ ಇನ್ಸ್‌ಪೆಕ್ಟರ್ ಭೈರ ನೇತೃತ್ವದ ತಂಡವು ಬಂಧಿಸಿದೆ.

ಆರೋಪಿ ವಿರುದ್ಧ ಈ ಹಿಂದೆ ವಾಹನ ಕಳವು, ಮಾದಕ ವಸ್ತು ಮಾರಾಟದಲ್ಲಿ ಭಾಗಿಯಾದ ಸಂಬಂಧ ಐದು ಪ್ರಕರಣಗಳು ದಾಖಲಾಗಿವೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಉಗಾಂಡ ಮಹಿಳೆ ಬಂಧನ: ಮುಂಬಯಿಯಿಂದ ಕೊಕೇನ್ ತಂದು ಸ್ಥಳೀಯ ಪೆಡ್ಲರ್‌ಗೆ ತಲುಪಿಸುತ್ತಿದ್ದ ಉಗಾಂಡದ ಜೆನೆಟ್ ಹಾಗೂ ಕೃತ್ಯದಲ್ಲಿ ಶಾಮೀಲಾಗಿದ್ದ ನೈಜೀರಿಯಾದ ವಹಾಬ್ ಎಲ್ವಿಸ್ ಯೂಸೂಫ್ ಎಂಬುವವನನ್ನು ಸಿಸಿಬಿ ಮಾದಕ ವಸ್ತು ನಿಗ್ರಹ ದಳ ಬಂಧಿಸಿದೆ. 2022ರಲ್ಲಿ ಭಾರತಕ್ಕೆ ಬ್ಯುಸಿನೆಸ್ ವೀಸಾದಲ್ಲಿ ಬಂದಿದ್ದ ಜೆನೆಟ್, ಡ್ರಗ್ಸ್ ದಂಧೆಯಲ್ಲಿ ತೊಡಗಿಸಿಕೊಂಡಿದ್ದಳು. ಈ ಹಿಂದೆ ದಿಲ್ಲಿ ಪೊಲೀಸರಿಂದ ಬಂಧಿತಳಾಗಿ ಸೆರೆವಾಸ ಅನುಭವಿಸಿದ್ದಳು. ಬಳಿಕ ಮುಂಬಯಿಗೆ ಸ್ಥಳಾಂತರಗೊಂಡು ಬೆಂಗಳೂರಿಗೆ ಡ್ರಗ್ ಪೂರೈಕೆದಾರಳಾಗಿ ಕೆಲಸ ಮಾಡುತ್ತಿದ್ದಳು.

ಇತ್ತೀಚೆಗೆ ಕೊಕೇನ್ ತಂದಿದ್ದ ಜೆನೆಟ್, ಸೋಲದೇವನಹಳ್ಳಿ ವ್ಯಾಪ್ತಿಯ ವೀರಶೆಟ್ಟಿಹಳ್ಳಿ ಬಳಿ ಪೆಡ್ಲರ್ ವಹಾಬ್‌ಗೆ ತಲುಪಿಸಲು ಯತ್ನಿಸುತ್ತಿದ್ದ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಈ ನಿಟ್ಟಿನಲ್ಲಿ ಡಿಸಿಪಿ ರಾಜಾ ಇಮಾಮ್ ಖಾಸೀಂ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಎಲ್.ವೈ. ರಾಜೇಶ್, ಇನ್ಸ್‌ಪೆಕ್ಟರ್ ಪ್ರವೀಣ್ ಎಲಿಗಾರ್, ಹೆಡ್ ಕಾನ್ಸ್‌ಟೆಬಲ್ ಶಶಿಧರ ಅವರ ತಂಡ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿತ್ತು. ಆರೋಪಿಗಳ ಬಳಿ 1.40 ಕೋಟಿ ರೂ. ಮೌಲ್ಯದ ಕೊಕೇನ್ ಜಪ್ತಿ ಮಾಡಿದೆ.

ಹೈಡ್ರೋಗಾಂಜಾ ಜಪ್ತಿ: ಸುದ್ದಗುಂಟೆ ಪಾಳ್ಯ ಪೊಲೀಸರು ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ಪೆಡ್ಲರ್‌ಗಳನ್ನು ಬಂಧಿಸಿ, 1 ಕೋಟಿ 9 ಲಕ್ಷ ರೂ. ಮೌಲ್ಯದ ಒಂದೂವರೆ ಕೆ.ಜಿ ಹೈಡ್ರೋ ಗಾಂಜಾ, 3 ಕೆಜಿ ಗಾಂಜಾ ವಶಪಡಿಸಿಕೊಂಡಿದ್ದಾರೆ. ಅಮೀನ್ ಹಾಗೂ ಸೈಯದ್ ನವಾಜ್ ಬಂಧಿತರು. ಹಲಸೂರು, ಹೆಣ್ಣೂರು, ಕೆ.ಜಿ.ಹಳ್ಳಿ ಪೊಲೀಸರು ಸುಮಾರು 70 ಲಕ್ಷ ರೂ. ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ.

ಗಿಫ್ಟ್‌ಶಾಪ್‌ನಲ್ಲಿ ವಶಪಡಿಸಿಕೊಂಡ ಹುಕ್ಕಾ ಸೆಟ್ ಹಾಗೂ ಇ-ಸಿಗರೆಟ್‌ಗಳನ್ನು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ವೀಕ್ಷಿಸಿದರು.

ಇ-ಸಿಗರೇಟ್ ಮಾರಾಟಕ್ಕೆ ಬ್ರೇಕ್

ನಿಷೇಧಿತ ಇ-ಸಿಗರೇಟ್ ಮಾರುತ್ತಿದ್ದ ಶಾಪ್ ಮೇಲೆ ದಾಳಿ ನಡೆಸಿರುವ ಜೀವನ್ ಬಿಮಾನಗರ ಠಾಣೆ ಪೊಲೀಸರು 1 ಕೋಟಿ 36 ಲಕ್ಷ ರೂ. ಬೆಲೆಬಾಳುವ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ. ಅಯೋಧ್ಯೆ ವಿಹಾರ್ ಹೋಟೆಲ್ ಬಳಿ ಇರುವ ಗಿಫ್ಟ್‌ಶಾಪ್‌ನ ಮೇಲೆ ದಾಳಿ ನಡೆಸಿ 1,197 ಇ-ಸಿಗರೆಟ್, 490 ವಿದೇಶಿ ಸಿಗರೆಟ್, 120 ಸೆಟ್ ಹುಕ್ಕಾ ಸೆಟ್ ವಶಪಡಿಸಿಕೊಳ್ಳಲಾಗಿದೆ. ಪ್ರತ್ಯೇಕ ಪ್ರಕರಣಗಳಿಗೆ ಸಂಬಂಧಿಸಿದಂತೆ ಆರೋಪಿಯನ್ನು ಬಂಧಿಸಿ 624 ಗ್ರಾಂ ಹೈಡ್ರೋಗಾಂಜಾ ಜಪ್ತಿ ಮಾಡಿದ್ದಾರೆ. ಇಂದಿರಾನಗರ ಠಾಣೆ ಪೊಲೀಸರು ಕೂಡ ಪ್ರತ್ಯೇಕ ಪ್ರಕರಣ ದಾಖಲಿಸಿ 1.14 ಕೋಟಿ ರೂ. ಮೌಲ್ಯದ ವಿದೇಶಿ, ಇ-ಸಿಗರೆಟ್ ಹಾಗೂ 6 ಗ್ರಾಂ ಮೆಥಂಫೆಂಟಮೈನ್, 13 ಗ್ರಾಂ ಕೊಕೇನ್ ವಶಪಡಿಸಿಕೊಂಡಿದ್ದಾರೆ.

ಕಾರ್ಯಾಚರಣೆ ನಿರಂತರ

ಮಾದಕ ವಸ್ತು ಮಾರಾಟ ಜಾಲದ ವಿರುದ್ಧ ನಗರಾದ್ಯಂತ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಪ್ರತಿ ಪ್ರಕರಣದಲ್ಲಿ ಸಿಗುವ ಸಣ್ಣ ಸುಳಿವು ಆಧರಿಸಿ ದಂಧೆಕೋರರನ್ನು ಬಂಧಿಸಲಾಗುತ್ತಿದೆ. ಈ ಕಾರ್ಯಾಚರಣೆ ನಿರಂತರವಾಗಿ ಮುಂದುವರಿಯಲಿದೆ.

- ಸೀಮಂತ್ ಕುಮಾರ್ ಸಿಂಗ್
ನಗರ ಪೊಲೀಸ್ ಆಯುಕ್ತ

ತುಮಕೂರು ಬಳಿ 20 ಕಿ.ಮೀ. ಹೆದ್ದಾರಿ ಜಾಮ್!

■ **ವಿಕ ಸುದ್ದಿಲೋಕ** ತುಮಕೂರು

ತುಮಕೂರು-ಶಿರಾ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಮಂಗಳವಾರ ಬೆಳಗಿನ ಜಾವ ಲಾರಿಯೊಂದು ಪಲ್ಟಿಯಾದ ಪರಿಣಾಮ ಸುಮಾರು 20 ಕಿಲೋಮೀಟರ್ ವ್ಯಾಪ್ತಿಯಲ್ಲಿ ವಾಹನ ದಟ್ಟಣೆ ಉಂಟಾಗಿ, ಪ್ರಯಾಣಿಕರು ಹಾಗೂ ವಾಹನ ಸವಾರರು ಹಲವು ಗಂಟೆಗಳ ಕಾಲ ಪರದಾಡುವಂತಾಯಿತು.

ಶಿರಾದಿಂದ ತುಮಕೂರಿನತ್ತ ಪೈಪ್‌ಗಳನ್ನು ಸಾಗಿಸುತ್ತಿದ್ದ ಲಾರಿ ಬೆಳಗ್ಗೆ 5 ಗಂಟೆ ವೇಳೆಗೆ ಲಿಂಗಾಪುರ ಸಮೀಪ ನಿಯಂತ್ರಣ ತಪ್ಪಿ ಪಲ್ಟಿಯಾಗಿತ್ತು. ಅಪಘಾತ ಸಂಭವಿಸಿದ ಸ್ಥಳದಲ್ಲೇ ರಾಷ್ಟ್ರೀಯ ಹೆದ್ದಾರಿಯ ಮೇಲ್ಸೇತುವೆ ಕಾಮಗಾರಿ ನಡೆಯುತ್ತಿದ್ದು, ರಸ್ತೆ ಇಕ್ಕಟ್ಟಾಗಿರುವುದರಿಂದ ವಾಹನ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಯಿತು. ಅಪಘಾತದ ಬಳಿಕ ಹೆದ್ದಾರಿಯ ಎರಡೂ ಬದಿಗಳಲ್ಲೂ ವಾಹನಗಳ ಸಾಲು ಕಿಲೋ ಮೀಟರ್‌ಗಳಷ್ಟು ಉದ್ದಕ್ಕೆ ವಿಸ್ತರಿಸಿತು. ವಸಂತನರಸಾಪುರದಿಂದ ತುಮಕೂರು ನಗರದ ಶಿರಾ ಗೇಟ್‌ವರೆಗೆ ವಾಹನಗಳು ನಿಧಾನಗತಿಯಲ್ಲಿ ಸಾಗಿದರೆ, ಕೆಲವೆಡೆ ಸಂಪೂರ್ಣವಾಗಿ ನಿಂತುಹೋಗಿದ್ದವು. ಪರಿಣಾಮವಾಗಿ ತುಮಕೂರು- ಶಿರಾ ಮಾರ್ಗದಲ್ಲಿ ಐದು ಗಂಟೆಗಳ ಕಾಲ ಸಂಚಾರ ಅಸ್ತವ್ಯಸ್ತಗೊಂಡಿತು. ಲಾರಿ ತೆರವು ಕಾರ್ಯಾಚರಣೆ ವಿಳಂಬವಾಗಿದ್ದು, ಲಿಂಗಾಪುರ ಹಾಗೂ ನೆಲಹಾಳ್ ಸಮೀಪ ನಡೆಯುತ್ತಿರುವ ಮೇಲ್ಸೇತುವೆ ಕಾಮಗಾರಿಯೂ ದಟ್ಟಣೆ ಹೆಚ್ಚಲು ಕಾರಣವಾಯಿತು ಎಂದು ಸ್ಥಳೀಯರು ತಿಳಿಸಿದ್ದಾರೆ.

ತುಮಕೂರು-ಶಿರಾ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ವಾಹನ ದಟ್ಟಣೆ.

ಕಾಮಗಾರಿ ವಿಳಂಬ ಮತ್ತೆ ಚರ್ಚೆಗೆ

ಅಪಘಾತದ ಹಿನ್ನೆಲೆಯಲ್ಲಿ ಲಿಂಗಾಪುರ ಮತ್ತು ನೆಲಹಾಳ್ ಸಮೀಪದ ರಾಷ್ಟ್ರೀಯ ಹೆದ್ದಾರಿ ಮೇಲ್ಸೇತುವೆ ಕಾಮಗಾರಿ ವಿಳಂಬ ಮತ್ತೊಮ್ಮೆ ಸಾರ್ವಜನಿಕ ಚರ್ಚೆಗೆ ಕಾರಣವಾಗಿದೆ. ಸುಮಾರು ಮೂರು ವರ್ಷಗಳ ಹಿಂದೆ ಆರಂಭವಾದ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ ಎಂಬುದು ವಾಹನ ಸವಾರರು ಮತ್ತು ಸ್ಥಳೀಯರ ಅಸಮಾಧಾನಕ್ಕೆ ಕಾರಣವಾಗಿದೆ. ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುವ ಈ ಮಾರ್ಗದಲ್ಲಿ ಕಾಮಗಾರಿ ನಡೆಯುತ್ತಿರುವುದರಿಂದ ರಸ್ತೆ ಅಗಲ ಕಡಿಮೆಯಾಗಿದ್ದು, ಸಂಚಾರ ನಿರ್ವಹಣೆಯಲ್ಲಿ ತೊಂದರೆ ಎದುರಾಗುತ್ತಿದೆ.

ಅಗ್ನಿ ಸುರಕ್ಷತೆಗಾಗಿ ಮಾರ್ಕೆಟ್ ಮಳಿಗೆ ತೆರವು

- ಕೇಂದ್ರ ನಗರ ಪಾಲಿಕೆ ಆಯುಕ್ತರ ಸ್ಪಷ್ಟನೆ
- ಮಳಿಗೆ ಬಾಡಿಗೆಯನ್ನು ಮಧ್ಯವರ್ತಿಗಳಿಗೆ ನೀಡದಿರಿ ಎಂದು ಸಲಹೆ

ಪ್ರತಿಭಟನಾಕಾರರನ್ನು ಉದ್ದೇಶಿಸಿ ರೈತ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿದರು.

■ **ವಿಕ ಸುದ್ದಿಲೋಕ** ಬೆಂಗಳೂರು

ನಗರದ ಕೆ.ಆರ್.ಮಾರುಕಟ್ಟೆಯಲ್ಲಿ ಅಗ್ನಿ ಅನಾಹುತಗಳನ್ನು ತಡೆಗಟ್ಟುವ ಉದ್ದೇಶದಿಂದ ಫೈರ್ ಆಡಿಟ್ ನಡೆಸಲು ಜಿಬಿಎ ಮುಖ್ಯ ಆಯುಕ್ತರು ಸೂಚಿಸಿರುವ ಹಿನ್ನೆಲೆಯಲ್ಲಿ ಮಳಿಗೆಗಳ ಮುಂಭಾಗದ ಒತ್ತುವರಿಗಳು ಹಾಗೂ ಅನಧಿಕೃತ ಮಳಿಗೆಗಳನ್ನು ತೆರವುಗೊಳಿಸಲಾಗುತ್ತಿದೆ ಎಂದು ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಜಿ.ಜಗದೀಶ್ ತಿಳಿಸಿದರು.

ಮಳಿಗೆಗಳ ತೆರವು ಕಾರ್ಯಾಚರಣೆ ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದಲ್ಲಿ ವ್ಯಾಪಾರಿಗಳು ಪ್ರತಿಭಟನೆ ನಡೆಸುತ್ತಿದ್ದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿ ಪ್ರತಿಭಟನಾನಿರತರ ಮನವಿ ಆಲಿಸಿದ ಅವರು, ''ಮಾರುಕಟ್ಟೆಯಲ್ಲಿನ ಸಮಸ್ಯೆಗಳ ಕುರಿತಂತೆ ರೈತರು, ವ್ಯಾಪಾರಿಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿ, ಅವುಗಳಿಗೆ ಶಾಶ್ವತ ಪರಿಹಾರ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು,'' ಎಂದು ಭರವಸೆ ನೀಡಿದರು.

''ಕೆ.ಆರ್.ಮಾರುಕಟ್ಟೆಯಲ್ಲಿ ಸ್ವಚ್ಛತೆ ಕಾಪಾಡುವುದು, ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸುವುದು ಹಾಗೂ ಅಗ್ನಿಶಾಮಕ ವಾಹನ ಸೇರಿದಂತೆ ತುರ್ತು ಸೇವೆಗಳ ವಾಹನಗಳು ಅಡೆತಡೆಯಿಲ್ಲದೆ ಸಂಚರಿಸುವಂತೆ ಮಾಡುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇದಕ್ಕೆ ಸಾರ್ವಜನಿಕರು ಸಹಕರಿಸಬೇಕು,'' ಎಂದು ಮನವಿ ಮಾಡಿಕೊಂಡರು.

''ಕೇಂದ್ರ ನಗರ ಪಾಲಿಕೆಗೆ ಪಾವತಿಸಬೇಕಾದ ಮಳಿಗೆಗಳ ಬಾಡಿಗೆ ಶುಲ್ಕ ಹಣವನ್ನು ಯಾವುದೇ ಮಧ್ಯವರ್ತಿಗಳು ಅಥವಾ ಅನಧಿಕೃತ ವ್ಯಕ್ತಿಗಳಿಗೆ ನೀಡಬಾರದು. ನೇರವಾಗಿ ನಗರ ಪಾಲಿಕೆಗೆ ಪಾವತಿಸಬೇಕು. ಅನಧಿಕೃತ ವ್ಯಕ್ತಿಗಳಿಗೆ ಬಾಡಿಗೆ ಪಾವತಿಸಿದರೆ, ಅದಕ್ಕೆ ನಾವು ಹೊಣೆಯಲ್ಲ. ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಸಂಬಂಧಿತ ಅಂಗಡಿ/ಮಳಿಗೆಯ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಂಡು, ಅಗತ್ಯವಿದ್ದಲ್ಲಿ ಮಳಿಗೆಗೆ ಬೀಗಮುದ್ರೆ ಹಾಕಲಾಗುವುದು,'' ಎಂದು ಎಚ್ಚರಿಕೆ ನೀಡಿದರು.

''ವ್ಯಾಪಾರಿಗಳು ಮತ್ತು ರೈತರಿಗೆ ವ್ಯಾಪಾರ ನಡೆಸುವ ಸ್ಥಳಗಳನ್ನು ಗುರುತಿಸಿ, ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆ ರೂಪಿಸುವ ಉದ್ದೇಶದಿಂದ ವಿಶೇಷ ವಿನ್ಯಾಸದ ಮಾರಾಟ ಸ್ಥಳಗಳನ್ನು ಗುರುತಿಸಿ ಸೂಕ್ತ ವ್ಯವಸ್ಥೆ ಕಲ್ಪಿಸಲಾಗುವುದು. ಮುಖ್ಯ ಆಯುಕ್ತರು, ವ್ಯಾಪಾರಿಗಳು, ರೈತರು ಹಾಗೂ ಸಂಘ-ಸಂಸ್ಥೆಗಳ ಮುಖಂಡರೊಂದಿಗೆ ಚರ್ಚಿಸಿ ಎಲ್ಲರ ಒಪ್ಪಿಗೆಯೊಂದಿಗೆ ಅಂತಿಮ ಯೋಜನೆಯನ್ನು ಜಾರಿಗೊಳಿಸಲಾಗುವುದು,'' ಎಂದರು.

'ಕಸಾಪ ಕನ್ನಡ ಶಾಲೆಗಳಲ್ಲಿ ಪ್ರವೇಶಾತಿ ಹೆಚ್ಚಿಸಲಿ'

ಮಹದೇವಪುರ : ಕನ್ನಡ ಭಾಷೆ ಮತ್ತು ಸಾಹಿತ್ಯದ ಉಳಿವಿಗಾಗಿ ಕನ್ನಡ ಶಾಲೆಗಳಲ್ಲಿ ಪ್ರವೇಶಾತಿ ಹೆಚ್ಚುವಂತೆ ಮಾಡುವುದು ಕಸಾಪದ ಮೊದಲ ಕೆಲಸವಾಗಬೇಕು ಎಂದು ಪ್ರಾಧ್ಯಾಪಕ ಎಚ್.ಎಂ. ನಾರಾಯಣರೆಡ್ಡಿ ಕರೆ ನೀಡಿದರು. ಗುಂಡೂರಿನಲ್ಲಿ ಆಯೋಜಿಸಿದ್ದ 'ಮನೆಯಂಗಳದಲ್ಲಿ ಕನ್ನಡ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ''ಕನ್ನಡ ಸಾಹಿತ್ಯ ಪರಿಷತ್ತು ಕಳೆದ ನಾಲ್ಕು ವರ್ಷಗಳಿಂದ ನಾಡು, ನುಡಿ, ಗಡಿ ವಿಚಾರದಲ್ಲಿ ಏನು ಕೆಲಸ ಮಾಡಿದೆ ? ಸಮ್ಮೇಳನಗಳ ನಿರ್ಣಯಗಳನ್ನು ಸರಕಾರ ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ತಂದಿದೆ ಎಂಬುದನ್ನು ಕನ್ನಡ ಜನತೆಗೆ ತಿಳಿಸಬೇಕು,'' ಎಂದರು. ಅಧ್ಯಾಪಕ ಆದಪ್ಪ ಪಾಸೋಡಿ, ಕಸಾಪ ಕಾರ್ಯದರ್ಶಿ ಉಪೇಂದ್ರ ಕುಮಾರ್ ಮಾತನಾಡಿದರು. ನಾ.ರಾಮಮೂರ್ತಿ, ಆಂಜಿನಪ್ಪ ಇದ್ದರು.

'ನಕಲಿ ಸ್ತ್ರೀ ರೋಗ ತಜ್ಞರ ವಿರುದ್ಧ ಕ್ರಮ ವಹಿಸಿ'

■ **ವಿಕ ಸುದ್ದಿಲೋಕ** ಬೆಂಗಳೂರು

ಆರೋಗ್ಯ ಇಲಾಖೆಯು ವಿಶೇಷ ತಂಡ ರಚಿಸಿ ಜಿಲ್ಲಾದ್ಯಂತ ಸ್ತ್ರೀರೋಗ ತಜ್ಞರ ವೈದ್ಯಕೀಯ ಕೇಂದ್ರಗಳಲ್ಲಿ ತಪಾಸಣೆ ನಡೆಸಿ ಅನರ್ಹ ವೈದ್ಯರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಬೆಂಗಳೂರು ನಗರ ಜಿ.ಪಂ. ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಆರ್. ಯತೀಶ್ ಸೂಚಿಸಿದರು.

ಜಿಪಂ ಸಿಇಒ ಆರ್. ಯತೀಶ್ ಸೂಚನೆ

ಬೆಂಗಳೂರು ನಗರ ಜಿ.ಪಂ. ಸಭಾಂಗಣದಲ್ಲಿ ಮಂಗಳವಾರ ನಡೆದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ, ಆಶಾ ಮೇಲ್ವಿಚಾರಣಾ/ ಕುಂದುಕೊರತೆ ನಿವಾರಣೆ ಮತ್ತು ಎನ್‌ಪಿಪಿಸಿಎಫ್ ಕಾರ್ಯಕ್ರಮದ ಜಿಲ್ಲಾ ಮಟ್ಟದ ಪ್ರಥಮ ತ್ರೈಮಾಸಿಕ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

''ಜಿಲ್ಲೆಯ ಹಲವೆಡೆ ಸ್ತ್ರೀರೋಗ ತಜ್ಞರೆಂದು ಹೇಳಿಕೊಂಡು ಅನರ್ಹ ವೈದ್ಯರು ಅನಧಿಕೃತವಾಗಿ ಚಿಕಿತ್ಸೆ ನೀಡುತ್ತಿದ್ದು, ಇದರಿಂದ ಹೆರಿಗೆ ಸಂದರ್ಭದಲ್ಲಿ ಅಪಾಯ ಎದುರಾಗುವ ಸಾಧ್ಯತೆಯಿದೆ. ಇದನ್ನು ತಡೆಯಬೇಕಿದೆ,'' ಎಂದರು.

''ಇತ್ತೀಚೆಗೆ ಮಂಡ್ಯ ಜಿಲ್ಲೆಯ ಆರೋಗ್ಯ ಸಭೆಯಲ್ಲಿ ಬಾಣಂತಿಯರ ಆಹಾರ ಪದ್ಧತಿಗಳ ವಿಸ್ತೃತ ವರದಿಯನ್ನು ಅಲ್ಲಿನ ಸಿಇಒ ಸಿಎಂಗೆ ಸಲ್ಲಿಸಿದರು. ಈ ವರದಿಯನ್ವಯ ಪೌಷ್ಟಿಕಾಂಶ ರಹಿತ ಆಹಾರ ಸೇವನೆಯಿಂದ ಶಿಶುಗಳ ಆರೋಗ್ಯದಲ್ಲಿ ಏರುಪೇರು ಕಾಣಿಸಿಕೊಂಡಿರುವ ಬಗ್ಗೆ ಉಲ್ಲೇಖಿಸಲಾಗಿದೆ. ಇದು ಅತ್ಯಂತ ಆತಂಕಕಾರಿ ಬೆಳವಣಿಗೆ. ಜಿಲ್ಲೆಯಲ್ಲಿ ಈ ರೀತಿಯ ಯಾವುದೇ ಪ್ರಕರಣಗಳು ಕಂಡು ಬರದಂತೆ ಮನೆ ಮನೆಗೆ ಭೇಟಿ ನೀಡುವ ಆಶಾ ಕಾರ್ಯಕರ್ತೆಯರು ಗರ್ಭಿಣಿ ಹಾಗೂ ಬಾಣಂತಿಯರ ಆಹಾರ ಪದ್ಧತಿಯನ್ನು ದಾಖಲಿಸಿಕೊಳ್ಳಬೇಕು. ಮುಂದಿನ ಮೂರು ತಿಂಗಳವರೆಗೂ ದಾಖಲೀಕರಣ ಮಾಡಿ ಸಮಗ್ರ ವರದಿ ಸಲ್ಲಿಸಬೇಕು,'' ಎಂದು ನಿರ್ದೇಶನ ನೀಡಿದರು.

''ಮಳೆಗಾಲ ಪ್ರಾರಂಭವಾಗಿದ್ದು ಡೆಂಗೆ, ಮಲೇರಿಯಾ, ಚಿಕನ್‌ಗುನ್ಯಾಗಳಂತಹ ಸೊಳ್ಳೆಯಿಂದ ಹರಡುವ ಕಾಯಿಲೆ ಬಗ್ಗೆ ಹಾಗೂ ಅವುಗಳನ್ನು ತಡೆಯಲು ಅಗತ್ಯ ಮುಂಜಾಗ್ರತಾ ಕ್ರಮಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಆದ್ಯತೆ ನೀಡಬೇಕು,'' ಎಂದು ಆದೇಶಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿ ಡಾ. ರಘೇಂದ್ರನಾಥ್ ಮೇಟಿ, ''ಮೂಲದಲ್ಲೇ ಕಾಯಿಲೆ ಹರಡುವುದನ್ನು ತಡೆಯಲು ಪ್ರತಿ ವಾರಕ್ಕೊಮ್ಮೆ ಲಾರ್ವಾ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ,'' ಎಂದರು.

ಆರ್‌ಸಿಎಚ್ ಅಧಿಕಾರಿ ಡಾ. ನದೀಂ ಅಹಮದ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ರಸ್ತೆ ಬ್ಯಾಟರಾಯನಪುರದ ಶ್ರೀ ಶಾರದಾ ವಿದ್ಯಾಪೀಠದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಮ್ಮಿಕೊಂಡಿದ್ದ ಉಪನ್ಯಾಸ ಮಾಲೆಯನ್ನು ಸುಮಾ ಸತೀಶ್ ಉದ್ಘಾಟಿಸಿದರು. ಸಾಹಿತ್ಯ ಅಕಾಡೆಮಿ ಮಾಜಿ ಸದಸ್ಯ ಡಾ. ಬಿ.ಎಂ ಪಟೇಲ್ ಪಾಂಡು ಅಧ್ಯಕ್ಷತೆ ವಹಿಸಿದ್ದರು. ಡಾ.ಕುರುವ ಬಸವರಾಜ ವಿಶೇಷ ಉಪನ್ಯಾಸ ನೀಡಿದರು.

ಒಂದೂವರೆ ಕೆಜಿ ಚಿನ್ನಾಭರಣ ದೋಚಿದ್ದವರ ಸೆರೆ

■ **ವಿಕ ಸುದ್ದಿಲೋಕ** ಬೆಂಗಳೂರು

ಚಿನ್ನಾಭರಣ ಮಳಿಗೆ ಮಾಲೀಕರಿಂದ ಕೆ.ಜಿ.ಗಟ್ಟಲೆ ಚಿನ್ನಾಭರಣ ದೋಚಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಮಲ್ಲೇಶ್ವರಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಹಾರಾಷ್ಟ್ರದ ಪ್ರವೀಣ್ ಅಲಿಯಾಸ್ ಪಪ್ಪು (44), ಗುಜರಾತ್‌ನ ಪರೇಶ್ ಸೋನಿ (49) ಬಂಧಿತರು. ಆರೋಪಿಗಳು ಮೇ 16ರಂದು ನಗರದಲ್ಲಿ ದೋಚಿದ್ದ 1.64 ಕೋಟಿ ರೂ. ಬೆಲೆಬಾಳುವ ಆಭರಣ ಜಪ್ತಿ ಮಾಡಲಾಗಿದೆ. ಕೃತ್ಯದಲ್ಲಿ ಶಾಮೀಲಾಗಿದ್ದ ಮತ್ತಿಬ್ಬರು ತಲೆಮರೆಸಿಕೊಂಡಿದ್ದು, ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ.

ವಂಚನೆ ಹಾಗೂ ಸುಲಿಗೆಯನ್ನೇ ಕಾಯಕ ಮಾಡಿಕೊಂಡಿದ್ದ ಪ್ರವೀಣ್ ವಿರುದ್ಧ ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳಲ್ಲಿ ಎಂಟು ಕೇಸ್‌ಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ನಗರ್ತಪೇಟೆಯ ಮೆಹ್ತಾ ಗೋಲ್ಡ್ ಪ್ರೈ. ಲಿಮಿಟೆಡ್‌ನ ವ್ಯವಸ್ಥಾಪಕ ಮಹೇಂದ್ರ ಕುಮಾರ್ ಡಿ. ಜೈನ್ ಅವರನ್ನು ಪರಿಚಯಿಸಿಕೊಂಡಿದ್ದ ಪರೇಶ್ ಸೋನಿಯು ಸಗಟಿನಲ್ಲಿ ಚಿನ್ನಾಭರಣ ಖರೀದಿಸುತ್ತೇನೆ ಎಂದು ಭರವಸೆ ನೀಡಿದ್ದ. ಬಳಿಕ ತಮ್ಮ ಬಳಿಯಿರುವ ಆಭರಣಗಳ ಸ್ಯಾಂಪಲ್‌ಗಳನ್ನು ತೋರಿಸುವಂತೆ ಮಲ್ಲೇಶ್ವರಂನ ಸಂಪಿಗೆ ರಸ್ತೆಯ ಕಚೇರಿಗೆ ಕರೆದಿದ್ದ. ಈ ನಿಟ್ಟಿನಲ್ಲಿ ಮೇ 16ರಂದು 3 ಕೆ.ಜಿ. ಆಭರಣಗಳನ್ನು ತೆಗೆದುಕೊಂಡು ಮಾಹಿ ಎಂಟರ್‌ಪ್ರೈಸಸ್ ಹೆಸರಿನ ಕಚೇರಿಗೆ ಮಹೇಂದ್ರಕುಮಾರ್ ತಮ್ಮ ಕೆಲಸಗಾರನ ಜತೆ ತೆರಳಿದ್ದರು. ಈ ವೇಳೆ ಅವರಿಬ್ಬರನ್ನೂ ಯಾಮಾರಿಸಿದ್ದ ಪರೇಶ್ ಸೋನಿ ಮತ್ತಿತರರು ಸುಮಾರು ಒಂದು ಕೆ.ಜಿ. 850 ಗ್ರಾಂ ಆಭರಣ ದೋಚಿ ಪರಾರಿಯಾಗಿದ್ದರು.

ಈ ಕುರಿತು ಪ್ರಕರಣ ದಾಖಲಿಸಿಕೊಂಡು ಪರೇಶ್‌ನನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಮುಂಬಯಿಯ ಪ್ರವೀಣ್ ಹಾಗೂ ಇತರರ ಬಗ್ಗೆ ಬಾಯ್ಬಿಟ್ಟಿದ್ದ. ಹೀಗಾಗಿ, ಮುಂಬಯಿಗೆ ತೆರಳಿ ಪ್ರವೀಣ್‌ನನ್ನು ಬಂಧಿಸಿ ಬೇರೆ ಬೇರೆ ಜ್ಯುವೆಲರಿ ಶಾಪ್‌ಗಳಲ್ಲಿ ಅಡವಿಟ್ಟಿದ್ದ ಆಭರಣ ವಶಪಡಿಸಿಕೊಳ್ಳಲಾಗಿದೆ. ಇನ್ನಿಬ್ಬರ ಬಂಧನಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಯುವತಿ ಕೊಲೆ ಪ್ರಕರಣ: ಆರೋಪಿ ಬಂಧನ

ಸಕಲೇಶಪುರ(ಹಾಸನ): ಬೆಂಗಳೂರಿನ ಶೇಷಾದ್ರಿಪುರಂ ವ್ಯಾಪ್ತಿಯಲ್ಲಿ ಯುವತಿಯನ್ನು ಕೊಲೆ ಮಾಡಿದ ಆರೋಪದಡಿ ಸಕಲೇಶಪುರ ಮೂಲದ ಆರೋಪಿಯನ್ನು ಶೇಷಾದ್ರಿಪುರಂ ಪೊಲೀಸರು ಬಂಧಿಸಿದ್ದಾರೆ.

ಪಟ್ಟಣದ ಅಗ್ರಹಾರ ಬಡಾವಣೆಯ ವಾಸಿ ಶರತ್ ಅಲಿಯಾಸ್ ಡಿಜೆ ಬಂಧಿತ ಆರೋಪಿ. ಸಕಲೇಶಪುರದ ಎನ್.ಡಿ. ಅನುಷಾ ಕೊಲೆಯಾಗಿದ್ದ ಯುವತಿ.

ಪೊಲೀಸ್ ಮೂಲಗಳ ಪ್ರಕಾರ, ಶರತ್ ಮತ್ತು ಅನುಷಾ ಪರಸ್ಪರ ಪರಿಚಯವಿದ್ದರು ಎನ್ನಲಾಗಿದ್ದು, ಅನುಷಾ ವಾಸಕ್ಕಾಗಿ ಶೇಷಾದ್ರಿಪುರಂನಲ್ಲಿ ಬಾಡಿಗೆ ಮನೆ ವ್ಯವಸ್ಥೆ ಮಾಡಲಾಗಿತ್ತು. ಜೂನ್ 13ರಂದು ರಾತ್ರಿ ಅನುಷಾಳನ್ನು ಆರೋಪಿ ಶರತ್ ಕೊಲೆ ಮಾಡಿದ್ದ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಘಟನೆ ಬಳಿಕ ಪೊಲೀಸರ ತನಿಖೆ ದಿಕ್ಕು ತಪ್ಪಿಸುವ ಉದ್ದೇಶದಿಂದ ಶರತ್ ಸಕಲೇಶಪುರಕ್ಕೆ ಬಂದು ಯಾವುದೇ ಅನುಮಾನ ಬಾರದಂತೆ ಸಾಮಾನ್ಯವಾಗಿ ಓಡಾಡಿಕೊಂಡಿದ್ದ ಎನ್ನಲಾಗಿದೆ. ಇತ್ತ ಪ್ರಕರಣ ದಾಖಲಿಸಿಕೊಂಡ ಶೇಷಾದ್ರಿಪುರಂ ಠಾಣೆ ಪೊಲೀಸರು ಆರೋಪಿ ಚಲನವಲನದ ಬಗ್ಗೆ ಮಾಹಿತಿ ಸಂಗ್ರಹಿಸಿ ಸಕಲೇಶಪುರಕ್ಕೆ ಆಗಮಿಸಿ ಕಾರ್ಯಾಚರಣೆ ನಡೆಸಿದರು.

ಸಕಲೇಶಪುರ ನಗರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಪಿ.ಸಿ. ವನರಾಜು ಅವರ ಮಾರ್ಗದರ್ಶನದಲ್ಲಿ ಸಿಬ್ಬಂದಿಗಳಾದ ಪೃಥ್ವಿ ಹಾಗೂ ಮಧು ಸಹಕಾರದಲ್ಲಿ ಶೇಷಾದ್ರಿಪುರಂ ಠಾಣೆ ಪೊಲೀಸರು ತಡರಾತ್ರಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಆರೋಪಿಯನ್ನು ವಶಕ್ಕೆ ಪಡೆದು ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗಿದ್ದು, ಕೊಲೆಗೆ ನಿಖರ ಕಾರಣವೇನು ಎಂಬುದರ ಕುರಿತು ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪೇಟೆ ಧಾರಣೆ



ಬೆಂಗಳೂರು ಸಗಟು ಬೆಲೆ 16.06.2026

ಸೂರ್ಯಕಾಂತಿ ಎಣ್ಣೆ (10 ಲೀ.)	
ಗೋಲ್ಡ್ ವಿನ್ನರ್	1720
ಜೆಮಿನಿ	1730
ಸನ್‌ಪ್ಯೂರ್ (10 ಕೆ.ಜಿ.)	1700
ಪಾಮ್ ಆಯಿಲ್ (850 ಗ್ರಾ.ನ 10 ಪ್ಯಾಕೆಟ್)	
ರುಚಿ ಗೋಲ್ಡ್	1440
ಶುಭ್ (10 ಲೀ.)	1420
ಕಡಲೆಕಾಯಿ ಎಣ್ಣೆ (10 ಲೀ.)	
ಫ್ಯೂರ್‌ನಟ್	1690
ಕೆ ಎನ್ ಜಿ	1650
ನಟ್ ಗೋಲ್ಡ್	1640
ಕುಕ್ಕಿಂಗ್ ಆಯಿಲ್ (850 ಗ್ರಾ.ನ 10 ಪ್ಯಾಕೆಟ್)	
ಸನ್‌ಪಾರ್ಕ್	1400
ಸನ್ ಪ್ರಿಯಾ	1470
ಸನ್‌ಪ್ಲಸ್	1480
ದೀಪದ ಎಣ್ಣೆ (850 ಗ್ರಾ.ನ 10 ಪ್ಯಾಕೆಟ್)	
ಆನಂದಮ್	1470
ಅಂದಂ	1460
ಸಕ್ಕರೆ (50 ಕೆಜಿ)	
ಉತ್ತಮ	2150-2160
ಮಧ್ಯಮ	2130-2140
ಬೆಲ್ಲ (ಕ್ವಿಂಟಾಲ್)	
ಸಣ್ಣ ಅಚ್ಚು	5200-5300
ದಪ್ಪ ಅಚ್ಚು	4900-5100
ಉಂಡೆ ಸೇಲಂ	5000-5400
ಕಡ್ಲೆ ಬೇಳೆ (50 ಕೆಜಿ)	
ಲಕನ್	4450-4480
ತೊಗರಿಬೇಳೆ (50 ಕೆಜಿ)	
ಶಿವಲಿಂಗ	6430-6450
ರೆಗ್ಯುಲರ್	5500-5600
ಉದ್ದಿನ ಬೇಳೆ (50 ಕೆಜಿ)	
ಹನುಮಾನ್	5980-6000
ಮಹಾರಾಜ	5600-6100
ಕಡ್ಲೆಕಾಯಿ ಬೀಜ (40 ಕೆಜಿ)	
ಉತ್ತಮ	6400-6500
ಮಧ್ಯಮ	5700-5800
ಅಕ್ಕಿ (ಕ್ವಿಂಟಾಲ್)	
ಸೋನಾ ಮಸೂರಿ (ಹಳೆ)	6000-6200
ಸೋನಾ ಮಸೂರಿ (ಹೊಸ)	4900-5200
ಸೋನಾ ಮಸೂರಿ ಸ್ಟೀಮ್	5300-5500
ಇಡ್ಲಿರಾರ್	4000-4100
ರಾಗಿ (ಕ್ವಿಂಟಾಲ್)	
ಉತ್ತಮ	5100-5200
ಮಧ್ಯಮ	4400-4600
ಗೋಧಿ (50 ಕೆಜಿ)	
ಉತ್ತಮ	2200-2300
ಮಧ್ಯಮ	2000-2100
ಜೋಳ (50 ಕೆಜಿ)	
ಉತ್ತಮ	3300-3400
ಮಧ್ಯಮ	2600-2400
ಈರುಳ್ಳಿ (50 ಕೆಜಿ)	
ದಪ್ಪ	1100-1150
ಮಧ್ಯಮ	750-850
ಗೋಲ್ಟಾ	500-600
ಮೊಟ್ಟೆ 100ಕ್ಕೆ	695

ಸಪ್ತಗಿರಿ ಎನ್‌ಪಿಎಸ್ ವಿವಿ: ಸ್ಪೇಸ್ ಆನ್ ವೀಲ್ಸ್

■ **ವಿಕ ಸುದ್ದಿಲೋಕ** ಬೆಂಗಳೂರು

ಯುವ ಮನಸ್ಸುಗಳಲ್ಲಿ ಬಾಹ್ಯಾಕಾಶದ ಬಗೆಗಿನ ಕುತೂಹಲ ಹೆಚ್ಚಿಸಲು ಸಪ್ತಗಿರಿ ಎನ್‌ಪಿಎಸ್ ಯೂನಿವರ್ಸಿಟಿಯಲ್ಲಿ ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ ಎಂಜಿನಿಯರಿಂಗ್ ವಿಭಾಗದ ನೇತೃತ್ವದಲ್ಲಿ ಇಸ್ರೊದ 'ಸ್ಪೇಸ್ ಆನ್ ವೀಲ್ಸ್' ಕಾರ್ಯಕ್ರಮ ನಡೆಯಿತು.

ಇದು ನವೀನ ಸಂಚಾರಿ ಮಾದರಿಯ ಕಾರ್ಯಕ್ರಮವಾಗಿದ್ದು, ಉಪಗ್ರಹ ತಂತ್ರಜ್ಞಾನದ ಸಂವಹನ ಪ್ರಾತ್ಯಕ್ಷಿಕೆ, ಉಡಾವಣೆ ವಾಹನಗಳ ಮಾದರಿಗಳು, ವರ್ಚುವಲ್ ರಿಯಾಲಿಟಿ ಮೂಲಕ ಬಾಹ್ಯಾಕಾಶ ಅನುಭವದೊಂದಿಗೆ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಚಟುವಟಿಕೆ ಒಳಗೊಂಡಿತ್ತು. ಜತೆಗೆ ಬಾಹ್ಯಾಕಾಶ ವಿಜ್ಞಾನದಲ್ಲಿ ವೃತ್ತಿ ಮಾರ್ಗದರ್ಶನ ನೀಡಲಾಯಿತು. ಸಪ್ತಗಿರಿ ಎನ್‌ಪಿಎಸ್ ವಿವಿ ಕಳೆದೆರಡು ವರ್ಷಗಳಿಂದ ಇಸ್ರೊ ಪ್ರಸಾರ ಚಟುವಟಿಕೆಯ ನೋಡಲ್ ಕೇಂದ್ರವಾಗಿ ಗುರುತಿಸಿಕೊಂಡಿದೆ. ಈ ನೋಡಲ್ ಕೇಂದ್ರದ ಮೂಲಕ ಉಚಿತ ಪ್ರಮಾಣಪತ್ರ ಕೋರ್ಸ್‌ಗಳನ್ನು ಆಯೋಜಿಸಲಾಗುತ್ತಿದೆ. ಕಳೆದ ಜನವರಿಯಲ್ಲಿ ಸಪ್ತಗಿರಿ ಎನ್‌ಪಿಎಸ್ ಯೂನಿವರ್ಸಿಟಿಯನ್ನು ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಜಾಗೃತಿ ತರಬೇತಿ ಕಾರ್ಯಕ್ರಮ (ಎಸ್‌ಟಿಎಆರ್‌ಟಿ) ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಗಣಿತ ಕಾರ್ಯಕ್ರಮಗಳಿಗಾಗಿ (ಎಸ್‌ಟಿಇಎಂ) ನೋಡಲ್ ಕೇಂದ್ರವನ್ನಾಗಿ ಗುರುತಿಸಲಾಗಿದೆ. ಬಾಹ್ಯಾಕಾಶ ವಿಜ್ಞಾನದಲ್ಲಿ ಆಳವಾದ ತಿಳಿವಳಿಕೆ ನೀಡುವ 'ಸ್ಪೇಸ್ ಆನ್ ವೀಲ್ಸ್' ಕಾರ್ಯಕ್ರಮದಲ್ಲಿ 5 ಸಾವಿರ ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.

ಪೌರ ಕಾರ್ಮಿಕರ ಬೇಡಿಕೆ ಈಡೇರಿಕೆಗೆ ಆದ್ಯತೆ

■ **ವಿಕ ಸುದ್ದಿಲೋಕ** ಬೆಂಗಳೂರು

''ಪೌರ ಕಾರ್ಮಿಕರ ನೇರ ಪಾವತಿ ವ್ಯವಸ್ಥೆಯಡಿ ನೇಮಕಾತಿ, ಪೌರ ಕಾರ್ಮಿಕರ ಕಾಯಂಗೊಳಿಸುವಿಕೆ, ಕಸ ಗುಡಿಸುವವರು, ಲೋಡ್ ಮಾಡುವವರು, ಕಸದ ವಾಹನಗಳ ಡ್ರೈವರ್‌ಗಳನ್ನು ಪೌರ ಕಾರ್ಮಿಕರನ್ನಾಗಿ ಪರಿಗಣಿಸುವುದೂ ಸೇರಿದಂತೆ ಪೌರ ಕಾರ್ಮಿಕರ ಎಲ್ಲಾ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸರಕಾರ ಪೂರಕವಾದ ಕ್ರಮಗಳನ್ನು ಆದ್ಯತೆಯ ಮೇಲೆ ಕೈಗೊಳ್ಳಲಿದೆ,'' ಎಂದು ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಮಂಗಳವಾರ ತಮ್ಮ ಗೃಹ ಕಚೇರಿಯಲ್ಲಿ ರಾಜ್ಯ ನಗರ ಪಾಲಿಕೆ, ನಗರಸಭೆ, ಪುರಸಭೆಗಳ ಪೌರ ಕಾರ್ಮಿಕರ ಮಹಾಸಂಘದ ಪದಾಧಿಕಾರಿಗಳ ಸಭೆ ನಡೆಸಿದ ಅವರು, ಪೌರ ಕಾರ್ಮಿಕರ ಬೇಡಿಕೆಗಳ ಸಂಬಂಧ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

''ಸರಕಾರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸುಮಾರು 29 ಸಾವಿರ ಮಂದಿ ನೇರ ವೇತನ ಪೌರಕಾರ್ಮಿಕರನ್ನು ಕಾಯಂ ಮಾಡಿರುವ ಸರಕಾರದ ಕ್ರಮವನ್ನು ಸ್ವಾಗತಿಸುತ್ತೇವೆ. ಅದೇ ರೀತಿ ಇನ್ನೂ ಬಾಕಿ ಉಳಿದಿರುವ ಸುಮಾರು 6,800 ಪೌರಕಾರ್ಮಿಕರನ್ನು ಕೂಡ ಶೀಘ್ರವಾಗಿ ಕಾಯಂಗೊಳಿಸಬೇಕು,''

ಎಂದು ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಮಾಜಿ ಅಧ್ಯಕ್ಷ ನಾರಾಯಣ್ ಮನವಿ ಮಾಡಿದರು.

''ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಪದ್ಧತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸ್ವಚ್ಛತಾ ವಾಹನ ಚಾಲಕರು, ಲೋಡರ್ಸ್, ಕ್ಲೀನರ್ಸ್ ಕಾರ್ಮಿಕರನ್ನು ಹೊರಗುತ್ತಿಗೆ ಪದ್ಧತಿಯಿಂದ ಮುಕ್ತಗೊಳಿಸಿ, ನೇರ ಪಾವತಿ ವ್ಯವಸ್ಥೆಗೆ ಒಳಪಡಿಸಬೇಕು,'' ಎಂದರು. ಈ ಸಂಬಂಧ ಬೇಡಿಕೆಗಳ ಮನವಿ ಪತ್ರ ಸಲ್ಲಿಸಿದರು. ''ಎಲ್ಲಾ ಬೇಡಿಕೆಗಳನ್ನು ಸರಕಾರ ಸಹಾನುಭೂತಿಯಿಂದ ಪರಿಗಣಿಸಿ ಅಗತ್ಯ ಕ್ರಮ ಕೈಗೊಳ್ಳಲಿದೆ,'' ಎಂದು ಸಚಿವರು ಭರವಸೆ ನೀಡಿದರು.

ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಬಿ.ಬಿ.ಕಾವೇರಿ, ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕ ರವೀಂದ್ರ, ಪೌರ ಕಾರ್ಮಿಕರ ಸಂಘದ ಪ್ರತಿನಿಧಿಗಳು ಹಾಜರಿದ್ದರು.

16 ತಿಂಗಳ ಬಳಿಕ ಮೋದಿ-ಟ್ರಂಪ್ ಭೇಟಿ

ಜಿ7 ಶೃಂಗದಲ್ಲಿ ನಾಯಕರು ಮುಖಾಮುಖಿ | ಸುಧಾರಣೆಯತ್ತ ಭಾರತ-ಅಮೆರಿಕ ಬಾಂಧವ್ಯ

ಪ್ಯಾರಿಸ್: ಫ್ರಾನ್ಸ್‌ನ ಎವಿಯನ್-ಲೆ-ಬೈನ್ಸ್‌ನಲ್ಲಿ ನಡೆಯುತ್ತಿರುವ ಜಿ7 ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭೇಟಿಯಾಗಿ, ಪರಸ್ಪರ ಕುಶಲೋಪರಿ ವಿಚಾರಿಸಿದರು. 16 ತಿಂಗಳ ವಿರಾಮದ ಬಳಿಕ ಉಭಯ ನಾಯಕರ ನೇರ ಮುಖಾಮುಖಿ ಇದಾಗಿದೆ.

ಜಿ7 ಶೃಂಗಸಭೆಯ ಅಧಿವೇಶನ ಆರಂಭವಾಗುವ ಮುನ್ನವೇ ಉಭಯ ನಾಯಕರ ಭೇಟಿ ನಡೆದಿದೆ. ಜಾಗತಿಕ ನಾಯಕರು ವೇದಿಕೆಯ ಸುತ್ತಲೂ ಜಮಾಯಿಸುತ್ತಿದ್ದಂತೆ, ಬಿಳಿ ಕುರ್ತಾ-ಪೈಜಾಮ ಮತ್ತು ಕಡು ಬಣ್ಣದ ಸ್ಲೀವ್‌ಲೆಸ್ ಜಾಕೆಟ್ ಧರಿಸಿದ್ದ ಪ್ರಧಾನಿ ಮೋದಿ ತಮಗೆ ನಿಗದಿಪಡಿಸಿದ ಆಸನದ ಕಡೆಗೆ ಹೆಜ್ಜೆ ಹಾಕಿದರು. ಈ ವೇಳೆ ಗಾಢ ನೀಲಿ ಬಣ್ಣದ ಸೂಟ್ ಧರಿಸಿದ್ದ ಟ್ರಂಪ್ ಅವರು ಮೋದಿ ತಮ್ಮ ಆಸನದತ್ತ ಬರುವುದನ್ನು ನೋಡಿ ಅವರ ಕಡೆಗೆ ತಿರುಗಿದರು. ಉಭಯ ನಾಯಕರು ಪರಸ್ಪರ ಹಸನ್ಮುಖಿಗಳಾಗಿ ಆತ್ಮೀಯ ಹಸ್ತಲಾಘವ ಮಾಡಿಕೊಂಡರು. ಅಲ್ಲದೇ ಕೆಲಕಾಲ ಸಂಕ್ಷಿಪ್ತವಾಗಿ ಮಾತನಾಡಿದರು. ಮೋದಿ ಅವರು ಟ್ರಂಪ್ ಪಕ್ಕದ ಆಸನದಲ್ಲಿ ಕುಳಿತುಕೊಳ್ಳುವಾಗ, ಟ್ರಂಪ್ ಅವರೇ ಮೋದಿಯವರ ಭುಜ ತಟ್ಟಿ ಕುಶಲೋಪರಿ ವಿಚಾರಿಸಿದರು. ಶೃಂಗಸಭೆಯ ಪ್ರಮುಖ ಅಧಿವೇಶನದಲ್ಲಿ ಪ್ರಧಾನಿ ಮೋದಿ ಮತ್ತು ಟ್ರಂಪ್ ಅಕ್ಕಪಕ್ಕದಲ್ಲಿಯೇ ಆಸೀನರಾಗಿದ್ದರು.

ಭಾರತದ ರಫ್ತಿನ ಮೇಲೆ ಸುಂಕ ಹೇರಿಕೆ ವಿಚಾರವಾಗಿ ಉಭಯ ದೇಶಗಳ ನಡುವೆ ಹಲವು ಕಾಲ ಉಂಟಾಗಿದ್ದ ಭಿನ್ನಾಭಿಪ್ರಾಯಗಳು ದೂರವಾಗಿ ಉಭಯ ದೇಶಗಳ ನಡುವೆ ಬಹುನಿರೀಕ್ಷಿತ ವ್ಯಾಪಾರ ಒಪ್ಪಂದ ಅಂತಿಮಗೊಳ್ಳುವುದು ಸನ್ನಿಹಿತವಾಗುತ್ತಿರುವ ಬೆನ್ನಲ್ಲೇ ಈ ಭೇಟಿ ನಡೆದಿರುವುದು ಮಹತ್ವದ್ದಾಗಿದೆ. ಇತ್ತೀಚೆಗೆ ಒಮನ್ ಕರಾವಳಿಯಲ್ಲಿ ವಾಣಿಜ್ಯ ಹಡಗುಗಳ ಮೇಲಿನ ದಾಳಿಯಲ್ಲಿ ಮೂವರು ಭಾರತೀಯ ನಾವಿಕರ ಸಾವು, ಇರಾನ್-ಅಮೆರಿಕ ಸಂಘರ್ಷದಿಂದ ತಲೆದೋರಿದ್ದ ಬಿಕ್ಕಟ್ಟು ಕೂಡ ಉಭಯ ದೇಶಗಳ ಬಾಂಧವ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿತ್ತು. ಈ ಭೇಟಿಯು ಉಭಯ ದೇಶಗಳ ರಾಜತಾಂತ್ರಿಕ ಹಾಗೂ ಆರ್ಥಿಕ ಸಂಬಂಧವನ್ನು ಮರುಸ್ಥಾಪಿಸುವ ಮತ್ತು ವೃದ್ಧಿಸುವ ನಿಟ್ಟಿನಲ್ಲಿ ಮಹತ್ವದ್ದಾಗಿದೆ.

'ನಾನಿಲ್ಲದಿದ್ದರೆ ಇಸ್ರೇಲ್ ಇರುತ್ತಿರಲಿಲ್ಲ'

''ನಾನು ಇಲ್ಲದೆ ಹೋಗಿದ್ದರೆ ಇಸ್ರೇಲ್ ಇರುತ್ತಿರಲಿಲ್ಲ,'' ಎಂದು ಮತ್ತೊಮ್ಮೆ ಗುಡುಗಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಲೆಬನಾನ್ ಜತೆ ಜವಾಬ್ದಾರಿಯಿಂದ ವರ್ತಿಸಬೇಕು ಎಂದು ಕಿವಿಮಾತು ಹೇಳಿದ್ದಾರೆ.

ಜಿ7 ಶೃಂಗಸಭೆಯ ನೇಪಥ್ಯದಲ್ಲಿ ಕತಾರ್ ಮುಖ್ಯಸ್ಥ ಎಮಿರ್ ತಮೀಮ್ ಬಿನ್ ಹಮದ್ ಅಲ್ ಥಾನಿ ಜತೆ ಮಾತುಕತೆ ನಡೆಸಿದ ವೇಳೆ ಟ್ರಂಪ್ ಅವರು, ''ನಾನಿಲ್ಲದಿದ್ದರೆ ಇಸ್ರೇಲ್ ಇರುತ್ತಿರಲಿಲ್ಲ, ಏಕೆಂದರೆ ನಾನು ಮಾಡಿದ್ದನ್ನು ಬೇರೆ ಯಾವುದೇ ಅಧ್ಯಕ್ಷರು ಮಾಡಲು ಸಿದ್ಧರಿರಲಿಲ್ಲ,'' ಎಂದಿದ್ದಾರೆ. ಇದೇ ವೇಳೆ, ಇಸ್ರೇಲ್ ಪ್ರಧಾನಿ ಜತೆ ತಮ್ಮ ಸಂಬಂಧ ಹಳಸುತ್ತಿದೆ ಎಂಬ ವರದಿಗಳನ್ನು ಅಲ್ಲಗೆಳೆದಿರುವ ಟ್ರಂಪ್, ನೆತನ್ಯಾಹು ಜತೆ ಉತ್ತಮ ಬಾಂಧವ್ಯ ಹೊಂದಿರುವುದಾಗಿ ಹೇಳಿದ್ದಾರೆ.

- ಲೆಬನಾನ್ ಜತೆ ಜವಾಬ್ದಾರಿಯಿಂದ ವರ್ತಿಸುವಂತೆ ನೆತನ್ಯಾಹುಗೆ ಟ್ರಂಪ್ ಸಲಹೆ

ಆಡಳಿತ ಬದಲಾವಣೆ ಇಚ್ಛಿಸಿರಲಿಲ್ಲ: ''ನಾನು ಇರಾನ್ ಅಣ್ವಸ್ತ್ರ ಬಳಕೆಗೆ ಕಡಿವಾಣ ಹಾಕುವ ಗುರಿ ಹೊಂದಿದ್ದೆ. ಅಲ್ಲಿನ ಆಡಳಿತ ಬದಲಾವಣೆ ಇಚ್ಛಿಸಿರಲಿಲ್ಲ,'' ಎಂದು ಟ್ರಂಪ್ ಸ್ಪಷ್ಟಪಡಿಸಿದ್ದಾರೆ.

''ಇರಾನ್ ಜನರು ಪರಮೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಆಡಳಿತದ ವಿರುದ್ಧ ದಂಗೆ ಏಳಬೇಕು ಎಂದು ಕರೆ ನೀಡಿದಾಗಲೂ ಆ ಬಗ್ಗೆ ನಾನು ತಲೆಕೆಡಿಸಿಕೊಂಡಿರಲಿಲ್ಲ. ಆಡಳಿತ ಬದಲಾವಣೆ ನಮ್ಮ ಉದ್ದೇಶವಾಗಿರಲಿಲ್ಲ, ಇರಾನ್ ಅಣ್ವಸ್ತ್ರ ಹೊಂದಬಾರದು ಎಂಬುದಷ್ಟೇ ನಮ್ಮ ಯೋಜನೆಯ ಭಾಗವಾಗಿತ್ತು,'' ಎಂದು ಹೇಳಿದ್ದಾರೆ.

ಸಿರಿಯಾ ಹೆಜ್ಬೊಲ್ಲಾವನ್ನು ಮುಗಿಸಲಿದೆ: ಸಿರಿಯಾ ನೂತನ ಅಧ್ಯಕ್ಷ ಅಹ್ಮದ್ ಅಲ್-ಶರಾ ಅವರ ಆಡಳಿತ ವೈಖರಿಯನ್ನು ಶ್ಲಾಘಿಸಿರುವ ಟ್ರಂಪ್, ''ಹೆಚ್ಚಿನ ನಾಗರಿಕ ಜೀವಹಾನಿ ಮಾಡದೇ ಹೆಜ್ಬೊಲ್ಲಾ ಬಂಡುಕೋರ ಪಡೆಯನ್ನು ಸಂಪೂರ್ಣ ನಿರ್ನಾಮ ಮಾಡಲು ಇಸ್ರೇಲ್‌ಗೆ ಸಾಧ್ಯವಾಗದಿದ್ದರೆ, ಆ ಕೆಲಸವನ್ನು ಸಿರಿಯಾ ಮಾಡಿ ಮುಗಿಸಲಿದೆ,'' ಎಂದು ಹೇಳಿದ್ದಾರೆ. ''ಅಹ್ಮದ್ ಅಲ್-ಶರಾ ಅವರಿಗೆ ಹೆಜ್ಬೊಲ್ಲಾವನ್ನು ಕಂಡರೆ ಆಗಲ್ಲ, ಅವರೇ ಬಂಡುಕೋರರನ್ನು ಮಟ್ಟ ಹಾಕಲಿದ್ದಾರೆ,'' ಎಂದು ಟ್ರಂಪ್ ಹೇಳಿದ್ದಾರೆ.

ಭವಾನಿಪುರ ಫಲಿತಾಂಶ ಪ್ರಶ್ನಿಸಿ ಹೈಕೋರ್ಟ್‌ಗೆ ದೀದಿ

ಕೋಲ್ಕೊತಾ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಭದ್ರಕೋಟೆಯಾಗಿದ್ದ ಭವಾನಿಪುರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಸುವೇಂದು ಅಧಿಕಾರಿ ವಿರುದ್ಧ ಸೋಲು ಕಂಡಿರುವ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಫಲಿತಾಂಶ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

- ಮಮತಾ ವಿರುದ್ಧ ಸುವೇಂದು 15,105 ಮತಗಳ ಅಂತರದಿಂದ ಗೆಲುವು

ಎರಡು ಹಂತದಲ್ಲಿ ನಡೆದ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ, ಏಪ್ರಿಲ್ 29ರಂದು ಮತದಾನ ಎದುರಿಸಿದ್ದ ಭವಾನಿಪುರ ಕ್ಷೇತ್ರದ ಫಲಿತಾಂಶದ ಮೇಲೆ ದೇಶದ ಗಮನ ನೆಟ್ಟಿತ್ತು. ಮೇ 4ರಂದು ಪ್ರಕಟವಾದ ಫಲಿತಾಂಶದಲ್ಲಿ ಮಮತಾ ವಿರುದ್ಧ ಸುವೇಂದು ಅಧಿಕಾರಿ 15,105 ಮತಗಳ ಅಂತರದಿಂದ ಗೆಲುವು ದಾಖಲಿಸಿದ್ದರು. ಈ ಫಲಿತಾಂಶದ ಬಗ್ಗೆ ಟಿಎಂಸಿ ನಾಯಕಿ ಆರಂಭದಿಂದಲೂ ಅನುಮಾನ ವ್ಯಕ್ತಪಡಿಸಿದ್ದರು.

ಮತ ಎಣಿಕೆಯ ದಿನದಂದು, ಭವಾನಿಪುರ ಕ್ಷೇತ್ರದ ಮತ ಎಣಿಕೆ ಪ್ರಕ್ರಿಯೆಯು ಪದೇಪದೆ ಸ್ಥಗಿತಗೊಂಡಿತ್ತು. ವಿಳಂಬಕ್ಕೆ ಕಾರಣವನ್ನು ತಿಳಿಯಲು ಮಮತಾ ಮಧ್ಯಾಹ್ನ ಮತಎಣಿಕೆ ನಡೆಯುತ್ತಿದ್ದ ಶಾಲೆಗೆ ಖುದ್ದಾಗಿ ಭೇಟಿ ನೀಡಿದ್ದರು. ಹೈಕೋರ್ಟ್‌ಗೆ ಖುದ್ದು ಹಾಜರಾಗಿ ಅರ್ಜಿ ಸಲ್ಲಿಸಿರುವ ಮಾಜಿ ಸಿಎಂ ಮಮತಾ ಬ್ಯಾನರ್ಜಿ ಅವರಿಗೆ ಟಿಎಂಸಿ ಹಿರಿಯ ನಾಯಕರಾದ ರಾಜ್ಯಸಭಾ ಸಂಸದ ಡೆರೆಕ್ ಒ ಬ್ರೇನ್, ದೋಲ ಸೆನ್ ಮತ್ತು ವಕೀಲರಾಗಿರುವ ಸಂಸದ ಕಲ್ಯಾಣ್ ಬ್ಯಾನರ್ಜಿ, ಪಕ್ಷದ ನಾಯಕ ಕುನಾಲ್ ಘೋಷ್ ಬೆಂಬಲ ನೀಡಿದರು.

ಎಐ ಪಿತಾಮಹನಿಗೆ ಪ್ರೇರಣೆ ಮನೋವಿಜ್ಞಾನದ ಪುಸ್ತಕ!



ಜಾರ್ಜ್ ಎವರೆಸ್ಟ್ ಹಿಂಟನ್ ಎಐ ಪಿತಾಮಹ. ಅವರ ಮುತ್ತಾತ ಜಾರ್ಜ್ ಬೂಲ್ ಆಧುನಿಕ ಕಂಪ್ಯೂಟರ್ ಗಣಿತದ ತಳಪಾಯವಾದ ಬೂಲಿಯನ್ ಲಾಜಿಕ್‌ನ ಪಿತಾಮಹ. ಇನ್ನು ಮುತ್ತಜ್ಜ ಅಮೆರಿಕದ ಇತಿಹಾಸವನ್ನು ಬರೆದ ಮಹಾನ್ ಪುರುಷ. ಕುಟುಂಬದಲ್ಲಿ ಎಲ್ಲರೂ ಒಂದಲ್ಲಾ ಇನ್ನೊಂದು ಕ್ಷೇತ್ರದಲ್ಲಿ ಹೆಸರು ಮಾಡಿದವರೇ ಆಗಿದ್ದರು. ಜಾರ್ಜ್‌ಗೆ ಚಿಕ್ಕಂದಿನಿಂದಲೂ ಮಿದುಳಿನ ಬಗೆಗೆ ಅಧ್ಯಯನ ಮಾಡುವ ಮಹದಾಸೆ. ಆದರೆ, ಆಗ ಈ ಕ್ಷೇತ್ರದಲ್ಲಿ ಅಷ್ಟೊಂದು ಬೆಳವಣಿಗೆ ಆಗಿರಲಿಲ್ಲ. ಭೌತಶಾಸ್ತ್ರ, ರಾಸಾಯನಿಕಶಾಸ್ತ್ರ, ಜೀವಶಾಸ್ತ್ರ ಹಾಗೂ ಮನೋವಿಜ್ಞಾನದ ವಿಷಯಗಳನ್ನು ಕಾಲೇಜಿನಲ್ಲಿ ಕಲಿಯುವ ಪ್ರಯತ್ನ ಪಟ್ಟರು. ಎಲ್ಲಿಯೂ ತಮಗೆ ಬೇಕಾದ ವಿಷಯ ಸಿಗದಿರುವುದರಿಂದ ಕಲಿಯುವುದನ್ನೇ ನಿಲ್ಲಿಸಿ ಲಂಡನ್‌ಗೆ ಬಂದು ಬಡಗಿಯಾಗಿ ಕೆಲಸ ಮಾಡಲು ಶುರುಮಾಡಿದ್ದರು! ಒಂದು ದಿನ ಅವರ ಕಣ್ಣಿಗೆ ಬಿದ್ದಿದ್ದು- ಡೊನಾಲ್ಡ್ ಹೆಬ್ಬ್ ಅವರ ಆರ್ಗನೈಸೇಶನ್ ಬಿಹೇವಿಯರ್ ಪುಸ್ತಕ. ಅದರಲ್ಲಿ ಮಿದುಳಿನಲ್ಲಿನ ನ್ಯೂರಾನ್‌ಗಳು (ನರಕೋಶ) ಹೇಗೆ ಜೈವಿಕ ಕ್ರಿಯೆಯ ಮೂಲಕ ಕಲಿಯುತ್ತವೆ ಎಂದು ವಿವರಿಸಲಾಗಿತ್ತು. ಅದೇ ಪ್ರೇರಣೆಯಾಗಿ ಹಿಂಟನ್ ಮುಂದೆ ಕೃತಕ ಬುದ್ಧಿಮತ್ತೆಯಲ್ಲಿ ಒಂದು ಮಹತ್ವದ ತಿರುವನ್ನು ನೀಡಲು ಪ್ರೇರಣೆಯಾಯಿತು!

ಸ್ಕ್ಯಾನ್ ಮಾಡಿ ಎಐ ಕುರಿತು ಪ್ರಶ್ನೆ ಕೇಳಿ

- **ವಿಕ್ರಂ ಜೋಶಿ**
ಎಐ ವಿಶ್ಲೇಷಕರು

ತ.ನಾಡಿನಲ್ಲಿ ಸಾಲ ಮನ್ನಾ ಯೋಜನೆ ವಿಸ್ತರಣೆ

ಚೆನ್ನೈ: ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು ರಾಜ್ಯದ ರೈತರಿಗೆ ಈ ಮುನ್ನ ಘೋಷಿಸಿದ್ದ ಬೆಳೆ ಸಾಲ ಮನ್ನಾ ಯೋಜನೆಯನ್ನು ವಿಸ್ತರಿಸಿದ್ದಾರೆ.

ಭೂಮಿಯ ವಿಸ್ತೀರ್ಣದ ಮಿತಿ ಇಲ್ಲದೆ ಎಲ್ಲಾ ವರ್ಗದ ರೈತರು 2025ರ ಮೇ 1 ರಿಂದ 2026ರ ಫೆಬ್ರವರಿ 28ರ ಅವಧಿಯಲ್ಲಿ ಸಹಕಾರಿ ಬ್ಯಾಂಕ್‌ಗಳಿಂದ ಪಡೆದಿರುವ 75,000 ರೂ. ವರೆಗಿನ ಬೆಳೆ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಲಾಗುವುದು ಎಂದು ಸಿಎಂ ವಿಜಯ್ ಘೋಷಿಸಿದ್ದಾರೆ. ಒಂದು ವೇಳೆ ಬೆಳೆ ಸಾಲದ ಮೊತ್ತ 75,000 ರೂ.ಗಿಂತ ಹೆಚ್ಚಾಗಿದ್ದರೆ, ಅಂತಹ ರೈತರಿಗೆ ಒಟ್ಟಾರೆ ಸಾಲದಲ್ಲಿ 35,000 ರೂ. ವರೆಗೆ ಮನ್ನಾ ಆಗಲಿದೆ. ಇದಕ್ಕೂ ಮುನ್ನ, ಮೇ 25 ರಂದು ರಾಜ್ಯ ಸರಕಾರವು ಸಣ್ಣ ಮತ್ತು ಅತಿ ಸಣ್ಣ ರೈತರ 50,000 ರೂ.ವರೆಗಿನ ಬೆಳೆಸಾಲವನ್ನು ಮನ್ನಾ ಮಾಡುವುದಾಗಿ ಘೋಷಿಸಿತ್ತು. ರೈತರ ಮನವಿಗೆ ತಕ್ಷಣವೇ ಸ್ಪಂದಿಸಿದ ಮುಖ್ಯಮಂತ್ರಿ ವಿಜಯ್, ಪರಿಷ್ಕೃತ ಯೋಜನೆ ಘೋಷಿಸಿದ್ದಾರೆ.

9 ರಾಜ್ಯಗಳ ಆದಾಯ ಮಿಗತೆ ಸಾಧನೆ

2024-25ನೇ ಹಣಕಾಸು ವರ್ಷದ ಸಿಎಜಿ ವರದಿ ಬಿಡುಗಡೆ

ಹೊಸದಿಲ್ಲಿ: ಉತ್ತರ ಪ್ರದೇಶ, ಗುಜರಾತ್, ಜಾರ್ಖಂಡ್, ಮಣಿಪುರ ಸೇರಿದಂತೆ 9 ರಾಜ್ಯಗಳು 2024-25ರಲ್ಲಿ ಆದಾಯ ಮಿಗತೆಯನ್ನು ಸಾಧಿಸಿದ್ದು, 15 ರಾಜ್ಯಗಳು ವಿತ್ತೀಯ ಕೊರತೆಯನ್ನು ಅನುಭವಿಸುತ್ತಿವೆ ಎಂದು ಮಹಾಲೇಖಪಾಲ ಕೆ.ಸಂಜಯ್ ಮೂರ್ತಿ ತಿಳಿಸಿದ್ದಾರೆ. ಮಂಗಳವಾರ ಅವರು 'ರಾಜ್ಯ ಹಣಕಾಸು- 2024-25' ವರದಿಯನ್ನು ಬಿಡುಗಡೆ ಮಾಡಿದರು.

ಆದಾಯದ ಮಿಗತೆ ಗುರಿ ಹೊಂದಿದ್ದ 18 ರಾಜ್ಯಗಳಲ್ಲಿ 9 ರಾಜ್ಯಗಳು ತಮ್ಮ ಉದ್ದೇಶದಲ್ಲಿ ಸಾಫಲ್ಯ ಸಾಧಿಸಿವೆ. ಅಸ್ಸಾಂ, ಬಿಹಾರ, ಛತ್ತೀಸ್‌ಗಢ, ಹರಿಯಾಣ, ಹಿಮಾಚಲ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ, ಮಿಜೋರಾಂ ಮತ್ತು ತೆಲಂಗಾಣ ರಾಜ್ಯಗಳು ವಿತ್ತೀಯ ಕೊರತೆ ಅನುಭವಿಸಿದೆ.

ಗೋವಾ, ಜಾರ್ಖಂಡ್, ಪಂಜಾಬ್, ರಾಜಸ್ಥಾನ, ತಮಿಳುನಾಡು, ತ್ರಿಪುರಾ ಮತ್ತು ಉತ್ತರ ಪ್ರದೇಶ ಸೇರಿದಂತೆ ಏಳು ರಾಜ್ಯಗಳು ಶೂನ್ಯ-ಆದಾಯ ಕೊರತೆಯ ಗುರಿಯನ್ನು ಹೊಂದಿದ್ದವು. ಇವುಗಳಲ್ಲಿ ಗೋವಾ, ಜಾರ್ಖಂಡ್, ತ್ರಿಪುರಾ ಮತ್ತು ಉತ್ತರ ಪ್ರದೇಶ ರಾಜ್ಯಗಳು ಮಾತ್ರ ತಮ್ಮ ಸಂಕಲ್ಪವನ್ನು ಸಾಕಾರಗೊಳಿಸಿಕೊಂಡಿವೆ. ಪಂಜಾಬ್, ರಾಜಸ್ಥಾನ ಮತ್ತು ತಮಿಳುನಾಡು ಆದಾಯ ಕೊರತೆಯೊಂದಿಗೆ ವರ್ಷವನ್ನು ಕೊನೆಗೊಳಿಸಿದವು ಎಂದು ವರದಿ ಬೆಳಕು ಚೆಲ್ಲಿದೆ.

ಕರ್ನಾಟಕದಲ್ಲಿ ವಿತ್ತೀಯ ಕೊರತೆ

2023-24ಕ್ಕೆ ಹೋಲಿಸಿದರೆ 2024-25ರಲ್ಲಿ ಆಂಧ್ರಪ್ರದೇಶ, ಅಸ್ಸಾಂ, ಗುಜರಾತ್, ಜಾರ್ಖಂಡ್, ಕರ್ನಾಟಕ, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಒಡಿಶಾ, ತ್ರಿಪುರಾ ಮತ್ತು ಉತ್ತರಾಖಂಡ ವಿತ್ತೀಯ ಕೊರತೆಯಲ್ಲಿ ಗಣನೀಯ ಹೆಚ್ಚಳವಾಗಿದೆ.

ವಿಕ ಈ ದಿನ ವಿಶೇಷ | ಜೂನ್ 17

ವಿಶ್ವ ಬರ ವಿರೋಧಿ ದಿನ

ಹಸಿರು ನಾಶವಾಗಿ ಫಲವತ್ತಾದ ಭೂಮಿ ಮರುಭೂಮಿಯಾಗಿ ಬದಲಾಗುತ್ತಿರುವ ಆತಂಕದ ಹಿನ್ನೆಲೆಯಲ್ಲಿ ಬರದ ವಿರುದ್ಧ ಸಮರ ಸಾರುವ ಉದ್ದೇಶದಿಂದ ಪ್ರತಿವರ್ಷ ಜೂನ್ 17ರಂದು 'ವಿಶ್ವ ಬರ ಮತ್ತು ಮರುಭೂಮೀಕರಣ ವಿರೋಧಿ ದಿನ'ವನ್ನು ಆಚರಿಸಲಾಗುತ್ತದೆ. ವಿಶ್ವಸಂಸ್ಥೆ 1995ರಲ್ಲಿ ಈ ದಿನವನ್ನು ಘೋಷಣೆ ಮಾಡಿತು.

ಜನುಮ ದಿನ
ಸಿಂಧು ಮೆನನ್

- ಮಲಯಾಳಿ ಮೂಲದ ಕುಟುಂಬದಲ್ಲಿ 1985ರ ಜೂನ್ 17ರಂದು ಬೆಂಗಳೂರಿನಲ್ಲಿ ಜನಿಸಿದರು. ಕನ್ನಡ, ಮಲೆಯಾಳಂ, ತೆಲುಗು ಹಾಗೂ ತಮಿಳು ಸಿನಿಮಾಗಳಲ್ಲಿ ನಟಿಸಿದವರು. 2006ರಲ್ಲಿ ತೆರೆ ಕಂಡ ರಾಷ್ಟ್ರಪ್ರಶಸ್ತಿ ವಿಜೇತ ಮಲೆಯಾಳಂ ಪುಲಿಜನ್ಮಂ ಚಿತ್ರದ ನಟನೆಯಲ್ಲಿ ಇವರ ನಟನೆ ಮೆಚ್ಚುಗೆಗೆ ಪಾತ್ರವಾಗಿದೆ.

ಆಪರೇಷನ್ ಟೈಗರ್: ಉದ್ಧವ್ ಸೇನೆಗೆ 7 ಸಂಸದರು ಗುಡ್‌ಬೈ!

ಮುಂಬಯಿ: ಪಶ್ಚಿಮ ಬಂಗಾಳದಲ್ಲಿ ಸೋದರಳಿಯನ ಮೇಲಿನ ವ್ಯಾಮೋಹದಿಂದ ಮಮತಾ ಬ್ಯಾನರ್ಜಿ ಅವರು ಟಿಎಂಸಿ ಇಬ್ಭಾಗಕ್ಕೆ ಕಾರಣರಾದ ರೀತಿಯಲ್ಲೇ, ಈಗಾಗಲೇ ಒಡೆದು ಹೋಳಾಗಿರುವ ಶಿವಸೇನೆ ಮತ್ತೊಂದು ವಿಭಜನೆಯನ್ನು ನೋಡುವ ಬೆಳವಣಿಗೆಗಳು ಗೋಚರಿಸಿವೆ. ಉದ್ಧವ್ ಠಾಕ್ರೆಯವರ ಪುತ್ರ ವ್ಯಾಮೋಹದಿಂದಾಗಿ ಶಿವಸೇನೆಯ ಹಿರಿಯ ನಾಯಕರ ಕಡೆಗಣನೆ ಪರಿಣಾಮವಾಗಿ ಪಕ್ಷದ ನಾಯಕರು ಬಂಡಾಯ ಎದ್ದಿದ್ದಾರೆ.

ಪಕ್ಷದ ಹಿರಿಯ ನಾಯಕ ನಿತಿನ್ ತಿವಾರಿ ಸೇರಿ 14 ರಿಂದ 16 ಶಾಸಕರು ಮತ್ತು 7 ಸಂಸದರು ಉದ್ಧವ್ ಠಾಕ್ರೆ ನೇತೃತ್ವದ ಪಕ್ಷ ತೊರೆಯಲು ಸಿದ್ಧತೆ ನಡೆಸುತ್ತಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಇದನ್ನು 'ಆಪರೇಷನ್ ಟೈಗರ್' ಎಂದು ಪಕ್ಷದ ಕಾರ್ಯಕರ್ತರೇ ಕರೆಯುತ್ತಿದ್ದಾರೆ. ತನ್ನ ಬಣದ ನಾಯಕರು ಪಕ್ಷ ತೊರೆಯಲು ಸಜ್ಜಾಗುತ್ತಿದ್ದಾರೆ ಎನ್ನುವ ಸುದ್ದಿಗಳಿಂದ ಎಚ್ಚೆತ್ತ ಉದ್ಧವ್ ಠಾಕ್ರೆ ತಮ್ಮ 'ಮಾತೋಶ್ರೀ' ನಿವಾಸದಲ್ಲಿ ಜೂನ್ 22ರಂದು ಮಹತ್ವದ ಸಭೆ ಕರೆದಿದ್ದು, ತಮ್ಮ ಪಕ್ಷದ ಎಲ್ಲ 9 ಲೋಕಸಭಾ ಸಂಸದರನ್ನು ಆಹ್ವಾನಿಸಿ ಗಂಭೀರ ಚರ್ಚೆ ನಡೆಸಲು ಸಿದ್ಧತೆ ನಡೆಸಿದ್ದಾರೆ ಎನ್ನಲಾಗಿದೆ.

ವಾಯುಪಡೆ ಅಧಿಕಾರಿ ಹೆಂಡತಿ ಮೇಲೆ ಅತ್ಯಾಚಾರ, ಮತಾಂತರ ಯತ್ನ

ನಾಗ್ಪುರ: ಭಾರತೀಯ ವಾಯುಪಡೆ ಅಧಿಕಾರಿಯ ಹೆಂಡತಿ ಮೇಲೆ ಅತ್ಯಾಚಾರ ಎಸಗಿ ಮತಾಂತರಕ್ಕೆ ಯತ್ನಿಸಿದ ಘಟನೆ ಮಹಾರಾಷ್ಟ್ರದಲ್ಲಿ ನಡೆದಿದೆ.

''ಮಾದಕ ದ್ರವ್ಯ ಸೇವಿಸಿದ ನನ್ನ ಸಹಪಾಠಿ ಹಾಗೂ ಆತನ ಸಹಚರರು ಅತ್ಯಾಚಾರ ಮಾಡಿ, ಬೆದರಿಕೆ ಹಾಕುವ ಮೂಲಕ ಬಲವಂತದಿಂದ ಮತಾಂತರಕ್ಕೆ ಯತ್ನಿಸಿದ್ದಾರೆ,'' ಎಂದು 24 ವರ್ಷದ ನಾಗ್ಪುರದ ಮಹಿಳೆ ಆರೋಪಿಸಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಈ ಘಟನೆ ಹಿನ್ನೆಲೆಯಲ್ಲಿ ಇಬ್ಬರನ್ನು ಬಂಧಿಸಲಾಗಿದ್ದು, ಇನ್ನೊಬ್ಬನ ಪತ್ತೆಗೆ ಪೊಲೀಸರು ಶೋಧ ನಡೆಸಿದ್ದಾರೆ.

ವೈರಲ್ ಆಗಿರುವ ವಿಡಿಯೊದಲ್ಲಿ ಆರೋಪಿ ಅಯ್ಯಾಜ್ ಎಂಬುವವನು ಸಂತ್ರಸ್ತ ಮಹಿಳೆಯ ಕೈಗಳನ್ನು ಬಲವಂತವಾಗಿ ಹಿಡಿದುಕೊಂಡು ಧಾರ್ಮಿಕ ಶ್ಲೋಕಗಳನ್ನು ಪಠಿಸುತ್ತಾ ಆಕೆಯ ಮುಖಕ್ಕೆ ಊದುತ್ತಿರುವುದು ಮತ್ತು ಮಹಿಳೆಯು ತಡೆಯಲಾರದೆ 'ನನ್ನನ್ನು ಬಿಟ್ಟುಬಿಡಿ' ಎಂದು ಜೋರಾಗಿ ಅಳುವುದು ಕಾಣುತ್ತದೆ. ಕಳೆದ ವರ್ಷ ಆಸ್ತಿ ಖರೀದಿಸುವ ನೆಪದಲ್ಲಿ ಆಕೆಯನ್ನು ಸಂಪರ್ಕಿಸಿದ ಹಳೆಯ ಸಹಪಾಠಿ ಅಯ್ಯಾಜ್ ತಾಜ್ ಮದಾರೆ, ವಾರ್ಧಾ ರಸ್ತೆಯಲ್ಲಿನ ಹೋಟೆಲ್‌ಗೆ ಕರೆದೊಯ್ದಿದ್ದು, ಅಲ್ಲಿ ಜ್ಯೂಸ್‌ನಲ್ಲಿ ಮಾದಕ ದ್ರವ್ಯ ಬೆರೆಸಿ, ಆಕೆ ಪ್ರಜ್ಞೆ ತಪ್ಪಿದಾಗ ಅತ್ಯಾಚಾರ ಎಸಗಿದ್ದಲ್ಲದೆ, ಆ ದೃಶ್ಯಗಳನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಪತಿಯೊಂದಿಗೆ ಪ್ರವಾಸದಲ್ಲಿದ್ದ ಟೆಕ್ಕಿ ಮಹಿಳೆ ಶವವಾಗಿ ಪತ್ತೆ

ಹೊಸದಿಲ್ಲಿ: ಉತ್ತರಾಖಂಡದ ಮಸೂರಿಯ ಹೋಂಸ್ಟೇನಲ್ಲಿ ಹೊಸದಿಲ್ಲಿ ಮೂಲದ ಮಹಿಳಾ ಟೆಕ್ಕಿಯೊಬ್ಬರು ಶವವಾಗಿ ಪತ್ತೆಯಾಗಿದ್ದಾರೆ. ಮೃತ ಟೆಕ್ಕಿಯನ್ನು ಪಿ. ರಾಧಾ ಗಾಯತ್ರಿ (27) ಎಂದು ಗುರುತಿಸಲಾಗಿದೆ. ಇವರು ತಮ್ಮ ಪತಿಯೊಂದಿಗೆ ಪ್ರವಾಸಕ್ಕೆ ತೆರಳಿದ್ದಾಗ ಈ ಘಟನೆ ನಡೆದಿದ್ದು, ಇವರ ಶವ ಕೊಠಡಿಯೊಳಗೆ ರಕ್ತ ಮತ್ತು ಮೂತ್ರದ ನಡುವೆ ಪತ್ತೆಯಾಗಿದ್ದು, ಹಲವು ಅನುಮಾನಗಳಿಗೆ ಕಾರಣವಾಗಿದೆ.



ಮೃತ ಮಹಿಳೆಯ ಪತಿ ಶ್ರೀಚರಣ್ ಸಹ ಹೊಸದಿಲ್ಲಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ. ಇತ್ತೀಚೆಗೆ ವಿವಾಹವಾಗಿದ್ದ ಈ ದಂಪತಿ ವಾರಾಂತ್ಯದ ಪ್ರವಾಸಕ್ಕಾಗಿ ಮಸೂರಿ ಸಮೀಪದ ಧನೋಲ್ಟಿಗೆ ತೆರಳಿದ್ದರು. ಶನಿವಾರ ರಾತ್ರಿ ಹೋಂಸ್ಟೇಯಲ್ಲಿ ಕೊಠಡಿಯನ್ನು ಬುಕ್ ಮಾಡಿಕೊಂಡಿದ್ದರು. ಆದರೆ ಸೋಮವಾರ ಮಹಿಳೆ ಶವವಾಗಿ ಪತ್ತೆಯಾಗಿದ್ದಾರೆ. ''ನಾನು ರಾತ್ರಿ ವೇಳೆ ಹೊರಗೆ ಹೋಗಿದ್ದೆ. ಬೆಳಗ್ಗೆ ಹಿಂದಿರುಗಿದಾಗ ಪತ್ನಿ ಮೃತಪಟ್ಟ ಸ್ಥಿತಿಯಲ್ಲಿ ಕಂಡುಬಂದಳು,'' ಎಂದು ಪೊಲೀಸರಿಗೆ ಪತಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

''ಕೊಠಡಿಯಲ್ಲಿ ಮದ್ಯದ ಬಾಟಲಿಗಳು ಹಾಗೂ ಅನುಮಾನಾಸ್ಪದ ಸಂಗತಿಗಳು ಕಂಡುಬಂದಿವೆ. ಮಹಿಳೆಯ ಶವ ಅರೆನಗ್ನ ಸ್ಥಿತಿಯಲ್ಲಿ ಪತ್ತೆಯಾಗಿದೆ. ಸಾವಿಗೆ ನಿಖರ ಕಾರಣ ಏನು ಎಂಬುದು ತನಿಖೆ ನಂತರ ತಿಳಿಯಬೇಕಿದೆ,'' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಮಹಿಳೆಯ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ. ಪೋಸ್ಟ್ ಮಾರ್ಟಂ ವರದಿ ಬಂದ ಬಳಿಕವೇ ಸಾವಿನ ನಿಖರ ಕಾರಣ ಬಹಿರಂಗವಾಗುವ ಸಾಧ್ಯತೆ ಇದೆ.

ಕರ್ನಾಟಕ ಗೃಹ ಮಂಡಳಿ
3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು
ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಬೇ.ಸ.ಪ್ರ/2025-26 ದಿನಾಂಕ: 06.06.2026

ಬೇಡಿಕೆ ಸಮೀಕ್ಷೆ ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು, ಕಸಬಾ ಹೋಬಳಿ, ದೊಣ್ಣೆಹಳ್ಳಿ ಗ್ರಾಮದ ಸರ್ವೆ ನಂ. 147/1ಬಿ9 ಮತ್ತು 147/1ಎ ಜಮೀನುಗಳಲ್ಲಿ 18 ಎಕರೆ 18 ಗುಂಟೆ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳನ್ನೊಳಗೊಂಡ ವಸತಿ ಯೋಜನೆಯನ್ನು ಶೇ. 60:40 ಅನುಪಾತದ ಪಾಲುದಾರಿಕೆ ಅಡಿಯಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಆಸಕ್ತ ಸಾರ್ವಜನಿಕರು e-payment ಮೂಲಕ ಅರಂಭಿಕ ಠೇವಣಿ ಹಣವನ್ನು ಪಾವತಿ ಮಾಡಲು **ದಿನಾಂಕ: 19.06.2026** ರಿಂದ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ: 20.07.2026** ಅಗಿರುತ್ತದೆ.

ಉದ್ದೇಶಿತ ಬಡಾವಣೆಯ ಸ್ಥಳ	ವರ್ಗ	ನಿವೇಶನದ ಅಳತೆ (ಮೀಟರ್‌ಗಳಲ್ಲಿ)	ನೋಂದಣಿ ಶುಲ್ಕ (ರೂ)	ಆರಂಭಿಕ ಠೇವಣಿ (ರೂ)	ತಾತ್ಕಾಲಿಕ ಬೆಲೆ (ಪ್ರತಿ ಚ.ಅಡಿಗೆ)
ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು, ಕಸಬಾ ಹೋಬಳಿ, ದೊಣ್ಣೆಹಳ್ಳಿ ಗ್ರಾಮ	EWS	6X9	300/-	10,000/-	ರೂ. 900/-
	LIG	9 X 12	500/-	20,000/-	
	MIG	9 X 15	1000/-	30,000/-	
	HIG	12 X 18	1500/-	50,000/-	

ಅರ್ಜಿ ನೋಂದಣಿ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಿ ಅರ್ಜಿ ಸಲ್ಲಿಸಲು ಹಾಗೂ ನಿಯಮ ಮತ್ತು ಷರತ್ತುಗಳ ಪೂರ್ಣ ವಿವರಗಳಿಗಾಗಿ ಮಂಡಳಿಯ ವೆಬ್‌ಸೈಟ್ **https://khb.karnataka.gov.in** ಸಂಪರ್ಕಿಸುವುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕ.ಗೃ.ಮಂ. ಶಿವಮೊಗ್ಗ ಮೊಬೈಲ್ ಸಂಖ್ಯೆ: 9743733696 ಮತ್ತು ಅಧೀಕ್ಷಕರು ಮೊಬೈಲ್ ಸಂಖ್ಯೆ: 9964132200 ಪ್ರ.ದ.ಸ., ಮೊಬೈಲ್ ಸಂಖ್ಯೆ: 7760062595 ಅಥವಾ ಕಂದಾಯ ಅಧಿಕಾರಿಗಳು ಹಂಚಿಕೆ ಶಾಖೆ, ಬೆಂಗಳೂರು ಮೊಬೈಲ್ ಸಂಖ್ಯೆ: 9481688845 ಹಾಗೂ ಕಛೇರಿ ದೂರವಾಣಿ ಸಂಖ್ಯೆ: 080-22273511 ವಿಸ್ತರಣೆ:333/307 ಬೆಂಗಳೂರು ರವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/- ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾಸಾಸಂಇ/ವಾಪ್ರ/ಜಿಎ/1180/2026-27

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕೇಂದ್ರ ಕಚೇರಿ, ಕಲಬುರಗಿ
(ಉಗ್ರಾಣ ಇಲಾಖೆ)
ದೂರವಾಣಿ: 77606 86172 (COSP), 77609 92029 (S.O)
ಸಂ.ಕಕರಸಾ/ಕೇಕ/ಉ&ಮಖನಿ/03/2026-27 ದಿನಾಂಕ:16.06.2026

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೋಡ್‌ನಲ್ಲಿ ಮಾತ್ರ)

ಈ ಕೆಳಗಿನ ವಸ್ತುಗಳನ್ನು ಪೂರೈಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಪ್ರಿ ಕ್ವಾಲಿಫಿಕೇಶನ್ ಮತ್ತು ಕಮರ್ಷಿಯಲ್) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Sl. No.	Tender No.	Tender Nomenclature	Estimate Value(Rs.)	Last date for submission of tender
1.	KKRTC/2024-25/ IND0103/CALL-4	Procurement of Engine Valves and Guides and Inserts	1.70 Crore	29.06.2026 at 15.00 hrs
2.	KKRTC/2025-26/ IND0150/CALL-5	Procurement of Chassis Spares	0.42 Crore	29.06.2026 at 15.00 hrs
3.	KKRTC/2025-26/ IND0159/CALL-4	Procurement of Minor Garage Equipments	0.29 Core	29.06.2026 at 15.00 hrs
4.	KKRTC/2025-26/ IND0166/CALL-3	Procurement of Steering Assembly and Components	1.72 Crore	29.06.2026 at 15.00 hrs
5.	KKRTC/2026-27 IND0214	Procurement of U bolts and Centre Bolts	0.34 Crore	29.06.2026 at 15.00 hrs
6.	KKRTC/2026-27/ IND0215	Procurement of Spring Clamps	0.38 Crore	29.06.2026 at 15.00 hrs
7.	KKRTC/2026-27/ IND0218	Procurement of ERW GI Tubes and CR ERW MS Tubes.	0.69 Crore	29.06.2026 at 15.00 hrs
8.	KKRTC/2024-25/ IND0111/CALL-5	Procurement of NRC Engine Spares	2.82 Crore	16.07.2026 at 15.00 hrs
9.	KKRTC/2026-27/ IND0216	Procurement of Brake & Brake Parts	8..81 Crore	16.07.2026 at 15.00 hrs
10.	KKRTC/2026-27/ IND0217	Procurement of Automotive Glasses.	3.27 Crore	16.07.2026 at 15.00 hrs

ಟೆಂಡರ್, ನೊಂದಣೆ, ಟೆಂಡರ್ ಫಾರ್ಮ ದಾಖಲಾತಿಗಳ ಎಲ್ಲಾ ವಿವರಗಳು **https://kppp.karnataka.gov.in/#/portal/portal-home** ನಲ್ಲಿ ಲಭ್ಯವಿರುತ್ತವೆ. ಅಗತ್ಯವಿದ್ದರೆ ಹೆಚ್ಚಿನ ಮಾಹಿತಿಗಾಗಿ **cospnekrtc@gmail.com** ಅಥವಾ **support@eprochelpdesk.com** ಗೆ-ಮೇಲ್ ಮುಖಾಂತರ ಸಂಪರ್ಕಿಸಬಹುದಾಗಿದೆ. ಪರಿಭಾಷೆಯಲ್ಲಿನ ಬದಲಾವಣೆಗಳಿಗೆ ಸಂಬಂಧಿಸಿದಂತೆ ಯಾವುದೇ ಅಡೆಂಡಮ್ /ಕೊರಿಜೆಂಡಮ್ ಮತ್ತು ಟೆಂಡರ್ ಷರತ್ತು ಮತ್ತು ನಿಭಂಧನೆಗಳು, ಸ್ಪೆಸಿಫಿಕೇಶನ್ ಮತ್ತು ಘಟನೆಗಳ ಕ್ಯಾಲೆಂಡರ್ ಇತ್ಯಾದಿಗಳನ್ನು ಇ-ಪ್ರಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಪ್ಲೋಡ್ ಮಾಡಲಾಗುತ್ತದೆ.

ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಕರು
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರಸ್ಥರು)

ವಾ.ಸಾ.ಸಂ.ಇ.ಕಲಬುರಗಿ/219/ದೇಶಪಾಂಡೆ ಪಬ್ಲಿಸಿಟಿ/2026-27/

ಬೆಂಗಳೂರು ಪಶ್ಚಿಮ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಮಲ್ಲೇಶ್ವರಂ ವಿಭಾಗ, ವಲಯ-2, 2ನೇ ಕ್ರಾಸ್, ಜಲದರ್ಶಿನಿ ಲೇಔಟ್, ಎಂಎಸ್‌ಆರ್ ನಗರ, ಮತ್ತಿಕೆರೆ, ಬೆಂಗಳೂರು-560 054.
ಸಂಖ್ಯೆ: ಕಾಪಾಅ(ಮಲ್ಲೇ)/ಟೆಂಡರ್/ಕೆಪಿಪಿ/02/2026-27 ದಿನಾಂಕ: 16-06-2026

ಅಲ್ಪಾವಧಿ ಟೆಂಡರ್‌ಗೆ ಆಹ್ವಾನ ದ್ವಿ ಲಕೋಟೆ ಪದ್ಧತಿ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ವೆಬ್‌ಸೈಟ್: **https://kppp.karnataka.gov.in** ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಮಲ್ಲೇಶ್ವರಂ ವಿಭಾಗ, ಬೆಂಪನಪಾ, ಬೆಂಗಳೂರು ರವರು ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೆಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು / ವರ್ಗ
1)	**2026-27ನೇ ಸಾಲಿನ ಮತ್ತಿಕೆರೆ ಉಪವಿಭಾಗದ ವಾರ್ಡ್ ಸಂಖ್ಯೆ 48ರ ಮತ್ತಿಕೆರೆಯಲ್ಲಿ ಪಾದಚಾರಿ ಮಾರ್ಗಗಳ ವಾರ್ಷಿಕ ನಿರ್ವಹಣೆ, ಒಳಚರಂಡಿಗಳ ಹೂಳು ತೆಗೆಯುವುದು, ಶೋಲ್ಡರ್ ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **35.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **28.78.** ಇಎಂಡಿ (ರೂ.ಗಳಲ್ಲಿ): **57,570/-. (ಇತರೆ)**
2)	**2026-27ನೇ ಸಾಲಿನ ಮತ್ತಿಕೆರೆ ಉಪವಿಭಾಗದ ವಾರ್ಡ್ 49ರ ಅರಮನೆ ನಗರದಲ್ಲಿ ಪಾದಚಾರಿ ಮಾರ್ಗಗಳ ವಾರ್ಷಿಕ ನಿರ್ವಹಣೆ, ಒಳಚರಂಡಿಗಳ ಹೂಳು ತೆಗೆಯುವಿಕೆ, ಶೋಲ್ಡರ್ ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **35.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **28.78.** ಇಎಂಡಿ (ರೂ.ಗಳಲ್ಲಿ): **57,570/-. (CAT-1)**
3)	**2026-27ನೇ ಸಾಲಿಗೆ ಮತ್ತಿಕೆರೆ ಉಪವಿಭಾಗದ ವಾರ್ಡ್ ಸಂಖ್ಯೆ 50ರ ಸದಾಶಿವ ನಗರದಲ್ಲಿ ಪಾದಚಾರಿ ಮಾರ್ಗಗಳ ವಾರ್ಷಿಕ ನಿರ್ವಹಣೆ, ಒಳಚರಂಡಿಗಳ ಹೂಳು ತೆಗೆಯುವಿಕೆ, ಶೋಲ್ಡರ್ ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **35.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **28.78.** ಇಎಂಡಿ (ರೂ.ಗಳಲ್ಲಿ): **57,570/-. (ಇತರೆ)**
4)	**2026-27ನೇ ಸಾಲಿಗೆ ಮತ್ತಿಕೆರೆ ಉಪವಿಭಾಗದ ವಾರ್ಡ್ ಸಂಖ್ಯೆ 54ರ ಸುಬೇದಾರಪಾಳ್ಯದಲ್ಲಿ ಪಾದಚಾರಿ ಮಾರ್ಗಗಳ ವಾರ್ಷಿಕ ನಿರ್ವಹಣೆ, ಒಳಚರಂಡಿಗಳ ಹೂಳು ತೆಗೆಯುವಿಕೆ, ಶೋಲ್ಡರ್ ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **35.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **28.78.** ಇಎಂಡಿ (ರೂ.ಗಳಲ್ಲಿ): **57,570/-. (CAT-II(A)).**
5)	**2026-27ನೇ ಸಾಲಿಗೆ ಮಲ್ಲೇಶ್ವರಂ ಉಪವಿಭಾಗದ ವಾರ್ಡ್ ಸಂಖ್ಯೆ 51ರ ರಾಜಮಹಲ್‌ನಲ್ಲಿ ಪಾದಚಾರಿ ಮಾರ್ಗಗಳ ವಾರ್ಷಿಕ ನಿರ್ವಹಣೆ, ಒಳಚರಂಡಿಗಳ ಹೂಳು ತೆಗೆಯುವಿಕೆ, ಶೋಲ್ಡರ್ ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **35.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **28.74.** ಇಎಂಡಿ (ರೂ.ಗಳಲ್ಲಿ): **57,500/-. (ಇತರೆ)**
6)	**2026-27ನೇ ಸಾಲಿಗೆ ಮಲ್ಲೇಶ್ವರಂ ಉಪವಿಭಾಗದ ವಾರ್ಡ್ ಸಂಖ್ಯೆ 53ರ ಮಲ್ಲೇಶ್ವರಂನಲ್ಲಿ ಪಾದಚಾರಿ ಮಾರ್ಗಗಳ ವಾರ್ಷಿಕ ನಿರ್ವಹಣೆ, ಒಳಚರಂಡಿಗಳ ಹೂಳು ತೆಗೆಯುವಿಕೆ, ಶೋಲ್ಡರ್ ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **35.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **28.75.** ಇಎಂಡಿ (ರೂ.ಗಳಲ್ಲಿ): **57,510/-. (ಇತರೆ)**
7)	**2026-27ನೇ ಸಾಲಿಗೆ ಮಲ್ಲೇಶ್ವರಂ ಉಪವಿಭಾಗದ ವಾರ್ಡ್ ಸಂಖ್ಯೆ 53ರ ಮಲ್ಲೇಶ್ವರಂನಲ್ಲಿ ಪಾದಚಾರಿ ಮಾರ್ಗಗಳ ವಾರ್ಷಿಕ ನಿರ್ವಹಣೆ, ಒಳಚರಂಡಿಗಳ ಹೂಳು ತೆಗೆಯುವಿಕೆ, ಶೋಲ್ಡರ್ ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **35.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **28.75.** ಇಎಂಡಿ (ರೂ.ಗಳಲ್ಲಿ): **57,510/-. (SC)**
8)	**2026-27ನೇ ಸಾಲಿಗೆ ಸುಬ್ರಹ್ಮಣ್ಯನಗರ ಉಪ ವಿಭಾಗದ ವಾರ್ಡ್ ಸಂಖ್ಯೆ 55ರ ಸುಬ್ರಹ್ಮಣ್ಯ ನಗರದಲ್ಲಿ ಪಾದಚಾರಿ ಮಾರ್ಗಗಳ ವಾರ್ಷಿಕ ನಿರ್ವಹಣೆ, ಒಳಚರಂಡಿಗಳ ಹೂಳು ತೆಗೆಯುವಿಕೆ, ಶೋಲ್ಡರ್ ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **35.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **28.75.** ಇಎಂಡಿ (ರೂ.ಗಳಲ್ಲಿ): **57,510/-. (SC)**
9)	**2026-27ನೇ ಸಾಲಿಗೆ ಸುಬ್ರಹ್ಮಣ್ಯನಗರ ಉಪ ವಿಭಾಗದ ವಾರ್ಡ್ ಸಂಖ್ಯೆ 56ರ ಗಾಯತ್ರಿನಗರದಲ್ಲಿ ಪಾದಚಾರಿ ಮಾರ್ಗಗಳ ವಾರ್ಷಿಕ ನಿರ್ವಹಣೆ, ಒಳಚರಂಡಿಗಳ ಹೂಳು ತೆಗೆಯುವಿಕೆ, ಶೋಲ್ಡರ್ ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **35.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **28.75.** ಇಎಂಡಿ (ರೂ.ಗಳಲ್ಲಿ): **57,510/-. (ಇತರೆ)**
10)	**2026-27ನೇ ಸಾಲಿಗೆ ಸುಬ್ರಹ್ಮಣ್ಯನಗರ ಉಪ ವಿಭಾಗದ ವಾರ್ಡ್ ಸಂಖ್ಯೆ 57ರ ಕುವೆಂಪು ವಾರ್ಡ್‌ನಲ್ಲಿ ಪಾದಚಾರಿ ಮಾರ್ಗಗಳ ವಾರ್ಷಿಕ ನಿರ್ವಹಣೆ ಒಳಚರಂಡಿಗಳ ಹೂಳು ತೆಗೆಯುವಿಕೆ, ಶೋಲ್ಡರ್ ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **35.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **28.75.** ಇಎಂಡಿ (ರೂ.ಗಳಲ್ಲಿ): **57,510/-. (ಇತರೆ)**
11)	**2026-27ನೇ ಸಾಲಿಗೆ ಮತ್ತಿಕೆರೆ ಉಪ ವಿಭಾಗದ ವಾರ್ಡ್ ಸಂಖ್ಯೆ 48, 49, 50, 54 ರಲ್ಲಿ ಗುಂಡಿಗಳನ್ನು ಮುಚ್ಚುವ ಕಾಮಗಾರಿ.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **80.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **64.52.** ಇಎಂಡಿ (ರೂ.ಗಳಲ್ಲಿ): **1,30,000/-. (ಇತರೆ)**
12)	**2026-27ನೇ ಸಾಲಿಗೆ ಮಲ್ಲೇಶ್ವರಂ ಉಪ ವಿಭಾಗದ ವಾರ್ಡ್ ಸಂಖ್ಯೆ 51,52,53 ರಲ್ಲಿನ ಗುಂಡಿಗಳನ್ನು ಮುಚ್ಚುವ ಕಾಮಗಾರಿ.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **60.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **48.39.** ಇಎಂಡಿ (ರೂ.ಗಳಲ್ಲಿ): **96,800/-. (ಇತರೆ)**
13)	**2026-27ನೇ ಸಾಲಿಗೆ ಸುಬ್ರಹ್ಮಣ್ಯ ನಗರ ಉಪ ವಿಭಾಗದ ವಾರ್ಡ್ ಸಂಖ್ಯೆ 55, 56, 57 ರ ಗುಂಡಿಗಳನ್ನು ಮುಚ್ಚುವ ಕಾಮಗಾರಿ.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **60.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **48.39.** ಇಎಂಡಿ (ರೂ.ಗಳಲ್ಲಿ): **96,800/-. (ಇತರೆ)**
14)	**2026-27ನೇ ಸಾಲಿಗೆ ವಾರ್ಡ್ ಸಂಖ್ಯೆ 48, 49, 50 ಮತ್ತು 54 ಮತ್ತಿಕೆರೆ ಉಪವಿಭಾಗದಲ್ಲಿ ಅಪಧಮನಿ ಮತ್ತು ಉಪ ಅಪಧಮನಿ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚುವುದು ಮತ್ತು ಪಾದಚಾರಿ ಮಾರ್ಗಗಳ ವಾರ್ಷಿಕ ನಿರ್ವಹಣೆ ಮತ್ತು ಒಳಚರಂಡಿಗಳ ಹೂಳು ತೆಗೆಯುವ ಕಾಮಗಾರಿ .** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **60.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **49.35.** ಇಎಂಡಿ (ರೂ.ಗಳಲ್ಲಿ): **95,720/-. (ST)**
15)	**2026-27ನೇ ಸಾಲಿಗೆ ವಾರ್ಡ್ ಸಂಖ್ಯೆ 51, 52 ಮತ್ತು 53 ಮಲ್ಲೇಶ್ವರಂ ಉಪವಿಭಾಗದಲ್ಲಿ ಅಪಧಮನಿ ಮತ್ತು ಉಪ ಅಪಧಮನಿ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚುವುದು ಮತ್ತು ಪಾದಚಾರಿ ಮಾರ್ಗಗಳ ವಾರ್ಷಿಕ ನಿರ್ವಹಣೆ ಹಾಗೂ ಒಳಚರಂಡಿಗಳು ಮತ್ತು ಶೋಲ್ಡರ್‌ಗಳ ಹೂಳು ತೆಗೆಯುವ ಕಾಮಗಾರಿ.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **45.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **36.98.** ಇಎಂಡಿ (ರೂ.ಗಳಲ್ಲಿ): **73,970/-. (CAT-II(A))**
16)	**2026-27ನೇ ಸಾಲಿಗೆ ವಾರ್ಡ್ ಸಂಖ್ಯೆ 55, 56 ಮತ್ತು 57 ಸುಬ್ರಹ್ಮಣ್ಯನಗರ ಉಪವಿಭಾಗದಲ್ಲಿ ಅಪಧಮನಿ ಮತ್ತು ಉಪ ಅಪಧಮನಿ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚುವುದು ಮತ್ತು ಪಾದಚಾರಿ ಮಾರ್ಗಗಳ ವಾರ್ಷಿಕ ನಿರ್ವಹಣೆ ಹಾಗೂ ಒಳಚರಂಡಿಗಳು ಮತ್ತು ಶೋಲ್ಡರ್‌ಗಳ ಹೂಳು ತೆಗೆಯುವ ಕಾಮಗಾರಿ.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **45.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **36.99.** ಇಎಂಡಿ (ರೂ.ಗಳಲ್ಲಿ): **73,990/-. (SC)**
17)	**ವಾರ್ಡ್ ಸಂಖ್ಯೆ 51 (57) ರಾಜಮಹಲ್ ನಗರದ 10ನೇ ಅಡ್ಡರಸ್ತೆ ಪಾರ್ಸಿ ಗಾರ್ಡನ್‌ನಲ್ಲಿ ನಡೆಯುತ್ತಿರುವ ಬೆಂಪನಪಾ ಕಟ್ಟಡಕ್ಕೆ ಹೆಚ್ಚುವರಿ ಕಾಮಗಾರಿಗಳು.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **250.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **206.00.** ಇಎಂಡಿ (ರೂ.ಗಳಲ್ಲಿ): **3,09,000/-. (ಇತರೆ)**
18)	**ವಾರ್ಡ್ ಸಂಖ್ಯೆ 51(57) ರಾಜಮಹಲ್ ನಗರದಲ್ಲಿ ರಾಮದೇವ್ ಉದ್ಯಾನವನ ಮತ್ತು ಪಕ್ಕದ ಕಟ್ಟಡದ ಸಮಗ್ರ ಅಭಿವೃದ್ಧಿ ಕಾಮಗಾರಿಗಳು.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **250.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **206.00.** ಇಎಂಡಿ (ರೂ.ಗಳಲ್ಲಿ): **3,09,000/-. (ಇತರೆ)**
19)	**ಮಲ್ಲೇಶ್ವರಂ ವಿಧಾನ ಸಭಾ ಕ್ಷೇತ್ರದ ಬೆಂಪನಪಾ ಕಟ್ಟಡದ ದುರಸ್ತಿ ಮತ್ತು ನಿರ್ವಹಣಾ ಕಾಮಗಾರಿಗಳು.** ಟೆಂಡರ್‌ಗಿಟ್ಟ ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ): **200.00.** ಟೆಂಡರ್‌ಗಿಟ್ಟ ಮೊತ್ತ (ಲಕ್ಷ ರೂ.ಗಳಲ್ಲಿ): **168.00.** ಇಎಂಡಿ (ರೂ.ಗಳಲ್ಲಿ): **2,52,000/-. (ಇತರೆ)**

ಟೆಂಡರ್ ಕಾರ್ಯಸೂಚಿ: 1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಿಂದ **ದಿನಾಂಕ: 22-06-2026ರ ಸಂಜೆ 4:30 ಗಂಟೆಯ ನಂತರ** ಡೌನ್‌ಲೋಡ್ ಮಾಡಬಹುದು. 2) ಪೂರ್ವ ಬಿಡ್ ಸಭೆಯ **ದಿನಾಂಕ: 30-06-2026 ರ ಸಂಜೆ 4:00 ಗಂಟೆಗೆ** ನಡೆಸಲಾಗುವುದು. 3) ಭರ್ತಿಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ **ದಿನಾಂಕ: 02-07-2026ರ ಸಂಜೆ 4.30 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 03-07-2026 ಅಪರಾಹ್ನ 12.00 ಗಂಟೆಗೆ.** 5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕವನ್ನು ಕೆಪಿಪಿ ಪೋರ್ಟಲ್ ಮೂಲಕ ತಿಳಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಮಲ್ಲೇಶ್ವರಂ ವಿಭಾಗ, ವಲಯ-2, ಬೆಂಪನಪಾ.

ನಮೋ ಸಿಟಿ

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಮನೋಹರ್ ಲಾಲ್ ಖಟ್ಟರ್‌ರವರು ದಿಲ್ಲಿ ಎನ್‌ಸಿಆರ್ ಭಾಗದಲ್ಲಿ ನಾಲ್ಕು 'ನಮೋ ಸಿಟಿ' ನಿರ್ಮಾಣ ಯೋಜನೆ ಘೋಷಿಸಿದ್ದಾರೆ. ಇವು ಭವಿಷ್ಯದ ಹೈಟೆಕ್ ಉಪನಗರಗಳಾಗಿವೆ. ಹೆಚ್ಚುತ್ತಿರುವ ಜನಸಂಖ್ಯೆಯ ಒತ್ತಡವನ್ನು ನಿರ್ವಹಿಸುವುದು ಮತ್ತು ಅನಿಯಂತ್ರಿತ ನಗರೀಕರಣಕ್ಕೆ ಬ್ರೇಕ್ ಹಾಕುವುದು ಇದರ ಹಿಂದಿನ ಉದ್ದೇಶ.

ವಿಕ ಜಾಣ ತಾಣ

'ನಮೋ ಭಾರತ್' ಹೈಸ್ಪೀಡ್ ರೈಲು ಮಾರ್ಗ ಹಾದು ಹೋಗುವ ಪ್ರಮುಖ ಮಾರ್ಗಗಳಲ್ಲಿ ಉದ್ದೇಶಿತ ಹೈಟೆಕ್ ಉಪನಗರಗಳು ನಿರ್ಮಾಣಗೊಳ್ಳಲಿರುವುದರಿಂದ ನಗರ ನಿರ್ಮಾಣ ಯೋಜನೆಗೆ 'ನಮೋ ಸಿಟಿ' ಎಂದು ಹೆಸರಿಡಲಾಗಿದೆ. ನಮೋ ಸಿಟಿಗಳು ಸಂಪರ್ಕ ಸೇತುವಿನಂತೆ ಕಾರ್ಯನಿರ್ವಹಿಸಲಿದ್ದು ಪ್ರಮುಖ ಪ್ರದೇಶಗಳಿಂದ ಕೇವಲ ಅರ್ಧ ಗಂಟೆಯಲ್ಲಿ ದಿಲ್ಲಿ ತಲುಪಲು ಸಾಧ್ಯವಾಗಿಸುವ ಗುರಿಯನ್ನು ಹೊಂದಿದೆ. ಒಟ್ಟಾರೆಯಾಗಿ, ಈ ಯೋಜನೆ ಭಾರತದ ಸುಸ್ಥಿರ ಮತ್ತು ಸ್ಮಾರ್ಟ್ ನಗರಾಭಿವೃದ್ಧಿಗೆ ಹೊಸ ಮಾದರಿಯಾಗಲಿವೆ.

ಯುದ್ಧ ಮುಗೀತು, ಬೆಲೆ ಇಳಿಯೋದು ಯಾವಾಗ?

ಇನ್ನೂ ಎರಡ್ಮೂರು ತಿಂಗಳಾದರೂ ಬೇಕು ಅಂತಾರೆ ಮಾರುಕಟ್ಟೆ ಪರಿಣಿತರು

ನ್ಯೂಯಾರ್ಕ್: ಮಧ್ಯಪ್ರಾಚ್ಯ ಸಂಘರ್ಷ ಕೊನೆಗೊಂಡಿದ್ದು, ಈಗ ಎಲ್ಲರ ಮುಂದಿರುವ ಪ್ರಶ್ನೆ ಏರಿರುವ ಬೆಲೆಗಳು ಇಳಿಯುವುದು ಯಾವಾಗ ಎಂಬುದೇ ಆಗಿದೆ. ಆದರೆ, ಇನ್ನೂ ಎರಡರಿಂದ ಮೂರು ತಿಂಗಳ ಕಾಲ ಬೆಲೆಗಳು ಇಳಿಯುವ ಸಾಧ್ಯತೆ ಇಲ್ಲ ಎಂದು ಆರ್ಥಿಕ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಹರ್ಮುಜ್ ಜಲಸಂಧಿ ಮೇಲಿನ ನಿರ್ಬಂಧದಿಂದ ಕಚ್ಚಾ ತೈಲ, ಸಂಸ್ಕರಿಸಿದ ಇಂಧನ, ರಾಸಾಯನಿಕಗಳ ಪೂರೈಕೆ ಸರಪಳಿ ತುಂಡಾಗಿತ್ತು. ಹೀಗಾಗಿ ಇರಾನ್-ಅಮೆರಿಕ ಸಂಘರ್ಷದ ಸಮಯದಲ್ಲಿ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಸಿಎನ್‌ಜಿ, ದಿನಸಿ, ರಸಗೊಬ್ಬರ, ಜೀವನಾವಶ್ಯಕ ವಸ್ತುಗಳ ದರಗಳು ಏರುಗತಿಯಲ್ಲಿದ್ದವು. ಚಿಲ್ಲರೆ ಮತ್ತು ಸಗಟು ಹಣದುಬ್ಬರ ಗಣನೀಯ ಏರಿಕೆ ದಾಖಲಿಸಿದ್ದವು. ಉಭಯ ದೇಶಗಳ ನಡುವೆ ಶಾಂತಿ ಒಪ್ಪಂದದ ಘೋಷಣೆಯಾಗಿರುವುದರಿಂದ ಜನ ನಿಟ್ಟುಸಿರುಬಿಟ್ಟಿದ್ದು, ಬೆಲೆ ಇಳಿಕೆಯತ್ತ ನಿರೀಕ್ಷೆಯ ನೋಟ ಹೊಂದಿದ್ದಾರೆ.

ಅಲ್ಲಿ ಇಳಿದರೂ ನಮ್ಮಲ್ಲಿ ಇಳಿಯಲ್ಲ

ಶಾಂತಿ ಒಪ್ಪಂದದ ಸುದ್ದಿ ಹೊರ ಬೀಳುತ್ತಿದ್ದಂತೆಯೇ ಸೋಮವಾರ ಬ್ರೆಂಟ್ ಕಚ್ಚಾ ತೈಲ ದರ ಒಂದು ಬ್ಯಾರೆಲ್‌ಗೆ 82.90 ಡಾಲರ್‌ಗೆ ಕುಸಿಯಿತು. ಮಂಗಳವಾರ 81.45 ಡಾಲರ್‌ಗೆ ಇಳಿದಿದೆ. ಯುದ್ಧಕ್ಕೆ ಮುಂಚೆ ಅಂದರೆ ಫೆ.28ರ ಮೊದಲು ಬ್ಯಾರೆಲ್‌ಗೆ 67 ಡಾಲರ್ ಇತ್ತು. ಸಂಘರ್ಷ ತೀವ್ರವಾಗಿದ್ದಾಗ 138 ಡಾಲರ್‌ವರೆಗೂ ಮುಟ್ಟಿತ್ತು.

ಈಗ ಜಾಗತಿಕ ಮಾರುಕಟ್ಟೆಯಲ್ಲಿ ಇಂಧನ ಬೆಲೆ ಇಳಿಕೆ ಹಾದಿಯಲ್ಲಿ ಸಾಗಿದ್ದರೂ, ಭಾರತದಲ್ಲಿ ತಕ್ಷಣದಲ್ಲಿ ಇದರ ಲಾಭ ಜನರಿಗೆ ಸಿಗುವುದಿಲ್ಲ, ಏಕೆಂದರೆ ತೈಲ ಸಂಸ್ಕರಣಾಗಾರಗಳು ಎರಡು ತಿಂಗಳ ಪೂರೈಕೆಗೆ ಅಗತ್ಯವಿರುವಷ್ಟು ಕಚ್ಚಾ ತೈಲದ ದಾಸ್ತಾನು ಹೊಂದಿರುತ್ತವೆ. ಅಂದರೆ, ಬೆಲೆ ಏರಿಕೆಯಾಗಿದ್ದಾಗ ಖರೀದಿಸಿದ್ದ ಕಚ್ಚಾ ತೈಲದ ದಾಸ್ತಾನು ಇನ್ನೂ ಎರಡು ತಿಂಗಳ ಕಾಲ ಇರುತ್ತದೆ. ಹೀಗಾಗಿ, ಅಲ್ಲಿಯವರೆಗಂತೂ ಪೆಟ್ರೋಲ್, ಡೀಸೆಲ್ ಬೆಲೆ ಇಳಿಯುವುದು ಅನುಮಾನ.

ಕಚ್ಚಾ ತೈಲ ಬೆಲೆ ಏರಿಳಿತದ ನೋಟ

67 ಡಾಲರ್	71.32 ಡಾಲರ್	138 ಡಾಲರ್	81.45 ಡಾಲರ್
ಯುದ್ಧ ಆರಂಭವಾದ ಮುನ್ನಾದಿನವಾದ ಫೆ.27ರಂದು ಬ್ಯಾರೆಲ್‌ಗೆ ಬ್ರೆಂಟ್ ಕಚ್ಚಾ ತೈಲದ ಬೆಲೆ	ಯುದ್ಧ ಆರಂಭವಾದ ದಿನವಾದ ಫೆ.28ರಂದು ಬ್ರೆಂಟ್ ಕಚ್ಚಾ ತೈಲದ ಧಾರಣೆ	ಏಪ್ರಿಲ್ 7ರಂದು ಬ್ಯಾರೆಲ್ ಬ್ರೆಂಟ್ ಕಚ್ಚಾ ತೈಲದ ಬೆಲೆ ದಾಖಲೆಯ ಮಟ್ಟ ತಲುಪಿತ್ತು	ಮಂಗಳವಾರ (ಜೂನ್ 16) ಬ್ಯಾರೆಲ್ ಬ್ರೆಂಟ್ ಕಚ್ಚಾ ತೈಲದ ಬೆಲೆ

ಭಾರತಕ್ಕೆ ಆಗುವ ಲಾಭವೇನು?

ಭಾರತ ತನ್ನ ಬೇಡಿಕೆಯ ಶೇ.85ರಷ್ಟು ಕಚ್ಚಾ ತೈಲ, ಶೇ.70ರಷ್ಟು ಎಲ್‌ಪಿಜಿ, ಶೇ.90ರಷ್ಟು ಎಲ್‌ಎನ್‌ಜಿಗೆ ವಿದೇಶಗಳನ್ನೇ ಅವಲಂಬಿಸಿದೆ. ಆ ಪೈಕಿ ಬಹುಪಾಲು ಹರ್ಮುಜ್ ಜಲಸಂಧಿಯ ಮೂಲಕವೇ ಬರಬೇಕಿದೆ. ಮಧ್ಯಪ್ರಾಚ್ಯ ಬಿಕ್ಕಟ್ಟು ಕೊನೆಗೊಂಡಿರುವುದರಿಂದ ಪೂರೈಕೆ ಸರಪಳಿ ಬಲಗೊಳ್ಳುತ್ತದೆ. ಮುಂದಿನ ದಿನಗಳಲ್ಲಿ ಹಣದುಬ್ಬರ ಇಳಿಕೆಯಾಗುತ್ತದೆ ಎಂದು ನಿರೀಕ್ಷಿಸಲಾಗಿದೆ.

ವಿಮಾನ ಪ್ರಯಾಣ ದರ

ನಾಗರಿಕ ವಿಮಾನಯಾನ ಕ್ಷೇತ್ರದ ಪರಿಣಿತರಂತೂ, ಯುದ್ಧ ಕೊನೆಗೊಂಡರೂ ವಿಮಾನಯಾಬ ದರಗಳು ತಕ್ಷಣವೇ ಕಡಿಮೆಯಾಗುತ್ತವೆ ಎಂದು ಪ್ರಯಾಣಿಕರು ನಿರೀಕ್ಷಿಸಬಾರದು ಎಂದು ಕಳೆದೊಂದು ತಿಂಗಳಿನಿಂದ ಎಚ್ಚರಿಸುತ್ತಲೇ ಇದ್ದಾರೆ.

ವಿಮಾನಯಾನ ಸಂಸ್ಥೆಗಳು ಸಹ ಇಂಧನವನ್ನು ಮುಂಚಿತವಾಗಿ ಖರೀದಿಸುತ್ತವೆ. ತಮ್ಮ ವೇಳಾಪಟ್ಟಿಗಳನ್ನು ಕ್ರಮೇಣ ಹೊಂದಿಸುತ್ತವೆ ಮತ್ತು ಬೇಡಿಕೆಯ ಆಧಾರದ ಮೇಲೆ ಟಿಕೆಟ್ ಬೆಲೆಗಳನ್ನು ನಿಗದಿಪಡಿಸುತ್ತವೆ. ಹೀಗಾಗಿ ಜೆಟ್ ಇಂಧನ ಬೆಲೆ ಕುಸಿದರೂ ವಾಣಿಜ್ಯ ವಿಮಾನಗಳ ಟಿಕೆಟ್ ದರದಲ್ಲಿ ಪ್ರತಿಫಲಿಸಲು ವಾರಗಳು ಅಥವಾ ತಿಂಗಳುಗಳೇ ಬೇಕಾಗಬಹುದು.

ರಸಗೊಬ್ಬರದ ಸಮಸ್ಯೆ

ಹರ್ಮುಜ್ ಜಲಸಂಧಿಯಲ್ಲಿ ತಾತ್ಕಾಲಿಕವಾಗಿ' ಯಾದರೂ ಹಡಗುಗಳ ಮುಕ್ತ ಸಂಚಾರಕ್ಕೆ ಅವಕಾಶ ಕಲ್ಪಿಸಿರುವುದು ರೈತರಿಗೆ ಸ್ವಾಗತಾರ್ಹ ಬದಲಾವಣೆಯಾಗಿದೆ. ಯುದ್ಧ ಪ್ರಾರಂಭವಾಗುವ ಮೊದಲು ಜಾಗತಿಕ ಬೇಡಿಕೆಯ ರಸಗೊಬ್ಬರ ಪ್ರಮಾಣದಲ್ಲಿ ಶೇ. 30 ರಷ್ಟು ಈ ಜಲಮಾರ್ಗದ ಮೂಲಕ ಹಾದುಹೋಗುತ್ತಿತ್ತು. ಪೂರೈಕೆಯು ಸಂಪೂರ್ಣವಾಗಿ ಕಡಿತಗೊಂಡಿದ್ದರಿಂದ ಬೆಲೆಗಳು ಗಗನಕ್ಕೇರಿದವು. ಇದು ಮತ್ತು ಜಾಗತಿಕವಾಗಿ ಆಹಾರದ ಉತ್ಪಾದನೆಗೂ ಹೊಡೆತ ನೀಡಿತ್ತು. ಈಗ ಹಡುಗುಗಳ ಸಂಚಾರ ಆರಂಭವಾಗಿ ಪೂರೈಕೆ ಸರಪಳಿ ಯಥಾಸ್ಥಿತಿಗೆ ಬರಲು 2-3 ತಿಂಗಳಾದರೂ ಬೇಕು ಎನ್ನಲಾಗುತ್ತಿದೆ.

ಒಂದು ಮಾವಿನ ಹಣ್ಣಿನ ತೂಕ 3.3 ಕೆ.ಜಿ!

3,800 ರೂ. ದಾಖಲೆ ಬೆಲೆಗೆ ಮಾರಾಟ

ಭೋಪಾಲ್: ಮಧ್ಯಪ್ರದೇಶದ ಅಲಿರಾಜ್‌ಪುರ ಜಿಲ್ಲೆಯ ಕತ್ತಿವಾಡಾ ಪ್ರದೇಶದಲ್ಲಿ ಬೆಳೆಗಾರರೊಬ್ಬರು ಒಂದು ಮಾವಿನಹಣ್ಣನ್ನು 3,800 ರೂ.ಗೆ ಮಾರಾಟ ಮಾಡಿದ್ದಾರೆ! ವಿಶೇಷ ಏನು ಅಂದಿರಾ? ನೂರ್‌ಜಹಾನ್ ತಳಿಯ ಆ ಹಣ್ಣಿನ ತೂಕ ಬರೋಬ್ಬರಿ 3.3 ಕೆ.ಜಿ!

ಇಷ್ಟು ದುಬಾರಿ ಬೆಲೆಗೆ ಮಾವಿನ ಹಣ್ಣು ಮಾರಾಟ ಮಾಡಿ ದೇಶಾದ್ಯಂತ ಎಲ್ಲರ ಬೆರಗಿಗೆ ಕಾರಣವಾಗಿರುವ ರೈತ ಭರತ್ ರಾಜ್ ಸಿಂಗ್ ಜಾಧವ್. "ನನ್ನ ತೋಟದಲ್ಲಿ ಇಲ್ಲಿಯತನಕ ಇಷ್ಟೊಂದು ತೂಕದ ಮಾವು ಬಿಟ್ಟಿರಲಿಲ್ಲ. ಈಗ ಮಾವಿನ ಹಂಗಾಮ ಶುರುವಾಗಿ ಕೆಲ ದಿನಗಳ ಹಿಂದೆ ಭಾರಿ ತೂಕದ ರಾಣಿ ಸಿಕ್ಕಳು. ಅವಳನ್ನು ಖರೀದಿಸಲು ಗ್ರಾಹಕರ ಸಂದಣಿ ಇತ್ತು. ಕೊನೆಗೆ ನಾನು 3,800 ರೂ.ಗೆ ಮಾರಾಟ ಮಾಡಿ ಖುಷಿಯಿಂದ ಮನೆಗೆ ಬಂದೆ," ಎಂದು ಜಾಧವ್ ಹೇಳಿಕೊಂಡಿದ್ದಾರೆ.

'ಜೆಡ್ ಪ್ಲಸ್' ಸೆಕ್ಯೂರಿಟಿ!: ಜಾಧವ್ ಅವರ ತೋಟದಲ್ಲಿ ಬೇರೆಬೇರೆ ತಳಿಯ ಒಟ್ಟು 2,500 ಮಾವಿನ ಮರಗಳಿವೆ. ಆದರೆ ಈ ನೂರ್‌ಜಹಾನ್ ತಳಿಯ ಮರಗಳು ಅವುಗಳ ಕಾವಲಿಗಾಗಿಯೇ 10 ಜನ ಸೆಕ್ಯೂರಿಟಿ ಗಾರ್ಡ್‌ಗಳನ್ನು ನೇಮಿಸಿಕೊಂಡಿದ್ದಾರಂತೆ ಜಾಧವ್!

ಅಂದಹಾಗೆ ಈ ತಳಿಯ ಹಣ್ಣಿಗೆ ಮಹಾರಾಷ್ಟ್ರ, ಗುಜರಾತ್, ರಾಜಸ್ಥಾನ, ತಮಿಳುನಾಡುಗಳಲ್ಲಿ ಭಾರಿ ಬೇಡಿಕೆ ಇದೆಯಂತೆ.

ಹೂಡಿಕೆ ಕ್ಷೇತ್ರಕ್ಕೆ ಅಡಿ ಇಟ್ಟ ಕೃಷ್ಣಯ್ಯ ಚೆಟ್ಟಿ ಜುವೆಲ್ಲರ್ಸ್

ಬೆಂಗಳೂರು: ಆಭರಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಸಿ.ಕೃಷ್ಣಯ್ಯ ಚೆಟ್ಟಿ ಜುವೆಲ್ಲರ್ಸ್ 'ಮನಿಪೆನ್ನಿ' ಎಂಬ ಹೂಡಿಕೆ ಸಂಬಂಧಿತ ಆಭರಣ ಯೋಜನೆಯನ್ನು ಆರಂಭಿಸಿದೆ.

ಗ್ರಾಹಕರು 100 ರೂ.ನಿಂದ ಆರಂಭಿಸಿ ಯಾವುದೇ ಮಿತಿ ಇಲ್ಲದೆ, ಕಂತಿನ ವೇಳಾಪಟ್ಟಿಯ ಗೊಡವೆ ಇಲ್ಲದೆ ಹೂಡಿಕೆ ಮಾಡಬಹುದು. ಕಂತುಗಳ ಸಂಖ್ಯೆ ಕೂಡ ಗ್ರಾಹಕರ ವಿವೇಚನೆಗೆ ಬಿಡಲಾಗಿದೆ. ಮೊಬೈಲ್ ಅಪ್ಲಿಕೇಶನ್ ಮೂಲಕ ಮತ್ತು ಈ ಕಂಪನಿಯ ಸಗಟು ಮಳಿಗೆಗಳಲ್ಲಿ 'ಮನಿಪೆನ್ನಿ' ಯೋಜನೆಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಇದು 11 ತಿಂಗಳ ಅವಧಿಯಲ್ಲಿ ಚಿನ್ನ ಮಾತ್ರವಲ್ಲದೆ ವಜ್ರಗಳು, ಪ್ಲಾಟಿನಂ ಮತ್ತು ಬೆಳ್ಳಿಯ ಸರಾಸರಿ ಬೆಲೆಗಳ ಆಧಾರದ ಮೇಲೆ ಆಭರಣ ಸಂಗ್ರಹಣೆಯನ್ನು ಸಕ್ರಿಯಗೊಳಿಸುತ್ತದೆ. ಮಾರುಕಟ್ಟೆಯ ಏರಿಳಿತಗಳಿಂದಾಗುವ ನಷ್ಟವನ್ನು ತಪ್ಪಿಸಲು, ಗ್ರಾಹಕರು ಹೂಡಿಕೆ ಮಾಡುವ ಅಮೂಲ್ಯ ಲೋಹದ ಮೌಲ್ಯವನ್ನು 'ಸ್ಮಾರ್ಟ್ ಸರಾಸರಿ' ವಿಧಾನದ ಮೂಲಕ ಟ್ರ್ಯಾಕ್ ಮಾಡುತ್ತದೆ. ಅವಧಿ ಮುಕ್ತಾಯದ ವೇಳೆಗೆ ಗ್ರಾಹಕರಿಗೆ ಸರಾಸರಿ ದರ ಅಥವಾ ಅಂದಿನ ಮಾರುಕಟ್ಟೆ ದರ ಇವೆರಡರಲ್ಲಿ ಕಡಿಮೆ ಇರುವ ದರದ ಲಾಭ ಸಿಗುತ್ತದೆ. ಇದು ಬೆಲೆ ಏರಿಳಿತದ ನಷ್ಟದಿಂದ ಗ್ರಾಹಕರಿಗೆ ರಕ್ಷಣೆ ನೀಡುತ್ತದೆ. ಈ ಕೊಡುಗೆಯು ವಾರ್ಷಿಕವಾಗಿ ಶೇ.12 ರವರೆಗೆ ಲಾಭ, ತಮ್ಮ ಜನ್ಮದಿನದ ತಿಂಗಳಲ್ಲಿ ಪಾವತಿಸುವ ಮೊದಲ ಕಂತಿನ ಮೇಲೆ ವಾರ್ಷಿಕ ಶೇ.24 ರಷ್ಟು ಲಾಭ ಮತ್ತು ಮೆಚ್ಯೂರಿಟಿ ಅವಧಿಯಲ್ಲಿ ಅನಿರೀಕ್ಷಿತ ಲಾಭ ಸೇರಿದಂತೆ ಹಲವು ಪ್ರೋತ್ಸಾಹಕಗಳನ್ನು ಒಳಗೊಂಡಿದೆ. ಗ್ರಾಹಕರು ಜಮೆ ಮಾಡಿದ ಹಣವನ್ನು ಯಾವಾಗ ಬೇಕಾದರೂ ಬಳಸಿಕೊಳ್ಳಬಹುದು. ಯಾವುದೇ ನಿರ್ವಹಣಾ ಶುಲ್ಕ ಇರುವುದಿಲ್ಲ ಎಂದು ಸಿ.ಕೃಷ್ಣಯ್ಯ ಚೆಟ್ಟಿ ಜುವೆಲ್ಲರ್ಸ್ ಪ್ರಕಟಣೆ ತಿಳಿಸಿದೆ.

ಮೂರನೇ ದಿನವೂ ಏರುಪೇಟೆ

ಮುಂಬಯಿ: ಅಮೆರಿಕ ಮತ್ತು ಇರಾನ್ ನಡುವೆ ಶಾಂತಿ ಒಪ್ಪಂದವಾಗಿರುವ ಹಿನ್ನೆಲೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆ, ಜಾಗತಿಕ ಮಾರುಕಟ್ಟೆಯಲ್ಲಿ ಸಕಾರಾತ್ಮಕ ನಡೆಯಿಂದ ಷೇರುಪೇಟೆ ಸತತ 3ನೇ ವಹಿವಾಟು ದಿನವಾದ ಮಂಗಳವಾರವೂ ಏರಿಕೆಯನ್ನು ಕಾಯ್ದುಕೊಂಡಿದೆ.

ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' 544.14 ಅಂಕ ಜಿಗಿದು 76,808.48ರಲ್ಲಿ ಸ್ಥಿರವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 'ನಿಫ್ಟಿ' 135.25 ಅಂಕ ಹೆಚ್ಚಿ 23,989.15 ರಲ್ಲಿ ವಹಿವಾಟು ಕೊನೆಗೊಂಡಿತು. ಐಟಿ, ರಿಯಾಲ್ಟಿ, ಎಫ್‌ಎಂಸಿಜಿ, ತೈಲ, ಅನಿಲ ವಲಯದ ಕಂಪನಿಗಳ ಷೇರುಗಳು ಹೆಚ್ಚು ಲಾಭ ಗಳಿಸಿದವು. ಹಲವು ದಿನಗಳ ನಂತರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮಾರಾಟ ಪ್ರವೃತ್ತಿ ಬದಲಿಸಿಕೊಂಡು ಖರೀದಿದಾರರಾದರು.

ಏಷ್ಯಾದ ಮಾರುಕಟ್ಟೆಗಳ ಪೈಕಿ ದಕ್ಷಿಣ ಕೊರಿಯಾದ ಕೊಸ್ಪಿ, ಜಪಾನ್‌ನ ನಿಕ್ಕೆ 225 ಇಂಡೆಕ್ಸ್, ಐರೋಪ್ಯ ಒಕ್ಕೂಟ ಹಾಗೂ ಅಮೆರಿಕದ ಷೇರುಪೇಟೆ ಏರಿಕೆಯಲ್ಲಿದ್ದರೆ ಶಾಂಘೈನ ಎಸ್‌ಎಸ್‌ಇ ಕಾಂಪೋಸಿಟ್ ಇಂಡೆಕ್ಸ್ ಮತ್ತು ಹಾಂಕಾಂಗ್‌ನ ಹ್ಯಾಂಗ್ ಸೆಂಗ್ ಕುಸಿತ ದಾಖಲಿಸಿದವು.

ಕಚ್ಚಾ ತೈಲದ ಬೆಲೆ ಇಳಿಕೆ: ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆ ಮಂಗಳವಾರ ಮತ್ತಷ್ಟು ಕುಸಿದು ಬ್ಯಾರೆಲ್‌ಗೆ 81.45 ಡಾಲರ್ ಆಗಿದೆ.

ರೂಪಾಯಿ ಮತ್ತೆ ಚೇತರಿಕೆ: ಡಾಲರ್ ಎದುರು ರೂಪಾಯಿ ಮೌಲ್ಯವೂ ಸತತ ಮೂರು ದಿನಗಳಿಂದ ಏರುಗತಿಯಲ್ಲಿದೆ. ಮಂಗಳವಾರ 5 ಪೈಸೆ ಹೆಚ್ಚಿ 94.53 ರೂ. ಆಗಿದೆ. ಮುಂದಿನ ದಿನಗಳಲ್ಲಿ ರೂಪಾಯಿ ಇನ್ನಷ್ಟು ಚೇತರಿಸಿಕೊಳ್ಳುತ್ತದೆ ಎನ್ನಲಾಗಿದೆ.

ಚಿನ್ನದ ಧಾರಣೆ ಅಲ್ಪ ಇಳಿಕೆ

ಹೊಸದಿಲ್ಲಿ: ಕೆಲವು ದಿನಗಳಿಂದ ಏರಿಕೆಯಲ್ಲೇ ಇದ್ದ ಚಿನ್ನದ ಧಾರಣೆ ಮಂಗಳವಾರ ಕೊಂಚ ಇಳಿಕೆಯಾಯಿತು. ಹೊಸದಿಲ್ಲಿಯಲ್ಲಿ 10 ಗ್ರಾಂ ಅಪರಂಜಿ ಚಿನ್ನದ ಬೆಲೆಯಲ್ಲಿ 200 ರೂ. ಇಳಿದು 1,59,200 ರೂ. ತಲುಪಿತು. ಬೆಳ್ಳಿ ಬೆಲೆ ಕೆ.ಜಿ.ಗೆ 2,60,000 ರೂ.ನಲ್ಲೇ ಸ್ಥಿರವಾಗಿದೆ. ಈಕ್ವಿಟಿ ಮಾರುಕಟ್ಟೆ ಹೆಚ್ಚು ಲಾಭದಾಯಕ ಎಂದೆನಿಸಿದ್ದರಿಂದ ಹೂಡಿಕೆದಾರರ ಗಮನ ಚಿನ್ನ ಮತ್ತು ಬೆಳ್ಳಿಯಿಂದ ಕೊಂಚ ದೂರ ಸರಿಯಿತು. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಧಾರಣೆಯಲ್ಲಿ ಶೇ.1ರಷ್ಟು ಏರಿ ಔನ್ಸ್‌ಗೆ 4,344.36 ಡಾಲರ್ ಆಯಿತು. ಬೆಳ್ಳಿ ಬೆಲೆ ಕೂಡ ಔನ್ಸ್‌ಗೆ ಶೇ.2ರಷ್ಟು ಜಂಪ್ ಆಗಿ ಔನ್ಸ್‌ಗೆ 70.43 ಡಾಲರ್ ಆಗಿದೆ.

ಬೆಂಗಳೂರಿನಲ್ಲೂ ಅಲ್ಪ ಇಳಿಕೆ: ಬೆಂಗಳೂರಿನಲ್ಲೂ ಅಪರಂಜಿ ಚಿನ್ನದ ಬೆಲೆಯಲ್ಲಿ ಅಲ್ಪ ಇಳಿಕೆಯಾಗಿದ್ದು 10 ಗ್ರಾಂಗೆ 160ರೂ. ಕಡಿಮೆಯಾಗಿ 1,51,370ರೂ. ಆಗಿದೆ. ಇಷ್ಟೇ ತೂಕದ ಆಭರಣ ಚಿನ್ನದ ಧಾರಣೆ 150 ರೂ. ಇಳಿದು 1,38,750 ರೂ. ಆಗಿದೆ. ಬೆಳ್ಳಿ ಬೆಲೆಯಲ್ಲಿ ಮಂಗಳವಾರ ಯಾವುದೇ ವ್ಯತ್ಯಾಸವಾಗಿಲ್ಲ, ಕೆ.ಜಿ.ಗೆ 2,65,000 ರೂ.ನಲ್ಲಿ ಸ್ಥಿರವಾಗಿದೆ.

ಹಳೆಯ ಉತ್ಪನ್ನಗಳಿಗೆ ಸ್ಟೋವ್‌ಕ್ರಾಫ್ಟ್ ವಿನಿಮಯ ಕೊಡುಗೆ ಘೋಷಣೆ

ಬೆಂಗಳೂರು: ಸ್ಟೋವ್‌ಕ್ರಾಫ್ಟ್ ಹಳೆಯ ಉತ್ಪನ್ನಗಳಿಗೆ ವಿನಿಮಯ ಕೊಡುಗೆ ಆರಂಭಿಸಿದೆ. ಗ್ರಾಹಕರು ಯಾವುದೇ ಬ್ರ್ಯಾಂಡ್‌ನ ಹಳೆಯ ಕುಕ್‌ವೇರ್ ಮತ್ತು ಅಡುಗೆ ಉಪಕರಣಗಳನ್ನು ಆಯ್ದ ಪಿಜನ್ ಉತ್ಪನ್ನಗಳ ಮೇಲೆ ಶೇ.50ರ ವರೆಗೆ ರಿಯಾಯಿತಿ ಪಡೆಯಲು ವಿನಿಮಯ ಮಾಡಿಕೊಳ್ಳಬಹುದು. ಇದು ದೇಶವ್ಯಾಪಿ ಅಭಿಯಾನವಾಗಿದೆ. ಈ ಕೊಡುಗೆ ಕುಕ್‌ವೇರ್ ಮತ್ತು ಅಡುಗೆ ಸಲಕರಣೆಗಳ ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಹಾಗೂ ದೇಶಾದ್ಯಂತ 330 ಕ್ಕೂ ಹೆಚ್ಚಿರುವ ಪಿಜನ್ ಎಕ್ಸ್‌ಕ್ಲೂಸಿವ್ ಔಟ್‌ಲೆಟ್‌ಗಳಲ್ಲಿ ಲಭ್ಯವಿದೆ. ವಿನಿಮಯ ಕಾರ್ಯಕ್ರಮವು ಪ್ರೆಶರ್ ಕುಕ್ಕರ್‌ಗಳು, ಕುಕ್‌ಟಾಪ್‌ಗಳು, ಮಿಕ್ಸರ್ ಗ್ರೈಂಡರ್‌ಗಳು, ಏರ್‌ಫ್ರೈಯರ್‌ಗಳು, ಇಂಡಕ್ಷನ್ ಕುಕ್‌ಟಾಪ್‌ಗಳು, ಎಲೆಕ್ಟ್ರಿಕ್ ರೈಸ್ ಕುಕ್ಕರ್‌ಗಳು, ಒಟಿಜಿಗಳು, ಚಿಮಣಿಗಳು ಮತ್ತು ಹಾಬ್‌ಗಳು ಸೇರಿದಂತೆ ಹಲವಾರು ಉತ್ಪನ್ನಗಳನ್ನು ಒಳಗೊಂಡಿದೆ. ವಿನಿಮಯ ಕೊಡುಗೆಯ ಮೂಲಕ ಕಂಪನಿಯು ಹಳೆಯ ಉತ್ಪನ್ನಗಳನ್ನು ಬದಲಾಯಿಸಿಕೊಳ್ಳಲು ಗ್ರಾಹಕರಿಗೆ ಹೆಚ್ಚಿನ ಉತ್ತೇಜನ ನೀಡುತ್ತಿದೆ.

ಗೃಹಿಣಿಯರು ಹಳೆಯ ಕುಕ್‌ವೇರ್ ಮತ್ತು ಅಡುಗೆ ಉಪಕರಣಗಳನ್ನು ದೀರ್ಘಕಾಲದವರೆಗೆ ಬಳಸುವುದನ್ನು ಮುಂದುವರಿಸಿದ್ದಾರೆ. ಇದನ್ನು ಬದಲಿಸಿ ಅಡುಗೆ ಮನೆಯನ್ನು ನವೀನಗೊಳಿಸುವ ಉದ್ದೇಶದಿಂದ ವಿನಿಮಯ ಅಭಿಯಾನವನ್ನು ನಡೆಸಲಾಗುತ್ತಿದೆ. ಇದಕ್ಕೆ ಗ್ರಾಹಕರು ಹೆಚ್ಚಿನ ಸ್ಪಂದನೆಯನ್ನು ನೀಡಿದ್ದಾರೆ ಎಂದು ಕಂಪನಿ ಹೇಳಿದೆ.

ಕಮಲದ ಹೂವು ಮದು ಮಗಳ ಅಲಂಕಾರದಲ್ಲಿ ಟ್ರೆಂಡಿಂಗ್‌ನಲ್ಲಿದೆ.

ಮುಡಿಯಲ್ಲಿ ಮೆರೆವ ಕಮಲ

ಪಂಚಮಿ ಬಾಕಿಲಪದವು
feedbacklvk@vijaykarnataka.com

ಬೆಡಗು ಬಿನ್ನಾಣ

ಮಲ್ಲಿಗೆ, ಗುಲಾಬಿ ಇಲ್ಲದೆ ವಧುವಿನ ಅಲಂಕಾರ ಪೂರ್ಣಗೊಳ್ಳುವುದಿಲ್ಲ. ಆದರೆ ಈಗ ಅವೆರಡರನ್ನು ಮೀರಿಸಲು ಹೊರಟಿದೆ ಕಮಲ. ಇತ್ತೀಚೆಗೆ ವಧುವಿನ ಅಲಂಕಾರದಲ್ಲಿ ಕಮಲವು ಪ್ರಾಮುಖ್ಯ ಪಡೆಯುತ್ತಿದೆ. ಸ್ಟೈಲಿಶ್ ಲುಕ್ ನೀಡುವ ಇದು ಶುಭ ಸೂಚಕವೂ ಹೌದು. ಕೆಸರಿನಲ್ಲಿ ಹುಟ್ಟಿದ್ದರೂ ಕೆಸರಂಟದೆ ಅರಳುವ ಕಮಲವು ವಧುವಿನ ಜೀವನದ ಹೊಸ ಅಧ್ಯಾಯಕ್ಕೆ ಸುಂದರ ರೂಪಕವಾಗಿ ಅವಳ ಜಡೆಯನ್ನು ಅಲಂಕರಿಸುತ್ತದೆ.ಅಲ್ಲದೆ ಶುಭ ಸಮಾರಂಭಗಳಲ್ಲಿ ಇದನ್ನು ಮುಡಿಯುವುದು ದೈವಿಕ ಕಳೆ, ಸಕಾರಾತ್ಮಕ ಶಕ್ತಿಯನ್ನು ತರುತ್ತದೆ.

ಬಣ್ಣದ ಮೋಡಿ: ಕಮಲದ ಹೂವು ಹಿತವಾದ ಬಣ್ಣದೊಂದಿಗೆ ಆಪ್ತವಾಗುತ್ತದೆ. ಗುಲಾಬಿ, ಬಿಳಿ ಹೂವುಗಳು ಸೀರೆ, ಲೆಹೆಂಗಾ ಅಥವಾ ಅನಾರ್ಕಲಿ ಜತೆ ಮ್ಯಾಚ್ ಆಗುತ್ತವೆ. ಕಮಲವು ಸಾಂಪ್ರದಾಯಿಕ, ಆಧುನಿಕ ಲುಕ್ ಎರಡನ್ನೂ ಒಟ್ಟಿಗೆ ಕೊಡುತ್ತದೆ.

ವಿಭಿನ್ನ ರೂಪ: ಮುಡಿ ಕಟ್ಟಿ ಕಮಲದ ಹೂವುಗಳ ಮಾಲೆಯನ್ನು ಅದರ ಸುತ್ತ ಸುತ್ತುವುದು ಒಂದೆಡೆಯಾದರೆ, ಕಮಲದ ಹೂಗಳನ್ನು ದಾರದಲ್ಲಿ ಸುರಿದು ಜಡೆಯನ್ನು ಸುತ್ತಬಹುದು. ಜಡೆಯ ಒಂದು ಪಕ್ಕ ಒಂಟಿ ಹೂವನ್ನು ಮುಡಿಯಬಹುದು. ಜಡೆಯ ತುದಿಗೆ ಕೊಂಡೆಯಂತೆ ಹಲವು ಹೂಗಳನ್ನು ಜೋಡಿಸಬಹುದು. ಮಲ್ಲಿಗೆ ಮಾಲೆ ಜೊತೆ ಕಮಲದ ಮೊಗ್ಗುಗಳನ್ನು ಹೇರ್ ಆ್ಯಕ್ಸೆಸರಿಯೊಂದಿಗೆ ಸೇರಿಸಿ ಆಕರ್ಷಕ ಲುಕ್ ಪಡೆಯಬಹುದು. ■

ಕಮಲದೊಂದಿಗೆ ಒಡವೆ ಮ್ಯಾಚ್

ಕಮಲದ ಗುಲಾಬಿ ಬಣ್ಣಕ್ಕೆ ಮುತ್ತಿನ ಆಭರಣಗಳು ಒಪ್ಪುತ್ತವೆ. ದಕ್ಷಿಣ ಭಾರತದ ಸಾಂಪ್ರದಾಯಿಕ ಶೈಲಿಯ ಕೆಂಪು ಮತ್ತು ಹಸಿರು ಹರಳುಗಳ ಜಡೆ ಬಿಲ್ಲೆಗಳನ್ನು ಕಮಲದ ಹೂವುಗಳ ನಡುವೆ ಇಟ್ಟರೆ ವಧುವಿನ ಲುಕ್ ಭವ್ಯವಾಗಿ ಕಾಣುತ್ತದೆ. ಕಮಲವನ್ನೇ ಆಭರಣದ ರೂಪದಲ್ಲೂ ಬಳಸಬಹುದು. ತಾಜಾ ಮಲ್ಲಿಗೆ ಹೂವಿನ ಸರಕ್ಕೆ ಕಮಲದ ಪೆಂಡೆಂಟ್, ಕಿವಿಯೋಲೆ, ಬೈತಲೆ ಬೊಟ್ಟು ಇತ್ಯಾದಿಗಳಾಗಿ ಬಳಸಬಹುದು.

ಗಮನಿಸಿ

ಹೆಚ್ಚು ಕಮಲದ ಹೂವುಗಳನ್ನು ಮುಡಿಯುವಾಗ ಕೇಶವಿನ್ಯಾಸ ತೂಕವಾಗುತ್ತದೆ. ಆದ್ದರಿಂದ ಕುತ್ತಿಗೆಗೆ ನೋವಾಗದಂತೆ ಕೂದಲಿನ ಒಳಗಡೆ ಪ್ಯಾಡ್ ಹಾಗೂ ಬಲಿಷ್ಠವಾದ ಪಿನ್‌ಗಳನ್ನು ಬಳಸಿ ಬೇಸ್ ಭದ್ರಪಡಿಸಬೇಕು. ಕಮಲದ ದಳಗಳು ಬೇಗ ಬಾಡದಂತೆ ತಡೆಯಲು ತಾಜಾ ಹೂವುಗಳನ್ನು ಬಳಸಬೇಕು ಮತ್ತು ಅಲಂಕಾರ ಮಾಡುವ ತನಕ ತಂಪಾದ ಜಾಗದಲ್ಲಿ ಇಡಬೇಕು. ಹೂವು ತಾಜಾವಾಗಿರಲು ಲೈಟ್ ವಾಟರ್ ಸ್ಪ್ರೇ ಮಾಡಬೇಕು. ಕಾರ್ಯಕ್ರಮ ಮುಗಿದ ಬಳಿಕ ಹೂವನ್ನು ತೆಗೆಯಬೇಕು, ಇಲ್ಲವಾದಲ್ಲಿ ಕೂದಲು ಭಾರವಾಗುತ್ತದೆ. ಕಮಲದ ಹೂವಿನ ಭಾರಿ ಕೊಂಡೆಯು ಸಾಂಪ್ರದಾಯಿಕ ಕಾಂಜೀವರಂ ರೇಷ್ಮೆ ಸೀರೆಗೆ ಅದ್ಭುತವಾಗಿ ಒಪ್ಪುತ್ತದೆ. ಅದೇ ರೀತಿ ಉದ್ದನೆಯ ಕಮಲದ ಜಡೆಯು ಓಪನ್-ಬ್ಯಾಕ್ ಇರುವ ಬ್ಲೌಸ್ ಹಾಗೂ ಲೆಹೆಂಗಾಗಳಿಗೆ ಸೂಕ್ತ.

ಲವಲVK beauty ಡೈರಿ

ಹಾರ್ಟ್ ಬ್ರೇಡ್ ಸೌಂದರ್ಯ

ಹೃದಯದ ಆಕಾರದಲ್ಲಿ ಹೆಣೆಯುವ ಹಾರ್ಟ್ ಬ್ರೇಡ್ ಯುವತಿಯರ ನೆಚ್ಚಿನ ಕೇಶ ವಿನ್ಯಾಸ. ಇದು ಮುದ್ದಾದ, ಆಕರ್ಷಕ ಹಾಗೂ ವಿಶಿಷ್ಟ ನೋಟವನ್ನು ನೀಡುತ್ತದೆ. ಫೋಟೋಶೂಟ್, ಹುಟ್ಟುಹಬ್ಬ, ಹಬ್ಬಗಳು ಹಾಗೂ ವಿಶೇಷ ಕಾರ್ಯಕ್ರಮಗಳಿಗೆ ಈ ಶೈಲಿ ಸೂಕ್ತ.

ಮೊದಲು ಕೂದಲನ್ನು ಚೆನ್ನಾಗಿ ಬಾಚಿ ಸಿಕ್ಕುಗಳಿಲ್ಲದಂತೆ ಮಾಡಿಕೊಳ್ಳಿ. ತಲೆಯ ಮಧ್ಯದಲ್ಲಿ ಕೂದಲನ್ನು ವಿಭಜನೆ ಮಾಡಿ ಎರಡು ಸಮಾನ ಭಾಗಗಳಾಗಿ ಹಂಚಿಕೊಳ್ಳಿ. ಒಂದು ಬದಿಯಿಂದ ಡಚ್ ಜಡೆ ಹೆಣೆಯಲು ಪ್ರಾರಂಭಿಸಿ. ಜಡೆಯನ್ನು ಹೃದಯದ ಅರ್ಧ ಆಕಾರದಲ್ಲಿ ಬಾಗಿಸುತ್ತಾ ಹೆಣೆದುಕೊಳ್ಳಿ. ಅದೇ ರೀತಿ ಇನ್ನೊಂದು ಬದಿಯಲ್ಲೂ ಡಚ್ ಜಡೆ ಹೆಣೆದು ಮತ್ತೊಂದು ಅರ್ಧ ಹೃದಯದ ಆಕಾರವನ್ನು ರೂಪಿಸಿ. ಎರಡೂ ಜಡೆಗಳ ತುದಿಗಳನ್ನು ಕತ್ತಿನ ಹಿಂಭಾಗದಲ್ಲಿ ಒಂದೇ ಕಡೆ ಸೇರಿಸಿ.ರಬ್ಬರ್‌ಬ್ಯಾಂಡ್ ಅಥವಾ ಸುಂದರ ಕ್ಲಿಪ್‌ನಿಂದ ಭದ್ರಪಡಿಸಿ. ಬೇಕಿದ್ದರೆ ಸಣ್ಣ ಹೂವುಗಳು, ಮುತ್ತುಗಳು ಅಥವಾ ಅಲಂಕಾರಿಕ ಪಿನ್‌ಗಳನ್ನು ಸೇರಿಸಿ. ಈ ಹಾರ್ಟ್ ಬ್ರೇಡ್ ಕೇಶ ವಿನ್ಯಾಸವು ಕೂದಲಿಗೆ ಹೊಸತನದ ಸ್ಪರ್ಶ ನೀಡುವುದರ ಜೊತೆಗೆ ಫೋಟೋಗಳಲ್ಲಿ ಅತ್ಯಂತ ಆಕರ್ಷಕವಾಗಿ ಕಾಣಿಸುತ್ತದೆ. ■

- ವಿದ್ಯಾ ನವೀನ್

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ. ದೂ: 9513747474

ಕನ್ಯಾ, ಕುಂಭ - ಈ ರಾಶಿಯವರಿಗೆ ದಶ ಸಂಧಿಯೋಗ

ಮೇಷ: ಇನ್ನೊಬ್ಬರ ಕಷ್ಟಗಳಿಗೆ ನೆರವಾಗಿ ಸಮಯ ವ್ಯರ್ಥವಾಗಲಿದೆ. ರಕ್ತದೊತ್ತಡ ವ್ಯತ್ಯಾಸವಾಗುವ ಸಾಧ್ಯತೆ ಇರುವುದರಿಂದ ಜಾಗ್ರತರಾಗಿರಿ. ನಿಕಟ ವ್ಯಕ್ತಿಗಳೊಂದಿಗೆ ವಾಗ್ವಾದಕ್ಕೆ ಇಳಿಯಬೇಡಿ. **ಶುಭ ಸಂಖ್ಯೆ:** 7, **ಬಣ್ಣ:** ಗುಲಾಬಿ
(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು. ಮಡದಿಯ ಭಾವನೆಗಳಿಗೆ ಬೆಲೆ ಕೊಡುವುದನ್ನು ಅಭ್ಯಾಸ ಮಾಡಿಕೊಳ್ಳಿ. **ಶುಭ ಸಂಖ್ಯೆ:** 3, **ಅದೃಷ್ಟ ಬಣ್ಣ:** ಬಿಳಿ
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಉದ್ಯೋಗಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಕೆಲಸಗಳನ್ನು ಪೂರ್ತಿಗೊಳಿಸುವ ಪ್ರಯತ್ನ ಮಾಡಿ. ಕೃಷಿಗೆ ಸಂಬಂಧಿಸಿದ ಹಣಕಾಸಿನ ಯೋಜನೆಗಳ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. **ಶುಭ ಸಂಖ್ಯೆ:** 6, **ಅದೃಷ್ಟ ಬಣ್ಣ:** ಗಾಢ ನೇರಳೆ
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ವ್ಯಾಪಾರ ಆರಂಭಿಸುವವರಿಗೆ ಮಧ್ಯವರ್ತಿಗಳಿಂದ ಸಹಾಯ ಸಿಗುವುದು. ಸಾಲ ಬಾಧೆಯಂತಹ ಪರಿಸ್ಥಿತಿಯಲ್ಲಿ ಸಹೋದರರು ಸಹಕರಿಸುವರು. ಕಾರ್ಮಿಕರ ಬೇಡಿಕೆಗಳು ಇತ್ಯರ್ಥವಾಗಲಿವೆ. **ಶುಭ ಸಂಖ್ಯೆ:** 4, **ಅದೃಷ್ಟ ಬಣ್ಣ:** ಹಸಿರು
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ಸಾಧು-ಸಂತರ ದರ್ಶನ ಭಾಗ್ಯದಿಂದ ಎಲ್ಲಾ ಕೆಲಸಗಳು ಗುರಿ ತಲುಪಲಿವೆ. ಮಾತೃ ಸಹಕಾರ ನಿಮಗೆ ದೊರೆಯಲಿದೆ. ಮಗಳಿಂದ ಸಂತೋಷದ ಸುದ್ದಿ ಕೇಳುವಿರಿ. **ಶುಭ ಸಂಖ್ಯೆ:** 1, **ಅದೃಷ್ಟ ಬಣ್ಣ:** ಕಿತ್ತಳೆ
(ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಆಪ್ತರಿಂದ ಬರುವ ಸಲಹೆ-ಸೂಚನೆಗಳಿಗೆ ಗಮನ ನೀಡಿ. ಸ್ವ-ಪ್ರಯತ್ನದಿಂದ ಮುನ್ನುಗ್ಗಿ. ಕೆಲಸಗಳನ್ನು ಮುಂದೆ ಹಾಕದೇ ಪೂರ್ಣಗೊಳಿಸಲು ಪ್ರಯತ್ನಿಸಿ. ಭವಿಷ್ಯದ ಕುರಿತು ಚರ್ಚೆ ನಡೆಸಿ. **ಶುಭ ಸಂಖ್ಯೆ:** 8, **ಅದೃಷ್ಟ ಬಣ್ಣ:** ಸುವರ್ಣ
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ಷರತ್ತುಗಳನ್ನು ಹೊಂದಿದ ವ್ಯವಹಾರಕ್ಕೆ ಕೈ ಹಾಕಬೇಡಿ. ವೃತ್ತಿಪರವಾಗಿ ಬಹಳ ದಿನಗಳ ನಂತರ ನಿರೀಕ್ಷಿತ ಕಾರ್ಯಕ್ಕೆ ಸೂಕ್ತ ಸಲಹೆ, ಸಹಕಾರ ಸಿಗಲಿದೆ. ಅಕ್ಕಪಕ್ಕದವರೊಂದಿಗೆ ಸಿಡುಕುತನ ಬೇಡ. **ಶುಭ ಸಂಖ್ಯೆ:** 5, **ಅದೃಷ್ಟ ಬಣ್ಣ:** ಬೂದು
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ವೃತ್ತಿಯ ಏಳಿಗೆಯ ಸಂಕಲ್ಪದಿಂದ ಈ ದಿನವನ್ನು ಆರಂಭಿಸಿ. ದೇವತಾನುಗ್ರಹದಿಂದ ಅಭಿವೃದ್ಧಿಯಾಗುವುದು. ಬಂಧುಗಳಿಂದ ಯಾವುದೇ ಸಹಾಯ ನಿರೀಕ್ಷಿಸಬೇಡಿ. **ಶುಭ ಸಂಖ್ಯೆ:** 2, **ಅದೃಷ್ಟ ಬಣ್ಣ:** ಸಿಂಧೂರ ಕೆಂಪು
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ಮಕ್ಕಳ ವಿಷಯದಲ್ಲಿ ಕಾಳಜಿ ತೋರಿ ವ್ಯವಸ್ಥಿತ ತೀರ್ಮಾನವನ್ನು ಕೈಗೊಂಡಲ್ಲಿ ಭವಿಷ್ಯ ಉತ್ತಮ. ಪ್ರೀತಿ ಮತ್ತು ಆನಂದ ತುಂಬಿದ ಹರ್ಷದಾಯಕ ದಿನ ಇದಾಗಿದೆ. **ಶುಭ ಸಂಖ್ಯೆ:** 9, **ಅದೃಷ್ಟ ಬಣ್ಣ:** ಕಂಚು
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತಾರಾಷಾಢ 1ನೇ ಪಾದ

ಮಕರ: ಹಲವು ದಿನಗಳಿಂದ ಮನೆಯಲ್ಲಿ ಕಾಣಿಸಿಕೊಂಡಿದ್ದ ಇರುಸು-ಮುರುಸು ಕ್ರಮೇಣ ಸರಿಹೋಗಲಿವೆ. ಯೋಗ್ಯ ವಯಸ್ಕರಿಗೆ ವಿವಾಹ ಭಾಗ್ಯ ಒದಗಿ ಬರುವುದು. ಪರೋಪಕಾರ ಮನೋಭಾವದಿಂದ ಯಶಸ್ಸು ಲಭ್ಯ. **ಶುಭ ಸಂಖ್ಯೆ:** 1, **ಅದೃಷ್ಟ ಬಣ್ಣ:** ಹಳದಿ
(ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ಸಿಗುವ ಸುಸಂದರ್ಭವನ್ನು ಬಳಸಿಕೊಳ್ಳಿ. ರೇಷ್ಮೆ ವ್ಯಾಪಾರಿಗಳಿಗೆ ಸಗಟು ಮಾರಾಟದಿಂದ ಅಧಿಕ ಲಾಭ ಉಂಟಾಗಲಿದೆ. ಮನೆಯಲ್ಲಿ ಹಿತಕರ ವಾತಾವರಣ ಇರುತ್ತದೆ. **ಶುಭ ಸಂಖ್ಯೆ:**4, **ಅದೃಷ್ಟ ಬಣ್ಣ:** ಖಾಕಿ
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ಆಲಸ್ಯಕರ ದೇಹ ಸ್ಥಿತಿಯಿಂದ ಕೆಲಸ-ಕಾರ್ಯ ವಿಳಂಬ ಗತಿಯಲ್ಲಿ ಸಾಗಲಿದೆ. ವಿದ್ಯಾರ್ಥಿಗಳಿಗೆ ಗಣಿತ ವಿಷಯದಲ್ಲಿ ಕಠಿಣ ಸಾಧನೆ ಅಗತ್ಯ. ಸಗಟು ಧಾನ್ಯ ವ್ಯಾಪಾರಿಗಳು ಲಾಭ ಪಡೆಯುವಿರಿ. **ಶುಭ ಸಂಖ್ಯೆ:** 6, **ಅದೃಷ್ಟ ಬಣ್ಣ:** ಕೇಸರಿ
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಲವಲVK ಅಭಿರುಚಿ

ರಂಗೂನ್ ಪುಟ್ಟು

ತಮಿಳುನಾಡಿನ ಚೆಟ್ಟಿನಾಡು ಪ್ರಾಂತ್ಯದ ಸಾಂಪ್ರದಾಯಿಕ ಸಿಹಿ ತಿನಿಸು ರಂಗೂನ್ ಪುಟ್ಟು ನೋಡಲು ತುಸು ಸಜ್ಜಿಗೆಯಂತೆ ಕಂಡರೂ ಇದಕ್ಕೆ ಬಳಸುವ ಸಾಮಗ್ರಿ ಹಾಗೂ ಮಾಡುವ ವಿಧಾನದಿಂದ ವಿಭಿನ್ನ ರುಚಿ ಹೊಂದಿದೆ. ಅತಿ ಕಡಿಮೆ ಸಮಯದಲ್ಲಿ ತಯಾರಿಸಬಹುದಾದ ಲಘು ಉಪಾಹಾರಗಳಲ್ಲಿ ಇದೂ ಒಂದು.

ಸಾಮಗ್ರಿ: ರವೆ-1 ಕಪ್, ತೆಂಗಿನ ತುರಿ-1 ಕಪ್, ಬೆಲ್ಲ- ಒಂದೂವರೆ ಕಪ್, ತುಪ್ಪ-ಅರ್ಧ ಕಪ್, ದ್ರಾಕ್ಷಿ ಮತ್ತು ಗೋಡಂಬಿ- ಕಾಲು ಕಪ್.

ವಿಧಾನ: ಬೆಲ್ಲವನ್ನು ಮೂರು ಕಪ್ ನೀರಿನಲ್ಲಿ ಕರಗಿಸಿ ಶೋಧಿಸಿಡಿ. ಬಾಣಲೆಗೆ ನಾಲ್ಕು ಚಮಚ ತುಪ್ಪ ಹಾಕಿ ದ್ರಾಕ್ಷಿ ಗೋಡಂಬಿ ಹುರಿಯಿರಿ. ನಂತರ ತೆಂಗಿನ ತುರಿ ಹಾಕಿ ಹೊಂಬಣ್ಣ ಬರುವವರೆಗೆ ಹುರಿದು ತೆಗೆದಿಡಿ. ಅದೇ ಬಾಣಲೆಗೆ ಸ್ವಲ್ಪ ತುಪ್ಪ ಹಾಕಿ ರವೆಯನ್ನು ಹಸಿ ವಾಸನೆ ಹೋಗಿ ಒಳ್ಳೆಯ ಪರಿಮಳ ಬರುವವರೆಗೆ ಹುರಿಯಿರಿ. ಇದಕ್ಕೆ ಶೋಧಿಸಿದ ಬೆಲ್ಲದ ನೀರು ಹಾಕಿ ಮಿಶ್ರ ಮಾಡಿ ಬೇಯಲು ಇಡಿ. ರವೆ ಮುಕ್ಕಾಲು ಭಾಗ ಬೆಂದಾಗ ಹುರಿದಿಟ್ಟ ತೆಂಗಿನ ತುರಿ, ದ್ರಾಕ್ಷಿ, ಗೋಡಂಬಿ ಸೇರಿಸಿ ತಿರುವಿ ಎರಡು ಚಮಚ ತುಪ್ಪ ಹಾಕಿ ಮುಚ್ಚಳ ಮುಚ್ಚಿ ಸಣ್ಣ ಉರಿಯಲ್ಲಿ ಐದು ನಿಮಿಷ ಬೇಯಿಸಿ. ಈ ಮಿಶ್ರಣ ಹಲ್ವದ ಹದಕ್ಕೆ ಬಂದಾಗ ಉರಿ ಆರಿಸಿದರೆ ಸ್ವಾದಿಷ್ಟ ರಂಗೂನ್ ಪುಟ್ಟು ರೆಡಿ. ■

ಕೆ.ವಿ. ರಾಜಲಕ್ಷ್ಮಿ

ವಿಜಯಬಂಧ - 7979

1		2		■	3	4		5
	■		■	■	■		■	
	■	6	7	■	8		■	
9	10	■	11	12		■	13	
■	14		■		■	15		■
16		■	17		18	■	19	20
	■	21		■	22	23	■	
	■		■	■	■		■	
24				■	25			

ಎಡದಿಂದ ಬಲಕ್ಕೆ

1 ತನ್ನ ಮೇಲಾದ ದಾಳಿಗೆ ಪ್ರತಿಯಾಗಿ ತೀರಿಸಿಕೊಂಡ ಸೇಡು 4
3 ತಪ್ಪುಗಳಿಗೆ ಶಿಕ್ಷೆ ನೀಡುವ ನರಕಾಧಿಪತಿಯ ಪ್ರಪಂಚ 4
6 ರಕ್ತನಾಳವನ್ನು ಹೊಂದಿದ ಮಂದಿ ನಗರದಲ್ಲಿದ್ದಾರೆ 2
8 ಬೇಡುತ್ತಾ ಬಂದವನ ಕೈಗೆ ತೊಡಿಸಿದ ಸಂಕೋಲೆ 2
9 ವಾನರನಲ್ಲ ಇವನು ಮನುಷ್ಯ 2
11 ಜಾಗ ನೋಡಿ ಮಂಗಳಾರತಿ ಸಮಯದಲ್ಲಿ ಹೊಡೆದ ವಾದ್ಯ 3
13 ಹಲಗೆಯ ಮೇಲೆ ಸಾಧಿಸಿದ ಸೇಡು 2
14 ರಾಜ ದುಡ್ಡು ಕೊಟ್ಟರೂ ವಾಸಿಯಾಗದ ಕಾಯಿಲೆ 2
15 ರಾಶಿಚಕ್ರಕ್ಕೆ ಬಂದು ನಿಂತ ಮತ್ಸ್ಯ 2
16 ಆಮಂತ್ರಕನಲ್ಲೇ ಇರುವ ದಡ್ಡ 2
17 ವನದಲ್ಲಿ ಜನಿಸಿದ ತಾವರೆ 3
19 ಮನದಲ್ಲಿ ಅಡಗಿರುವ ಅಹಂಕಾರ 2
21 ಮದನನಲ್ಲಿ ಅಡಗಿದ ಭಾವ 2
22 ಜನಗಳು ಕೂಡಿ ನಗರದಲ್ಲಿ ಕೊಂಡ ಆಭರಣ 2
24 ಲವನ ಮದುವೆಗೆ ತಂದ ಸರಕು ಸಾಮಗ್ರಿ 4
25 ಮನಸ್ಸಿಗಾದ ನೋವು ಮೂರು ವಿಧದ ಬಿಸಿಯಾಗಿ ಕಾಡಿದೆ 4

ಮೇಲಿನಿಂದ ಕೆಳಕ್ಕೆ

1 ಒಂದಾದ ನಂತರ ಮತ್ತೊಂದು ದಿವಸ ಪ್ರಗತಿಯಲ್ಲಿದೆ 4
2 ಗಜಾನನ ನೆಲೆಸಿದ ಕಾಡು 3
4 ಮಡಿಯಲ್ಲಿ ಏರಿದ ಉಪ್ಪರಿಗೆ 3
5 ಶಿವಪೂಜೆ ಮಾಡಲು ಕರದಲ್ಲಿ ಹಿಡಿದ ಭರಣಿ 4
7 ರಸ್ತೆ ರಾಜನಿಗೆ ಸಿಕ್ಕ ಸೂಟಿ 2
8 ಪ್ರಾಣಿ ಪಕ್ಷಿಗಳನ್ನು ಹಿಡಿಯಲು ಮಾಡಿದ ಶಿಕಾರಿ 2
10 ರಜವನ್ನು ಶುದ್ಧಿ ಮಾಡಿದ ಮಡಿವಾಳ 3
12 ಸಂಗಮದತ್ತ ಇರಿಸಿದ ಲಕ್ಷ್ಯ 3
13 ಜನುಮವೆತ್ತಿದ ಅಂಜನಾಸುತ 3
16 ಮಂದವಾದರೂ ತೆಳುವಾಗಿ ಬೀಸಿದ ಗಾಳಿ 4
17 ನವನವೀನವಾದ ಅರಣ್ಯ 2
18 ನಜರು ಒಪ್ಪಿಸಿದ ಮಂದಿ 2
20 ದಮನಗೊಳಿಸಲು ಬಂದ ಕರುಣಾಳು 4
21 ಮನುಕುಲದಲ್ಲಿ ಜನಿಸಿದ ಮಾನವ 3
23 ಗುಂಪಿನ ನಾಯಕ ಈ ವಿನಾಯಕ 3

ವಿಜಯಬಂಧ | 7978

ಎಡದಿಂದ ಬಲಕ್ಕೆ: 1.ಸಂಭಾವಿತ 4.ಗಣರಾಜ್ಯ 6.ಮಕರ 8.ತವಕ 10.ಮಾಳವ 12.ರತ್ನ 13.ಜಾಲಿ 14.ನಖ 15.ಹಂತ 16.ಕತ್ತು 17.ದಾರ 19.ತರಲೆ 22.ಸಮಾಸ 24.ಸಂಧಾನ 26.ರಣರಂಗ 27.ದಿನಕರ

ಮೇಲಿನಿಂದ ಕೆಳಕ್ಕೆ: 2.ಭಾರ್ಗವ 3.ತಮ 4.ಗರ 5.ರಾಟಳ 8.ತಪನಸುತ 9.ಕರ 10.ಮಾಲಿ 11.ವಸಂತಮಾಸ 16.ಕಲೆ 18.ರಸ 20.ರಮಣ 21.ಸುಧಾ 23.ಮಾದಕ 24.ಸಂಗ 25.ನದಿ

ಅ.ನಾ. ಪ್ರಹ್ಲಾದರಾವ್

LOVE VK ❤ LOVE LIFE

ಬುಧವಾರ, 17 ಜೂನ್ 2026 I ADVERTORIAL, ENTERTAINMENT INDUSTRY PROMOTIONAL FEATURE

ಲವಲVK



ಟಾಲಿವುಡ್‌ನಲ್ಲಿ ರಾಮ್ ಪೋತಿನೇನಿ ನಟನೆ ಜತೆಗೆ ಮೊದಲ ಬಾರಿಗೆ ನಿರ್ದೇಶನ ಮಾಡುತ್ತಿರುವ ಹೊಸ ಸಿನಿಮಾದಲ್ಲಿ ನಟಿ ಕಯಾದು ಲೋಹರ್ ನಾಯಕಿಯಾಗಲಿದ್ದಾರೆ ಎನ್ನಲಾಗುತ್ತಿದೆ.

ಮಲಯಾಳಂ ನಿರ್ದೇಶಕ ರಾಹುಲ್ ಸದಾಶಿವನ್ ನಿರ್ದೇಶನದಲ್ಲಿ ಪೃಥ್ವಿರಾಜ್ ಸುಕುಮಾರನ್ ನಟಿಸುತ್ತಿರುವ 'ಒಡಿಯನ್' ಸಿನಿಮಾಗೆ ನಿರ್ಮಾಪಕ ಕರಣ್ ಜೋಹರ್ ಬಂಡವಾಳ ಹೂಡುತ್ತಿದ್ದಾರೆ.

ಚುರುಮುರಿ

ಕಲ್ಕಿ 2ನಲ್ಲಿ ಆಲಿಯಾ ಭಟ್

ಬಹುನಿರೀಕ್ಷಿತ ಸಿನಿಮಾ 'ಕಲ್ಕಿ 2898ಎಡಿ' ಸೀಕ್ವೆಲ್‌ನಲ್ಲಿ ಆಲಿಯಾ ಭಟ್ ನಟಿಸುತ್ತಿದ್ದು, ಈಗಾಗಲೇ ಅವರು ಹೈದರಾಬಾದ್‌ನಲ್ಲಿ ನಡೆದ ಕೆಲವು ದಿನಗಳ ಶೂಟಿಂಗ್ ಕೂಡ ಮುಗಿಸಿದ್ದಾರೆ ಎನ್ನಲಾಗುತ್ತಿದೆ. ಆದರೆ ಅವರು ಪ್ರೀಕ್ವೆಲ್‌ನಲ್ಲಿ ದೀಪಿಕಾ ಪಡುಕೋಣೆ ಮಾಡಿದ್ದ ಸುಮತಿ ಪಾತ್ರದಲ್ಲಿ ನಟಿಸಿದ್ದಾರಾ ಅಥವಾ ಹೊಸ ಪಾತ್ರದಲ್ಲಿದ್ದಾರಾ ಎಂದು ತಿಳಿದುಬಂದಿಲ್ಲ.

2027ರಲ್ಲಿ ಗದರ್ 3 ಆರಂಭ

25 ವರ್ಷಗಳ ಹಿಂದೆ ಸನ್ನಿ ಡಿಯೋಲ್, ಅಮಿಶಾ ಪಟೇಲ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದ ಸೂಪರ್‌ಹಿಟ್ 'ಗದರ್-ಏಕ್ ಪ್ರೇಮ್ ಕಥಾ' ಸಿನಿಮಾದ ಸೀಕ್ವೆಲ್ 'ಗದರ್ 2' ಕೂಡ 2023ರಲ್ಲಿ ತೆರೆಕಂಡು ಬ್ಲಾಕ್ ಬಸ್ಟರ್ ಹಿಟ್ ಆಗಿತ್ತು. ಈಗ ನಿರ್ದೇಶಕ ಅನಿಲ್ ಶರ್ಮ 'ಗದರ್ 3' ಸಿನಿಮಾ ಮಾಡುವ ತಯಾರಿಯಲ್ಲಿದ್ದಾರೆ. ಇದರಲ್ಲಿ ಕಥೆಗೆ ಹೆಚ್ಚು ಒತ್ತು ನೀಡಲಾಗುತ್ತಿದ್ದು ಸ್ಕ್ರಿಪ್ಟಿಂಗ್ ಕೆಲಸ ನಡೆಯುತ್ತಿದೆ. 2027ರಲ್ಲಿ ಇದರ ಶೂಟಿಂಗ್ ಶುರುವಾಗಲಿದೆ.

ಸ್ಟಾರ್ ರಾಜಕಾರಣ ಲೋಡಿಂಗ್

ತಮಿಳುನಾಡಿನಲ್ಲಿ ಯಾರೂ ನಿರೀಕ್ಷೆ ಮಾಡದ ರೀತಿಯಲ್ಲಿ ಹೊಸ ಪಕ್ಷ ಕಟ್ಟಿ ಸಿಎಂ ಆಗಿರುವ ನಟ ದಳಪತಿ ವಿಜಯ್ ಹಾಗೂ ಆಂಧ್ರಪ್ರದೇಶದ ಉಪಮುಖ್ಯಮಂತ್ರಿಯಾದ ನಟ ಪವನ್ ಕಲ್ಯಾಣ್‌ರಂತೆಯೇ ಸ್ಯಾಂಡಲ್‌ವುಡ್‌ನಲ್ಲೂ ಸ್ಟಾರ್ ರಾಜಕಾರಣ ಶುರುವಾಗಲಿದೆಯೇ ಎಂಬ ಚರ್ಚೆ ಶುರುವಾಗಿದೆ.

ಕಿರಣ್ ಚಂದ್ರ
kiran.b@timesofindia.com

ಚಿತ್ರರಂಗಕ್ಕೆ ಎಂಟ್ರಿ ಕೊಡುವುದು ಹಾಗೂ ಸಿನಿಮಾ ತಾರೆಗಳಾಗುವುದೇ ರಾಜಕೀಯಕ್ಕೆ ಪ್ರವೇಶಿಸಲು ಎಂಬ ಮಾತುಗಳ ನಡುವೆ ಸಿನಿಮಾಗಷ್ಟೇ ತಮ್ಮನ್ನು ಸೀಮಿತ ಮಾಡಿಕೊಂಡಿರುವ ಸ್ಟಾರ್‌ಗಳು ಕನ್ನಡದಲ್ಲಿದ್ದಾರೆ. ಆದರೆ ತಮಿಳುನಾಡು ಹಾಗೂ ಆಂಧ್ರಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಸಿನಿಮಾ ಸ್ಟಾರ್‌ಗಳ ರಾಜಕೀಯ ಎಂಟ್ರಿಯಿಂದ ಪ್ರೇರಿತರಾಗಿ ಕನ್ನಡದಲ್ಲೂ ಸ್ಟಾರ್‌ಗಳು ಸಕ್ರಿಯ ರಾಜಕೀಯಕ್ಕೆ ಬರಲಿದ್ದಾರೆಯೇ ಎಂಬ ಲೆಕ್ಕಾಚಾರಗಳು ಶುರುವಾಗಿವೆ.

ಸುದೀಪ್-ರಿಷಬ್ ಪಾಲಿಟಿಕ್ಸ್

ಸ್ಯಾಂಡಲ್‌ವುಡ್ ಸ್ಟಾರ್‌ಗಳಾದ ಸುದೀಪ್ ಹಾಗೂ ರಿಷಬ್ ಶೆಟ್ಟಿ ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರ ಸುದೀರ್ಘ ಆಡಳಿತಕ್ಕೆ ಶುಭ ಕೋರುವ ಪೋಸ್ಟ್ ಮಾಡಿರುವ ಕಾರಣ ಅವರಿಬ್ಬರನ್ನು ಸಕ್ರಿಯ ರಾಜಕಾರಣಕ್ಕೆ ತರುವ ಪ್ರಯತ್ನ ನಡೆಯುತ್ತಿದೆಯೇ ಎಂಬ ಮಾತುಗಳು ಕೇಳಿಬಂದಿವೆ. ಇದಕ್ಕೆ ಪೂರಕವಾಗಿ ಕಳೆದ ತಿಂಗಳು ರಿಷಬ್ ಶೆಟ್ಟಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿದ್ದಾರೆ. ಈ ಹಿಂದೆ ಪ್ರಧಾನಿ ಮೋದಿ ಕರ್ನಾಟಕಕ್ಕೆ ಭೇಟಿ ನೀಡಿದ್ದಾಗಲೂ ಅವರನ್ನು ರಿಷಬ್ ಹಾಗೂ ನಟ ಯಶ್ ಭೇಟಿಯಾಗಿದ್ದರು. 'ಕಾಂತಾರ' ಸಿನಿಮಾ ಬಗ್ಗೆ ಮೋದಿ ಸೇರಿದಂತೆ ಅನೇಕ ಬಿಜೆಪಿ ನಾಯಕರು ಮೆಚ್ಚುಗೆಯ ಮಾತುಗಳನ್ನಾಡಿದ್ದರು. ಇನ್ನು ಸುದೀಪ್ ಬಿಜೆಪಿ ಹಾಗೂ ಕಾಂಗ್ರೆಸ್ ಎರಡೂ ಪಕ್ಷಗಳ ನಾಯಕರ ಜತೆಗೆ ಉತ್ತಮ ಬಾಂಧವ್ಯ ಹೊಂದಿದ್ದು, ಇತ್ತೀಚಿನ ಸಂದರ್ಶನಗಳಲ್ಲಿ ಸದ್ಯಕ್ಕೆ ರಾಜಕೀಯಕ್ಕೆ ಹೋಗುವ ಆಲೋಚನೆ ಇಲ್ಲ ಎನ್ನುವ ಮೂಲಕ ಮುಂದೊಮ್ಮೆ ಪಾಲಿಟಿಕ್ಸ್‌ಗೆ ಎಂಟ್ರಿಯಾಗುವ ಬಗ್ಗೆ ಸೂಚನೆ ನೀಡಿದ್ದಾರೆ.

ಸಿಎಂ ವಿಜಯ್ ಎಫೆಕ್ಟ್

ಉಪೇಂದ್ರ ಪ್ರಜಾಕೀಯ

ಸ್ಟಾರ್ ನಟ ಉಪೇಂದ್ರ ಸಕ್ರಿಯ ರಾಜಕಾರಣದಲ್ಲಿ ತೊಡಗಿಕೊಳ್ಳಲು ತಮ್ಮದೇ ಶೈಲಿಯ ಪ್ರಜಾಕೀಯ ಪಕ್ಷ ಆರಂಭಿಸಿ ವರ್ಷಗಳೇ ಕಳೆದವು. ಆದರೆ ಅದರಿಂದ ಯಾವುದೇ ಮ್ಯಾಜಿಕ್ ಆಗಿಲ್ಲ. ತಮಿಳುನಾಡಿನಲ್ಲಿ ನಟ ವಿಜಯ್ ಅಧಿಕಾರದ ಚುಕ್ಕಾಣಿ ಹಿಡಿದ ಸಂದರ್ಭದಲ್ಲಿ ಉಪ್ಪಿ ಪ್ರಜಾಕೀಯದ ಮೂಲಕ ರಾಜಕೀಯ ಆರಂಭಿಸಿದ್ದರೂ ದಳಪತಿಯಂತೆ ಸಕ್ಸಸ್ ಕಾಣಲು ಆಗಿಲ್ಲ ಎಂಬ ಚರ್ಚೆ ನಡೆಯಿತು. ಇದಕ್ಕೆ ಪ್ರತಿಕ್ರಿಯಿಸಿದ ಅವರು ತಾವು ವಿಜಯ್ ಥರ ರಾಜಕೀಯ ಮಾಡಲು ಬಂದಿಲ್ಲ ಎಂದು ಸ್ಪಷ್ಟಪಡಿಸಿದ್ದು, ಅಲ್ಲಿ ಆಗಿರುವ ಜೆನ್ ಜೀ ಕ್ರಾಂತಿಯಂತೆ ಕರ್ನಾಟಕದಲ್ಲೂ ಒಂದು ಕ್ರಾಂತಿಯಾಗುತ್ತದೆ. ಅದು ಪ್ರಜಾಕೀಯ ಆದರೂ ಆಗಲಿ ಎನ್ನುವ ಮೂಲಕ ರಾಜಕೀಯ ಪೈಪೋಟಿಯಲ್ಲಿ ಸಕ್ರಿಯರಾಗುವ ಸುಳಿವು ನೀಡಿದ್ದಾರೆ.

ದರ್ಶನ್ ರಾಜಕಾರಣ ಆಯ್ಕೆ

ಸದ್ಯಕ್ಕೆ ಸೆರೆಮನೆಯಲ್ಲಿರುವ ಸ್ಟಾರ್ ದರ್ಶನ್ ಜೈಲುವಾಸ ಮುಗಿಸಿ ಬಂದ ಬಳಿಕ ರಾಜಕಾರಣದಲ್ಲಿ ಸಕ್ರಿಯರಾಗುತ್ತಾರೆ ಎಂಬ ಮಾತು ಮೊದಲಿನಿಂದಲೂ ಕೇಳಿಬರುತ್ತಿದೆ. ಕಳೆದ ಚುನಾವಣೆಗಳಲ್ಲೂ ಅವರು ಪಕ್ಷಾತೀತವಾಗಿ ತಮ್ಮ ಆಪ್ತರ ಪರವಾಗಿ ಪ್ರಚಾರ ಮಾಡಿದ್ದು, ಎಲ್ಲಾ ಪಕ್ಷದವರ ಜತೆಗೂ ಉತ್ತಮ ಬಾಂಧವ್ಯ ಹೊಂದಿದ್ದಾರೆ. ತಮಿಳುನಾಡು ಸಿಎಂ ವಿಜಯ್‌ರಂತೆಯೇ ದೊಡ್ಡ ಅಭಿಮಾನಿ ಬಳಗವಿರುವ ದರ್ಶನ್ ಅವರು ದಳಪತಿಯಂತೆಯೇ ಸ್ವತಂತ್ರ ಪಕ್ಷ ಕಟ್ಟಿ ಕರ್ನಾಟಕದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಬಲ್ಲರು ಎಂಬ ಲೆಕ್ಕಾಚಾರಗಳಿದ್ದರೂ ಅವರ ಮೇಲಿರುವ ಕೊಲೆ ಆರೋಪ ಅವರ ರಾಜಕೀಯ ಎಂಟ್ರಿಗೆ ಅತಿ ದೊಡ್ಡ ಹಿನ್ನಡೆಯಾಗಲಿದೆ ಎನ್ನಲಾಗುತ್ತಿದೆ. ಅವರನ್ನು ಬೆಂಬಲಿಸುವ ಸ್ಟಾರ್‌ಗಳು ದರ್ಶನ್ ರಾಜಕೀಯ ಪ್ರವೇಶಕ್ಕೆ ಸಾಥ್ ನೀಡುವ ಸಾಧ್ಯತೆ ಇದೆ.

2028ರ ರಾಜ್ಯ ಚುನಾವಣೆ, 2029ರ ಕೇಂದ್ರ ಚುನಾವಣೆಯಲ್ಲಿ ಕನ್ನಡದ ಸೆಲೆಬ್ರಿಟಿಗಳು ಪ್ರಚಾರಕರಾಗುವುದು ಸಾಮಾನ್ಯ. ಆದರೆ ಯಾರೆಲ್ಲಾ ಅಖಾಡಕ್ಕೆ ಇಳಿದು ರಾಜಕಾರಣದಲ್ಲಿ ಸಕ್ರಿಯರಾಗುತ್ತಾರೆ, ಕನ್ನಡ ಚಿತ್ರರಂಗದಲ್ಲಿ ವಿಜಯ್ ಥರದ ಕ್ರಾಂತಿಯನ್ನು ಯಾರು ಮಾಡಬಲ್ಲರು ಎಂಬ ಪ್ರಶ್ನೆ ಈಗಿನದ್ದು. ■

ಶ್ರೀಮತಿ ರಶ್ಮಿಕಾ ಈಗ ಸರಳ ಸುಂದರಿ

ಈ ಮೊದಲು ಸಿನಿಮಾ ಪ್ರಚಾರಗಳಲ್ಲಿ ಬೋಲ್ಡ್ ಲುಕ್‌ನಲ್ಲಿ ಕಂಗೊಳಿಸುತ್ತಿದ್ದ ನಟಿ ರಶ್ಮಿಕಾ ಮಂದಣ್ಣ ಮಿಸಸ್ ದೇವರಕೊಂಡ ಆದಮೇಲೆ ಸರಳವಾಗಿರುವ ಫಾರ್ಮಲ್ ಉಡುಪುಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈಗ ಅವರ ಬೋಲ್ಡ್‌ನೆಸ್ ಮಿಸ್ ಆಗುತ್ತಿದೆ ಎಂದು ಅವರ ಅಭಿಮಾನಿಗಳು ಮಾತನಾಡಿಕೊಳ್ಳುತ್ತಿದ್ದಾರೆ.

ಮಲ್ವೀರ
feedbacklvk@vijaykarnataka.com

ಸಿನಿಮಾ ನಟಿಯರು ಮದುವೆಯಾದ ಮೇಲೆ ಬದಲಾಗುವುದು ಸಾಮಾನ್ಯ. ಅವರಿಗೆ ಸಿಗುವ ಪಾತ್ರಗಳು ಬದಲಾಗುತ್ತವೆ, ದೈಹಿಕ ಮತ್ತು ಮಾನಸಿಕ ಬದಲಾವಣೆ ಇತ್ಯಾದಿ ಇದ್ದೇ ಇರುತ್ತದೆ. ಇದಕ್ಕೆ ನಟಿ ರಶ್ಮಿಕಾ ಮಂದಣ್ಣ ಕೂಡ ಹೊರತಾಗಿಲ್ಲ. ನಟ ವಿಜಯ್ ದೇವರಕೊಂಡರನ್ನು ಮದುವೆಯಾದ ಬಳಿಕ ಈ ಕನ್ನಡತಿಯ ನಡೆ, ನುಡಿ, ಲುಕ್‌ನಲ್ಲಿ ಸಾಕಷ್ಟು ಬದಲಾವಣೆಗಳು ಕಾಣಿಸಿಕೊಂಡಿವೆ ಎಂಬುದು ಅವರ ಅಭಿಮಾನಿಗಳ ಅಭಿಪ್ರಾಯ.

ರಶ್ಮಿಕಾ ಮದುವೆಯಾದ ನಂತರ ಬಿಡುಗಡೆಯಾಗುತ್ತಿರುವ ಅವರ ನಟನೆಯ ಮೊದಲ ಸಿನಿಮಾ 'ಕಾಕ್‌ಟೇಲ್-2' ಪ್ರಚಾರ ಕಾರ್ಯಕ್ರಮಗಳಲ್ಲಿ ನಟಿ ಬಹಳ ಸರಳವಾಗಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರದ ಸಹನಟರಾದ ಶಾಹಿದ್ ಕಪೂರ್, ಕೃತಿ ಸನನ್‌ರೊಂದಿಗೆ ಅವರು ಫಾರ್ಮಲ್ ಸೂಟ್, ಜೀನ್ಸ್ ಫ್ರಾಕ್, ಲಾಂಗ್ ಮಿಡಿ, ವೈಡ್ ಪ್ಯಾಂಟ್, ಬ್ಲೇಝರ್, ಹೈನೆಕ್ ಫ್ರಾಕ್ ಧರಿಸಿ ಅಚ್ಚರಿ ಮೂಡಿಸಿದ್ದಾರೆ. ಈ ಚಿತ್ರದ ಟೀಸರ್ ಹಾಗೂ ಟ್ರೇಲರ್‌ನಲ್ಲಿ ರಶ್ಮಿಕಾ ಮಂದಣ್ಣರ ಬೋಲ್ಡ್ ಅವತಾರ ಕಂಡವರು ಇದರ ಪ್ರಚಾರದಲ್ಲಿ ಯಾಕೆ ನಟಿ ಫಾರ್ಮಲ್ ಉಡುಪುಗಳನ್ನು ನೆಚ್ಚಿಕೊಂಡಿದ್ದಾರೆ ಎಂದು ಕೇಳುತ್ತಿದ್ದಾರೆ.

ಈ ಸಿನಿಮಾದ ಇನ್ನೊಬ್ಬ ನಟಿ ಕೃತಿ ಸನನ್ ಮಾತ್ರ ಪ್ರಚಾರ ಕಾರ್ಯಕ್ರಮದಲ್ಲಿ ಅಲ್ಟ್ರಾ ಮಾಡ್ ಲುಕ್‌ನಲ್ಲಿ ಮಿಂಚುತ್ತಿದ್ದಾರೆ. ಮಿನಿ ಸ್ಕರ್ಟ್, ಮಿನ್ ಶಾರ್ಟ್, ಥೈಲೆಂಥ್ ಟಾಪ್, ಹೈ ಸ್ಪ್ಲಿಟ್ ಗೌನ್ ಮುಂತಾದ ಶಾರ್ಟ್ ಆ್ಯಂಡ್ ಸ್ವೀಟ್ ಉಡುಪುಗಳಲ್ಲಿ ಸ್ಟೈಲ್ ಸ್ಟೇಟ್‌ಮೆಂಟ್ ನೀಡುತ್ತಿರುವ ಅವರ ಕಾಸ್ಟ್ಯೂಮ್‌ಗಳು ಈಗಾಗಲೇ ಟ್ರೆಂಡ್ ಸೃಷ್ಟಿಸಿವೆ. ಆದರೆ ಇವರ ಜತೆಯಲ್ಲಿಯೇ ಪೋಸ್ ನೀಡುತ್ತಿರುವ ರಶ್ಮಿಕಾ ಯಾಕಿಷ್ಟು ಸಾದಾಸೀದ ಆಗಿದ್ದಾರೆ ಎಂಬ ಬಗ್ಗೆ ಅಭಿಮಾನಿಗಳು ತಲೆಕೆಡಿಸಿಕೊಂಡಿದ್ದಾರೆ.

ಸಾಮಾನ್ಯವಾಗಿ ಸಿನಿಮಾ ಪ್ರಚಾರ ಕಾರ್ಯಕ್ರಮಗಳಲ್ಲಿ ಬಬ್ಲಿಯಾಗಿ ಕಾಣಿಸಿಕೊಂಡು ಆ್ಯಕ್ಟಿವ್ ಆಗಿರುತ್ತಿದ್ದ ರಶ್ಮಿಕಾ ಮಂದಣ್ಣ ಮದುವೆ ಬಳಿಕ ಬದಲಾಗಿದ್ದಾರೆ. ನಿಯಮಿತ ಮಾತು ಹಾಗೂ ನಟರೊಂದಿಗೆ ಪೋಸ್ ನೀಡುವಾಗಲೂ ಒಂದು ಚೌಕಟ್ಟು ಹಾಕಿಕೊಂಡಿರುವಂತೆ ಭಾಸವಾಗುತ್ತದೆ. ಇದು ಮದುವೆ ನಂತರ ಅವರು ತಾವೇ ಹಾಕಿಕೊಂಡಿರುವ ಕಟ್ಟುಪಾಡೋ ಅಥವ ಪತಿ ವಿಜಯ್ ದೇವರಕೊಂಡ ಮನೆಯವರ ಒತ್ತಾಯವೋ ಗೊತ್ತಿಲ್ಲ. ನಟಿಯ ಈ ನಡೆ ಈ ಸಿನಿಮಾ ಪ್ರಚಾರಕಷ್ಟೇ ಸೀಮಿತವೇ ಅಥವಾ ಮುಂಬರುವ ಚಿತ್ರಗಳಲ್ಲೂ ಮುಂದುವರಿಯುತ್ತದಾ ಎನ್ನುವುದೇ ಈಗಿರುವ ಪ್ರಶ್ನೆ. ಮದುವೆಯಾದ ನಂತರ ಹೆಣ್ಣುಮಕ್ಕಳ ಉಡುಗೆ ತೊಡುಗೆಯಲ್ಲಿ ಕಾಣಿಸುವ ಬದಲಾವಣೆ ಸೆಲೆಬ್ರಿಟಿ ಬದುಕಿನಲ್ಲೂ ಅನಿವಾರ್ಯವಾ? ■

ಬೇಳೆ ಖಿಚಡಿ ಪ್ರಿಯೆ ಕರೀನಾ

ಬಾಲಿವುಡ್ ನಟಿ ಕರೀನಾ ಕಪೂರ್ ಅವರಿಗೆ ದಾಲ್ ಖಿಚಡಿ ಅಂದರೆ ಪಂಚಪ್ರಾಣವಂತೆ. ಅದನ್ನು ತಿನ್ನದಿದ್ದರೆ ತಮಗೆ ರಾತ್ರಿ ಸರಿಯಾಗಿ ನಿದ್ದೆಯೇ ಬರುವುದಿಲ್ಲ ಎಂದಿರುವ ಅವರು ತಮ್ಮ ಆಹಾರ ಅಭಿರುಚಿಗಳ ಬಗ್ಗೆ ಇತ್ತೀಚೆಗೆ ಸಂದರ್ಶನ ಒಂದರಲ್ಲಿ ಮಾತನಾಡಿದ್ದಾರೆ.

ಲವಲvk ಸುದ್ದಿ ಲೋಕ
feedbacklvk@vijaykarnataka.com

ಸೆಲೆಬ್ರಿಟಿ ಫುಡ್

ಮನೆಯಲ್ಲಿ ತಯಾರಿಸಿದ ಸರಳ ದೇಸಿ ಆಹಾರದ ಬಗ್ಗೆ ಬಹಳ ಒಲವಿರುವ ನಟಿ ಕರೀನಾ ಕಪೂರ್ ಅವರು ಶುದ್ಧ ಪಂಜಾಬಿ ಶೈಲಿಯ ಆಹಾರ ಪ್ರೇಮಿ. ಬಿಳಿ ಬೆಣ್ಣೆ ಸವರಿದ ಆಲೂ ಪರಾಠಾದಿಂದ ಹಿಡಿದು ಬಿರಿಯಾನಿಯವರೆಗೆ ತಮಗೆ ಇಷ್ಟವಾದ ಕಾರ್ಬೋಹೈಡ್ರೇಟ್ಸ್‌ಭರಿತ ಖಾದ್ಯಗಳನ್ನು ಸವಿಯಲು ಅವರು ಇಷ್ಟಪಡುತ್ತಾರೆ. ತಮ್ಮ ಫೇವರಿಟ್ ಫುಡ್ ತಿನ್ನುತ್ತಲೇ ಬಾಡಿ ಫಿಟ್ನೆಸ್ ಕಾಯ್ದುಕೊಳ್ಳುವುದರಲ್ಲೂ ಸೈ ಅನಿಸಿಕೊಂಡಿರುವುದು ಅವರ ವಿಶೇಷತೆ. ಸರಳವಾದ ಮನೆ ಅಡುಗೆಯ ಮಹತ್ವವನ್ನು ಅವರು ಆಗಾಗ ತಮ್ಮ ಅಭಿಮಾನಿಗಳಿಗೂ ಹೇಳುತ್ತಿರುತ್ತಾರೆ.

ಸೈಫ್ ಜೊತೆ ಅಡುಗೆ

ಮನೆಯಲ್ಲಿ ಅಡುಗೆ ಮಾಡುವುದರ ಪ್ರಯೋಜನಗಳ ಬಗ್ಗೆ ಮಾತನಾಡಿರುವ ಕರೀನಾ ಕಪೂರ್, 'ಈಗ ನಮ್ಮ ಇಡೀ ಕುಟುಂಬಕ್ಕೆ ಮನೆ ಅಡುಗೆ ಎಂದರೆ ತುಂಬಾ ಇಷ್ಟ. ಹೀಗಾಗಿ ನಾನು ಮತ್ತು ಸೈಫ್ ಇಬ್ಬರೂ ಅಡುಗೆ ಮಾಡಲು ಶುರು ಮಾಡಿದ್ದೇವೆ. ನಮಗಿದು ತುಂಬಾ ಖುಷಿ ಕೊಡುತ್ತದೆ. 'ನಿಮ್ಮ ಆಹಾರವನ್ನು ನೀವೇ ತಯಾರಿಸಿ, ಮನೆಯಲ್ಲೇ ತಿನ್ನಿ ಮತ್ತು ಅದನ್ನು ಸರಳವಾಗಿರಲಿ' ಎಂದು ನನ್ನ ನ್ಯೂಟ್ರಿಷನಿಸ್ಟ್ ರುಜುತಾ ದಿವಾಕರ್ ನೀಡಿದ ಸಲಹೆ ನಮಗೆ ತುಂಬಾ ಇಷ್ಟವಾಯಿತು. ಇದನ್ನು ನಮ್ಮ ಜೀವನಶೈಲಿಯನ್ನಾಗಿ ಮಾಡಿಕೊಂಡಿದ್ದೇವೆ' ಎಂದಿದ್ದಾರೆ. ತಮ್ಮಿಬ್ಬರಲ್ಲಿ ಯಾರು ಚೆನ್ನಾಗಿ ಅಡುಗೆ ಮಾಡುತ್ತಾರೆ ಎಂಬ ಪ್ರಶ್ನೆಗೆ ಅವರು, 'ಖಂಡಿತವಾಗಿಯೂ ಸೈಫ್ ಅವರೇ. ಪುರುಷರು ಹೆಚ್ಚು ಉತ್ತಮವಾಗಿ ಅಡುಗೆ ಮಾಡುತ್ತಾರೆ ಎಂದು ನನಗನಿಸುತ್ತದೆ' ಎಂದು ಉತ್ತರಿಸಿದ್ದಾರೆ.

ಕರೀನಾ ನೆಚ್ಚಿನ ಖಾದ್ಯ

'ನನಗೆ ಮನೆಯ ಸರಳ ಊಟ ಎಂದರೆ ತುಂಬಾ ಇಷ್ಟ. ಅದು ನೀಡುವ ತೃಪ್ತಿಯೇ ಬೇರೆ. ನನ್ನ ಅತ್ಯಂತ ನೆಚ್ಚಿನ ಕಂಫರ್ಟ್ ಫುಡ್ ಎಂದರೆ ದಾಲ್ ಖಿಚಡಿ. ವಾರದಲ್ಲಿ ಕನಿಷ್ಠ ಎರಡ್ಮೂರು ದಿನಗಳಾದರೂ ನನ್ನ ಊಟದಲ್ಲಿ ಖಿಚಡಿ ಇರಲೇಬೇಕು. ಇಲ್ಲದಿದ್ದರೆ ನಾನು ತಕ್ಷಣ ರುಜುತಾಗೆ ಮೆಸೇಜ್ ಮಾಡಿ, 'ನನ್ನ ಡಯಟ್‌ನಲ್ಲಿ ಯಾಕೆ ಖಿಚಡಿ ಇಲ್ಲ' ಎಂದು ಕೇಳುತ್ತೇನೆ. ನನಗೆ ರಾತ್ರಿ ಖಿಚಡಿ ಸಿಗದಿದ್ದರೆ ನಿದ್ದೆಯೇ ಬರುವುದಿಲ್ಲ. ನನಗೆ ಖಿಚಡಿ ಎಷ್ಟು ಇಷ್ಟ ಎಂದರೆ ವಾರದಲ್ಲಿ ಐದು ದಿನ ಬೇಕಾದರೂ ಅದನ್ನು ತಿನ್ನಬಲ್ಲೆ. ಅದರ ಮೇಲೆ ಒಂದು ಚಮಚ ತುಪ್ಪ ಹಾಕಿ ತಿಂದರೆ ಸಿಗುವ ಸಂತೋಷವೇ ಬೇರೆ' ಎಂದು ಕರೀನಾ ತಮ್ಮ ಖಿಚಡಿ ಪ್ರೀತಿಯನ್ನು ವ್ಯಕ್ತಪಡಿಸಿದ್ದಾರೆ. ■

ಆರೋಗ್ಯಕರ ಆಹಾರ

ತೊಗರಿ, ಹೆಸರುಬೇಳೆ ಇತ್ಯಾದಿ ಹಾಕಿ ಮಾಡಲಾಗುವ ದಾಲ್ ಖಿಚಡಿಯನ್ನು ಸಾಮಾನ್ಯವಾಗಿ ಲಘು ಆಹಾರ ಅಥವಾ ಅನಾರೋಗ್ಯದಿಂದ ಚೇತರಿಸಿಕೊಳ್ಳುವಾಗ ತಿನ್ನುವ ಆಹಾರ ಎಂದು ಪರಿಗಣಿಸಲಾಗುತ್ತದೆ. ಇದು ಪೌಷ್ಟಿಕಾಂಶಗಳಿಂದ ಕೂಡಿದ ಒಂದು ಸಂಪೂರ್ಣ ಆಹಾರ. ಇದನ್ನು ಅಕ್ಕಿ ಮತ್ತು ಬೇಳೆಗಳನ್ನು ಒಟ್ಟಿಗೆ ಸೇರಿಸಿ ಮಾಡುವುದರಿಂದ ದೇಹಕ್ಕೆ ಅಗತ್ಯವಿರುವ ಸಂಪೂರ್ಣ ಪ್ರೊಟೀನ್ ಸಿಗುತ್ತದೆ. ಇದು ಸ್ನಾಯುಗಳ ಬೆಳವಣಿಗೆ ಮತ್ತು ದೇಹದ ಒಟ್ಟು ಕಾರ್ಯ ನಿರ್ವಹಣೆಗೆ ಸಹಕಾರಿ. ಹೊಟ್ಟೆಗೆ ತುಂಬಾ ಹಗುರವಾಗಿರುವ ಇದು ಸುಲಭವಾಗಿ ಜೀರ್ಣವಾಗುತ್ತದೆ. ದೇಹಕ್ಕೆ ಅಗತ್ಯವಿರುವ ಕಾರ್ಬೋಹೈಡ್ರೇಟ್ಸ್, ಪ್ರೊಟೀನ್, ಕೊಬ್ಬಿನಂಶವನ್ನು ಸಮ ಪ್ರಮಾಣದಲ್ಲಿ ನೀಡಿ ಇಡೀ ದಿನ ಚುರುಕಾಗಿರಲು ಸಹಾಯ ಮಾಡುತ್ತದೆ. ಖಿಚಡಿಗೆ ಕ್ಯಾರೆಟ್, ಬಟಾಣಿ, ಪಾಲಕ್, ಬೀನ್ಸ್‌ನಂತಹ ತರಕಾರಿಗಳನ್ನು ಹಾಕುವುದರಿಂದ ಅದರ ಪೌಷ್ಟಿಕಾಂಶದ ಮೌಲ್ಯ ಮತ್ತಷ್ಟು ಹೆಚ್ಚುತ್ತದೆ. ಸರಿಯಾಗಿ ತಯಾರಿಸಿದ ಖಿಚಡಿಯು ರಕ್ತದಲ್ಲಿನ ಸಕ್ಕರೆ ಪ್ರಮಾಣ ಇದ್ದಕ್ಕಿದ್ದಂತೆ ಹೆಚ್ಚಾಗದಂತೆ ತಡೆಯುತ್ತದೆ ಮತ್ತು ಹೊಟ್ಟೆ ತುಂಬಿದ ಅನುಭವ ನೀಡುತ್ತದೆ ಎನ್ನುವುದು ಪೌಷ್ಟಿಕ ಆಹಾರ ತಜ್ಞರ ಅಭಿಪ್ರಾಯ.

ಪ್ರಧಾನಿ ಮೋದಿಗೆ ಬ್ರೆಡ್ ಮತ್ತು ಉಪ್ಪಿನ ಸ್ವಾಗತ

ಇದು ಸ್ಲೊವಾಕಿಯಾ ಆಹಾರ ಸಂಸ್ಕೃತಿ

ಲವಲvk ಸುದ್ದಿ ಲೋಕ
feedbacklvk@vijaykarnataka.com

ಪ್ರಧಾನಿ ನರೇಂದ್ರ ಮೋದಿ ಇತ್ತೀಚಿನ ಯೂರೋಪ್ ರಾಷ್ಟ್ರಗಳ ಪ್ರವಾಸದ ವೇಳೆ ಸ್ಲೊವಾಕಿಯಾ ದೇಶಕ್ಕೆ ಭೇಟಿ ನೀಡಿದ್ದರು. ಅಲ್ಲಿ ಅವರು ವಿಮಾನದಿಂದ ಇಳಿಯುತ್ತಿದ್ದಂತೆ ಅವರಿಗೆ ಬ್ರೆಡ್ ಮತ್ತು ಉಪ್ಪನ್ನು ನೀಡಿ ಸ್ವಾಗತಿಸಲಾಗಿತ್ತು. ಇದನ್ನು ಅವರು ಸಂತೋಷದಿಂದಲೇ ಸ್ವೀಕರಿಸಿದ್ದು, ಇದರ ಫೋಟೊಗಳು ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿವೆ. ಭಾರತದಲ್ಲಿ ಸಾಮಾನ್ಯವಾಗಿ ಅತಿಥಿಗಳನ್ನು ಸಾಂಪ್ರದಾಯಿಕ ತಂಪು ಪಾನೀಯ, ಚಹಾ, ಕಾಫಿ, ಸಿಹಿ ತಿಂಡಿಗಳೊಂದಿಗೆ ಬರಮಾಡಿಕೊಳ್ಳಲಾಗುತ್ತದೆ. ಹಾಗಾಗಿ ಸ್ಲೊವಾಕಿಯಾದಲ್ಲಿ ಪ್ರಧಾನಿ ಮೋದಿ ಅವರಿಗೆ ಬ್ರೆಡ್ ಮತ್ತು ಉಪ್ಪು ನೀಡಿದ್ದು ಚರ್ಚೆಗೆ ಗ್ರಾಸವಾಗಿತ್ತು.

ಸ್ಲೊವಾಕಿಯನ್ನರ ವೆಲ್‌ಕಮ್

ಬ್ರೆಡ್ ಮತ್ತು ಉಪ್ಪಿನ ಸ್ವಾಗತ ಮೂಲತಃ ಸ್ಲೊವಾಕಿಯಾ ದೇಶದ ಆತಿಥ್ಯ ನೀಡುವ ಸಂಪ್ರದಾಯವಾಗಿದ್ದು, ಅದರ ಪ್ರಕಾರವೇ ಅವರು ಪ್ರಧಾನಿ ಮೋದಿಯವರನ್ನು ಸ್ವಾಗತಿಸಿದ್ದಾರೆ. ಈ ಮೂಲಕ ಆ ದೇಶ ತಮ್ಮ ನಾಡಿನ ಸಂಸ್ಕೃತಿಯನ್ನು ಪರಿಚಯಿಸಿತ್ತು. ಅದರಲ್ಲೂ ಆ ದೇಶ 1993ರಲ್ಲಿ ಸ್ವಾತಂತ್ರ್ಯ ಪಡೆದ ಬಳಿಕ ಅಲ್ಲಿಗೆ ಭಾರತದಿಂದ ಭೇಟಿ ನೀಡಿರುವ ಮೊದಲ ಪ್ರಧಾನಿ ಮೋದಿ ಆಗಿರುವ ಕಾರಣ ಅವರು ತಮ್ಮ ಆತಿಥ್ಯದಲ್ಲಿ ಯಾವುದೇ ಲೋಪ ಮಾಡಿಲ್ಲ. ಅಲ್ಲಿ ಬ್ರೆಡ್ ಸಮೃದ್ಧಿ, ಸುಸ್ಥಿರತೆ, ಭೂಮಿಯ ಆಶೀರ್ವಾದವನ್ನು ಸಂಕೇತಿಸಿದರೆ, ಉಪ್ಪು ಸ್ನೇಹ ಸೌಹಾರ್ದತೆ ಮತ್ತು ರಕ್ಷಣೆಯನ್ನು ಪ್ರತಿನಿಧಿಸುತ್ತದೆ. ಈಗ ಎಲ್ಲೆಡೆ ವಿವಿಧ ದೇಶಗಳಲ್ಲಿ ಚಾಲ್ತಿಯಲ್ಲಿರುವ ಅತಿಥಿಗಳನ್ನು ಸ್ವಾಗತಿಸುವ ಕ್ರಮದ ಬಗ್ಗೆ ಚರ್ಚೆಯಾಗುತ್ತಿದೆ. ಸ್ಲೊವಾಕಿಯಾದಲ್ಲಿ ಬ್ರೆಡ್ ಮತ್ತು ಉಪ್ಪು ನೀಡಿದಂತೆ ಇನ್ನೂ ಕೆಲವು ದೇಶಗಳಲ್ಲಿ ಆಹಾರದ ಮೂಲಕ ಅತಿಥಿಗಳನ್ನು ವೆಲ್‌ಕಮ್ ಮಾಡುವ ಸಂಸ್ಕೃತಿ ಇದೆ.

ಲವಲVK ಸೂಪರ್ ರುಚಿ

ಮಧ್ಯಪ್ರಾಚ್ಯದಲ್ಲಿ ಖರ್ಜೂರ ಮತ್ತು ಗಹ್ವಾ

ಈ ಭಾಗದ ದೇಶಗಳಲ್ಲಿ ಅತಿಥಿಗಳನ್ನು ಖರ್ಜೂರ ಮತ್ತು ಗಹ್ವಾ ಅಂದರೆ ಅರೇಬಿಕ್ ಕಾಫಿ ನೀಡಿ ಸ್ವಾಗತಿಸುವ ಸಂಪ್ರದಾಯವಿದೆ. ಇಲ್ಲಿ ಖರ್ಜೂರ ಉದಾರತೆ ಮತ್ತು ಸಮೃದ್ಧಿಯನ್ನು ಸಂಕೇತಿಸಿದರೆ, ತುಸು ಖಾರ ರುಚಿಯ ಕಾಫಿ ಆತಿಥ್ಯ ಮತ್ತು ಗೌರವವನ್ನು ಸೂಚಿಸುತ್ತದೆ.

ಹವಾಯಿಯಲ್ಲಿ ಪೊಯಿ

ದ್ವೀಪರಾಷ್ಟ್ರ ಹವಾಯಿಯಲ್ಲಿ ಪೊಯಿ ಎಂಬ ಆಹಾರ ನೀಡಿ ಅತಿಥಿಗಳನ್ನು ಬರಮಾಡಿಕೊಳ್ಳಲಾಗುತ್ತದೆ. ಕೆಸುವಿನ ಗೆಡ್ಡೆಯಿಂದ ಮಾಡಲಾಗುವ ಈ ಖಾದ್ಯ ಸ್ನೇಹ, ಒಗ್ಗಟ್ಟು ಮತ್ತು ಅಲ್ಲಿನ ಜನರ ಒಗ್ಗಟ್ಟನ್ನು ಪ್ರತಿಬಿಂಬಿಸುತ್ತದೆ ಎನ್ನಲಾಗಿದೆ.

ಮಂಗೋಲಿಯಾದಲ್ಲಿ ಬಟರ್ ಟೀ

ಟಿಬೆಟನ್ ಪ್ರಸ್ಥಭೂಮಿ ಮತ್ತು ಮಂಗೋಲಿಯಾದಲ್ಲಿ ಅತಿಥಿಗಳಿಗೆ ಬಂದ ತಕ್ಷಣ ಬೆಣ್ಣೆ ಚಹಾ ಅಥವಾ ಹಾಲು ಹಾಕಿ ಮಾಡಿದ ಚಹಾ ನೀಡುವ ಸಂಪ್ರದಾಯವಿದೆ. ಇದು ಅವರು ಅತಿಥಿಗಳಿಗೆ ನೀಡುವ ಗೌರವವನ್ನು ಸೂಚಿಸುತ್ತದೆ.

ರಷ್ಯಾದಲ್ಲಿ ಕಲಚ್

ಸ್ಲೋವಾಕಿಯಾದಲ್ಲಿರುವಂತೆ ರಷ್ಯಾ ಮತ್ತು ಉಕ್ರೇನ್‌ನಲ್ಲಿಯೂ ಅತಿಥಿಗಳನ್ನು ಬ್ರೆಡ್ ಮತ್ತು ಉಪ್ಪು ನೀಡಿ ಸ್ವಾಗತಿಸುವ ಸಂಪ್ರದಾಯವಿದೆ. ಆದರೆ ಅಲ್ಲಿ ದೊಡ್ಡ ಗಾತ್ರದ ಕಲಚ್ ಎಂಬ ಬ್ರೆಡ್ ನೀಡಿ ಬರಮಾಡಿಕೊಳ್ಳಲಾಗುತ್ತದೆ. ಅತಿಥಿಗಳಿಗೆ ಹಸಿವಿನ ಅನುಭವ ಆಗಬಾರದು ಎಂದು ನೀಡಲಾಗುವ ಈ ಬ್ರೆಡ್ ಮತ್ತು ಉಪ್ಪು ಸಮೃದ್ಧಿ, ಸ್ನೇಹವನ್ನು ಪ್ರತಿಬಿಂಬಿಸುತ್ತದೆ. ■

ದಾಲ್ ಮಖನಿ ಈಗ ಚಿಖನಿ

ಲವಲvk ಸುದ್ದಿ ಲೋಕ
feedbacklvk@vijaykarnataka.com

ವೈರಲ್ ಫುಡ್

ಪಾಕ ವಿಧಾನ ಆಗಾಗ ಬದಲಾಗುತ್ತದೆ. ಒಂದಷ್ಟು ಹೊಸ ವಿಧಾನಗಳು ಸೇರಿಕೊಳ್ಳುತ್ತವೆ. ಇನ್ನಷ್ಟು ಟ್ವಿಸ್ಟ್ ಕೂಡ ನೀಡಿ ವಿಭಿನ್ನ ಪ್ರಯೋಗಗಳು ನಡೆಯುತ್ತವೆ. ಈಗ ಅಂಥದ್ದೇ ಪಾಕ ವಿಧಾನವೊಂದು ವಿವಾದಕ್ಕೆ ಒಳಗಾಗಿದೆ. ಹೌದು, ಇತ್ತೀಚೆಗೆ ದಾಲ್ ಮಖನಿ ಮೇಲೆ ನಡೆದ ಪ್ರಯೋಗ ಒಂದು ಸಾಕಷ್ಟು ಚರ್ಚೆಗೆ ಕಾರಣವಾಗಿದೆ.

ಉತ್ತರ ಭಾರತದ ಜನಪ್ರಿಯ ಸಸ್ಯಾಹಾರಿ ಖಾದ್ಯ ದಾಲ್ ಮಖನಿಯನ್ನು ಜಗತ್ತಿನಾದ್ಯಂತ ಜನರು ಇಷ್ಟಪಟ್ಟು ಸವಿಯುತ್ತಾರೆ. ಆದರೆ ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿರುವ ವಿಡಿಯೊವೊಂದು ಈ ಸ್ವಾದಿಷ್ಟ ಖಾದ್ಯದ ಸುತ್ತ ದೊಡ್ಡ ವಿವಾದವನ್ನೇ ಸೃಷ್ಟಿಸಿದೆ. ಷೆಫ್ ಒಬ್ಬರು ತಮ್ಮದೇ ಶೈಲಿಯ ದಾಲ್ ಮಖನಿ ತಯಾರಿಸುವಾಗ ಮಾಡಿದ ಒಂದು ಸಣ್ಣ ಪ್ರಯೋಗ ನೆಟ್ಟಿಗರ ಆಕ್ರೋಶಕ್ಕೆ ಗುರಿಯಾಗಿದೆ.

ಸಾಮಾನ್ಯವಾಗಿ ದಾಲ್ ಮಖನಿಯನ್ನು ಉದ್ದಿನಬೇಳೆ, ರಾಜ್ಮಾ, ಬೆಣ್ಣೆ ಮತ್ತು ಫ್ರೆಶ್ ಕ್ರೀಮ್ ಬಳಸಿ ಸಂಪೂರ್ಣ ಸಸ್ಯಾಹಾರಿ ಪದ್ಧತಿಯಲ್ಲಿ ತಯಾರಿಸಲಾಗುತ್ತದೆ. ಆದರೆ ಈ ವೈರಲ್ ವಿಡಿಯೊದಲ್ಲಿರುವ ಷೆಫ್ ದಾಲ್ ಮಖನಿಗೆ ಅದ್ಭುತ ರುಚಿ ನೀಡುವ ನೆಪದಲ್ಲಿ ಚಿಕನ್ ಸ್ಟಾಕ್ ಅಂದರೆ ಕೋಳಿ ಮಾಂಸ ಬೇಯಿಸಿದ ನೀರು ಬಳಸಿದ್ದಾರೆ. ಈ ರೀತಿ ಸಸ್ಯಾಹಾರಿಗಳ ನೆಚ್ಚಿನ ಖಾದ್ಯಕ್ಕೆ ಮಾಂಸಾಹಾರದ ಸ್ಪರ್ಶ ನೀಡಿದ್ದನ್ನು ಕಂಡು ಹಲವರು ಗರಂ ಆಗಿದ್ದಾರೆ. ಇದಕ್ಕೆ ಈಗ ನೆಟ್ಟಿಗರು ದಾಲ್ ಚಿಖನಿ ಎಂದು ಹೆಸರಿಸಿದ್ದಾರೆ. 'ಭಾರತದಲ್ಲಿ ದಾಲ್ ಮಖನಿ ಎನ್ನುವುದು ಕೇವಲ ಆಹಾರವಲ್ಲ, ಅದೊಂದು ಭಾವನೆ. ಸಸ್ಯಾಹಾರಿಗಳು ಹೋಟೆಲ್‌ಗೆ ಹೋದಾಗ ಇಷ್ಟಪಟ್ಟು ಸವಿಯುವ ಖಾದ್ಯವಿದು. ಅದಕ್ಕೆ ಈ ರೀತಿ ದ್ರೋಹ ಮಾಡಬೇಡಿ' ಎಂದು ಹಲವರು ಕಾಮೆಂಟ್ ಮಾಡಿದ್ದಾರೆ.

ಈ ವಿವಾದ ಒಂದು ಕಡೆಯಾದರೆ, ಆಹಾರ ಕ್ಷೇತ್ರದಲ್ಲಿ ನಡೆಯುವ ಇಂತಹ ಪ್ರಯೋಗಗಳನ್ನು ಕೆಲವರು ಸ್ವಾಗತಿಸಿದ್ದಾರೆ. 'ಅಡುಗೆ ಎನ್ನುವುದು ಕಲೆ ಮತ್ತು ಪ್ರಯೋಗ. ಮಾಂಸಾಹಾರಿಗಳಿಗೆ ಈ ರುಚಿ ಖಂಡಿತ ಇಷ್ಟವಾಗಬಹುದು. ಇದೊಂದು ಹೊಸ ಪ್ರಯತ್ನ' ಎಂದು ಹೇಳಿದ್ದಾರೆ. ಆಹಾರದ ವಿಷಯದಲ್ಲಿ ಭಾರತೀಯರು ಸೂಕ್ಷ್ಮ ಮನಸ್ಸಿನವರು. ಅದರಲ್ಲೂ ಸಸ್ಯಾಹಾರಿ ಮತ್ತು ಮಾಂಸಾಹಾರಿ ಆಹಾರಗಳ ನಡುವಿನ ಗಡಿ ದಾಟಿದಾಗ ಇಂತಹ ವಿವಾದಗಳು ಸಹಜ. ಈ ಹಿಂದೆ ಕೂಡ ಇಂಥ ಸಾಕಷ್ಟು ಪ್ರಯೋಗಗಳಿಗೆ ಸೋಶಿಯಲ್ ಮೀಡಿಯಾದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ■

RNI No. KARKAN/2016/71628

Vol. 11 Issue no. 167

This newspaper/periodical is published by Lokesh K V from No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011. (Ph: 080-40877666) on behalf of Metropolitan Media Company Limited, edited by Sudarshan Channangihalli and printed by (a) Sekar S at Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099 (Ph: 080-42200500). (b) Murthy D from Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Narappa G from Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Siddappa Kashibadiger from Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Sanjay Kanekal from Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) R Gururaj from Metropolitan Media Co. Ltd., Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g)Raghavendra Rao from Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Shivakumar V Hiremath from Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Girish K from Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011.
" © All Rights Reserved. Reproduction in whole or part without permission is prohibited.

ನೇಷನ್ಸ್ ಕಪ್: ಸೆಮಿಗೆ ಭಾರತ

ಆಕ್ಲೆಂಡ್: ಜಪಾನ್ ತಂಡವನ್ನು 2–1 ಗೋಲ್‌ಗಳಿಂದ ಮಣಿಸಿದ ಭಾರತ ಮಹಿಳೆಯರ ಹಾಕಿ ತಂಡವು ಎಫ್‌ಐಎಚ್ ನೇಷನ್ಸ್ ಕಪ್‌ನಲ್ಲಿ ಸೆಮಿಫೈನಲ್ಸ್‌ಗೆ ಅರ್ಹತೆ ಗಳಿಸಿದೆ. ಮಂಗಳವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ ನಾಯಕಿ ಸಲಿಮಾ ಟೆಟೆ ಮತ್ತು ಲಾಲ್ರೆಮ್ ಸಿಯಾಮಿ ಗಳಿಸಿದ ಗೋಲ್‌ಗಳಿಂದ ಭಾರತ ಜಯ ಗಳಿಸಿತು. ಆಡಿದ ಎರಡು ಪಂದ್ಯಗಳಿಂದ 6 ಅಂಕಗಳನ್ನು ಕಲೆಹಾಕಿರುವ ಭಾರತ, ಅಂತಿಮ ನಾಲ್ಕರ ಘಟ್ಟವನ್ನು ಖಚಿತಪಡಿಸಿಕೊಂಡಿದೆ. ಟೂರ್ನಿಯ ವಿಜೇತರು ಮುಂದಿನ ವರ್ಷದ ಎಫ್‌ಐಎಚ್ ಪ್ರೊ ಲೀಗ್‌ಗೆ ಅರ್ಹತೆ ಗಳಿಸಲಿದ್ದಾರೆ.

ಈಜು: ರಾಜ್ಯಕ್ಕೆ 4 ಚಿನ್ನ

ಬೆಂಗಳೂರು: ಅಹಮದಾಬಾದ್‌ನಲ್ಲಿ ಮಂಗಳವಾರ ಆರಂಭವಾದ 79ನೇ ಹಿರಿಯರ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕದ ಈಜುಪಟುಗಳು 4 ಚಿನ್ನದ ಪದಕ ಸೇರಿ ಆರು ಪದಕ ಜಯಿಸಿದ್ದಾರೆ. ಆಕಾಶ್ ಮಣಿ 100 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ (50.40 ಸೆ.) ಚಿನ್ನ, ಚರಣಿ ಟುಮು 1500 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ (17:49.09 ಸೆ.) ಕಂಚು, ಲಿನೇಶ್ ಎ.ಕೆ. 50 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ (33.51 ಸೆ.) ಚಿನ್ನ, ಎಸ್. ಲಕ್ಷ್ಯ 50 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ (33.64 ಸೆ.) ಕಂಚು, ಮಹಿಳೆಯರ 4x100 ಮೀ. ಫ್ರೀಸ್ಟೈಲ್‌ನಲ್ಲಿ (3:53.45 ಸೆ.) ಕರ್ನಾಟಕ ತಂಡ ಚಿನ್ನದ ಸಾಧನೆ ತೋರಿದೆ.

19ರಿಂದ ಏಷ್ಯನ್ ಫೆನ್ಸಿಂಗ್ ಚಾಂಪಿಯನ್‌ಷಿಪ್

ಭವಾನಿ ಸೇರಿ 24 ಸದಸ್ಯರ ತಂಡ ಘೋಷಣೆ

ಹೊಸದಿಲ್ಲಿ: ಜೂನ್ 19ರಿಂದ 24ರವರೆಗೆ ಇಲ್ಲಿ ನಡೆಯಲಿರುವ ಹಿರಿಯರ ಏಷ್ಯನ್ ಫೆನ್ಸಿಂಗ್ ಚಾಂಪಿಯನ್‌ಷಿಪ್‌ಗೆ ಮಂಗಳವಾರ ಘೋಷಿಸಲಾದ ಭಾರತದ 24 ಸದಸ್ಯರ ತಂಡದಲ್ಲಿ ಒಲಿಂಪಿಯನ್ ಸಿ.ಎ. ಭವಾನಿ ದೇವಿ ಸ್ಥಾನ ಪಡೆದಿದ್ದಾರೆ. ತಂಡವು 12 ಮಹಿಳೆಯರು ಮತ್ತು 12 ಪುರುಷರನ್ನು ಒಳಗೊಂಡಿದೆ. 30ಕ್ಕೂ ಅಧಿಕ ರಾಷ್ಟ್ರಗಳ ಸುಮಾರು 400 ಅಥ್ಲೀಟ್‌ಗಳು ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಈ ಚಾಂಪಿಯನ್‌ಷಿಪ್ ಜಪಾನ್‌ನಲ್ಲಿ ವರ್ಷಾಂತ್ಯದಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ನೇರ ಅರ್ಹತಾ ಟೂರ್ನಿಯಾಗಿದೆ. ''ದೇಶದಲ್ಲಿ ಚಾಂಪಿಯನ್‌ಷಿಪ್ ಆಯೋಜಿಸುವ ಮೂಲಕ ದೇಶಾದ್ಯಂತ ಫೆನ್ಸಿಂಗ್ ಕ್ರೀಡೆಯನ್ನು ಉತ್ತೇಜಿಸಲು ಮತ್ತು ಜನಪ್ರಿಯಗೊಳಿಸಲು ಭಾರತ ಉತ್ತಮ ಕ್ರಮ ಕೈಗೊಂಡಿದೆ,'' ಎಂದು ಭವಾನಿ ದೇವಿ ಹೇಳಿದ್ದಾರೆ.

ಡಬಲ್ಸ್‌ನಲ್ಲಿ ವಿಲಿಯಮ್ಸ್ ಸಹೋದರಿಯರು ಕಣಕ್ಕೆ

ಲಂಡನ್: ಸೆರೆನಾ ಮತ್ತು ವೀನಸ್ ವಿಲಿಯಮ್ಸ್ ಮುಂಬರುವ ವಿಂಬಲ್ಡನ್ ಟೆನಿಸ್ ಟೂರ್ನಿಯ ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಒಟ್ಟಿಗೆ ಕಣಕ್ಕಿಳಿಯಲಿದ್ದಾರೆ.

''ಟೂರ್ನಿ ಆರಂಭಕ್ಕೆ ಎರಡು ವಾರಗಳಿಗೂ ಕಡಿಮೆ ಅವಧಿ ಇರುವಾಗ ಗ್ರಾಸ್ ಕೋರ್ಟ್ ಟೂರ್ನಿಯಲ್ಲಿ ವಿಲಿಯಮ್ಸ್ ಸಹೋದರಿಯರು ವೈಲ್ಡ್ ಕಾರ್ಡ್ ಆಹ್ವಾನದ ಮೇರೆಗೆ ಡಬಲ್ಸ್‌ನಲ್ಲಿ ಆಡಲಿದ್ದಾರೆ,'' ಎಂದು ಆಲ್ ಇಂಗ್ಲೆಂಡ್ ಕ್ಲಬ್ ಮಂಗಳವಾರ ಘೋಷಿಸಿದೆ. ವೃತ್ತಿಪರ ಟೆನಿಸ್‌ನಿಂದ ಸುಮಾರು 4 ವರ್ಷಗಳ ದೂರವಿದ್ದ ಬಳಿಕ ಇತ್ತೀಚೆಗೆ ಸ್ಪರ್ಧಾ ಕಣಕ್ಕೆ ಮರಳಿರುವ 44 ವರ್ಷದ ಸೆರೆನಾ ಎಲ್ಲರ ಆಕರ್ಷಣೆಯಾಗಿದ್ದಾರೆ. ವೀನಸ್ ಬುಧವಾರ 46ನೇ ವರ್ಷಕ್ಕೆ ಕಾಲಿಡಲಿದ್ದಾರೆ.

ಅವಳಿ ಗೋಲ್ ಗಳಿಸಿ ನ್ಯೂಜಿಲೆಂಡ್‌ಗೆ ಎಲಿಜಾ ಜಸ್ಟ್ ಆಸರೆ

ಇರಾನ್-ನ್ಯೂಜಿಲೆಂಡ್ ಪಂದ್ಯ ಡ್ರಾ

ಲಾಸ್ ಏಂಜಲೀಸ್: ಎಲಿಜಾ ಜಸ್ಟ್ ಫಿಫಾ ವಿಶ್ವಕಪ್‌ನಲ್ಲಿ ನ್ಯೂಜಿಲೆಂಡ್ ಪರ ಎರಡು ಗೋಲ್ ಗಳಿಸಿದ ಮೊದಲ ಆಟಗಾರ ಎಂಬ ದಾಖಲೆ ಬರೆದರು. ಆದರೆ ಅವರ ತಂಡ ಮೊದಲ ಗೆಲುವು ಸಾಧಿಸಲು ಇದು ನೆರವಾಗಲಿಲ್ಲ.

ಲಾಸ್ ಏಂಜಲೀಸ್ ಕ್ರೀಡಾಂಗಣದಲ್ಲಿ ಸೋಮವಾರ ತಡರಾತ್ರಿ ನಡೆದ 'ಜಿ' ಗುಂಪಿನ ಪಂದ್ಯದಲ್ಲಿ ಇರಾನ್ ವಿರುದ್ಧ 2–2 ಗೋಲ್‌ಗಳಿಂದ ಡ್ರಾ ಸಾಧಿಸಿದ ನ್ಯೂಜಿಲೆಂಡ್ ಒಂದು ಅಂಕ ಗಿಟ್ಟಿಸಿತು. ಈ ಫಲಿತಾಂಶದೊಂದಿಗೆ ನ್ಯೂಜಿಲೆಂಡ್ ತಂಡ ವಿಶ್ವಕಪ್‌ನಲ್ಲಿ ಸತತ ನಾಲ್ಕನೇ ಡ್ರಾ ಸಾಧಿಸಿತು. 2010ರ ಆವೃತ್ತಿಯಲ್ಲಿ ಕಿವೀಸ್ ಸತತ 3 ಡ್ರಾ ಸಾಧಿಸಿತ್ತು. ಪಂದ್ಯದ ಬಳಿಕ ಕೋಚ್ ಡೇರೆನ್, ''ಇದು ಎಂದೆಂದಿಗೂ ನಮ್ಮ ಅತ್ಯುತ್ತಮ ಪ್ರದರ್ಶನ,'' ಎಂದು ಹೇಳಿದರು.

ಪಂದ್ಯದ ಮೊದಲಾರ್ಧದ 7ನೇ ನಿಮಿಷದಲ್ಲಿ ಗೋಲ್ ಗಳಿಸಿದ ಎಲಿಜಾ, ದ್ವಿತೀಯಾರ್ಧದ 54ನೇ ನಿಮಿಷದಲ್ಲಿ ಎರಡನೇ ಗೋಲ್ ಗಳಿಸಿ ಮಿಂಚಿದರು. ಅಮೆರಿಕ, ಇಸ್ರೇಲ್ ವಿರುದ್ಧದ ಸಂಘರ್ಷದ ನಡುವೆಯೂ ವಿಶ್ವಕಪ್‌ನಲ್ಲಿ ಪಾಲ್ಗೊಂಡಿರುವ ಇರಾನ್ ತಂಡದ ಪರ ಮೊಹಮ್ಮದ್ ಮೊಹೆಬ್ಬಿ (64ನೇ ನಿ.) ಮತ್ತು ರಮಿನ್ ರೆಝೀಯನ್ (32ನೇ ನಿ.) ತಲಾ ಒಂದು ಗೋಲ್ ಗಳಿಸಿದರು.

ಮಿಯಾಮಿ ಕ್ರೀಡಾಂಗಣದಲ್ಲಿ ನಡೆದ 'ಎಚ್' ಗುಂಪಿನ ಪಂದ್ಯದಲ್ಲಿ ಸೌದಿ ಅರೇಬಿಯಾ ಮತ್ತು ಮಾಜಿ ಚಾಂಪಿಯನ್ ಉರುಗ್ವೆ 1–1 ಗೋಲ್‌ಗಳಿಂದ ಡ್ರಾ ಸಾಧಿಸಿ ಅಂಕ ಹಂಚಿಕೊಂಡವು. ಅಲಾಮ್ರಿ (41ನೇ ನಿ.) ಸೌದಿ ಪರ ಗೋಲ್ ಗಳಿಸಿದರೆ, ಮ್ಯಾಕ್ಸಿ (80ನೇ ನಿ.) ಉರುಗ್ವೆ ಪರ ಗೋಲ್ ಗಳಿಸಿದರು.

ಸೀಟಲ್‌ನಲ್ಲಿ ನಡೆದ 'ಜಿ' ಗುಂಪಿನ ಹಣಾಹಣಿಯಲ್ಲಿ ಬೆಲ್ಜಿಯಂ ಮತ್ತು ಈಜಿಪ್ಟ್ ತಂಡಗಳು ಡ್ರಾಗೆ ತೃಪ್ತಿಪಟ್ಟ ಕಾರಣ ಗೆಲುವಿನ ಖಾತೆ ತೆರೆಯಲು ವಿಫಲಗೊಂಡವು. ಬೆಲ್ಜಿಯಂ ಪರ ಹ್ಯಾನಿ (66ನೇ ನಿ. ಸ್ವಯಂ ಗೋಲ್) ಗೋಲ್ ಗಳಿಸಿದರೆ, ಈಜಿಪ್ಟ್ ಪರ ಎಮಾಮ್ (19ನೇ ನಿ.) ಒಂದು ಗೋಲ್ ಬಾರಿಸಿದರು.

ಚೆಂಡಿನ ಮೇಲಿನ ನಿಯಂತ್ರಣಕ್ಕೆ ಹೆಡರ್ ಮೂಲಕ ಸ್ಪೇನ್-ಕೇಪ್ ವರ್ಡೆ ಆಟಗಾರರ ಯತ್ನ.

ಗೋಲ್ ಬಿಟ್ಟುಕೊಡದ ವರ್ಡೆ: ಹಾಲಿ ಟೂರ್ನಿಯಲ್ಲಿ ಪದಾರ್ಪಣೆ ತಂಡಗಳಲ್ಲಿ ಒಂದಾದ ಕೇಪ್ ವರ್ಡೆ ತನ್ನ ಆರಂಭಿಕ ಪಂದ್ಯದಲ್ಲಿ ಮಾಜಿ ಚಾಂಪಿಯನ್ ಸ್ಪೇನ್ ವಿರುದ್ಧ ಗೋಲ್ ರಹಿತ ಡ್ರಾ ಸಾಧಿಸಿ ಗಮನ ಸೆಳೆಯಿತು. ಅಟ್ಲಾಂಟಾದಲ್ಲಿ ನಡೆದ 'ಎಚ್' ಗುಂಪಿನ ಪಂದ್ಯದಲ್ಲಿ ಉಭಯ ತಂಡಗಳು ಗೋಲ್ ಗಳಿಕೆಗಾಗಿ ಹರಸಾಹಸ ನಡೆಸಿದವು. ಆದರೆ ಯಶಸ್ವಿಯಾಗಲು ಸಾಧ್ಯವಾಗಲಿಲ್ಲ. ಪಂದ್ಯದ ಅಚ್ಚರಿ ಸಂಗತಿ ಎಂದರೆ ಮೊದಲಾರ್ಧದಲ್ಲಿ ಸ್ಪೇನ್ ಆಟಗಾರರು ಚೆಂಡಿನ ಮೇಲಿನ ನಿಯಂತ್ರಣಕ್ಕಾಗಿ ಹೆಣಗಾಡಿದ್ದು, ವರ್ಡೆ ತಂಡದ ರಕ್ಷಣಾತ್ಮಕ ಆಟಕ್ಕೆ ಹಿಡಿದ ಕೈಗನ್ನಡಿಯಂತಿತ್ತು.

ಮೆಸ್ಸಿಗೆ 200ನೇ ಪಂದ್ಯ

ಕೆನ್ಸಾಸ್ ಸಿಟಿ(ಯುಎಸ್): ಕಾಲ್ಚೆಂಡಿನ ಮಾಂತ್ರಿಕರಲ್ಲಿ ಒಬ್ಬರಾದ ಲಯೊನೆಲ್ ಮೆಸ್ಸಿ ಅರ್ಜೆಂಟೀನಾ ತಂಡದ ಪರ 200ನೇ ಪಂದ್ಯ ಆಡಲು ಸಜ್ಜಾಗಿದ್ದಾರೆ. ಪ್ರಸಕ್ತ ಫಿಫಾ ವಿಶ್ವಕಪ್‌ನಲ್ಲಿ ತಂಡವನ್ನು ಮುನ್ನಡೆಸುತ್ತಿರುವ ಹಿರಿಯ ಆಟಗಾರ ಮೆಸ್ಸಿ, ಬುಧವಾರ ಬೆಳಗ್ಗೆ ನಡೆಯಲಿರುವ ಅಲ್ಜೀರಿಯಾ ಎದುರಿನ ಪಂದ್ಯದಲ್ಲಿ ಕಣಕ್ಕಿಳಿಯುವ ಮೂಲಕ ಈ ದಾಖಲೆ ಬರೆಯಲಿದ್ದಾರೆ. 6ನೇ ವಿಶ್ವಕಪ್ ಆಡುತ್ತಿರುವ ಮೆಸ್ಸಿ ಆಟ ಕಣ್ತುಂಬಿಸಿಕೊಳ್ಳಲು ಕೋಟ್ಯಂತರ ಅಭಿಮಾನಿಗಳು ಕಾತರಿಸುತ್ತಿದ್ದಾರೆ. ಕಳೆದ ಬಾರಿ ಅರ್ಜೆಂಟೀನಾ ತಂಡಕ್ಕೆ ಟ್ರೋಫಿ ಗೆದ್ದುಕೊಟ್ಟಿರುವ ಅವರು, ಈವರೆಗೆ 199 ಪಂದ್ಯಗಳಲ್ಲಿ 117 ಗೋಲ್ ಬಾರಿಸಿದ್ದಾರೆ.

ಪಂದ್ಯಗಳು

ಇಂಗ್ಲೆಂಡ್ VS ಕ್ರೊಯೇಷ್ಯಾ
ಪಂದ್ಯ ಆರಂಭ: ಮಧ್ಯರಾತ್ರಿ 1:30
ಸ್ಥಳ: ಡಲ್ಲಾಸ್

ಘಾನ VS ಪನಾಮ
ಪಂದ್ಯ ಆರಂಭ: ಬೆಳಗ್ಗೆ 4:30
ಸ್ಥಳ: ಟೊರಾಂಟೊ

ಉಜ್ಬೇಕಿಸ್ತಾನ VS ಕೊಲಂಬಿಯಾ
ಪಂದ್ಯ ಆರಂಭ: ಬೆಳಗ್ಗೆ 7:30
ಸ್ಥಳ: ಮೆಕ್ಸಿಕೊ ಸಿಟಿ

ಜೆಕ್ ಗಣರಾಜ್ಯ VS ದಕ್ಷಿಣ ಆಫ್ರಿಕಾ
ಪಂದ್ಯ ಆರಂಭ: ರಾತ್ರಿ 9.30
ಸ್ಥಳ: ಅಟ್ಲಾಂಟಾ

ನೇರ ಪ್ರಸಾರ: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್

ಕುಲ್ದೀಪ್, ಜೈಸ್ವಾಲ್‌ಗೆ ಮಣೆ?

ಲಖನೌ: ಮುಂದಿನ ವರ್ಷ ನಡೆಯಲಿರುವ ಏಕದಿನ ವಿಶ್ವಕಪ್‌ಗೆ ಮುನ್ನ ವಿಭಿನ್ನ ಸಂಯೋಜನೆಗಳನ್ನು ಪರೀಕ್ಷಿಸಲು ಭಾರತ ಕ್ರಿಕೆಟ್ ತಂಡದ ಆಡಳಿತ ಮಂಡಳಿ ಉತ್ಸುಕವಾಗಿದೆ. ಹೀಗಾಗಿ ಸ್ಪಿನ್ನರ್ ಕುಲ್ದೀಪ್ ಯಾದವ್ ಮತ್ತು ಬ್ಯಾಟರ್ ಯಶಸ್ವಿ ಜೈಸ್ವಾಲ್ ಬುಧವಾರ ಅಫಘಾನಿಸ್ತಾನ ವಿರುದ್ಧದ 2ನೇ ಏಕದಿನ ಪಂದ್ಯದಲ್ಲಿ ಆಡುವ ಬಳಗದಲ್ಲಿ ಕಾಣಿಸಿಕೊಳ್ಳುವವರೇ ಎಂಬುದನ್ನು ಕಾದು ನೋಡಬೇಕಿದೆ.

ಇಂದು ಭಾರತ-ಆಫ್ಘನ್ 2ನೇ ಏಕದಿನ ಪಂದ್ಯ

ಮಳೆಯಿಂದಾಗಿ ಆರಂಭಿಕ ಪಂದ್ಯದಲ್ಲಿ ಸುಲಭ ಗೆಲುವು ಸಾಧಿಸಿದ ನಂತರ ಆತಿಥೇಯ ತಂಡವು 3 ಪಂದ್ಯಗಳ ಏಕದಿನ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿದೆ. ಬುಧವಾರದ ಗೆಲುವು ಟೀಮ್ ಇಂಡಿಯಾಗೆ ಅಜೇಯ ಮುನ್ನಡೆಯ ಜತೆಗೆ ಸರಣಿ ಜಯವನ್ನು ತಂದುಕೊಡಲಿದೆ. ಆದರೆ ಭಾರತದ ಗಮನವು ತಕ್ಷಣದ ಫಲಿತಾಂಶಗಳಿಗಿಂತಲೂ ಮಿಗಿಲಾಗಿದೆ.

ಮುಂಬರುವ ವಿಶ್ವಕಪ್‌ಗೂ ಮುನ್ನ 2 ಡಜನ್ ಏಕದಿನ ಪಂದ್ಯಗಳನ್ನು ನಿಗದಿಪಡಿಸಲಾಗಿದೆ. ಪ್ರಸ್ತುತ ನಡೆಯುತ್ತಿರುವ ಸರಣಿಯು ವಿಭಿನ್ನ ಸಂಯೋಜನೆಗಳನ್ನು ಪರೀಕ್ಷಿಸಲು ಮತ್ತು ವಿವಿಧ ಪಾತ್ರಗಳಲ್ಲಿ ಆಟಗಾರರನ್ನು ಮೌಲ್ಯಮಾಪನ ಮಾಡಲು ಒಂದು ಅವಕಾಶವಾಗಿದೆ ಎಂದು ಟೀಮ್ ಮ್ಯಾನೇಜ್‌ಮೆಂಟ್ ಈಗಾಗಲೇ ಸ್ಪಷ್ಟಪಡಿಸಿದೆ. ನಾಯಕ ಶುಭ್ಮನ್ ಗಿಲ್ ಸಹ ಇದನ್ನು ಆರಂಭಿಕ ಪಂದ್ಯಕ್ಕೂ ಮುನ್ನ ಸ್ಪಷ್ಟಪಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ, ಕುಲ್ದೀಪ್ ಅವರ ಸ್ಥಾನವು ಇತ್ತೀಚಿನ ತಿಂಗಳುಗಳಲ್ಲಿ ಪರಿಶೀಲನೆಗೆ ಒಳಪಟ್ಟಿದೆ. ಎಡಗೈ ಮಣಿಕಟ್ಟಿನ ಸ್ಪಿನ್ನರ್ ದಕ್ಷಿಣ ಆಫ್ರಿಕಾ ಮತ್ತು ನ್ಯೂಜಿಲೆಂಡ್ ವಿರುದ್ಧದ ತವರಿನ ಸರಣಿಯಲ್ಲಿ ನಿಯಮಿತವಾಗಿ ಕಾಣಿಸಿಕೊಂಡಿದ್ದಾರೆ. ಆದರೆ ಅಂದಿನಿಂದ ಫಾರ್ಮ್ ಕಂಡುಕೊಳ್ಳಲು ಹೆಣಗಾಡುತ್ತಿದ್ದಾರೆ. ಸದ್ಯ ಆಫ್ಘನ್ ಸರಣಿಯೂ ಅವರಿಗೆ ಲಯ ಕಂಡುಕೊಳ್ಳಲು ವೇದಿಕೆಯಾಗಬಹುದು.

ಈ ಮಧ್ಯೆ, ಜೈಸ್ವಾಲ್ ಕುತೂಹಲದಿಂದ ಕಾಯುತ್ತಿರುವ ಮತ್ತೊಬ್ಬ ಆಟಗಾರ. ಸರಣಿಯಿಂದ ಹೊರಗುಳಿದಿರುವ ವಿರಾಟ್ ಕೊಹ್ಲಿ ಅವರ 3ನೇ ಕ್ರಮಾಂಕಕ್ಕೆ ಪೈಪೋಟಿ ಮುಂದುವರಿದಿದೆ. ಆರಂಭಿಕ ಪಂದ್ಯದಲ್ಲಿ ಇಶಾನ್ ಕಿಶನ್‌ಗೆ ಆದ್ಯತೆ ನೀಡಲಾಗಿದೆ. ಆದರೆ ಜೈಸ್ವಾಲ್ ಇತ್ತೀಚಿನ ತಿಂಗಳುಗಳಲ್ಲಿ ಕಾಯಂ ಸ್ಥಾನಕ್ಕಾಗಿ ಹಕ್ಕು ಸಾಧಿಸಲು ಸಾಕಷ್ಟು ಹೋರಾಟ ನಡೆಸುತ್ತಿದ್ದಾರೆ.

ಪಂದ್ಯ ಆರಂಭ: ಮಧ್ಯಾಹ್ನ 1:30; **ಸ್ಥಳ:** ಏಕನಾ ಕ್ರಿಕೆಟ್ ಕ್ರೀಡಾಂಗಣ.

ಭಾರತ 'ಎ' ತಂಡಕ್ಕೆ ಪುಟಿದೇಳುವ ವಿಶ್ವಾಸ

ತ್ರಿಕೋನ ಏಕದಿನ ಸರಣಿ

ಡಂಬುಲ್ಲಾ: ಟೂರ್ನಿಯಲ್ಲಿ ಸತತ ಎರಡು ಸೋಲುಗಳಿಂದ ಕಂಗೆಟ್ಟಿರುವ ಐಪಿಎಲ್ ಸ್ಟಾರ್‌ಗಳ ಗಡಣ ಭಾರತ 'ಎ' ತ್ರಿಕೋನ ಏಕದಿನ ಸರಣಿಯ ತನ್ನ ನಾಲ್ಕನೇ ಪಂದ್ಯದಲ್ಲಿ ಬುಧವಾರ ಅಫಘಾನಿಸ್ತಾನ 'ಎ' ತಂಡದ ಸವಾಲು ಎದುರಿಸಲಿದ್ದು, ಪುಟಿದೇಳುವ ವಿಶ್ವಾಸದಲ್ಲಿದೆ.

ಫೈನಲಿಸ್ಟ್‌ಗಳನ್ನು ನಿರ್ಧರಿಸುವ ಮುನ್ನ ಆತಿಥೇಯ ಶ್ರೀಲಂಕಾ 'ಎ' ತಂಡ ಸೇರಿದಂತೆ ಮೂರು ತಂಡಗಳು ಇತರ ತಂಡಗಳ ವಿರುದ್ಧ ತಲಾ ಎರಡು ಪಂದ್ಯಗಳನ್ನು ಆಡಲಿವೆ. ಸತತ ಎರಡು ಸೋಲುಗಳನ್ನು ಕಂಡಿರುವ ಭಾರತ ತಂಡವು ಸದ್ಯ ಒತ್ತಡದಲ್ಲಿದ್ದು, ಫೈನಲ್ ಪ್ರವೇಶವನ್ನು ಜೀವಂತವಾಗಿಟ್ಟುಕೊಳ್ಳಬೇಕಾದರೆ ಅಫಘಾನಿಸ್ತಾನ ವಿರುದ್ಧ ಜಯ ಗಳಿಸಬೇಕಾದ ಅಗತ್ಯವಿದೆ.

ಆತಿಥೇಯ ಶ್ರೀಲಂಕಾ ನಾಲ್ಕು ಅಂಕಗಳ ಜತೆಗೆ 0.494 ನೆಟ್ ರನ್‌ರೇಟ್‌ನೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ಸೂರ್ಯವಂಶಿ ಮೇಲೆ ಎಲ್ಲರ ಕಣ್ಣು: ಸತತ ವೈಫಲ್ಯದ ನಡುವೆಯೂ ಯುವ ಬ್ಯಾಟಿಂಗ್ ತಾರೆ ವೈಭವ್ ಸೂರ್ಯವಂಶಿ ಮೇಲೆ ಎಲ್ಲರ ಕಣ್ಣು ನೆಟ್ಟಿದೆ. ಹಿಂದಿನ ಮೂರು ಪಂದ್ಯಗಳಲ್ಲಿ ನಿರೀಕ್ಷಿತ ಪ್ರದರ್ಶನ ನೀಡಲು ವಿಫಲಗೊಂಡಿರುವ ವೈಭವ್, ಬುಧವಾರದ ಪಂದ್ಯದಲ್ಲಿ ಲಯ ಕಂಡುಕೊಳ್ಳುವ ಸಾಧ್ಯತೆ ಹೆಚ್ಚಾಗಿದೆ. ಆದರೆ ಶ್ರೀಲಂಕಾ ಎದುರಿನ ಪಂದ್ಯದಲ್ಲಿ ತಾಳ್ಮೆ ಕಳೆದುಕೊಂಡು ಲಂಕಾ ಆಟಗಾರರ ವಿರುದ್ಧವಾಗ್ವಾದ ನಡೆಸಿರುವ ವೈಭವ್, ಆಟದ ಮೇಲೆ ಹೇಗೆ ಗಮನಹರಿಸಲಿದ್ದಾರೆ ಎಂಬುದು ಕುತೂಹಲದ ಸಂಗತಿಯಾಗಿದೆ.

ಬ್ಯಾಟಿಂಗ್ ಸುಧಾರಣೆಯೇ ಪರಮ ಗುರಿ

ಇಂದು ಭಾರತ-ನೆದರ್ಲೆಂಡ್ಸ್ ಸೆಣಸು

ಲೀಡ್ಸ್: ಭಾರತ ಮತ್ತು ನೆದರ್ಲೆಂಡ್ಸ್ ತಂಡಗಳು ಮಹಿಳೆಯರ ಟಿ20 ವಿಶ್ವಕಪ್‌ನ 'ಎ' ಗುಂಪಿನ ಪಂದ್ಯದಲ್ಲಿ ಬುಧವಾರ ಎದುರಾಗುತ್ತಿವೆ. ಬ್ಯಾಟಿಂಗ್ ಸುಧಾರಣೆಯ ಪರಮ ಗುರಿಯೊಂದಿಗೆ ಹರ್ಮನ್‌ಪ್ರೀತ್ ಕೌರ್ ಮತ್ತು ತಂಡ ಕಣಕ್ಕಿಳಿಯುತ್ತಿದೆ.

ಸ್ಮೃತಿ ಮಂಧಾನ ಮತ್ತು ರಿಚಾ ಘೋಷ್ ಹೊರತುಪಡಿಸಿ ತನ್ನ ಆರಂಭಿಕ ಪಂದ್ಯದಲ್ಲಿ ಬದ್ಧವೈರಿ ಪಾಕಿಸ್ತಾನ ವಿರುದ್ಧ ನಿರೀಕ್ಷಿತ ಬ್ಯಾಟಿಂಗ್ ಪ್ರದರ್ಶಿಸಲು ವಿಫಲಗೊಂಡಿರುವ ಭಾರತ, ತನ್ನ ಎರಡನೇ ಪಂದ್ಯದಲ್ಲಿ ಸಂಯೋಜಿತ ಪ್ರದರ್ಶನ ನೀಡಲು ಎದುರು ನೋಡುತ್ತಿದೆ.

ಹಿಂದಿನ ಪಂದ್ಯದಲ್ಲಿ ಆರಂಭಿಕ ಆಟಗಾರ್ತಿ ಶಫಾಲಿ ವರ್ಮಾ ಮತ್ತು ಹರ್ಮನ್‌ಪ್ರೀತ್ ಕೌರ್ ಸೇರಿದಂತೆ ತಂಡದ ಬಹುತೇಕರು ಬ್ಯಾಟಿಂಗ್ ಮಾಡಲು ತಿಣುಕಾಡಿದ್ದಾರೆ. ಈ ಮಧ್ಯೆ, ಮಧ್ಯಮ ಕ್ರಮಾಂಕದಲ್ಲಿ ಭಾರ್ತಿ ಫುಲ್ಮಾಲಿ ನಿರ್ಣಾಯಕ ಪಾತ್ರವಹಿಸಿದರೂ ಹೆಚ್ಚಿನ ಗಮನ ಸೆಳೆಯಲು ಸಾಧ್ಯವಾಗಲಿಲ್ಲ. ಲೀಗ್ ಹಂತದಲ್ಲಿ ಕಠಿಣ ಸವಾಲು ಎದುರಾಗುವ ಮುನ್ನ ಟೀಮ್ ಇಂಡಿಯಾ ಬ್ಯಾಟರ್‌ಗಳು ಲಯ ಕಂಡುಕೊಳ್ಳುವುದು ಅತ್ಯಗತ್ಯ. ನೆದರ್ಲೆಂಡ್ಸ್ ತಂಡವು ಭಾರತಕ್ಕೆ ದೊಡ್ಡ ಸವಾಲೆನಿಸದು. ಆದರೆ ಸೆಮಿಫೈನಲ್ಸ್‌ಗೆ ಅರ್ಹತೆ ಗಳಿಸಲು ಭಾರತ ಆಸ್ಟ್ರೇಲಿಯಾ ಅಥವಾ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಬೇಕಾದ ಅಗತ್ಯವಿದೆ.

ಪಾಕಿಸ್ತಾನ ವಿರುದ್ಧ 64 ರನ್ ಜಯ ಗಳಿಸಿದ ಹೊರತಾಗಿಯೂ ಫೀಲ್ಡಿಂಗ್ ವಿಭಾಗದಲ್ಲಿ ಭಾರತ ಸಾಕಷ್ಟು ಸುಧಾರಿಸಬೇಕಿದೆ. ಸ್ಪಿನ್ ಅವಳಿಗಳಾದ ದೀಪ್ತಿ ಶರ್ಮ ಮತ್ತು ಶ್ರೀ ಚರಣಿ ಪಾಕ್ ವಿರುದ್ಧ 8 ವಿಕೆಟ್ ಹಂಚಿಕೊಳ್ಳುವ ಮೂಲಕ ಮಿಂಚಿದ್ದಾರೆ. ಆದರೆ ವೇಗಿಗಳಾದ ಅರುಂಧತಿ ರೆಡ್ಡಿ ಮತ್ತು ಕ್ರಾಂತಿ ಗೌಡ್ ಪರಿಣಾಮಕಾರಿ ಪ್ರದರ್ಶನ ನೀಡಿಲ್ಲ. ಹೀಗಾಗಿ ದೊಡ್ಡ ಸವಾಲಿಗೂ ಮುನ್ನ ಲಯ ಕಂಡುಕೊಳ್ಳಲು ಈ ಪಂದ್ಯ ಅತ್ಯುತ್ತಮ ವೇದಿಕೆಯಾಗಿದೆ.

ಪಂದ್ಯ ಆರಂಭ: ಸಂಜೆ 7ಕ್ಕೆ
ಸ್ಥಳ: ಹೆಡಿಂಗ್ಲೆ, ಲೀಡ್ಸ್
ನೇರ ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್

ಟೈಮ್ ನಿಯತಕಾಲಿಕೆಯಲ್ಲಿ ಸ್ಮೃತಿಗೆ ಸ್ಥಾನ

ನ್ಯೂಯಾರ್ಕ್: 2026ರ ಟೈಮ್ ನಿಯತಕಾಲಿಕೆಯು (ಮ್ಯಾಗಜೀನ್) ಈ ವರ್ಷದ ಕ್ರೀಡೆ ವಿಭಾಗದ 100 ಅತ್ಯಂತ ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿ ಕ್ರಿಕೆಟರ್ ಸ್ಮೃತಿ ಮಂಧಾನಾ ಸ್ಥಾನ ಪಡೆದ ಏಕೈಕ ಭಾರತೀಯ ಕ್ರೀಡಾಪಟು ಎನಿಸಿದ್ದಾರೆ. ಅಮೆರಿಕದ ಬ್ಯಾಸ್ಕೆಟ್‌ಬಾಲ್ ದಂತಕಥೆ ಲೆಬ್ರಾನ್ ಜೇಮ್ಸ್ ಅವರ ಪಟ್ಟಿಯಲ್ಲಿ, ಫುಟ್ಬಾಲ್ ದಿಗ್ಗಜ ಲಯೊನೆಲ್ ಮೆಸ್ಸಿ ಸೇರಿದಂತೆ ಕ್ರೀಡಾ ಜಗತ್ತಿನ ಸೂಪರ್‌ಸ್ಟಾರ್‌ಗಳು ಸೇರಿದ್ದಾರೆ. ಭಾರತ ಮಹಿಳಾ ರಾಷ್ಟ್ರೀಯ ತಂಡದ ಉಪನಾಯಕಿ 29ರ ಹರೆಯದ ಮಂಧಾನಾ ಎಲೈಟ್ ಕ್ಲಬ್‌ನ ಭಾಗವಾಗಿದ್ದಾರೆ.

ಹಾರ್ಸ್ ಪವರ್

ಮೈಸೂರು ರೇಸ್ ■ ಅಶ್ವ ಬಂಧು

ಗೆಲುವಿನ ತವಕದಲ್ಲಿ ಮಾಂಟೇರಿಯೊ

ಪ್ರದೀಪ್ ಅಣ್ಣಯ್ಯ ತರಬೇತಿಯಲ್ಲಿ ಪಳಗಿರುವ ಮಾಂಟೇರಿಯೊ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆ ಡಾ. ಎನ್.ಎಂ.ಶ್ರೀನಿವಾಸ್ ಮೆಮೋರಿಯಲ್ ಟ್ರೋಫಿ ಗೆಲ್ಲುವ ಅವಕಾಶ ಹೊಂದಿದೆ. 8 ರೇಸ್‌ಗಳನ್ನು ಏರ್ಪಡಿಸಿದ್ದು, ಮೊದಲನೇ ರೇಸ್ ಮಧ್ಯಾಹ್ನ 1..30 ಗಂಟೆಗೆ ಪ್ರಾರಂಭವಾಗಲಿದೆ.

ನಮ್ಮ ಆಯ್ಕೆ

- 1ನೇ ರೇಸ್: ಕೂಲ್ ವಿಂಟರ್ 4, ಸಿಟಿ ಆಫ್ ಹಸ್ಲ್ 2, ಪೆಟ್ಟೀಸ್ ಚಾಯ್ಸ್ 8
- 2ನೇ ರೇಸ್: ಎಲ್ಸಾ 5, ಅಡೇನಾ 4, ಟ್ರೂತ್ ಇನ್ ವೈನ್ 2
- 3ನೇ ರೇಸ್: ನ್ಯಾಚುರಲ್ ಡೈಮಂಡ್ 7, ಡಿ ರೋಮನ್ ಪವರ್ 12, ಟೈಗರ್‌ಕಿಂಗ್ 1
- 4ನೇ ರೇಸ್: ಸ್ಪಾರ್ಕ್ಲಿಂಗ್ ನೈಟ್ 4, ಮಿ.ಕರ್ನಾಟಕ 2, ಸ್ಕೌಟ್ 10
- 5ನೇ ರೇಸ್: ಕ್ರಿಯೆಟಿವ್ ಗರ್ಲ್ 6, ಮ್ಯಾಲೆಟ್ ಸ್ಟ್ರಿಂಗ್ 8, ಡಫ್ಪಿ 7
- 6ನೇ ರೇಸ್: ಮಾಂಟೇರಿಯೊ 12, ಮದರ್ಸ್ ಗ್ರೇಸ್ 6, ಕಿಂಗ್ಸ್ ಬೆಟಾಲಿಯನ್ 2
- 7ನೇ ರೇಸ್: ಸಿಯೋಲ್‌ಫಾರ್ ಬುಲ್ಲೆಟ್ 3, ಶೆರ್ವ 6, ಚಾಯ್ಸ್ 11
- 8ನೇ ರೇಸ್: ಸೀಕಿಂಗ್ ಆಲ್ಫಾ 8, ರಾಯಲ್ ಬೆರೋನ್ 8, ಆರಿಲ್ 12

ಮಲ್ಟಿ-ಲೆಗ್ ಪೂಲ್ಸ್:

- ಜಾಕ್‌ಪಾಟ್: 4,5,6,7,8; 1ನೇ ಟ್ರಿಬಲ್: 1,2,3;
- 2ನೇ ಟ್ರಿಬಲ್: 3,4,5; 3ನೇ ಟ್ರಿಬಲ್: 6,7,8

ಅತ್ಯುತ್ತಮ ಬೆಟ್: ಸೀಕಿಂಗ್ ಆಲ್ಫಾ

EXTER benefits up to ₹40 000*
Grand i10 NIOS benefits up to ₹80 000*

30 Hyundai Celebrating Thirty Years in India | 6 hai toh safe hai – 6 airbags standard | 3 YEAR Unlimited** Kilometer Warranty – Up to 7 years extended warranty^^

i20 starts at ₹5.99 Lakh~~. ALCAZAR available in 6 & 7 seater.
Hy-CNG also available in EXTER, Grand i10 NIOS & AURA.
For bulk deals contact: corporatesales@hmil.net

HYUNDAI

Blue Hyundai: New BEL Road Ph: 9513000800, Magadi Road Ph: 9513200033, Rajajinagar Ph: 9591200001, Basavangudi, Ph: 9591211118, Mysore Road Ph: 9591100001; Hessarghatta Main Road: 9916208888; **Dhruvdesh Hyundai:** Banashankari 3rd stage Ph: 9205770577; **Lakshmi Hyundai:** Hebbal Ph: 9900037900, Kalyan Nagar Ph: 8884441111, Whitefield Ph: 8884497700, Hennur Ph: 8904777500, Devanahalli Ph: 8884499037; **Pavan Hyundai:** Kanakpura Road Ph: 7337882522, Electronic City Ph: 7337882373; **Trident Hyundai:** Sankey Road Ph: 7353762526 , K R Puram Ph: 9844266873, Hosur Road Ph: 9743786716, Indiranagar Ph: 9743107927, Yelahanka Ph: 7353750677, Yeshwantpur Ph: 9844701452; **Advaith Hyundai:** Residency Road, Ph: 9606076451, Marathahalli, Outer Ring Road, Ph: 9606076452, Vasanthnagar Ph: 9606076453, Bannerghatta Road Ph: 9606076454, Kormangala Ph: 9606076455, Avalahalli Ph: 9606076456, Sarjapura Ph: 9606076458, Bilekahalli Ph: 9606076457, Anekal Ph: 9964039537; **Nelamangala: Blue Hyundai** Ph: 9742245636; **Ramanagara: Advaith Hyundai** Ph: 9620594433; **Kanakpura: Pavan Hyundai** Ph: 7892718572, **Kolar: Advaith Hyundai:** Ph: 9620229885, **Tumkur: Pavan Hyundai:** Ph: 7337882383: **Tiptur: Advaith Hyundai:** Ph: 7619577050; **Chintamani: Advaith Hyundai:** Ph: 8147994737.

my Hyundai app | Hyundai Promise Certified Pre-Owned Car

*Terms & conditions apply. *Offers and benefits mentioned are valid till 30th June 2026. Offers and benefits mentioned include cash, corporate, government employee exclusive offers, upgrade offers, either exchange or scrappage benefits as applicable. Total benefit amount may vary depending upon the eligibility of the customer. Offers and benefits may vary from variant to variant. **3-year warranty or up to 100 000 km whichever is earlier for Grand i10 NIOS, AURA, i20 & i20 N Line. 3-year unlimited km warranty is applicable for EXTER, VENUE, VENUE N Line, CRETA, CRETA N Line, CRETA Electric, ALCAZAR, VERNA and IONIQ 5. ^^Up to 7 Years extended warranty or 1 40 000 km whichsoever is earlier is available for Grand i10 NIOS, i20, i20 N Line, AURA, VERNA, EXTER, VENUE, VENUE N Line, CRETA, CRETA N Line, CRETA Electric & ALCAZAR in all variants (Petrol/Diesel/CNG) and subject to payment. For more details, visit your nearest Hyundai showroom. ~~Price mentioned is ex-showroom price. ~Finance offers on select Hyundai vehicles are solely at the discretion of the financier, subject to their terms, and HMIL has no role in finance offers. #2 to 4 wheeler upgrade offer only applicable for customers who provide a valid original 2 wheeler registration certificate at the time of booking. ##CSD: Canteen Stores Department, KPKB: Kendriya Police Kalyan Bhandar. This advertisement and car shown here is for creative representation purposes only and the depictions are for illustrative purposes. Features and specifications shown may or may not be part of standard fitment and are subject to change without prior notice. Hyundai Motor India Limited reserves the right to change specifications, colour, equipment, and schemes at any time without prior notice. The black shade on glass is due to lighting effect. Size and colour may appear to vary due to lighting and position effect.